- ಓಂ -

- ಶ್ರೀಮತೇ ನಮಃ -

ನಾಲಾಯಿರ ದಿವ್ಯ ಪ್ರಬಂಧಮ್

ಮೂನ್ರಾವದಾಯಿರಂ

ತಿರುವಿರುತ್ತಮ್

ನಮ್ಮಾಳ್ವಾರ್

(ತಿರುಕ್ಕುರುಗೂರ್ ಶಠಗೋಪನ್)

ಮೂರನೆಯ ಸಾವಿರ

ತಮಿಳುಮೂಲ ಕನ್ನಡದಲ್ಲಿ ಪ್ರತಿಪದಾರ್ಥ ತಾತ್ಪರ್ಯ
ಮತ್ತು
ವಿವರಣೆಯೊಂದಿಗೆ

ಸಂಪುಟ-12

30.6.82

- ಶ್ರೀಃ - (1) - ಶ್ರೀಯಸ್ತು ನಮಃ -

ದಿವ್ಯಪ್ರಬನ್ಧಮ್ - ಮೂರನೆಯ ಸಾವಿರ - ತಿರುವಿರುತ್ತಮ್

திவ்யப்ரபந்தம் - மூன்றாவதாயிரம் - திருவிருத்தம்

ತನಿ - தனியன்

1. கருவிருத்தக் குழிநீத்தபின் காமக் கடுங்குழிவீழ்ந்து,
ஒருவிருத்தம் புக்குழலுறுவீர்!, உயிரின் பொருள்கட்
கொருவிருத்தம் புகுதாமல் குருகையர் கோனுரைத்த
திருவிருத்தத் தோரடி கற்றிரீர் திருநாட்டகத்தே.

ಕರುವಿರುತ್ತಕ್ಕುೞಿನೀತ್ತಪಿನ್ ಕಾಮಕ್ಕಡುಙ್ಗುೞಿವೀೞ್ನ್ದು,
ಒರುವಿರುತ್ತಮ್ ಪುಕ್ಕುೞಲುಱುವೀರ್!, ಉಯಿರಿನ್ ಪೊರುಳ್ಗಟ್
ಕೊರುವಿರುತ್ತಮ್ ಪುಗುದಾಮಲ್ ಕುರುಗೈಯರ್ ಕೋನುರೈತ್ತ
ತಿರುವಿರುತ್ತತ್ತೋರಡಿ ಕಱ್ಱಿರೀರ್ ತಿರುನಾಟ್ಟಗತ್ತೇ.

ಕರು கரு = ಗರ್ಭ ಎಂಬ, ವಿರುತ್ತಮ್ விருத்தம் = ದುಂಡನೆಯ, ಕುೞಿ குழி = ಗುಂಡಿಯನ್ನು, ನೀತ್ತಪಿನ್ நீத்தபின் = ನೀಗಿದ ಬಳಿಕ, ಕಾಮಮ್ காமம் = ಆಶೆ ಎಂಬ, ಕಡುಙ್ಗುೞಿ கடுங்குழி = ಬಲು ಕೆಟ್ಟ ಗುಂಡಿಯಲ್ಲಿ, ವೀೞ್ನ್ದು வீழ்ந்து = ಬಿದ್ದು, ಒರು ஒரு = ನಾಟಿಯಿಲ್ಲದೊಂದು, ವಿರುತ್ತಮ್ விருத்தம் = ವೃತ್ತವನ್ನು (ದುಳಿಯನ್ನು), ಪುಕ್ಕು = ಹೊಕ್ಕವರಾಗಿ, ಉೞಲ್ ಉಱುವೀರ್ உழல் உறுவீர் = ಅಲೆದಾಡಲು ಯತ್ನಿಸುವವರೇ, ಉಯಿರಿನ್ உயிரின் = (ನಿಮ್ಮ) ಬದುಕಿನ, ಪೊರುಳ್ಗಟ್ಕು பொருள்கட்கு = ಅರ್ಥವನ್ನುಳಿಯು ಪ್ರದಕ್ಕಾಗಿ (ಪ್ರಯೋಜನಕ್ಕಾಗಿ), ಒರು ವಿರುತ್ತಮ್ ஒரு விருத்தம் = ಒಂದು ಅಡಚಣೆಯನ್ನು, ಪುಗುದಾಮಲ್ புகுதாமல் = ಪ್ರವೇಶಿಸದಂತೆ, ಕುರುಗೈಯರ್ ಕೋನ್ குருகையர் கோன் = ತಿರುಕ್ಕುರುಗೂರಿನವರಿಗೆ ಯಜಮಾನ (ಒಡೆಯ) ನೆನಿಸಿದಾತನು (ನಮ್ಮಾಳ್ವಾರರು), ಉರೈತ್ತ உரைத்த = ಹೇಳಿದ, ತಿರುವಿರುತ್ತತ್ತು திருவிருத்தத்து = 'ತಿರುವಿರುತ್ತಮ್' ಎಂಬ ಪ್ರಬಂಧದ, ಓರ್ ಅಡಿ ஓர் அடி = ಒಂದು ಪಾದವನ್ನು, ಕಱ್ಱು கற்று = ಕಲಿತು, ಇರೀರ್ இரீர் = ಇರಿ, ತಿರುನಾಡು திருநாடு = ಪರಮಪದವೆಂಬ, ಅಗತ್ತೇ அகத்தே = ಪಾದಸ್ಥಾನದಲ್ಲಿ.

'ಗರ್ಭ' ಎಂಬ ದುಂಡನೆಯ ಗುಂಡಿಯನ್ನು ನೀಗಿದ ಬಳಿಕ, 'ಆಶೆ' ಎಂಬ ಬಲು ಕೆಟ್ಟ ಗುಂಡಿಯಲ್ಲಿ ಬಿದ್ದು, ನಾಟಿಯಿಲ್ಲದೊಂದು ವೃತ್ತವನ್ನು (ದುಳಿಯನ್ನು) ಹೊಕ್ಕವರಾಗಿ, (ಅದರಲ್ಲೇ) ಅಲೆದಾಡಲು ಯತ್ನಿಸುವವರೇ, ನಿಮ್ಮ ಬದುಕಿನ ಪುರುಷಾರ್ಥವನ್ನುಳಿಯು ಪ್ರದಕ್ಕಾಗಿ, ಯಾವೊಂದು ಅಡಚಣೆಯನ್ನೂ ಪ್ರವೇಶಿಸದಂತೆ, ತಿರು

Garani Srinivasan

ಕ್ಕುರುಕೂರಿನವರಾದ ಶಠಯು ನೆನಿಸಿದಾತನು (ನಮ್ಮಾಳ್ವಾರರು) ಹೇಳಿದ 'ತಿರುವಿರುತ್ತಮ್' ಎಂಬ ಪ್ರಬಂಧದ ಒಂದು ಪಾದವನ್ನಾದರೂ ಕಲಿತು ಪರಮಪದವೆಂಬ ಪಾದಸ್ಥಾನದಲ್ಲಿ ಇರುವವರಾಗಿ. (1)

ಈ ತನಿ 'ತಿರುವಿರುತ್ತಮ್' ಎಂಬ ಕಾವ್ಯದ ಹಿರಿಮೆಯೇನೆಂಬುದನ್ನು, ಅದನ್ನು ರಚಿಸಿದಾತನ ಹಿರಿಮೆಯನ್ನು, ಮತ್ತು, ಅದನ್ನು ಕಲಿಯುವವರಿಗೆ ಬರುವ ಪುರುಷಾರ್ಥವೇನೆಂಬುದನ್ನು ಹೇಳುತ್ತದೆ.

ಜೀವನಿಗೆ 'ಗರ್ಭ'ವಾಸ ತಪ್ಪಿದ್ದಲ್ಲ. ಗರ್ಭದಲ್ಲಿರುವಾಗ ಹೊರಪ್ರಪಂಚದ ಸಂಪರ್ಕವನ್ನು ಕಳೆದುಕೊಂಡಿರುವುದರಿಂದ, ಜೀವನು ತನ್ನ ಹಿಂದಿನ ಪಾಪಗಳಿಗೆ ಪಶ್ಚಾತ್ತಾಪ ಪಡುತ್ತಾ, ಭಗವಂತನ ತಿರುವಡಿಗಳನ್ನು ಪಡೆದುಕೊಳ್ಳುವುದಕ್ಕಾಗಿ, ಭಗವಂತನಲ್ಲಿ ಮೊರೆಯಿಡುತ್ತಾ ಕಾಲಕಳೆಯುತ್ತಾನೆ ಎನ್ನುತ್ತಾರೆ. ಕಾಲಪ್ರಮಾಣ, ಗರ್ಭದ 'ಗುಂಡಿ'ಯನ್ನು, ದೇಹವನ್ನು ಹೊತ್ತು, ಜೀವನು ಹೊರಕ್ಕೆ ಬಂದ ಕೂಡಲೇ, ಎಂದರೆ, ಜನ್ಮತಾಳಿದ ಕೂಡಲೇ, ಇಂದ್ರಿಯಗಳ ಸೆಳೆತಕ್ಕೆ ಒಳಗಾಗುತ್ತಾನೆ. 'ಕಾಮ' ಅಥವಾ 'ಆಸೆ' ಎಳೆದ ದಾರಿಯಲ್ಲಿ ನಡೆಯುತ್ತಾ, ಅದರಿಂದ ಬರುವ ಅಲ್ಪಸುಖವನ್ನೇ ಮಹತ್ತಾದ ಆನಂದವೆಂದು ಭಾವಿಸುತ್ತಾ ಮೋಸಹೋಗುತ್ತಾನೆ. ಅವನು ಬಗೆಬಗೆಯ ಅವಸ್ಥೆಗಳನ್ನು ಅನುಭವಿಸಲೇ ಬೇಕಾಗುತ್ತದೆ. ಬಾಲ್ಯ, ಕೌಮಾರ, ಯೌವನ, ಮುಪ್ಪು ಒಂದಾದಮೇಲೊಂದು ತಪ್ಪದೇ ಬರುತ್ತವೆ. ಎಲ್ಲವೂ ಕಡೆಗೆ ಅವುಗಳೊಂದಿಗೆ ರೋಗಾದಿ ಸಂಕಟಗಳೂ ಅಂಟಿ ಬರುತ್ತವೆ. ಆದರೆ, ಜೀವನದ ಮರಣದೊಂದಿಗೆ ಜೀವನ ಇಹಜೀವನ ಕೊನೆಗೊಳ್ಳುತ್ತದೆ. ಪಾಪಕರ್ಮಗಳಿಗೆಲ್ಲ ತಕ್ಕ ನರಕಾನುಭವ ತಪ್ಪುವುದಿಲ್ಲ. ಮತ್ತೆ ಗರ್ಭವಾಸ, ಜನ್ಮ! ಜೀವನ ಒಂದು ಸುತ್ತು ಇದು ಎಂದರೂ, ನಿಜವಾಗಿ ಇದೊಂದು ಸುಳಿಯೇ! ಇದರಿಂದ ಬಿಡಿಸಿಕೊಳ್ಳುವುದಾದರೂ ಹೇಗೆ? ದಾರಿ ಕಾಣದಂತೆ, ಈ ಸುಳಿಯಲ್ಲಿ ಸಿಕ್ಕಿಕೊಂಡು ಸಂಕಟಪಡುವುದೇ ಜೀವನ ಕೊನೆಗಾಣದ ಕೆಲಸವಾಗುತ್ತದೆ. ಇದರಿಂದ ತಪ್ಪಿಸಿಕೊಳ್ಳಲು ಉಪಾಯವೇ ಇಲ್ಲವೇ?

ಈ ತನಿ ಹೇಳುತ್ತದೆ ಬದುಕಿನ ಅರ್ಥ ವಿವಿಧ ಅವಸ್ಥೆಗಳ ಸುಳಿಯಲ್ಲಿ ಸಿಕ್ಕಿ ನರಕಭಾಜನವಾಗುವುದಲ್ಲ. ಈ ಸುಳಿಯಿಂದ ತಪ್ಪಿಸಿಕೊಂಡು ಹೊರಬಂದು, ನಿತ್ಯಾನಂದ ಸುಖವನ್ನು ಭಗವಂತನ ಬಳಿಯಲ್ಲಿ ನಿತ್ಯಕೈಂಕರ್ಯವನ್ನು ಪಡೆದುಕೊಳ್ಳುವುದೇ ಬದುಕಿನ ಗುಟ್ಟು.

ತನಿ ಹೇಳುತ್ತದೆ 'ಹುಟ್ಟಿನ ಸುಳಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಸುಲಭವಾದ ಉಪಾಯವಿದೆ! ಅದನ್ನು ಸಾರಿ ಹೇಳಿರುವವರು ತಿರುಕ್ಕುರುಕೂರಿನ ಶಠಯ ಎನಿಸಿದ ಮತ್ತು 'ನಮ್ಮಾಳ್ವಾರ್' ಎಂದು ಪ್ರೀತಿಯಿಂದ ಕರೆಸಿಕೊಂಡ

Garani Srinivasan

ಶಠಗೋಪರು. ಅವರು ಬರೆದಿರುವ 'ತಿರುವಿರುತ್ತಮ್' ಎಂಬ ದಿವ್ಯ ಪ್ರಬಂಧದ ಒಂದೇ ಒಂದು ಪಾದವನ್ನಾದರೂ ಕಲಿತು, ಅದರ ಅಂತರಾರ್ಥವನ್ನು ಕಲಿತು, ಹಾಗೆಯೇ ನಡೆದುಕೊಂಡರೆ ಜೀವನಿಗೆ ನರಕಯಾತನೆ ತಪ್ಪಿ, ಹುಟ್ಟಿನ ಸಂಕಟ ತಪ್ಪಿ, ಪರಮಪದವೇ ಪ್ರಾಪ್ತವಾಗುತ್ತದೆ.

ಈ ಪರಮಪದ ಪ್ರಾಪ್ತಿಗೆ ಬರುವ ಅಡಚಣೆಗಳು ಹಲವಾರು: ಇಂದ್ರಿಯಗಳು ಮನಸ್ಸನ್ನು ತಮ್ಮ ಹತೋಟಿಗೆ ತೆಗೆದುಕೊಂಡು, ಷಡ್ವಿಕಾರಗಳು ದೀರ್ಘಸಂಕಟಕರವಾದ ಈ ಪ್ರಾಪಂಚಿಕ ಜೀವನಕ್ಕೆ ತಳ್ಳುವುದು. ಇದಕ್ಕೆ 'ಕಾಮ'ವೇ ಮೂಲ. ಪ್ರಾಪಂಚಿಕವಾದ 'ಕಾಮ'ವನ್ನು ದೂರ ತಳ್ಳಿ, ಭಗವಂತನನ್ನು ಪಡೆದುಕೊಳ್ಳುವ 'ಕಾಮ'ಕ್ಕಾಗಿ ನಿರತ ಪ್ರಯತ್ನ ಮಾಡುವುದು ಬದುಕಿಗೆ ಸಾರ್ಥಕತೆ. ಭಗವಂತನನ್ನು ಪಡೆದುಕೊಳ್ಳುವುದಕ್ಕೆ ವೇದಗಳು, ಶಾಸ್ತ್ರಗಳು, ಇತಿಹಾಸ ಪುರಾಣಾದಿಗಳು ನಾನಾ ಮಾರ್ಗಗಳನ್ನು ವಿವರಿಸಿ ಹೇಳಿವೆ. ಅವುಗಳಲ್ಲಿ ಯಾವೊಂದು ಮಾರ್ಗವನ್ನು ಅನುಸರಿಸಹೋದರೂ ಜೀವನಿಗೆ ಪ್ರಾಪಂಚಿಕವಾದ, ಸಾಂಸಾರಿಕವಾದ ನಾನಾ ಅಡ್ಡಿಗಳು ಬರುತ್ತವೆ. ಧೀರನಾದವನು ಇವುಗಳನ್ನು ಲೆಕ್ಕಿಸದೆ, ಅಡ್ಡಿ ಆತಂಕಗಳ ಕಡೆಗೆ ಗಮನಕೊಡದೆ, ಬದುಕಿನ ಸಾರ್ಥಕತೆಯನ್ನು ಸಾಧಿಸಿಕೊಳ್ಳಲೇಬೇಕು. ಈ ತನಿಯನ್ ವಿಷಯವೆಲ್ಲಾ ಇದು.

ಶಠಗೋಪರ (ನಮ್ಮಾಳ್ವಾರರ) ಜೀವನವನ್ನು ಸಂಗ್ರಹವಾಗಿ ಇಲ್ಲಿ ಹೇಳಬಹುದಾಗಿರುತ್ತದೆ.. ಕೀಳು ಕುಲದ ಮಾರ ಮತ್ತು ಕಾರಿ ಎಂಬವರಿಗೆ ಒಂದು ಗಂಡು ಮಗು ಹುಟ್ಟಿತು. ಹುಟ್ಟಿದಾಗಿನಿಂದ ಅದು ಕಣ್ಣು ತೆರೆಯಲೇ ಇಲ್ಲ. ತಾಯಿಯ ಹಾಲನ್ನು ಕುಡಿಯಲೂ ಇಲ್ಲ. ಅವರ ಕುಲದವೇ ಆದ ಜ್ಞಾನಿಯನ್ನು ಕರೆದು, ಕೇಳಲಾಗಿ, ಆತನೊಡನೆ ತಮ್ಮ ಸಂಕಟವನ್ನು ತೋಡಿಕೊಂಡರು. ದೇವಾಲಯಕ್ಕೆ ಕರೆದೊಯ್ದು ಭಗವಂತನ ಸನ್ನಿಧಿಯಲ್ಲಿ ಮಗುವನ್ನು ಮಲಗಿಸಿ ಬೇಡಿಕೊಳ್ಳಿರೆಂದು ಆತ ಹೇಳಿದನು. ಅದರಂತೆ, ಮಗು ಹುಟ್ಟಿದ ಹನ್ನೆರಡನೆಯ ದಿನ ಅದನ್ನು ದೇವಾಲಯಕ್ಕೆ ಕರೆದೊಯ್ದರು. ಸನ್ನಿಧಿಯಲ್ಲಿ ಮಲಗಿಸಿ, ಪ್ರಾರ್ಥಿಸಿದರು. ಕೂಡಲೇ ಮಗು ಕಣ್ತೆರೆಯಿತು. ಭಗವಂತನ ದಿವ್ಯಮಂಗಳ ವಿಗ್ರಹವನ್ನು ಕಣ್ತುಂಬ ನೋಡಿತು. ಆ ಬಳಿಕ ಅದು ಪ್ರಾಪಂಚಿಕ ವಸ್ತು ವಿಷಯಗಳ ಕಡೆಗೆ ಗಮನಕೊಡಲಿಲ್ಲ. ಹೀಗೆ ಕೆಲವು ವರ್ಷಗಳು ಕಳೆದ ಬಳಿಕ, ಬಾಲಕನು ಜನ್ಮದಾತರನ್ನು ಬಿಟ್ಟು, ತಿರುಕ್ಕುರುಗೂರಿನ ದೇವಾಲಯದ ಬಳಿಯ ಹುಣಸೇಮರದ ಪೊಟರೆಯಲ್ಲಿ ವಾಸಮಾಡತೊಡಗಿದನು. 'ಶಠ' ಎಂಬ ವಾಯುವನ್ನು ಬಂಧಿಸಿದ್ದ ಕಾರಣ ಅವನಿಗೆ 'ಶಠಗೋಪ' ಎಂದು ಹೆಸರಾಯಿತು

ಶಠಗೋಪರು ಆಹಾರ, ನಿದ್ದೆ ಮುಂತಾದವುಗಳನ್ನೆಲ್ಲಾ ಬಿಟ್ಟುಬಿಟ್ಟು, ಮರದ ಪೊಟರೆಯಲ್ಲಿ ಸದಾ ಧ್ಯಾನ ಮಗ್ನರಾಗಿದ್ದರು. ಕ್ರಮೇಣ ಅವರ ಕೀರ್ತಿಯು ಪ್ರಸಿದ್ಧಿ ಹೆಚ್ಚಾಯಿತು. ಆಗ ಉತ್ತರ ಭಾರತದಲ್ಲಿ ಪ್ರವಾಸ ಮಾಡುತ್ತಿದ್ದ ಮಧುರಕವಿ ಆಳ್ವಾರರು ಈ ಅಪೂರ್ವ ಪ್ರಭೆಯಿಂದ ಆಕರ್ಷಿತರಾಗಿ, ಅಲ್ಲಿಂದ ನೇರವಾಗಿ ತಿರುಕ್ಕುರುಕೂರಿಗೆ ಬಂದರು. ಹುಣಿಸೇಮರದ ಪೊಟರೆಯಲ್ಲಿ ಕಣ್ಣು ಮುಚ್ಚಿ ಕುಳಿತಿದ್ದ ಶಠಗೋಪರನ್ನು ಕಂಡರು. ಮಧುರಕವಿ ಹುಡುಕುತ್ತಿದ್ದದ್ದು ತಮಗೆ ತಕ್ಕ ಗುರುವಿಗಾಗಿ. ಶಠಗೋಪರನ್ನು ಪ್ರಶ್ನಿಸಿದರು: "ಶೆತ್ತತ್ತಿನ್ ವಯಿಟ್ರಿಲ್ ಶಿರಿಯದು ಪಿರನ್ದಾಲ್, ಎತ್ತೈ ತಿನ್ರು ಎಙ್ಗೇ ಕಿಡಕ್ಕುಮ್" (ಮರಣ ಹೊಂದುವವರ ಹೊಟ್ಟೆಯಲ್ಲಿ 'ಚಿಕ್ಕ'ದೊಂದು ಹುಟ್ಟಿದರೆ, ಅದು ಯಾವುದನ್ನು ತಿಂದು ಎಲ್ಲಿರುವುದು?). ಕೂಡಲೇ ಉತ್ತರ ಬಂತು ಶಠಗೋಪರಿಂದ: "ಅತ್ತೈ ತಿನ್ರು ಅಙ್ಗೇ ಕಿಡಕ್ಕುಮ್" (ಅದನ್ನೇ - ಪರಮಾತ್ಮನನ್ನೇ - ತಿಂದು, ಅಲ್ಲೇ - ಅವನಲ್ಲೇ ಇರುವುದು). ಮಧುರಕವಿ ಆಳ್ವಾರರಿಗೆ ಬೇಕಾದ ಗುರು ಅವರೇ ಎಂದೆನಿಸಿತು.. ಅಂದಿನಿಂದ ಅವರು ಆ ಗುರುವನ್ನಾಶ್ರಯಿಸಿ ತಮ್ಮ ಜನ್ಮವನ್ನು ಸಾರ್ಥಕಗೊಳಿಸಿಕೊಂಡರು.

ಶಠಗೋಪರು ರಚಿಸಿದ ಕಾವ್ಯಗಳು ನಾಲ್ಕು: ತಿರುವಿರುತ್ತಮ್, ತಿರುವಾಶಿರಿಯಮ್, ತಿರುವಾಯ್ ಮೊಳಿ ಮತ್ತು ಪೆರಿಯ ತಿರುವನ್ದಾದಿ. ಬಲ್ಲವರು ಹೇಳುತ್ತಾರೆ ಇವು ನಾಲ್ಕು ಕ್ರಮವಾಗಿ ತಮಿಳಿನಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದ ಎಂದು. ಆ ನಾಲ್ಕು ವೇದಗಳ ಸಾರಸಂಗ್ರಹವು ಅವುಗಳಲ್ಲಿದೆ ಎಂದು ಕಂಡುಕೊಂಡವರಿದ್ದಾರೆ.

'ತಿರುವಿರುತ್ತಮ್' ಎಂಬುದು ಶಠಗೋಪರ ಮೊದಲ ಪ್ರಬಂಧ. ಇದು 'ವೃತ್ತ'ದ ಛಂದಸ್ಸಿನಲ್ಲಿದೆ ಎಂದೂ, ಭಗವಂತನನ್ನು ಕುರಿತು ದಿವ್ಯ 'ವೃತ್ತಾಂತ'ವನ್ನು ಹೇಳುವುದೆಂದೂ, ಇದನ್ನು 'ಶ್ರೇಷ್ಠ'ವಾದ 'ವೃತ್ತ' ಪ್ರಬಂಧ ಎಂದರೆ 'ತಿರುವಿರುತ್ತಮ್' ಎಂದು ಕರೆಯಲಾಗಿದೆ ಎನ್ನುತ್ತಾರೆ.

— o —

Garani Srinivasan

1.7.82

దివ్యప్రబన్ధమ్ — మూన్ఱావదాయిర — తిరువిరుత్తమ్
திவ்யப்ரபந்தம் — மூன்றாவதாயிரம் — திருவிருத்தம்

1 பொய்ந்நின்ற ஞானமும் பொல்லா வொழுக்கு மழுக்குடம்பும்,
இந்நின்ற நீர்மை யினியா முறாமை, உயிரளிப்பான்
எந்நின்ற யோனியுமாய் பிறந்தாய்! இமையோர் தலைவா!
மெய்ந்நின்று கேட்டருளாய், அடியேன் செய்யும் விண்ணப்பமே.

పొయ్న్నిన్ఱ జ్ఞానముమ్ పొల్లా వొఴుక్కు మఴుక్కుడమ్బుమ్,
ఇన్నిన్ఱ నీర్మై యినియా ముఱామై, ఉయిరళిప్పాన్
ఎన్నిన్ఱ యోనియుమాయ్ పిఱన్దాయ్! ఇమైయోర్ తలైవా!
మెయ్న్నిన్ఱు కేట్టరుళాయ్, అడియేన్ శెయ్యుమ్ విణ్ణప్పమే.

పొయ్ నిన్ఱ பொய் நின்ற = సుళ్ళాగిరువ, జ్ఞానముమ్ ஞானமும் = తిళివళికెయన్ను, పొల్లా பொல்லா = కెట్ట (కెట్టద), ఒఴుక్కుమ్ ஒழுக்கும் = నడతెయన్ను, అఴుక్కు அழுக்கு = కొళెతుంబిద (అశుద్ధవాద), ఉడమ్బుమ్ உடம்பும் = దేహవన్ను, ఇ-నిన్ఱ இ-நின்ற = ఈ బగెయ (ఇంతిరువ), నీర్మై நீர்மை = స్వభావవన్ను, ఇని இனி = ఇన్ను, యామ్ யாம் (ఎల్లా) = నావు, ఉఱామై உறாமை = పడెయదంతె, ఉయిర్ உயிர் = (ఎల్లా) జీవరన్ను, [struck through] అళిప్పాన్ அளிப்பான் = రక్షిసువుదక్కాగి, ఎ-నిన్ఱ எ-நின்ற = బగెబగెయాద, యోనియుమ్ யோனியும் = అవతారగళు, ఆయ్ ஆய் = ఆగి, పిఱన్దాయ్ பிறந்தாய் = హుట్టిదవనే, ఇమైయోర్ இமையோர் = దేవతెగళ, తలైవా தலைவா = ఒడెయనే, మెయ్ నిన్ఱు மெய் நின்று = నిజస్వరూపదల్లి, కేట్టు கேட்டு = కేళి, అరుళాయ్ அருளாய் = కృపెమాడు, అడియేన్ அடியேன் = ఈ దాసను, శెయ్యుమ్ செய்யும் = మాడువ, విణ్ణప్పమ్ விண்ணப்பம் = బిన్నహవన్ను.

(ఎల్లా) జీవరన్ను రక్షిసువుదక్కాగి బగెబగెయాద అవతారగళింద హుట్టిదవనే, దేవతెగళ ఒడెయనే, సుళ్ళాద తిళివళికెయన్ను కెట్టద నడతెయన్ను, అశుద్ధవాద (కొళెతుంబిద) దేహవన్ను ఈగిరువ స్వభావవన్ను ఇన్ను నావు పడెయదంతె [struck through] ఈ దాసను మాడువ బిన్నహవన్ను నిజస్వరూపదల్లి కేళి కృపెమాడు.

(1)

Garani Srinivasan

ತನಿಯನ್‌ನಲ್ಲಿ ಹೇಳಿದ ಹಾಗೆ, "~~[illegible]~~" "ತಿರುವಿರುತ್ತಮ್" ಪ್ರಬಂಧದ ಒಂದು ಪಾದವನ್ನಾದರೂ ಓದಿ, ಅರಿತು, ಅದರಂತೆ ನಡೆದು ಕೊಂಡರೆ, ಅಂಥವನಿಗೆ ಪರಮಪದಪ್ರಾಪ್ತಿಯಾಗುವುದು ಎಂಬುದಕ್ಕೆ ಸಾಕ್ಷಿಯಾಗಿ ಎಂಬಂತಿದೆ ಈ ಮೊದಲ ಪಾಶುರ. ತಿಳುವಳಿಕೆಯಲ್ಲಿ, ನಡತೆಯಲ್ಲಿ, ಶುದ್ಧತೆಯಲ್ಲಿ, ಸ್ವಭಾವದಲ್ಲಿ — ಮನುಷ್ಯನಲ್ಲಿ ಕಂಡುಬರುವ ನ್ಯೂನತೆಗಳನ್ನು ಬಹು ಸ್ವಾರಸ್ಯವಾಗಿ ಹೇಳಲಾಗಿದೆ. ಭಗವಂತನ ಪರತ್ವವನ್ನು ಸರ್ವರಕ್ಷಕತ್ವವನ್ನು ಹೇಳಲಾಗಿದೆ. ಇವುಗಳ ಜೊತೆಗೆ ಆಳ್ವಾರರ ಔದಾರ್ಯದಿಂದ ಕೂಡಿದ ನಮ್ರ ಪ್ರಾರ್ಥನೆಯೂ ಇದೆ.

"ಪೊಯ್‌ನ್ನಿನ್ಱ ಞಾನಮುಮ್" — ತಪ್ಪಾದ ತಿಳುವಳಿಕೆ: ದೇಹಾತ್ಮ ಭ್ರಾಂತಿ, ನಾನು ನನ್ನದು ಎಂಬುದರಲ್ಲಿ ಮಮತೆ, ಅಸ್ಥಿರವಾದ ಇಹಜೀವನದಲ್ಲಿ ಆಸಕ್ತಿ, ಭಗವಂತನಲ್ಲಿ ಪರಲೋಕದಲ್ಲಿ ಅಶ್ರದ್ಧೆ, ಪಾಪಭೀತಿಯಿಲ್ಲದಿರುವುದು, ಸ್ವಾರ್ಥಸಾಧನೆ — ಇವೆಲ್ಲ 'ಸುಳ್ಳು' ತಿಳುವಳಿಕೆ.

"ಪೊಲ್ಲಾ ಒಳುಕ್ಕಮುಮ್" — ಕೆಟ್ಟ ನಡತೆ: ಯಾವುದನ್ನು ಮಾಡಬಾರದೋ, ಯಾವುದರಿಂದ ಇಹ, ಪರ ಸುಖವಿಲ್ಲವೋ ಅಂಥ ಕೂಡದ ನಡತೆ — ಕುಡಿತ, ಜೂಜು, ಮೋಸಗಾರಿಕೆ (ವಂಚನೆ), ಸ್ತ್ರೀಲೋಲುಪತೆ, ಪರಹಿಂಸೆ — ಇತ್ಯಾದಿ ರಾಕ್ಷಸೀಕೃತ್ಯಗಳಲ್ಲಿ ತೊಡಗಿರುವುದು.

"ಅಳುಕ್ಕುಡಮ್ಬು" — ಕೊಳೆ ತುಂಬಿದ್ದ ಈ ದೇಹ. ಒಳಗೂ ಕೊಳೆ, ಹೊರಗೂ ಕೊಳೆ. ನವದ್ವಾರಗಳ ಮೂಲಕ ಬರುವುದೆಲ್ಲ ಕೊಳೆಯೇ. ಜೊತೆಗೆ ಕೆಟ್ಟ ನಡತೆಯಿಂದ ಮನಸ್ಸೂ ಕೊಳೆ ತುಂಬಿದ್ದು.

"ಇನ್ನಿನ್ಱ ನೀರ್ಮೈ" — ಈ ಬಗೆಯ ಸ್ವಭಾವ — ಎಂದರೆ, ಸುಳ್ಳು ತಿಳುವಳಿಕೆ, ಕೂಡದ ನಡತೆ, ಅಶುದ್ಧವಾದ ದೇಹ ಮನಸ್ಸನ್ನು ಹೊತ್ತು, ಸಂಸಾರದಲ್ಲಿ ಬಿದ್ದು ಕೊಳ್ಳುತ್ತಾ, ದುಃಖ-ಪಾಪಗಳ ಸುಳಿಯಲ್ಲಿ ಸಿಕ್ಕಿಕೊಂಡು ನರಕಭಾಜನವಾಗುವ ಸ್ವಭಾವ.

"ಉಯಿರಳಿಪ್ಪಾನ್" — ಎಲ್ಲಾ ಜೀವರನ್ನು, ತಾರತಮ್ಯವಿಲ್ಲದಂತೆ ಎಲ್ಲ ಕಾಲದಲ್ಲೂ ರಕ್ಷಿಸುವುದು ಭಗವಂತನು ಹೊತ್ತಿರುವ ಹೊಣೆ.

"ಎನ್ನಿನ್ಱ ಯೋನಿಯುಮಾಯ್ ಪಿಱನ್ದಾಯ್" — ತಾನು ಹೊತ್ತಿರುವ ಹೊಣೆಯನ್ನು ನಿರ್ವಹಿಸುವುದಕ್ಕಾಗಿ ಭಗವಂತನು ಮತ್ಸ್ಯ, ಕೂರ್ಮ, ವರಾಹ, ನಾರಸಿಂಹಾದಿ ನಾನಾ ಅವತಾರಗಳನ್ನೆತ್ತಿದನು. ಭಗವಂತನ ಸರ್ವರಕ್ಷಕತ್ವಕ್ಕೆ ಇದೊಂದು ಸಾಕ್ಷಿಯಿದ್ದಂತೆ.

Garani Srinivasan

"ಇಮೈಯೋರ್ ತಲೈವಾ" — ಜೀವರು ಮುಕ್ತಿ ಪ್ರಾಪ್ತಿಯಿಂದ ಪಡೆದು. ಎಲ್ಲಾ ದೇವತೆಗಳಿಗೂ ಭಗವಂತನು ಒಡೆಯನು. ಅಲ್ಲದೆ, ಪರಮಪದವಾಸಿಗಳಾದ ನಿತ್ಯಮುಕ್ತರಿಗೂ ಒಡೆಯನು. ಇದು ಭಗವಂತನ ಪರತ್ವವನ್ನು ತೋರಿಸುತ್ತದೆ.

"ಮೆಯ್‌ನ್ನಿನ್ರು ಕೇಟ್ಟರುಳಾಯ್" — ಭಗವಂತನು ನಾನಾ ಅವತಾರಗಳನ್ನೆತ್ತಿ ಜೀವರುಗಳನ್ನು ರಕ್ಷಿಸಿದ್ದನ್ನು ಪುರಾಣಗಳು ವಿವರಿಸಿ ಹೇಳುತ್ತವೆಯಷ್ಟೆ. ಅವುಗಳಲ್ಲಿ ಯಾವುದರಲ್ಲೂ ಸ್ವಾಮಿಯು ತನ್ನ ನಿಜಸ್ವರೂಪವನ್ನು ಎಲ್ಲರಿಗೂ ವ್ಯಕ್ತಪಡಿಸಲಿಲ್ಲ. ಇಲ್ಲಿ ಆಳ್ವಾರರು ಬೇಡುವುದೇನೆಂದರೆ, ಬೇರೆ ಬೇರೆ ರೂಪಗಳಲ್ಲಿ ಭಗವಂತನು ಬಂದು ಶಿಷ್ಟರಕ್ಷಣೆಯನ್ನೂ ದುಷ್ಟಶಿಕ್ಷಣವನ್ನೂ ಮಾಡಿದ್ದು ಭಗವಂತನ ನಿಜಸ್ವಭಾವವಾದರೂ, ಅದು ಭಗವಂತನ ಲೀಲೆ ಎಂಬುದನ್ನು (ವಿಲಾಸವನ್ನು) ನೇರವಾಗಿ ಕಂಡು ಅರಿತುಕೊಳ್ಳುವುದಕ್ಕೆ ಆಗದಿರುವುದರಿಂದ (ಯಾರೂ ಅವತಾರಗಳ ಮರ್ಮವು ಮುಚ್ಚಿರುವುದರಿಂದ), ಸ್ವಾಮಿಯು ತನ್ನ ನಿಜ-ಸ್ವರೂಪದಲ್ಲೇ ಬಂದು ಆಳ್ವಾರರ ಬಿನ್ನಹವನ್ನು ಕೇಳಬೇಕೆನ್ನುತ್ತಾರೆ.

ಆಳ್ವಾರರು ಹೇಳುತ್ತಾರೆ: ಆಯಾ ಸಮಯಕ್ಕೆ ತಕ್ಕಂತೆ ನಾನಾ ಅವತಾರಗಳನ್ನೆತ್ತಿ, ಬಂದು, ಜೀವರನ್ನು ರಕ್ಷಿಸಿದ ಸರ್ವೇಶ್ವರನೇ, ಮನುಷ್ಯನು ತನ್ನ ತಪ್ಪು ತಿಳುವಳಿಕೆಯಿಂದಲೂ, ಕೂಡಿದ ನಡತೆಯಿಂದಲೂ, ಅಶುದ್ಧವಾದ ದೇಹ ಮನಸ್ಸು ಸ್ವಭಾವಗಳಿಂದಲೂ (ಜನನ-ಮರಣವೆಂಬ) ದುಃಖವನ್ನು ಇನ್ನು ಅನುಭವಿಸದ ಹಾಗೆ, ದಾಸನಾದ ನಾನು ನಿನ್ನಲ್ಲಿ ಮಾಡಿಕೊಳ್ಳುವ ಬಿನ್ನಹವನ್ನು, ನಿನ್ನ ನಿಜರೂಪದಿಂದಲೇ ಬಂದು, ಕೇಳಿ, ಕೃಪೆದೋರು.

ಭಗವಂತನಲ್ಲಿ ಆಳ್ವಾರರು ತಮ್ಮನ್ನು ಮಾತ್ರವೇ ಉದ್ಧರಿಸೆಂದು ಬೇಡಿಕೊಳ್ಳಲಿಲ್ಲ. ಎಲ್ಲಾ ಜೀವರುಗಳ ಉದ್ಧಾರಕ್ಕಾಗಿ ಅವರು ಪ್ರಾರ್ಥಿಸಿದ್ದು. ಇದು ಆಳ್ವಾರರ ಔದಾರ್ಯ!

2. செழுநீர்த் தடத்துக் கயல்மிளிர்ந்தா லொப்பச், செய்யரிக்கண்
அழுநீர் துளும்ப வலமருகின்றன, வாழியரோ
முழுநீர் முகில்வண்ணன் கண்ணன் விண்ணாட்டவர் மூதுவராம்
தொழுநீரிணையடிக்கே, அன்புசூட்டிய சூழ்குழற்கே.

ಶೆಳುನೀರ್ ತ್ತಡತ್ತು ಕ್ಕಯಲ್ ಮಿಳಿರ್‌ನ್ದಾಲೊಪ್ಪ, ಶೆಯ್ಯರಿಕ್ಕಣ್
ಅಳುನೀರ್ ತುಳುಮ್ಬ ವಲಮರುಹಿನ್ರನ, ವಾಳಿಯರೋ
ಮುಳುನೀರ್ ಮುಹಿಲ್ ವಣ್ಣನ್ ಕಣ್ಣನ್ ವಿಣ್ಣಾಟ್ಟವರ್ ಮೂದುವರಾಮ್
ತೊಳುನೀರಿಣೈಯಡಿಕ್ಕೇ, ಅನ್ಬುಶೂಟ್ಟಿಯ ಶೂಳ್‌ಕುಳಟ್ಕೇ.

Garani Srinivasan

ತೆಳಿಯುನೀರ್ செழுநீர் = (ಶುದ್ಧವಾದ) ನೀರು ತುಂಬಿದ. ತಡತ್ತು கடக்கு = ಸರೋವರದ, ಕಯಲ್ கயல் = ಮೀನು, ಮಿಳಿರ್ನ್ದಾಲ್ ಬಪ್ಪ மிளிர்ந்த கூர் ப்ப = ನುಳಿದಾಡುವ ಹಾಗೆ, ತೇ ಅರಿ ಕಣ್ ச அரி கண் = ಕೆಂಪಗೆ (ಆಗಿರುವ) ಗೆರೆಗಳಿರುವ ಕಣ್ಣುಗಳು, ಅಲೈನೀರ್ அழுநீர் = ಅಳುವ ನೀರು, ತದುಮ್ಬ கதும்ப = (ತುಂಬಿ) ತುಳುಕುತ್ತಿರಲು, ಅಲಮರುಹಿನ್ರನ அலமருகின்றன = ಅಲೆದಾಡುತ್ತಿವೆ, ಪಾವೈಯರ್-ಕ್ಕ வாழியர் = ನಿಮಗೆಲ್ಲ ಜಯವಾಗಲಿ!, ಮುಲೈನೀರ್ முழுநீர் = ನೀರು ತುಂಬಿದ, ಮುಹಿಲ್ ವಣ್ಣನ್ முகில் வண்ணன் = ಮುಗಿಲಿನ ಬಣ್ಣದವನಾದ, ಕಣ್ಣನ್ கண்ணன் = ಆಕರ್ಷಕ ಸುಂದರನು (ಕೃಷ್ಣನು). ಪಿನ್ನೈ ನಾಚ್ಚಿಯರ್ விண்ணா நாட்டவர் = ಪರಮಪದ ವಾಸಿಗಳು, ಮುದುವರ್ ಆವರ್ முதுவர் ஆம் = ಪೆಣ್ಣಾ ಮೊದಲಾದರಾ, ತೋಳು இணை = ಎರಡುಳ, ನೀರ್ நீர் = ಸ್ವಭಾವದ, ಇಣೈತ್ತ ಅಡಿಕ್ಕೆ இணை அடிக்கே = ಎರಡು ತಿರುವಡಿಗಳಿಗೆ, ಅನ್ಪು ಸೂಟ್ಟಿಯ அன்பு சூட்டிய = ಪ್ರೇಮವನ್ನು (ಅಲಂಕರಿಸಿದ) ಮುಡಿಸಿದ, ಸೂಡಿ ಕೊಡುತ್ತ சூடிக் கொடுத்த = ಸುತ್ತು ಕಟ್ಟಿರುವ ತಲೆಗಾದಲಿನ ಹೆಣ್ಣಿಗೆ (ತಲೆಗಾದಲಿನ ಹೆಣ್ಣಿಗೆ).

ನೀರು ತುಂಬಿದ ಮುಗಿಲಿನ ಬಣ್ಣದವನಾದ ಆಕರ್ಷಕ ಸುಂದರನ (ಶ್ರೀಕೃಷ್ಣನ) ಪರಮಪದವಾಸಿಗಳು ಪೆಣ್ಣು ಮೊದಲಾದರಾ ಎರಡಾವ ಸ್ವಭಾವದ ಎರಡು ತಿರುವಡಿಗಳಿಗೆ ಪ್ರೇಮವನ್ನು ಮುಡಿಸಿದ ಸುತ್ತು ಕಟ್ಟಿದ ತಲೆಗಾದಲಿನ ಹೆಣ್ಣಿಗೆ, (ಶುದ್ಧವಾದ) ನೀರು ತುಂಬಿದ ಸರೋವರದ ಮೀನು ನುಳಿದಾಡುವ ಹಾಗೆ ಕೆಂಪಗೆ ಗೆರೆಗಳಿರುವ ಕಣ್ಣುಗಳು, ಅಳುವ ನೀರು ತುಂಬಿ ತುಳುಕುತ್ತಿರಲು, ತಳಮಳಿಸುತ್ತಿವೆ (ಅಲೆದಾಡುತ್ತಿವೆ). ನಿಮಗೆ ವಿಜಯ ವಾಗಲಿ! (೨)

ಇಂದಿನ ಪಾಶುರದಲ್ಲಿ, ಆಳ್ವಾರರು ಭಗವಂತನಲ್ಲಿ ನಮ್ರರಾಗಿಯಲ್ಲಿ ಪ್ರಾರ್ಥಿಸಿದರು: ಭಗವಂತನು ಪ್ರತ್ಯಕ್ಷನಾಗಿ ಬಂದು, ತಮ್ಮ ಬೇಡಿಕೆಯನ್ನು ಕೇಳಿ, ತೃಪ್ತಿಪಡಿಸಬೇಕೆಂದರು. ಭಗವಂತನು ತಮ್ಮಿಂದ ಅಗಲಿದ ಸಂಕಟವನ್ನು ಅವರು ಇಲ್ಲಿ ಪ್ರಕಟಗೊಳಿಸುತ್ತಿದ್ದಾರೆ.

ಈ ಪಾಶುರದಲ್ಲಿ ಆಳ್ವಾರರು 'ನಾಯಕಿ' ಆಗಿದ್ದಾರೆ. ತಮ್ಮ ಪ್ರಿಯತಮ 'ನಾಯಕ'ನಾದ ಭಗವಂತನ ಬಗೆಗೆ ತಮ್ಮ ಅಂತರಂಗದ ಪ್ರೇಮದ ವಿರಹವನ್ನು, ಇಲ್ಲಿ ಸುಂದರವಾದ ರೂಪಕಗಳೊಡನೆ ವರ್ಣಿಸುವುದರಿಂದ ಮೇಲಿನ ಶಾಸ್ತ್ರೀಯ ಸ್ವಲ್ಪ ತೋರುತ್ತದೆ, ಅಷ್ಟೆ.

"ಮುಲೈನೀರ್ ಮುಹಿಲ್ ವಣ್ಣನ್ ಕಣ್ಣನ್" — ಇನ್ನು ಸ್ವಲ್ಪ ತುಂಬಿತೋ

Garani Srinivasan

ಕ್ಕಳು ಸಾಧ್ಯವಿಲ್ಲ ವೆಂಬಷ್ಟು ನೀರನ್ನು ಪೂರ್ತಿಯಾಗಿ ತುಂಬಿಕೊಂಡಿರುವ ಮೋಡವನ್ನು ಕಾರ್ಮುಗಿಲು (ಮಳೆಗಾಲದ ದಟ್ಟವಾದ ಮುಗಿಲು) ಎನ್ನುತ್ತಾರಷ್ಟೆ. ಅದನ್ನು ಹೋಲುವ ಬಣ್ಣ, ಗುಣವುಳ್ಳವನಾಗಿ, ಆಕರ್ಷಕ ಸುಂದರನಾಗಿರುವವನು ಭಗವಂತ.

ಮಳೆಗಾಲದ ಮೋಡ ನೋಡುವುದಕ್ಕೆ ಸೊಗಸು. ಅದು ಆಕರ್ಷಕ. ಗಗನದಲ್ಲಿ ಅಲ್ಲಿ ಮೆಲ್ಲ ಮೆಲ್ಲನೆ ಸಂಚರಿಸುತ್ತಾ, ಕೆಳಗಿರುವ ನೆಲದ ಮೇಲೆ ಸಮೃದ್ಧಿಯಾಗಿ ಮಳೆಗರೆದು, ತೃಪ್ತಿ ಸಂತೋಷಗಳನ್ನು ತರುತ್ತದೆ. ಭಗವಂತನು ಹಾಗೆಯೇ ಆಕರ್ಷಕನಾಗಿ, ದಿವ್ಯಸುಂದರನಾಗಿ, ಔದಾರ್ಯ ಪರಿಪೂರ್ಣನಾಗಿ, ಭೂಲೋಕವಾಸಿಗಳಿಗೆ ಆನಂದದಾಯಕನಾಗಿ, ಅವರನ್ನು ಸಂಸಾರದ ಸಂಕಟದಿಂದ ಬಿಡಿಸುವವನಾಗಿ ಇದ್ದಾನೆ.

"ವಿಣ್ಣಾಟ್ಟವರ್ ಮೂದುವರ್ ಆಮ್ ಕೋಲು ನೀರ್" — ಭಗವಂತನ ನಿಲಯವಿದಲ್ಲೇ ಇರುವುದರಿಂದ, ಪರಮಪದವಾಸಿಗಳು ಸ್ವಾಮಿಯ ತಿರುವಡಿಗಳನ್ನು ತಮ್ಮ ದೃಷ್ಟಿಗಳಿಂದ ಪೂಜಿಸಿ ಎರಗುವುದರಲ್ಲಿ ಮೊದಲಿಗರು. ಅದೇ ಅವರ ಸ್ವಭಾವ.

"ಇನ್ತು ಅಡಿಕ್ಕೀೞ್ ಅನ್ಬು ಶೂಟ್ಟಿಯ ಶೂಡುರು ಕಲಲ್ ಕಳ್" — ಭಗವಂತನ ಎರಡು ತಿರುವಡಿಗಳಿಗೆ ಈ ನಾಯಕಿಯು (ಆಳ್ವಾರರು) ಪರಿಶುದ್ಧ ಪ್ರೇಮವೆಂಬ ಅನರ್ಘ್ಯ ಪುಷ್ಪವನ್ನು ಸಮರ್ಪಿಸಿ, ಆ ತಿರುವಡಿಗಳನ್ನೇ ತನ್ನ ತಲೆಯಲ್ಲಿ ಮುಡಿದಿದ್ದಾಳಂತೆ. ತಲೆಗೂದಲನ್ನು ಸುಂದರವಾಗಿ ಸುತ್ತಿ ತುರುಬನ್ನು ಮಾಡಿ ಅಲಂಕರಿಸಿಕೊಂಡಿದ್ದಾಳಂತೆ. ತಾನು ಸಮರ್ಪಿಸಿದ ಪ್ರೇಮವಾಗಲಿ, ಅದನ್ನು ಪಡೆಯುವ ತಿರುವಡಿಗಳಾಗಲಿ ಅಲ್ಲಿಂದ ಜಾರಿಹೋಗದ ಹಾಗೆ.

"ತೇಳು ನೀರ್ ತಡತ್ತು ಕಯಲ್ ಮಿಳಿರ್ವದು ಪೋಲ - ತೇ ಅರಿಕಣ್ ಅಲೈ ನೀರ್ ತಡುಪ್ಪು ಅಲಮರುಗಿನ್ರನ" — ಬಲು ಸುಂದರವಾದ ಉಪಮಾನ ಇದು.

ದೊಡ್ಡ, ತುಂಬಿದ, ಸರೋವರ. ಅದರ ನೀರು ಶುದ್ಧವಾಗಿದೆ. ಅದರಲ್ಲಿ ಮೀನುಗಳು ಅತ್ತಿಂದತ್ತ ಇತ್ತಿಂದತ್ತ ಸುಳಿದಾಡುತ್ತಿವೆ. ಇದು ಉಪಮಾನದ ಮೊದಲ ಭಾಗ.

ಭಗವಂತನ ತಿರುವಡಿಗಳನ್ನು ಪರಿಶುದ್ಧವಾದ ಪ್ರೇಮ ಪುಷ್ಪದಿಂದ ಅರ್ಚಿಸಿ, ಅವನ್ನು ತಲೆಯಲ್ಲಿ ಮುಡಿದಿರುವ ನಾಯಕಿಯ ಕಣ್ಣುಗಳು ವಿಸ್ತಾರವಾದ ಸರೋವರದಂತೆ. ಪ್ರಿಯತಮನ ಅಗಲಿಕೆಯಿಂದ, ಅವು

తంపిగా, అంతర్జ్ఞానిగా, జ్యోతిగా, తణ్ణుంబ నీరు తుంబి నిరోలవరవాటే ఆగా అప్పుగళ్లిరువ తణ్ణాలంగళు జంజలగొండు, అక్కిందక్క ఇక్కందక్క జలసుక్కా తమ్మ 'నాయక'న్ను నిరీక్షిసుత్తివే.

భావార్థ: భగవంతన పరమ పూజ్యవాద తిరువడిగళన్ను తన్న ప్రేమదింద పూజిసి, అప్పుగళన్ను తన్న తలెయల్లి అలంకరిసికొండు, భగవంత ఆగమనక్కాగి నిరీక్షిసువ నాయకియ (తణ్ణాలగళల్లి పోలువాద) నీరు తుంబికొండివే. తణ్ణాలంగళు జంజలవాగి హొరళుత్తివే.

3. குழற்கோவலர் மடப்பாவையும் மண்மகளும் திருவும்,
நிழற்போல்வனர் கண்டு நிற்குங்கொல் மீளுங்கொல்?,
தண்ணந்துழாய்
அழற்போலடுஞ் சக்கரத்தண்ணல் விண்ணோர் தொழக்
டவும்
குழற்போற்றினத்தை அப்புள்ளின் பின் போன தனி
நெஞ்சமே.

కుఴల్ కోవలర్ మడప్పావైయుమ్ మణ్మగళుమ్ తిరువుమ్,
నిఴల్ పోల్వనర్ కణ్డు నిఱ్కుంగొల్ మీళుంగొల్?, తణ్ణన్దుఴాయ్
అఴల్ పోలడుమ్ శక్కరత్తణ్ణల్ విణ్ణోర్ తొఴక్కడవుమ్
కఴల్ పోఱ్ఱినత్తై అప్పుళ్ళిన్ పిన్ పోన తనినెంజమే.

కుఴల్ కోవలర் குழல் கோவலர் = కొళలనూదువ గోవళర, మడమ్ மடம் = సాధ్వీమణియాద (గుణవతియాద), పావైయుమ్ பாவையும் = రమణియూ, మణ్మగళుమ్ மண்மகளும் = భూదేవియూ, తిరువుమ్ திருவும் = శ్రీదేవియూ, నిఴల్ పోల్వనర్ நிழல் போல்வனர் = నెరళినంతిరువవరన్ను, కణ్డు கண்டு = నోడి, నిఱ్కుమ్ కొల్ நிற்கும் கொல் = అల్లియే నిల్లువదో?, మీళుమ్ కొల్ மீளும் கொல் = హింతిరుగువదో?, తణ్ தண் = తంపాద, అమ్ அம் = సుందరవాద, తుళాయ్ துழாய் = తులసియన్ను, (తులసియ హారవన్ను), అఴల్ పోల அழல் போல = బెంకియంతె, అడుమ్ அடும் = సుడువ, శక్కరత్తు சக்கரத்து = చక్రాయుధవన్ను (ఉళ్ళ), అణ్ణల్ அண்ணல் = స్వామియు, విణ్ణోర్ விண்ணோர் = మేలణలోకదవరు, తొఴుదవుమ్

தொழுக்கடவும் = ಪೂಜಿಸಲು (ಎರಗಲು) ಅನುಕೂಲವಾಗುವಂತೆ, ತಳಲ್ ಪೋಲ್ தழல் போல் = ಬೆಂಕಿಯ ಹಾಗೆ, ಶಿನತ್ತ சினத்த = ಕೋಪವುಳ್ಳ, ಅ-ಪ್ಪುಳ್ಳಿನ್ அ-புள்ளின் = ಆ ಪಕ್ಷಿಯ (ಗರುಡನ), ಪಿನ್ பின் = ಹಿಂದೆ, ಪೋನ போன = ಹೋದ, ತನಿ ನೆಂಜಮೇ தனிநெஞ்சமே = ಒಂಟಿಯಾದ ಮನಸ್ಸು.

ತಂಪಾದ ಸುಂದರವಾದ ತುಲಸಿಯ ಹಾರವನ್ನು, ಬೆಂಕಿಯಂತೆ ಸುಡುವ ಚಕ್ರಾಯುಧವನ್ನು ಉಳ್ಳ ಸ್ವಾಮಿಯನ್ನು ಮೇಲಣ ಲೋಕದವರು ಎರಗಿ ಪೂಜಿಸಲು ಅನುಕೂಲವಾಗುವಂತೆ, ಬೆಂಕಿಯ ಹಾಗೆ ಕೋಪವುಳ್ಳ ಆ ಪಕ್ಷಿಯ (ಗರುಡನ) ಹಿಂದೆ ಹೋದ ಒಂಟಿಯಾದ ಮನಸ್ಸು, ಕೊಳಲನ್ನೂದುವ ಗೋವಳರ ಗುಣಾವತಿಯಾದ ನಾಚ್ಚಿಯೂ, ಭೂದೇವಿಯೂ, ಶ್ರೀದೇವಿಯೂ, ನೆರಳಿನ ಹಾಗೆ ಇರುವುದನ್ನು ಕಂಡು, ಅಲ್ಲಿಂದಲೇ ನಿಲ್ಲುವುದೋ, ಹಿಂತಿರುಗುವುದೋ? (3)

ಹಿಂದಿನ ಪಾಶುರದಲ್ಲಿ 'ನಾಯಕಿ'ಗೆ ತನ್ನ 'ನಾಯಕ'ನ ಅಗಲಿಕೆಯ ದುಃಖದಿಂದ, ಕಣ್ಣಲ್ಲಿ ನೀರು ತುಂಬಿ ತುಳುಕುತ್ತಿತ್ತು. ಅತ್ತು ಅತ್ತು ಕಣ್ಣು ಕೆಂಪಾಗಿತ್ತು. ಕಣ್ಣು ಅಗಲು ಬೆಂಕಿಯಲ್ಲಿ ಸುಳಿದಾಡುತ್ತಿತ್ತು.

ಈ ಪಾಶುರದಲ್ಲಿ ಅವಳ ಮನಸ್ಸು, ಅವಳನ್ನು ಒಂಟಿಯಾಗಿ ಬಿಟ್ಟು, ಗರುಡವಾಹನನಾದ ಶ್ರೀಭೂನೀಳಾ ಸಮೇತನಾದ ಶ್ರೀಮನ್ನಾರಾಯಣನನ್ನು ಹಿಂಬಾಲಿಸಿದೆ ಎನ್ನುತ್ತಾಳೆ.

"ಕುಳಲ್ ಕೋವಲರ್ ಮಡಪ್ಪಾವೈ" — ಗೋವಳರ ಯಜಮಾನನಾದ 'ಕುಂಭ' ಎಂಬುವನ ಮಗಳು ಪಿನ್ನೈ (ನಪ್ಪಿನ್ನೈ) ಎಂಬುವಳು. ಅವಳನ್ನು ಕೈಹಿಡಿಯುವವನು, ಕೊಬ್ಬಿ ಬೆಳೆಸಿದ್ದ ಏಳು ಗೂಳಿಗಳನ್ನು ಒಂಟಿಯಾಗಿ ಹಿಡಿದು ಕಟ್ಟಿಹಾಕಬೇಕೆಂಬ ಪಣವಿತ್ತು. ಶ್ರೀಕೃಷ್ಣನು, ಆ ಪಣವನ್ನು ಗೆದ್ದು ಪಿನ್ನೈಯನ್ನು ಮದುವೆಯಾದನು. ಪಿನ್ನೈ ಅಥವಾ ನಪ್ಪಿನ್ನೈ ಎಂಬುವಳನ್ನು ನೀಳಾದೇವಿ ಎನ್ನುತ್ತಾರೆ.

"ತಣ್ಣಂದುಳಾಯ್" — ಭಗವಂತನು ಧರಿಸಿರುವ ತುಲಸಿಯ ಹಾರ ತಂಪಾದದ್ದು, ಹಸಿರಾದದ್ದು, ಪರಿಮಳಪೂರ್ಣವಾದದ್ದು. ಸ್ವಾಮಿಯು ಬಿಡದ ನೆಂದರೆ, ಆ ಹಸಿವನ್ನು ತಂಪನ್ನು ಸೂರೆಗೊಂಡಂತೆಯೇ. ಅದಕ್ಕೆ ಅವನ ವಕ್ಷಸ್ಥಲವಾಸಿನಿಯಾದ ಶ್ರೀದೇವಿಯೇ ಸಾಕ್ಷಿ.

"ಅಳಲ್ ಪೋಲದುಮ್ ಶಕ್ಕರಮ್" — ಭಗವಂತನ ಕೈಯಲ್ಲಿ ಕೆಂಡವನ್ನು ಉಗುಳುವ, ಪ್ರಜ್ವಲಿಸುವ ಚಕ್ರಾಯುಧವಿದೆ. ಅವನ ಆಶ್ರಿತರ ವಿರೋಧಿಗಳನ್ನು ನಾಶಮಾಡುವುದೇ ಅದರ ಕೆಲಸ.

"ತಳಲ್ ಪೋಲ್ ಶಿನತ್ತ ಅ-ಪ್ಪುಳ್ಳ" — ಭಗವದ್ವಿರೋಧಿಗಳನ್ನು

Gargi Srinivasan

ಕಂಡರೆ, ಅವರನ್ನು ತುಂಬಾ ಅನುಭವಿಸಿದರೆ, ಭಗವಂತನಾದರೂ ಒಂದು ಕೈ ಬಿಡಲಾರ, ಕೆಡದಂತೆ ಕಾಪಾಡುವ ಭಗವದ್ವಾಹನ ನಾದ ಗರುಡನಿಗೆ.

ಆಳ್ವಾರರು ಹೇಳುತ್ತಾರೆ: ಭಗವದ್ವಿರಹದ ಕಾಲದ ವಿಷಯದಲ್ಲಿ ತಡೆಯಲಾರದಷ್ಟು ಗರುಡನ ಮೇಲೇರಿ, ಮೇಲಿನ ಲೋಕಗಳವರು ತನ್ನನ್ನು ಪೂಜಿಸಲು ಅನುಕೂಲವಾಗುವಂತೆ ಹೋಗುತ್ತಿರುವ ಭಗವಂತನನ್ನು ಹಿಂಬಾಲಿಸುತ್ತಾ ನನ್ನ ಒಂಟಿಯಾದ ಮನಸ್ಸು ಹೋಯಿತು. ಸ್ವಾಮಿಯನ್ನು ಸೇರಲೆಂದೇ ಹಿಂಬಾಲಿಸುವ ಶ್ರೀ, ಭೂ, ನೀಳಾ ದೇವಿಗಳನ್ನು ಸ್ವಾಮಿಯ ಜೊತೆಯಲ್ಲೇ ಕಂಡು, ಅದು ಅಲ್ಲೇ ನೆಲೆನಿಲ್ಲುವುದೋ, ಹಿಂತಿರುಗಿ ನನ್ನ ಬಳಿಗೆ ಬರುವುದೋ ಕಾಣೆನಲ್ಲ!

ಶ್ರೀ ಭೂ ನೀಳಾ ಸಮೇತನಾಗಿ, ತುಲಸಿಯ ಹಾರವನ್ನು ಧರಿಸಿ, ಚಿತ್ರ ವಾಹಿಯಾಗಿ ಗರುಡವಾಹನ ನಾಗಿರುವ ಶ್ರೀಮನ್ನಾರಾಯಣನಲ್ಲಿಯೇ ಮನಸ್ಸು ಸ್ಥಿರಗೊಳ್ಳಬೇಕು, ಚಂಚಲಗೊಳ್ಳಬಾರದು - ಎಂಬುದು ಇದರ ಭಾವ.

4. தனிநெஞ்சம் முன்னவர் புள்ளே கவர்ந்தது, தண்ணந் துழாய்க்
கினிநெஞ்ச மிங்குக் கவர்வது யாமிலம், நீநடுவே
முனிவஞ்சப் பேய்ச்சி முலைசுவைத்தான் முடிசூடு துழாய்ப்
பனிநஞ்ச மாருதமே!, எம்மதாவி பனிப்பியல்வே?

ತನಿ ನೆಂಜಮ್ ಮುನ್ನವರ್ ಪುಳ್ಳೇ ಕವರ್ನ್ದದು, ತಣ್ಣನ್ತುಳಾಯ್
ಕ್ಕಿನಿ ನೆಂಜ ಮಿಙ್ಗುಕ್ಕವರ್ವದು ಯಾಮಿಲಮ್, ನೀ ನಡುವೇ
ಮುನಿ ವಂಜ ಪ್ಪೇಯ್ಚ್ಚಿ ಮುಲೈ ಶುವೈತ್ತಾನ್ ಮುಡಿ ಶೂಡು ತುಳಾಯ್
ಪ್ಪನಿ ನಂಜ ಮಾರುದಮೇ!, ಎಮ್ಮದಾವಿ ಪನಿಪ್ಪಿಯಲ್ವೇ?

ತನಿ ನೆಂಜಮ್ தனி நெஞ்சம் = (ನನ್ನ) ಒಂಟಿಯಾದ (ಪೂರ್ಣ) ಮನಸ್ಸು, ಮುನ್ முன் = ಮೊದಲು, ಅವರ್ ಪುಳ್ಳೇ அவர் புள்ளே = ಅವರ (ಭಗವಂತನ) ಪಕ್ಷಿಯನ್ನೇ, ಕವರ್ನ್ದದು கவர்ந்தது = ಹಿಡಿಯಿತು (ಅನುಭವಿಸಿತು), ತಣ್ தண் = ತಂಪಾದ, ಅಮ್ அம் = ಸುಂದರವಾದ, ತುಳಾಯ್ಕ್ಕು துழாய்க் (கு) = ತುಲಸಿಗೆ, ಇನಿ இனி = ಇನ್ನು, ನೆಂಜಮ್ நெஞ்சம் = ಮನಸ್ಸು, ಯಾಮ್ யாம் = ನಾವು (ನಾನು) ಇಙ್ಗು இங்கு = ಇಲ್ಲಿ, ಕವರ್ವದು கவர்வது = ಆಕರ್ಷಿಸುವುದಕ್ಕೆ, ಇಲಮ್ இல(ம்) = ಇಲ್ಲವಾದೆ, ನೀ நீ = ನೀನು, ನಡುವೇ நடுவே = ಈ ನಡುವೆ (ಈವರೆಗೆ), ಮುನಿ முனி = ಕೋಪಿಷ್ಠರಾದ,

ವಂಜಮಾ ಉಳ್ಳತ್ತಾಂ = ವಂಚನೆಯ ಸ್ವಭಾವದ (ವಂಚಿಸಿದ), ಪೇಯ್ಚ್ಚಿ ಬೆಯ್ಯಶೀ = ರಾಕ್ಷಸಿಯ, ಮುಲೈ ಪುಹಿ = ಮೊಲೆಯನ್ನು, ಶುವೈತ್ತಾನ್ ಕಾದಲುಕ್ಕುತ್ತಾಣ್ = ಆದರದಿಂದ ಕುಡಿದವನ, ಮುಡಿ ಪುಹ = ತಲೆಯಲ್ಲಿ (ಹಿಂಬದಿಯಲ್ಲಿ), ಶೂಡು ಕೂಡ = ಮುಡಿದಿರುವ, ಶುಲುಂಗ್ ತುಳಾಯ್ = ತುಲಸಿಯ, ಮಾನಿ ಬಣ್ಣಿ = ತಂಪಾದ, ನಂಜಮಾ ನಲ್ಗಾಂ = ವಿಷ್ಣುದಂಡ, ಮಾರುದಮೇ ಲಾಗ್ಗಿಕ್ಕಲಮೆ = ತಂಗಾಳಿಯೇ, ಎಮ್ಮದು ಗಾಂಗ್ಗು = ನಮ್ಮ (ನನ್ನ), ಆವಿ ಆಯಿ = ನಿಟ್ಟುಸಿರ (ಪ್ರಾಣವನ್ನು) (ನಡುಗಿಸುವುದು), ನ್ನು ಪನಿಪ್ಪ ಬಣ್ಣಿಪ್ಪು = ತಂಪುಮಾಡುವುದು, ಇಯಲ್ಲೇ ತಿಯುಂದೆ = ನಿನ್ನ ಸ್ವಭಾವಕ್ಕೆ ತಕ್ಕದ್ದೇ?

ನನ್ನ ಒಂಟಿಯಾದ ಮನಸ್ಸು ಈವೊಂದಲೇ ಅವರ (ಭಗವಂತನ) ವಿಷ ಸ್ವ ಇನ್ನು ನಾನು ~~...~~ ಯನ್ನೇ ಬಡಿದು (ಅನುಭವಿಸಿತು). ತಂಪಾದ ಬೀಸುವ ತುಲಸಿಯನ್ನು ~~...~~, ಆಶಿಸುವುದಕ್ಕೆ (ನನ್ನ) ಮನಸ್ಸೇ ಇಲ್ಲವಾಗಿದೆ. ಹಾಲುಣಿಸುವಂತೆ ವಂಚಕಳಾಗಿ ಬಂದ ರಾಕ್ಷಸಿಯ ಮೊಲೆಯನ್ನು ಆದರದಿಂದ ಉಂಡವನ ತಲೆಯಲ್ಲಿ ಮುಡಿದ ~~...~~ ತುಲಸಿಯಿಂದ ~~...~~ ತಂಪಾದ ವಿಷ್ಣುದಂಡ ತಂಗಾಳಿಯೇ, ನನ್ನ ಪ್ರಾಣವನ್ನು ನಡುಗಿಸುವುದು (ನನ್ನ ನಿಟ್ಟುಸಿರನ್ನು ತಂಪು ಮಾಡುವುದು) ನಿನ್ನ ಸ್ವಭಾವಕ್ಕೆ ತಕ್ಕದ್ದೇ? (4)

ಹಿಂದಿನ ಎರಡು ಪಾಶುರಗಳಲ್ಲಿ ನಾಯಕಿ ತನ್ನ ನಾಯಕನ ಅಗಲಿಕೆಯನ್ನು ಸಹಿಸಲಾರದೆ ತಲ್ಲಣಿಸಿ ನರಳುತ್ತಿದ್ದಳು. ಮನಸ್ಸು ಅವಳನ್ನು ಬಿಟ್ಟು ಅವಳ ನಾಯಕನನ್ನು (ಪ್ರಿಯತಮನನ್ನು) ಹಿಂಬಾಲಿಸಿತು. ~~ಈಗ~~ ಬೀಸುವ ತಂಗಾಳಿಯಿಂದ ಬರುವ ಬಾಧೆಯನ್ನು — ಹೇಗೆ ಅದು ಅವಳಿಗೆ ಅಸಹನೀಯವಾಗಿದೆ ಎಂಬುದನ್ನು ಹೇಳಲಾಗುತ್ತದೆ.

ಬಳಿ ಸುಳಿದಾಡುವ ತಂಗಾಳಿಯಾದರೂ ಎಂತಹದ್ದು?

ನಾಯಕಿಯು ಬಳಿ ಸುಳಿದಾಡುವ ತಂಗಾಳಿ ಈ ವರೆಗೆ ಅದು ನಾಯಕಿಯ ಪ್ರಿಯತಮನು ತನ್ನ ತಲೆಯ ಮೇಲೆ ಮುಡಿದ ಪ್ರಾಣಿಗಳ ಪ್ರಾಣಾಧಾರದ, ತಂಪಾದ, ತುಲಸಿಯ ಹಾರದೊಡನೆ ವಿಹರಿಸುತ್ತಿತ್ತು. ಆದ್ದರಿಂದ ಅದು ಆ ಹಾರದ ಸ್ವಭಾವವನ್ನು ಸಹಜವಾಗಿ ಪಡೆದುಕೊಂಡಿದೆ. ಎಂದರೆ, ತಂಪಾಗಿದೆ, ಸುಕುಮಾರವಾಗಿದೆ, ತುಲಸಿಯ ಪರಿಮಳದಿಂದ ತುಂಬಿದೆ. ಆ ತಂಗಾಳಿಯೇ ಈಗ ನಾಯಕಿಯ ಬಳಿ ಸುಳಿಯುತ್ತಿರುವುದು.

"ಮುನಿ ವಂಜ ಪೇಯ್ಚ್ಚಿ ಮುಲೈ ಶುವೈತ್ತಾನ್" — ಭಗವಂತನ ಶ್ರೀಕೃಷ್ಣಾವತಾರದ ಪ್ರಸಂಗವಿದು. ಸುಂದರ ಸ್ತ್ರೀಯಾಗಿ ಪೂತನಿಯು ಕೃಷ್ಣನನ್ನು ಕೊಲ್ಲುವ ಸಲುವಾಗಿ ನಂದಗೋಕುಲಕ್ಕೆ ಬಂದಳು. ತಾಯಿಯಾದ

ಯಶೋದೆ ಇಲ್ಲದವೇಳೆಯಲ್ಲಿ, ವಂಚನೆಯಿಂದ ಯಶೋದೆಯಂತೆ ತನ್ನ ವೇಷವನ್ನು ಮರೆಸಿಕೊಂಡು, ಬಂದು, ತೊಟ್ಟಿಲ ಕಂದನಾದ ಕೃಷ್ಣನನ್ನು ಎತ್ತಿಕೊಂಡು ತನ್ನ ವಿಷದ ಮೊಲೆಯನ್ನು ಕೊಟ್ಟಳು. ಸರ್ವಜ್ಞನಾದ ಕೃಷ್ಣನು ಆ ವಿಷದ ಹಾಲನ್ನೇ ಚಪ್ಪರಿಸುತ್ತಾ ಕುಡಿದು, ಅದರೊಂದಿಗೆ ಅವಳ ಪ್ರಾಣವನ್ನು ಹೀರಿಕೊಂಡನು.

'ನಾಯಕಿ' ಯು ಹೇಳುತ್ತಾಳೆ: ತಂಗಾಳಿಯೇ, ನೀನು ಇದುವರೆಗೆ ಕೋಪಿಷ್ಠಳೂ ವಂಚಕಿಯೂ ಆದವಳ ವಿಷದ ಮೊಲೆಯುಣ್ಣುಂಡ ನನ್ನ ಪ್ರಿಯತಮನ ತಲೆಯಲ್ಲಿ ಮುಡಿದ ತುಲಸಿಯ ಹಾರದ ಬಳಿಯಲ್ಲೇ ಸುಳಿದಾಡಿದ್ದೀ. (ಅದರ ಸ್ವಭಾವವನ್ನು ಪಡೆದುಕೊಂಡಿದ್ದೀ). ನಿನ್ನ ಕಂಪೂ, ಆ ತುಲಸಿಯ ಕಂಪೂ ಕೂಡಿಕೊಂಡು ನನಗದು ವಿಷವಾಗಿ ಪರಿಣಮಿಸಿದೆ. ಈಗಾಗಲೇ ನನ್ನ ಮನಸ್ಸೆಲ್ಲಾ ಗರುಡವಾಹನನಾದ ನನ್ನ ಪ್ರಿಯತಮನನ್ನು ಹಂಬಲಿಸಿದೆ. ಈಗ ನನ್ನಲ್ಲಿ ಉಳಿದಿರುವುದು ನನ್ನ ಜೀವ ಮಾತ್ರವೇ! ನೀನು ನನ್ನ ಬಳಿ ಬಂದು ಸುಳಿದಾಡುವುದರಿಂದ ನನಗೆ ಹಿತವಾಗುವುದು ಎಂದು ಭಾವಿಸಿದೆಯಾ? ನನ್ನ ಜೀವಕ್ಕೆ ಯಾತನೆಯನ್ನುಂಟು ಮಾಡುವುದು ನಿನ್ನ ಸ್ವಭಾವಕ್ಕೆ ತಕ್ಕದ್ದೇ? (ನನ್ನ ನಿಟ್ಟುಸಿರು ನನ್ನ ನಾಯಕನಿಗೆ ಅರಿವಾಗಬೇಡವೇ? ಅದು ಅವನಲ್ಲೇ ಹರಿ, ಅವನಿಗೆ ತಟ್ಟಬೇಡವೇ? ನೀನದನ್ನು ಇಲ್ಲಿಯೇ ಕಂಪು ಮಾಡುವುದರಿಂದ ನನಗೆ ಫಲವಿದೆಯೇ? ಇದೇಯೇ ನೀನು ಮಾಡುವ ಉಪಕಾರ?)

5. பனிப்பியல்வாக வுடைய தண்வாடை, இக்காலமிவ்வூர்ப்
பனிப்பியல் எல்லாந்தவிர்ந்தெரி வீசும், அந்தண்ணந்துழாய்ப்
பனிப்புயல்சோருந் தடங்கண்ணி மாமைத்திறத்துக்கொலாம்?
பனிப்புயல்வண்ணன், செங்கோலொருநான்று தடாவியதே.

ಪನಿಪ್ಪಿಯಲ್ ವಾಹ ವುಡೈಯ ತಣ್ವಾಡೈ, ಇಕ್ಕಾಲ ಮಿವ್ವೂರ್
ಪ್ಪನಿಪ್ಪಿಯಲ್ ವೆಲ್ಲಾನ್ದವಿರ್ನ್ದೆರಿ ವೀಶುಮ್, ಅನ್ದಣ್ಣನ್ತುಳಾಯ್
ಪ್ಪನಿಪ್ಪುಯಲ್ ಶೋರುನ್ದಡಂಗಣ್ಣಿ ಮಾಮೈತ್ತಿರತ್ತುಕ್ಕೊಲಾಮ್?
ಪನಿಪ್ಪುಯಲ್ ವಣ್ಣನ್, ಶೆಂಗೋಲೊರುನಾನ್ರು ತಡಾವಿಯದೇ.

ಪನಿಪ್ಪು பனிப்பு = ಕಂಪನ್ನುಂಟುಮಾಡುವುದು, ಇಯಲ್ಪು ಆಹ இயல்பு ஆக = ಸ್ವಭಾವವಾಗಿ; ಉಡೈಯ உடைய = ಉಳ್ಳ, ತಣ್ವಾಡೈ தண்-வாடை = ತಂಗಾಳಿಯು, ಇ-ಕಾಲ್ (ಕಾಲಮ್) இ-கால் (காலம்) = ಈಗ, ಇ-ಊರ್ இ-ஊர் = ಈ ಸ್ಥಳದಲ್ಲಿ, ಪನಿಪ್ಪು ಇಯಲ್ಪು ಎಲ್ಲಾಮ್

Garani Srinivasan

ಪಣಿಪ್ಪು ಇಯಲ್ವು ಉಡೆಯಾಳ್ = ಶ್ರೇಷ್ಠ ಶೀಲ ಸ್ವಭಾವವನ್ನೆಲ್ಲಾ, ಶವಿರ್ಕ್ಕು
ಕುವಿರ್ನ್ದು = ಬಿಟ್ಟು, ಎರಿ ಉಡೈ = ಬಿಸಿಯಾಗಿ (ಸುಡುವಂತೆ, ಜ್ವಾಲೆಯುಳ್ಳ),
ವಿಳಕ್ಕುಮೆಲ್ ... = ಬೀಳುವುದು, ಅವಳ್ ಅಂ = ಜೇನು ಬಿಗಿದ, ಕಣ್ ಕಾಣ
= ಶಂಪಾದ, ಕುಲುಂಗಿ ... = ಕುಲಪಿಯ (ದಾರದ) ಬಗೆಗೆ, ಪನಿಷ್ಟುಯ
ಲ್ ಪಣಿಪ್ಪುಯಲ್ = ಮಳೆಯ ಮೇಲಿದವ್ವು, (ಸುಂಬುವ ದಾರೆ), ಕೇಳರುವಾ
ಚೆಂಗಣ್ಣು = ನೀರನ್ನು ಸುರಿಯುತ್ತಿರುವ (ಸುರಿಯುತ್ತಿರುವ), ಶಡ ಕಣ್ಣೆ ಕುಟ ಕಣ್ಣಾಣ =
ವಿಶಾಲವಾದ ಕಣ್ಣಿನವಳಾದ (ಇವಳು-ಈ ನಾಯಕಿಯು), ವರ್ಷೈಮಾವಾಂ =
ರೂಪದ (ದೇಹದ), ಶಿಬ್ ... = ಜೇನು ಬಿಗನ್ನು
(ಬಣ್ಣವನ್ನು), ಕೋಲ್ ... = ನಾಶ ಪಡಿಸುವುದಕ್ಕಾಗಿಯೇ, ಆಮ ...
= ನಿಂ, ಪನಿಷ್ಟುಯಲ್ ವನ್ನಾನ್ ಪಣಿಪ್ಪುಯಲ್ ... = ಕಾಮರ್
ನೀಲನ ಬಣ್ಣದವನ (ನಿವೇಶ್ವರನ), ಕೆಳ್ಳೋಲ್ ... = ಆಜ್ಞೆ,
[struck], ಒರು ನಾನ್ ... = ಈ ಒಂದು ದಿವಸದಲ್ಲಿ,
ಶಡಾವಿಯುದ್ ಕುಟಾವಿಯದ್ = ಕಲಿಕೆಯು ಆಯಿತಲ್ಲ!

ಶಂಪನ್ನಂಟು ಮಾಡುವುದೇ ಸ್ವಭಾವವಾಗುಳ್ಳ ಕಂಗಾಳಿಯು ಈಗ ಇಲ್ಲಿ ತನ್ನ ಶ್ರೇಷ್ಠ ಶೀಲ ಸ್ವಭಾವವನ್ನೆಲ್ಲಾ ಬಿಟ್ಟು ಸುಡುವ ಜ್ವಾಲೆಯಾಗಿ ... ಕುಲಪಿಯ ದಾರದ ಬಗ್ಗೆ ಮಳೆಯು ಬೀಳುವುದು. ಜೇನು ಬಿಗಿನ ಶಂಪಾದ ಕುಲಪಿಯ ದಾರದ ... ನೀರನ್ನು ಸುರಿಸುತ್ತಿರುವ (ಇವಳು-ಈ ನಾಯಕಿಯು), ಮೇಲಿದವ್ವು ಸುರಿಯುವ ದಾರೆ ನೀರನ್ನು ಸುರಿಸುತ್ತಿರುವ ರೂಪದ ಜೇನು ಬಿಗನ್ನು (ದೇಹದ ಬಣ್ಣವನ್ನು) ನಾಶ ಪಡಿಸುವುದಕ್ಕಾಗಿಯೇ ನಿಂ. ರೂಪದ ... ಕಾಮರ್ ನೀಲನ ಬಣ್ಣದವನ (ನಿವೇಶ್ವರನ) ಕಚ್ಚಳ ಈ ಒಂದು ದಿವಸದಲ್ಲಿ ಕಲಿಕೆಯಾಯಿತಲ್ಲ! (5)

ಒಂದಿನ ಮಾತಿನಲ್ಲಿ ನಾಯಕಿಯು ಕಂಗಾಳಿಯನ್ನು ದ್ವೇಷಿಸಿ ಹೇಳಿದಳು: "ನನ್ನ ಮನಸ್ಸೆಲ್ಲಾ ಭಗವಂತನನ್ನು ಹಂಬಲಿಸಿ ಹೋಗಿದೆ. ಇಲ್ಲಿ ಜೀವಮಾತ್ರ ಉಳಿದಿದೆ. ಅದು ಎರಡಾದ ತಪಿಸುತ್ತಿದೆ. ಅದನ್ನು ಕೊಲ್ಲುವುದಕ್ಕಾಗಿ ನೀನು ಬಂದಿರುವೆಯಾ: ನನ್ನನ್ನು ಹೀಗೆ ದಂಡಿಸುವುದು ನಿನಗೆ ತರವೇ?' ಎಂದಳು.

ಈ ಮಾತುಗಳಲ್ಲಿ ಆ ವಿಷಯವನ್ನೇ ಮುಂದುವರಿಸುತ್ತಾಳೆ. 'ನನ್ನ ಜೀವಕ್ಕೆ ಹೋರಾಟವಾಗಿ ದೇಹವಿದೆ. ಇದಕ್ಕೆ ರೂಪವಿದೆ, ಜೇನುಬಿಗಿದೆ, ಬಣ್ಣವಿದೆ, ಕಾಂತಿಯಿದೆ, ಚೆಲುವಿದೆ. ದೇಹದ ಈ ಲಕ್ಷಣಗಳನ್ನೆಲ್ಲಾ ನಾಶಪಡಿಸಲು ಹೀಗೆ ಸುಡುತ್ತಿರುವೆಯಾ?' ಎನ್ನುತ್ತಾಳೆ.

ಎರಡುಗಳಿಗೆ ಶಂಗಾಳಿ ತಪ್ಪುವುದಂತೆ. ಅದರ ಸ್ವಭಾವಂದಾದ ತಂಪು ಸುಡುವ ಜ್ವಾಲೆಯಾಗಿ ದಂಡಿಸುತ್ತದೆ.

Garani Srinivasan

ಇಲ್ಲಿ ನಾಯಕಿಗೆ ಭಾಗವತನು ಧರಿಸಿರುವ ತುಲಸಿಯ ಹಾರದ ಮೇಲೆ ಮನಸ್ಸು. ಅದರ ತಂಪನ್ನು ಕಂಪನ್ನು ತಾನು ಭಾಗವತನೊಡನೆ ಕೂಡಿಕೊಂಡು ಅನುಭವಿಸಬೇಕೆಂಬ ಮನದಾಸೆ. ಅದು ತನಗೆ ಲಭ್ಯವಾಗದೆ ಇದ್ದುದರಿಂದ ಕಣ್ಣೀರು ಸುರಿಸುತ್ತ ತಂಗಾಳಿಯನ್ನು ಕುರಿತು ತನಗೆ ತಾನೇ ಹೇಳಿಕೊಳ್ಳುತ್ತಾಳೆ.

ನಾಯಕಿಯು ಹೇಳುತ್ತಾಳೆ: ತಂಗಾಳಿಯ ನಿಜಸ್ವಭಾವ ಮನಸ್ಸಿಗೂ ದೇಹಕ್ಕೂ ಹಿತವನ್ನುಂಟು ಮಾಡುವುದು. ಅದು ನನಗೆ ಸುಡುವ ಜ್ವಾಲೆಯಾಗಿ ಪರಿಣಮಿಸಿದೆಯಲ್ಲ! ಇದೇನಾಶ್ಚರ್ಯ! ಆಯಾ ವಸ್ತು ಅದಕ್ಕೆ ನಿಯಮಿತವಾದ ಕಾರ್ಯವನ್ನು ಮಾಡುತ್ತಿರಬೇಕೆಂಬುದು ಭಾಗವತನ ಕಟ್ಟಳೆಯಲ್ಲವೇ? ಈ ತಂಗಾಳಿ ಅದಕ್ಕೆ ವಿರುದ್ಧವಾಗಿ ವರ್ತಿಸುತ್ತಿದೆಯಲ್ಲ! ಭಾಗವತನ ಸಹವಾಸಕ್ಕಾಗಿ ವಿರಹಿಯಾದ ನಾನು ಮಳೆಯು [illegible] ಸುರಿಯುವಂತೆ ಒಂದೇ ಸಮನಾಗಿ ಕಣ್ಣೀರು ಸುರಿಸುತ್ತಿದ್ದೇನೆ.. ನನ್ನೀ ದೇಹದ ಬಣ್ಣವನ್ನು ಅಂದವನ್ನು ಕೆಡಿಸುವ [illegible] ಈ ಗಾಳಿ ಹೀಗೆ ಸುಡುತ್ತಾ ನನ್ನ ಮೇಲೆ ಬೀಸುತ್ತಿರಬಹುದೇ?

6. தடாவியவம்பும் முரிந்த சிலைகளும் போகவிட்டு,
கடாயின கொண்டொல்கும் வல்லியிதேனும், அசுரர் மங்கக்
கடாவிய வேகப் பறவையின் பாகன் மதனசெங்கோல்
நடாவிய கூற்றங்கண்டீர், உயிர் காமின்கள் ஞாலத்துள்ளே

ತಡಾವಿಯವಮ್ಬುಮ್ ಮುರಿನ್ದ ಶಿಲೈಗಳುಮ್ ಪೋಗವಿಟ್ಟು,
ಕಡಾಯಿನ ಕೊಣ್ಡೊಲ್ಗುಮ್ ವಲ್ಲಿಯಿದೇನುಮ್, ಅಸುರರ್ ಮಙ್ಗ
ಕ್ಕಡಾವಿಯ ವೇಗಪ್ ಪಱವೈಯಿನ್ ಪಾಗನ್ ಮದನ ಶೆಙ್ಗೋಲ್
ನಡಾವಿಯ ಕೂಱ್ಱಙ್ಗಣ್ಡೀರ್, ಉಯಿರ್ ಕಾಮಿನ್ಗಳ್ ಞಾಲತ್ತುಳ್ಳೇ.

ತಡಾವಿಯ தடாவிய = ನೆಟ್ಟಗಿಲ್ಲದ (ಬಗ್ಗಿದ), ಅಮ್ಬುಮ್ அம்பும் = ಬಾಣವನ್ನು, ಮುರಿನ್ದ முரிந்த = ಮುರಿದು ಹೋದ, ಶಿಲೈಗಳುಮ್ சிலைகளும் = ಬಿಲ್ಲುಗಳನ್ನು, ಪೋಗವಿಟ್ಟು போகவிட்டு = ತೊಲಗಿಸಿ, ಕಡಾಯಿನ கடாயின = ಫಲಕೊಯ್ಯುವುದನ್ನು, ಕೊಣ್ಡು கொண்டு = ತೆಗೆದುಕೊಂಡು, ಒಲ್ಗುಮ್ ஒல்கும் = ನಡೆಯುವ, ವಲ್ಲಿ வல்லி = [illegible], ಇದು ಏನುಮ್ இதுஏனும் = ಇದು ಆಗಿದ್ದರೂ, ಅಸುರರ್ அசுரர் = ಅಸುರರು, ಮಙ್ಗ மங்க = ನಾಶವಾಗುವಂತೆ, ಕಡಾವಿಯ கடாவிய = ದಾಟಿಸುವ, ವೇಗಮ್ வேகம் = ವೇಗವುಳ್ಳ, ಪಱವೈಯಿನ್ பறவையின் = ಪಕ್ಷಿಯ, ಪಾಗನ್ பாகன் = ಸವಾರನು, ಮದನನ್ மதனன் = ಮದನನ, ಶೆಙ್ಗೋಲ್ செங்கோல் = ಕಟ್ಟಳೆಯನ್ನು, ನಡಾವಿಯ நடாவிய = ನಡೆಸತಕ್ಕ, ಕೂಱ್ಱಮ್ கூற்றம் = ಯಮನು, ಕಣ್ಡೀರ್ கண்டீர் = ಕಂಡಿರಾ, ಉಯಿರ್ ಕಾಮಿನ್ಗಳ್ உயிர் காமின்கள் (ಜೀವಗಳನ್ನು ಆಳುವವರೇ) = ~~[illegible]~~ ಜೀವಗಳನ್ನು ರಕ್ಷಿಸಿಕೊಳ್ಳಿರಿ, ಞಾಲತ್ತುಳ್ಳೇ ஞாலத்துள்ளே = ಭೂಮಿಯ ಮೇಲೆ

Garani Srinivasan

ಭೂಮಿಯ ಮೇಲೆ ಜೀವನಗಳನ್ನು ಉಳಿಸಿಕೊಳ್ಳಬೇಕೆನ್ನುವವರೇ, ಇದು ಬಗ್ಗದ ಬಾಣವನ್ನೂ ಮುಂದ ಬಿಲ್ಲುಗಳನ್ನೂ ಕೆಳಗಿಸಿ, ಫಲಕಾರಿಯಾದವನ್ನು (ಹೊಗೆಯನ್ನು) ಕಡಿದುಕೊಂಡು ನಡೆಯುವ ಧ್ವಜಸ್ತಂಭವಾಗಿದ್ದರೂ, ಅಸುರರು ನಾಶವಾಗುವಂತೆ ದಾಟಿಸುವ ವೇಗವುಳ್ಳ ವಿಷ್ಣು ಸಿಪಾರನ ಮದನನ ಕಟ್ಟಳೆ (6)
ಯನ್ನು ನಡೆಸಿಕೊಳ್ಳು ಯಮನೇ ಕಂಡಿರಾ!

ಹಿಂದಿನ ಪಾಶುರದ ವಿಷಯವನ್ನು ಇಲ್ಲಿಯೂ ಮುಂದುವರಿಲಾಗಿದೆ.

ತನ್ನ ಪಾದವೇದನೆಯನ್ನು ಹೆಚ್ಚುಮಾಡಿದ ಕಂಗಾಳಿಯ ವಿಷಯದಲ್ಲಿ ಭೂಮಿಯ ಮೇಲೆ 'ಬದುಕ' ಆಶಿಸುವ ಜನರಿಗೆ, ಈ 'ನಾಯಕಿ' (ಆಳ್ವಾರರು) ಎಚ್ಚರಿಕೆ ಕೊಡುತ್ತಿದ್ದಾರೆ ಜನರು ಕಂಗಾಳಿಗೆ ಮೈಯೊಡ್ಡಿ ಅದರ ಬಿಸಿಯನ್ನು ಅನುಭವಿಸಬಯಸಿದರೆ, ಅವರು ವಿಷಯ ಲಂಪಟರಾಗುವುದು ಖಂಡಿತ. ಇದರಿಂದ ನೀವು ಆಶಿಸುವ 'ನಿಜವಾದ ಬದುಕು' ನಿಮಗೆ ಲಭಿಸುವುದಿಲ್ಲ. ಭಗವಂತನ ತಿರುವಡಿಗಳ ಸೇವೆಗೆ ಬದಲಾಗಿ ನಿಮಗೆ ದೊರಕುವುದು ~~[illegible]~~ ಮನ್ಮಥನ ಮತ್ತು ಯಮನ ಸೇವೆ ಮಾತ್ರವೇ ದೊರಕುವುದು. ಆದ್ದರಿಂದ, ನೀವು ಈಗಲೇ ಎಚ್ಚರಿಕೆ ತೆಗೆದುಕೊಳ್ಳಿ. ವಿಷಯಾಸಕ್ತಿಯತ್ತ ಗಮನ ಹರಿಸಬೇಡಿರಿ. ನಿಮ್ಮ ತನು ಮನಗಳನ್ನು ಭಗವಂತನ ತಿರುವಡಿಗಳಲ್ಲಿ ಪರಿಪೂರ್ಣವಾಗಿ ಅರ್ಪಿಸಿ 'ನಿಜವಾದ ಬಾಳಿನ ನಿತ್ಯಾನಂದ ಸುಖವನ್ನು ಪಡೆದುಕೊಳ್ಳಿರಿ.

'ನಾಯಕಿ'ಯು ಹೇಳುತ್ತಾಳೆ: ಭೂಮಿಯ ಮೇಲೆ ಬದುಕಲು ಇಚ್ಛೆಸುವ ಜನರೇ, ಈ ಕಂಗಾಳಿಯು ಕೆಲವೊಮ್ಮೆ ಭಗವಂತನ ಕಟ್ಟಳೆಯನ್ನು ಪಾಲಿಸುವುದಿಲ್ಲ. ಬದಲಾಗಿ, ಸ್ವಾಮಿಯ ವೈರಿಯಾದ ಮನ್ಮಥನ ಆಜ್ಞೆಯನ್ನು ಪಾಲಿಸುತ್ತದೆ. ಇದು ತನ್ನ ಹಳೆಯ ಅಂಬುಗಳನ್ನೂ, ಮುಂದ ಬಿಲ್ಲುಗಳನ್ನೂ ತ್ಯಜಿಸಿ, ಹೊಗೆಯ ತೋರಣಗಳನ್ನು ಕಟ್ಟಿ, ಮನ್ಮಥನ ವಿಜಯಧ್ವಜವೇ ತಾನು ಎಂಬಂತೆ, ಮುನ್ನುಗ್ಗಿ ಬರುವ, ಇಲ್ಲಿ ಬದುಕಬಯಸುವವರನ್ನೆಲ್ಲಾ ಕೊಲ್ಲುವ ಯಮಪಟ್ಟಣವೇ ಕಂಡಿರಾ!

7. ஞாலம் பனிப்பச் செறித்து, நன்னீரிட்டுக் கால்சிதைந்து
நீலவல்லேறு பொராநின்ற வானமிது, திருமால்
கோலஞ்சுமந்து பிரிந்தார் கொடுமை குழறு தண்பூங்
காலங்கொலோ அறியேன், வினையாட்டியேன் காண்கின்றவே

ಜ್ಞಾಲಮ ಪನಿಪ್ಪ ಚ್ಚೆಱಿತ್ತು, ನನ್ನೀರಿಟ್ಟು ಕ್ಕಾಲ್ ಶಿದೈನ್ದು
ನೀಲವಲ್ಲೇಱು ಪೊರಾನಿನ್ಱ ವಾನಮಿದು, ತಿರುಮಾಲ್
ಕೋಲಞ್ಜುಮನ್ದು ಪಿರಿನ್ದಾರ್ ಕೊಡುಮೈ ಕುೞಱು ತಣ್ಪೂ
ಙ್ಗಾಲಙ್ಗೊಲೋ ಅಱಿಯೇನ್, ವಿನೈಯಾಟ್ಟಿಯೇನ್ ಕಾಣ್ಗಿನ್ಱವೇ.

ಜ್ಞಾಲಮ ஞாலம் = ಭೂಮಿಯನ್ನು, ಪನಿಪ್ಪ பனிப்ப = ನಡುಗಿಸುವುದಕ್ಕಾಗಿ,
ಚೆಱಿತ್ತು செறித்து = ದಟ್ಟವಾಗಿ ಕೂಡಿ, ನಲ್ ನೀರ್ ಇಟ್ಟು நல்நீர் இட்டு =

ಶುದ್ಧವಾದ ನೀರನ್ನು ನೋಡಿ, தெள் காய் = ಕಾಳಿಯಿಂದ, ಶಬ್ದಿಸು சிலைக்கும் = ಚೆದರಿ, (ಚೆದರಿದ ಬಳಿಕ), ನೀಲಮಾ கோலம் = ನೀಲವಾದ (ಕಪ್ಪಾದ), ವಲ್ ವಲ್ = ಬಲಿಷ್ಠವಾದ, ಮೇಲುಂ ஏறு = ಗೂಳಿಯಂತೆ, ಪೋರಾನಿನ್ರು பொரா நின்ற = ಹೋರಾಡಲು ನಿಂತಿರುವ, ವಾನವರ್ வானம் = ಆಕಾಶ, ಇದು இது = ಇದು; ತಿರುಮಗಳ್ திருமால் = ಭಗವಂತನ (ಲಕ್ಷ್ಮೀಪತಿಯ), ಕೇಲಲಮಾ கோலம் = ತೇಜಸ್ಸನ್ನು (ಬಣ್ಣವನ್ನು), ಶುಮನ್ದು சுமந்து = ಹೊತ್ತು, (ಪಡೆದುಕೊಂಡು), ಪಿರಿ ನ್ದಾರ್ பிரிந்தார் = ಅಗಲಿದವರ, ತಂಡುಮೈ தாமம் = ಕ್ರೋಯರ್ವನ್ನು, ತೊಲೈ[1] ಪ್ರಾಕಾಲಮಗ್ಗ[2] கொல்லும் குழறு = ಘೋಷಿಸುವ, ತನ್ ಕಣ್ = ತಂಪಾದ, ನಮಂ ಗಮಳೆಗಾಲಮ್ಮೋ (ತಾನ್), ಅಯೋಂಯಲೇನ್ அறியேன் = ಅರಿಯೆನು, ತಾನ್ ವಿನೈಯುಡೈಯಲೇನ್ வினை யாட்டியேன் = ಪಾಪಿಷ್ಠಳು ನಾನು, ತಾನ್ ಎನ್ ಆವೇ காண்கின்றவே = ಕಾಣುತ್ತಿಲ್ಲ.

ಭಗವಂತನನ್ನು ತೋರಿಸುವುದಕ್ಕಾಗಿ ದಟ್ಟವಾಗಿ ಕೂಡಿ, ಶುದ್ಧವಾದ ನೀರನ್ನು ನೋಡಿ, ಗಾಳಿಯಿಂದ ಚೆದರಿ, ಬಳಿಕ, ಕಪ್ಪಾದ ಬಲಿಷ್ಠವಾದ ಗೂಳಿಯಂತೆ, ಹೋರಾಡಲು ನಿಂತಿರುವ ಆಕಾಶ ಇದು. ಲಕ್ಷ್ಮೀಪತಿಯ (ಭಗವಂತನ) ತೇಜಸ್ಸನ್ನು (ಬಣ್ಣವನ್ನು) ಹೊತ್ತು, ಅಗಲಿದವರ ಕ್ರೋಯರ್ವನ್ನು ಘೋಷಿಸುವ ತಂಪಾದ ಮಳೆಗಾಲಮ್ಮೋ? ಅರಿಯೆನು. ಪಾಪಿಷ್ಠಳು ನಾನು. ಕಾಣುತ್ತಿಲ್ಲ. (7)

ನಾಯಕಿಗೆ, ಈ ಪಾಶುರದಲ್ಲಿ, ಮಳೆಗಾಲದ ಆಕಾಶ ಕಣ್ಣಿಗೆ ಬಿತ್ತು. ಕಾಮುಕರಿಗೆ ದಟ್ಟವಾಗಿ ಕೂಡಿಕೊಂಡು, ಗುಡುಗುತ್ತ, ಹೋರಾಟಕ್ಕೆ ಸಿದ್ಧವಾಗಿರುವ ಗೂಳಿಯಂತೆ ಬಲಿಷ್ಠವಾಗಿದೆ. ಆದರೆ, ನೆಲದ ಮೇಲೆ ಅದಕ್ಕೆ ತಂದುಬಂತು. ಅದು ಗಾಳಿಯಂತೆ ಬಲಿಷ್ಠವಾಗಿದೆ. ತಾನು ತುಂಬಿಕೊಂಡು ಬಂದಿರುವ ನೀರನ್ನು ನಿಷ್ಪ್ರಯೋಜಕ ಎಷ್ಟು ಔದಾರ್ಯ! ತಾನು ತುಂಬಿಕೊಂಡು ಬಂದಿರುವ ನೀರನ್ನು ನೆಲದ ಮೇಲೆ ಸುರಿದು, ಭಗವಂತನನ್ನು ತಂಪುಮಾಡಿ ಆಹ್ಲಾದಗೊಳಿಸುತ್ತದೆ! ಆದ ನೆಲದ ಮೇಲೆ ಸುರಿದು, ಭಗವಂತನನ್ನು ತಂಪುಮಾಡಿ ಆಹ್ಲಾದಗೊಳಿಸುತ್ತದೆ! ಆ ನೆಲದ ಮೇಲೆ ಸುರಿದು, ಭಗವಂತನನ್ನು ತಂಪುಮಾಡಿ ಆಹ್ಲಾದಗೊಳಿಸುತ್ತದೆ! ಆ ಘೋಷಿಸುವ ಗುಡುಗು; ತುಳಸಿಗಳ ಈ ಎರಡೂ ಒಂದು ಬಗೆಯಲ್ಲಿ ಕ್ರೋಯರ್ವನ್ನು ದರ್ಪವನ್ನೇ ತೋರಿಸುತ್ತವೆ.

ನಾಯಕಿ ಕಾಮುಕರಿಗೆ ಅವನಿಂದ ತುಂಬಿದ ಆಕಾಶ ತನ್ನ ನಲ್ಲನಾದ ಭಗವಂತನನ್ನು (ಲಕ್ಷ್ಮೀಪತಿಯನ್ನು) ನೆನಪಿಗೆ ತಂದಿತು. ಕಾಮುಕರಿಗೆ ಅವನ ದಾಸಿಯೇ ಅವನು ತನ್ನನ್ನು ಆಕರ್ಷಿಸಿದನು. ಅದರಂತೆಯೇ ಉದಾರ. ಆದರೆ, ಗುಡುಗು ತಂಗಾಳಿಗಳಂತೆ ತನ್ನನ್ನು ಅಗಲಿರುವವಳ ಮೇಲೆ ದರ್ಪ, ಕ್ರೋಯರ್ವನ್ನು ತೋರಿಸುತ್ತಾನೆಯೇ? ಅವನು ಬಲು ಸುಲಭನೂ ಸುಶೀಲನೂ ಅಲ್ಲವೇ?

ಶ್ರೀಕೃಷ್ಣನ ಜನ್ಮವಾದದ್ದು ಮಳೆಗಾಲದಲ್ಲಿ. ಅವನನ್ನು ನಂದಗೋಕುಲಕ್ಕೆ ಕೊಂಡೊಯ್ದದ್ದು ಸುರಿಯುವ ಮಳೆಯಲ್ಲೇ! ~~ನಾಯಕಿಗೆ~~ ಮಳೆಗಾಲ ಬಂದಾಗ-

[1] ತೊಲೈ (interlinear above line)
[2] ತೊಲೈ (interlinear)

ಹೀಗೆ ನಾಯಕಿಗೆ ಭಗವಂತನ ಆಗಮನವನ್ನು ನಿರೀಕ್ಷಿಸುವಂತಾಗಿರಬಹುದೇನೋ! ಸ್ವಾಮಿ ಅವಳ ಆಸೆಯನ್ನು ತಿಳಿಯಲಿಲ್ಲ. ಅದಕ್ಕೇ 'ನಾನು ಪಾಪಿಷ್ಠಳು' ಎಂದು ತನ್ನನ್ನೇ ದೂಷಿಸಿಕೊಳ್ಳುತ್ತಾಳೆ. ತನ್ನನ್ನಗಲಿ ಹೋದ ತನ್ನ ಪ್ರಿಯತಮನಾದ ಭಗವಂತನು ಮತ್ತೆ ತನ್ನನ್ನು ಸಂತೈಸಲು ಬರಲಿಲ್ಲವಲ್ಲ! ಈ ಕಾರಣದಿಂದ.

8\. காண்கின்றனகளுங் கேட்கின்றனகளுங் காணில், இந்நாள்
பாண்குன்ற நாடர் பயில்கின்றன, இதெல்லாமறிந்தோம்
மாண்குன்ற மேந்தி தண்மாமலை வேங்கடத்தும்பர் நம்பும்
சேண்குன்றஞ்சென்று, பொருள்படைப்பான் கற்ற திண்ணனவே

ಕಾಣ್‌ಗಿನ್ಱನಗಳುಙ್ ಕೇಟ್ಕಿನ್ಱನಗಳುಙ್ ಕಾಣಿಲ್, ಇನ್ನಾಳ್
ಪಾಣ್ ಕುನ್ಱ ನಾಡರ್ ಪಯಿಲ್‌ಗಿನ್ಱನ, ಇದೆಲ್ಲಾಮಱಿನ್ದೋಮ್
ಮಾಣ್ ಕುನ್ಱಮೇನ್ದಿ ತಣ್ ಮಾಮಲೈ ವೇಙ್ಗಡತ್ತುಮ್ಬರ್ ನಮ್ಬುಮ್
ಶೇಣ್ ಕುನ್ಱಞ್ ಶೆನ್ಱು, ಪೊರುಳ್ ಪಡೈಪ್ಪಾನ್ ಕಱ್ಱ ತಿಣ್ಣನವೇ.

ಕಾಣ್‌ಗಿನ್ಱನಗಳುಮ್ காண்கின்றனகளும் = ಕಾಣಿಸುತ್ತಿರುವವೂ, ಕೇಟ್ಕಿನ್ಱನಗಳುಮ್ கேட்கின்றனகளும் = ಕೇಳಿಸುತ್ತಿರುವವೂ, ಕಾಣಿಲ್ காணில் = ಯೋಚಿಸಿದರೆ, ಇನ್ನಾಳ್ இந்நாள் = ಈ ಕಾಲದಲ್ಲಿ, ಪಾಣ್ பாண் = ಹಾಡುಗಳೊಡನೆಯ (ಉಪಚಾರಗಳನ್ನು), ಕುನ್ಱಮ್ ನಾಡರ್ குன்றம் நாடர் = ಬೆಟ್ಟದ ಸೀಮೆಯವರು (ನಡೆಸುವುದು), ಪಯಿಲ್‌ಗಿನ್ಱನ பயில்கின்றன = ಬಳಕೆ ಬಂದವಾಗಿವೆ, ಇದುವೆಲ್ಲಾಮ್ இதுவெல்லாம் = ಇದೆಲ್ಲವನ್ನು, ಅಱಿನ್ದೋಮ್ அறிந்தோம் = ಅರಿತುಕೊಂಡಿದ್ದೇವೆ, ಮಾಣ್ ಕುನ್ಱಮ್ ಏನ್ದಿ மாண் குன்றம் ஏந்தி = ತುಂಬಿದ ಬೆಟ್ಟವನ್ನು ಎತ್ತಿದವನ, ತಣ್ தண் = ತಂಪಾದ, ಮಾಮಲೈ மாமலை = ಮಹಾಪರ್ವತವಾದ, ವೇಙ್ಗಡತ್ತು வேங்கடத்து = ತಿರುವೆಂಕಟಾದ್ರಿಯ, ಉಮ್ಬರ್ உம்பர் = ಮೇಲಣ ಲೋಕದವರು, ನಮ್ಬುಮ್ நம்பும் = ಆಶಿಸುವ, ಶೇಣ್ சேண் = ಉನ್ನತವಾದ, ಕುನ್ಱಮ್ குன்றம் = ಶಿಖರವನ್ನು, ಶೆನ್ಱು சென்று = ಹೋಗಿ ಸೇರಿ, ಪೊರುಳ್ ಪಡೈಪ್ಪಾನ್ பொருள் படைப்பான் = ನಿಜವಸ್ತುವನ್ನು ಪಡೆದುಕೊಳ್ಳುವದಕ್ಕಾಗಿ, ಕಱ್ಱ கற்ற = ಕಲಿತ, ತಿಣ್ಣನವೇ திண்ணனவே = ಕಷ್ಟತರವಾದವೇ (ಇಕ್ಕಟ್ಟಿನ ಕೆಲಸವೇ).

ಈ ಕಾಲದಲ್ಲಿ ಬೆಟ್ಟದ ಸೀಮೆಯವರು ನಡೆಸುವ - ಕಾಣಿಸುತ್ತಿರುವ, ಕೇಳಿಸುತ್ತಿರುವ ಉಪಚಾರಗಳೆಲ್ಲವೂ ಬಳಕೆ ಬಂದವಾಗಿವೆ. ಇದೆಲ್ಲವನ್ನೂ ಅರಿತುಕೊಂಡಿದ್ದೇವೆ. ತುಂಬಿದ ಬೆಟ್ಟವನ್ನೆತ್ತಿದವನ ತಂಪಾದ ಮಹಾಪರ್ವತವಾದ ತಿರುವೆಂಕಟಾದ್ರಿಯ

ಮೇಲಣ ಲೋಕದವರು ಆಶಿಸುವ ಉನ್ನತವಾದ ಶಿಖರವನ್ನು ತೋರಿಸಿ, ನಿಜವಸ್ತುವನ್ನು ವಿವರಿಸಿಕೊಳ್ಳುವುದಕ್ಕಾಗಿ ಕಲಿತ ಶಬ್ದಗಳಿವೆ. (೮)

"ಮಾಲ್ ಕಂಡಾಯ್ ಮಾ ಮುನ್ನ" — ಭಗವಂತನು ಶ್ರೀಕೃಷ್ಣಾವತಾರದ ಪ್ರಸಂಗವಿದು. ಬಾಲಕೃಷ್ಣನು ನಂದಗೋಕುಲದಲ್ಲಿ ಬೆಳೆಯುತ್ತಿದ್ದಾಗ, ಅಲ್ಲಿಯ ಗೋವಳರು ಬಹು ಕಾಲದಿಂದಲೂ ವರ್ಷವರ್ಷವೂ ನಡೆಸುತ್ತಿದ್ದ ದೇವೇಂದ್ರಪೂಜೆಯನ್ನು ಅಲ್ಲಗಳೆದು, ತಮ್ಮ ಮುಂದುಗಡೆಯೇ ಇರುವ ಗೋವರ್ಧನಗಿರಿಯನ್ನು ಪೂಜಿಸಲು ಹೇಳಿದನು. ಅವರ ಗೋವರ್ಧನಗಿರಿಯ ಪೂಜೆಯನ್ನು ಕಂಡು ದೇವೇಂದ್ರನಿಗೆ ಕೋಪ ಬಂತು. ನಂದಗೋಕುಲವನ್ನು ಪೂರ್ತಿಯಾಗಿ ನಾಶಗೊಳಿಸುವುದಕ್ಕಾಗಿ, ದೇವೇಂದ್ರನು ಏಳುದಿನಗಳ ಕಾಲ ಬಿಡದೆ ಬಿರುಸು ಮಳೆಯನ್ನು ಸುರಿಸಿದನು. ಆಗ ಬಾಲಕನಾದ ಕೃಷ್ಣನು ಗೋವರ್ಧನಗಿರಿಯನ್ನೆತ್ತಿ, ಕೊಡೆಯಂತೆ ಹಿಡಿದು, ಅದರಡಿಯಲ್ಲಿ ಎಲ್ಲಾ ಗೋವಳರನ್ನು ಗೋವುಗಳನ್ನು ರಕ್ಷಿಸಿದನು.

ನಾಯಕಿಯು ಹೇಳುತ್ತಾಳೆ: ಬೇರೆ ನಾಡಿನವರು ಭಗವಂತನ ಪೂಜೆಯನ್ನು ಶಾಸ್ತ್ರಪೂರ್ವಕವಾಗಿ ನಡೆಸುತ್ತಾರೆ. ಕಣ್ಣಿಗೆ ಹರ್ಷಕರುವ ಉಪಚಾರಗಳು, ಕಿವಿಗೆ ಇಂಪಾಗಿ ಹಾಡಿ, ಹೇಳುವ, ಉಪಚಾರಗಳೂ ಬಹುಕಾಲದಿಂದಲೂ ಬಂದವು. ಅವುಗಳೆಲ್ಲವೂ ಶ್ರಮಪೂರ್ವಕವಾದ ಅವುಗಳನ್ನು ನಾವು ಅಂತಹ ಕೊಂಡಿದ್ದೇವೆ. ಮೇಲಣ ಲೋಕದವರೆಲ್ಲರೂ ಆಶೆಯಿಂದ ಉಪಚಾರಗಳೇ. ಅವಕ್ಕೆ ಬದಲಾಗಿ, ಮೇಲಣ ಲೋಕದವರೆಲ್ಲರೂ ಆಶೆಯಿಂದ ಬಂದು ಪೂಜಿಸುವ, ನಿರ್ವಿಶೇಷನಾದ ಭಗವಂತನು ನೆಲಸಿರುವ, ತಿರುವೇಂಕಟಾದ್ರಿಯ ಶಿಖರವನ್ನು ನೋಡಿ, ಅಲ್ಲಿರುವ ನಿಜವಸ್ತುವನ್ನು (ಭಗವಂತನನ್ನು) ಪ್ರತ್ಯಕ್ಷವಾಗಿ ದರ್ಶನಮಾಡಿ, ಅವನ ತಿರುವಡಿಗಳನ್ನು ಆಶ್ರಯಿಸುವುದು ಸುಲಭ. (ನನ್ನ ವಿಷಯದಲ್ಲಿ ಈ ಕೆಲಸವೂ ಕಷ್ಟಸಾಧ್ಯವೇ. ನನ್ನನ್ನು ಅಗಲಿರುವ ನಾಯಕನು ನನ್ನ ಬಳಿಯೇ ಸಾಗಲಿ, ಆದರೆ ಬೇಕೆಂಬುದು ನನ್ನ ಆಸೆ).

9. திண்பூஞ் சுடர்நுதி நேமியஞ் செல்வர், விண்ணாடனைய
வண்பூ மணிவல்லி யாரே பிரிபவர் தாம், இவையோ
கண்பூங் கமலங் கருஞ்சுடராடி வெண்முத் தரும்பி
வண்பூங் குவளை, மடமான் விழிக்கின்ற மாயிதழே.

ತಿಣ್ಪೂಂಜುಡರ್ ನುದಿ ನೇಮಿಯಂ ಜೆಲ್ವರ್, ವಿಣ್ಣಾಡನೈಯ
ವಣ್ಪೂ ಮಣಿವಲ್ಲಿ ಯಾರೇ ಪಿರಿಬವರ್ ತಾಮ್, ಇವೈಯೋ
ಕಣ್ಪೂಙ್ಗಮಲಙ್ ಗರುಂಜುಡರಾಡಿ ವೆಣ್ ಮುತ್ತರುಂಬಿ
ವಣ್ಪೂಙ್ಗುವಳೈ, ಮಡಮಾನ್ ವಿಳಿಕ್ಕಿನ್ರ ಮಾಯಿದಳೇ.

ತಿಣ್ திண் = ಬಲವುಳ್ಳ, ಪೂ பூ = ಸೊಬಗಿನ, ಶುಡರ್ சுடர் = ಹೊಳೆಯುವ, ನುದಿ நுதி = ಹರಿತವಾದ, ನೇಮಿ நேமி = ಚಕ್ರಾಯುಧವನ್ನು ಹಿಡಿದ,

ಅಮಲ ಶೀಲವರ್ ಅಂಶುಮಾನ್ = ಮುಗಿಲಿನಂತೆ ಸುಂದರರನ್ನು, ವಿಣ್ ನಾಡು
ವಿಣ್ಣಾಡು = ಪರಮಪದವನ್ನು, ಅನ್ವಯ ಅಡೈಯ = ಹೊಂದುವ, ವಣ್ ವಣ್ಣ
= ಅಂದವಾದ, ಪೂ பூ = ಹೂವಿನ, ಮಣಿವಲ್ಲಿ மணிவல்லி = ಶ್ರೇಷ್ಠವಾದ ಬಳ್ಳಿಯಂ
ತಿರುವವಳಿಂದ, ಯಾರೋ ತಾಮ್ ಪಿರಿಬವರ್ = யாரோதாம் பிரிபவர் =
ಅಗಲದಿರತಕ್ಕವರು ಯಾರಿದ್ದಾರೆ?, ಇವ್ವೆಯೋಲ್ இவையோ = ಇವೇನೋ,
ಕಣ್ ಕண் = ಕಣ್ಣುಗಳು, ಪೂ பூ = ಬಣ್ಣದಲ್ಲಿ (ಸೊಬಗಿನಲ್ಲಿ), ಕಮಲವು
கமலம் = ಕಮಲದ ಹೂವೇ, ಕರು கரு = ಕಪ್ಪಗೆ, ಕುಡರ್ [illegible] = ಹೊಳಪಿನಿಂ
ದ, ಆಡಿ [illegible] = ಆಡುತ್ತಿರುವುದು (ಚಂಚಲವಾದದ್ದು), ವೆಣ್ [illegible] = ಬಿಳಿಯ
(ಶುದ್ಧವಾದ), ಮುತ್ತು முத்து = ಮುತ್ತುಗಳನ್ನು (ಮುತ್ತಿನಂಥ ಕಣ್ಣೀರನ್ನು),
ಅರುಮ್ಬಿ அரும்பி = ಮೊಳೆಯಿಸಿ, ವಣ್ ವಣ್ಣ = ಸುಂದರವಾದ,
ಪೂಙ್ಗುವಳೈ பூங்குவளை = ಕನ್ನೈದಿಲೆಯ ಹೂವಾಗಿ, ಮಡಮಾನ್ ಮಡ
மான் = ಬೆದರುವ ಭಾವದ (ಹೆದರುವ) ಹೆಣ್ಣು ಜಿಂಕೆಯು, ಪಿಣೈಕ್ಕಣ್ [illegible]
ಇ = ದಿಟ್ಟಿಸುವ ನೋಟದ, ಮಾ ಇದಲ್ மா இதழ் = ದೊಡ್ಡದಾದ
ಎಸಳುಗಳಾಗಿದೆ (ರೆಪ್ಪೆಗಳಾಗಿವೆ)

ಬಲಿಷ್ಠವಾದ, ಸೊಬಗಿನಿಂದ ಕೂಡಿ, ಹೊಳೆಯುತ್ತಾ, ಚಂಚಲವಾಗಿರುವ ಚಕ್ರಾಯುಧವನ್ನು ಬಿಡದ ಆ ಮುಗಿಲಂತೆ ಸುಂದರನಾದವನನ್ನು, ಪರಮಪದಕ್ಕೆ ಕರ್ತ (ಯೋಗ್ಯವಾದ) ಅಂದವೂ ಉತ್ತಮವೂ ಆದ ಹೂವಿನ ಬಳ್ಳಿಯಂತೆ ಇರುವವಳಿಂದ ಅಗಲದಿರತಕ್ಕವರು ಯಾರಿದ್ದಾರೆ? ಬಣ್ಣದಲ್ಲಿ (ಸೊಬಗಿನಲ್ಲಿ) ಕಮಲದ ಹೂವಾಗಿ, ಕಪ್ಪಗೆ ಹೊಳೆಯುತ್ತಾ (ಹೊಳಪಿನಿಂದ) ಆಡುತ್ತಿರುವುದಾಗಿ (ಚಂಚಲವಾಗಿ), ಬಿಳಿಯ (ಶುದ್ಧವಾದ) ಮುತ್ತುಗಳನ್ನು (ಕಣ್ಣೀರನ್ನು) ಮೊಳೆಯಿಸಿ, ಸುಂದರವಾದ ಕನ್ನೈದಿಲೆಯ ಹೂವಾಗಿ, ಬೆದರುವ ಹೆಣ್ಣು ಜಿಂಕೆಯ ದಿಟ್ಟಿಸುವ ನೋಟದ ದೊಡ್ಡ ರೆಪ್ಪೆಗಳಾಗಿ ಇರುವ ಕಣ್ಣುಗಳು ಇವೇನೋ? (೧)

ಈ ಪಾಶುರದ ಸೊಬಗನ್ನು ವಿವರಿಸಿ ಹೇಳುವುದಕ್ಕೆ ಕವಿಯೇ ಬೇಕು. ಸುಂದರವಾದ ಪದಜೋಡಣೆ ಸಿಗುತ್ತದೆ. ಅನುಗುಣವಾದ ಪದಗಳಿಂದ, ಸುಂದರವಾದ ಪದಜೋಡಣೆಯಿಂದ ಇದು ಸಾಲು ಸಾಲಾಗಿ ಮೆರೆಯುತ್ತದೆ!

ಇಲ್ಲಿ ನಾಯಕನನ್ನೂ ನಾಯಕಿಯನ್ನೂ ವಿವರಿಸಿ ಹೇಳಲಾಗಿದೆ. ಯಾರು ಹೆಚ್ಚು, ಯಾರು ಕಡಮೆ? ಹೇಗೆ ಹೇಳುವುದು?

ನಾಯಕನು ಪರಮಸುಂದರ. ಅಪ್ರತಿಮ ಬಲಶಾಲಿ. ವಿರೋಧಿಗಳನ್ನು ನಿಗ್ರಹಿಸುವ, ಥಳಥಳಿಸುವ, ಚಂಚಲವಾದ ಚಕ್ರಾಯುಧವನ್ನು ಧರಿಸಿದ್ದಾನೆ. ಅವನ ಪರಮಪದಕ್ಕೆ ಒಡೆಯ! ನಾಯಕಿ ಭೂಲೋಕವಾಸಿ. ಆದರೂ ಪರಮಪದಕ್ಕೆ ಯೋಗ್ಯವಾದ ಅತಿಶ್ರೇಷ್ಠವಾದ ಹೂವಿನ ಬಳ್ಳಿ ಅವಳು. ಅವಳ ಕಣ್ಣಿನ

Garani Srinivasan

ಹೊಬಹೊಂದೇನಾರು! ಅವಳನ್ನು ನಾಯಕನಿಂದ ಬೇರ್ಪಡಿಸುವುದಕ್ಕೆ ಸಾಧ್ಯವೇ ಇಲ್ಲದಷ್ಟು ಆಕರ್ಷಕ ಸುಂದರಿ ಅವಳು. ಬಿನ್ನಾಣದಲ್ಲಿಯೂ ಅಂದದಲ್ಲಿಯೂ ಬಳ್ಳಿಯ ಕಮಲದಂತಿವೆ. ಕಣ್ಣಾಲಿಗಳು ಕಪ್ಪಗೆ (ಕಾಡಿಗೆಯಿಂತೆ) ಹೊಳೆಯುತ್ತಾ ಚಂಚಲವಾಗಿ ಆಡುತ್ತಿವೆ. ಮುತ್ತಿನಂತೆ ಕಣ್ಣೀರು ಕಣ್ಣಕುಡಿಯಲ್ಲಿ ಮಾಲೆ ಕಟ್ಟಿದೆ. ದೊಡ್ಡ ಕಪ್ಪುಗಳು ಸೊಬಗಿನ ಕನ್ನಡಿಯಂತಿವೆ. ನೋಟವಾದ ಕೋಲ ಚದರುವ ಕೆಂಪುಜಿಂಕೆಯು ದಿಟ್ಟಿಸುವ ನೋಟವೇ ಆಗಿದೆ.

ಇಂಥ ನಾಯಕನನ್ನು ಇಂಥ ನಾಯಕಿಯಿಂದ ಅಗಲಿಸಲು ಯಾರಿಂದ ತಾನೇ ಸಾಧ್ಯ? (ಯಾರೂ ಅವರನ್ನು ಅಗಲಿಸಲಾರರು ಎನ್ನುತ್ತಾಳೆ ನಾಯಕಿ).

10. மாயோன் வட திருவேங்கட நாட, வல்லிக்கொடிகாள்
நோயோ உரைக்கிலுங் கேட்கின்றிலீர் உறையீர், நுமது
வாயோ அதுவன்றி வல்வினையேனுங் கிளியுமெள்கும்
ஆயோ அடுந்தொண்டையோ, அறையோ இதறிவரிதே.

ಮಾಯೋನ್ ವಡ ತಿರುವೇಙ್ಗಡನಾಡ, ವಲ್ಲಿಕ್ಕೊಡಿಗಾಳ್
ನೋಯೋ ಉರೈಕ್ಕಿಲುಙ್ಗೇಟ್ಕಿನ್ರಿಲೀರ್ ಉರೈಯೀರ್, ನುಮದು
ವಾಯೋ ಅದುವನ್ರಿ ವಲ್ವಿನೈಯೇನುಙ್ಗಿಳಿಯುಮೆಳ್ಕುಮ
ಆಯೋ ಅಡುನ್ದೊಣ್ಡೈಯೋ, ಅಱೈಯೋ ಇದಱಿವರಿದೇ.

ಮಾಯೋನ್ மாயோன் = ಮಾಯಕಾರಿಯಾದವನ, ವಡ ತಿರುವೇಙ್ಗಡಮ் வட திருவேங்கடம் = ಉತ್ತರದ ತಿರುವೆಂಕಟಗಿರಿಯನ್ನು, ನಾಡ நாட = ಆಳುವ, ವಲ್ಲಿಕೊಡಿಗಾಳ್ வல்லிக்கொடிகாள் = ಹೂವಿನಬಳ್ಳಿಗಳಂಥ ಹೆಂಗಳೇ, ನೋಯ್ நோய் = (ನಿಮಗೆ) ವಿರಹವೇದನೆಯೋ, ಉರೈಕ್ಕಿಲುಮ್ உரைக்கிலும் = (ನಾನು) ಹೇಳಿದರೂ, ಕೇಟ್ಕಿನ್ರಿಲೀರ್ கேட்கின்றிலீர் = ಕೇಳುತ್ತಿಲ್ಲವಲ್ಲ!, ನುಮದು நுமது = ನಿಮ್ಮದು, ವಾಯೋ வாயோ = ಬಾಯೋ, ಅದು ಅನ್ರಿ அது அன்றி = ಅದಲ್ಲದೆ, ವಲ್ವಿನೈಯೇನುಮ್ வல்வினையேனும் = ಮಹಾಪಾಪಿಷ್ಠಳಾದ ನಾನೂ, ಕಿಳಿಯುಮ್ கிளியும் = (ನನ್ನ) ಗಿಳಿಯೂ, ಎಳ್ಕುಮ್ எள்கும் = ಸಂಕಟಪಡುವ, (ನಾಚುವಂಥ), ಆಯೋ ஆயோ = 'ಅಯ್ಯೋ' ಎಂಬ ಮಾತೋ, ಅಡುಮ್ அடும் = ಸುಡುವ, ತೊಣ್ಡೆಯೋ தொண்டையோ = (ತೊಂಡೆ) ಧ್ವನಿಯೋ, ಅಱೈಯೋ அறையோ = ಪಂಥವೇಯೋ, (ಅಂಕುಶಹಾಕುವುದು) ಇದು இது = ಇದರ (ಇದನ್ನು), ಅಱಿವು அறிவு = ತಿಳಿವಳಿಕೆ, ಅರಿದೇ அரிதே = ಅಸಾಧ್ಯವಲ್ಲ!

ಮಾಯಕಾರಿಯಾದವನ ಉತ್ತರದ ತಿರುವೆಂಕಟಗಿರಿಯನ್ನು ಆಳುವ

ಹೂವಿನ ಬಳ್ಳಿಯಂಥ ಹೆಂಗಳೇ, (ನಿಮಗೂ) ವಿರಹವೇದನೆಯೋ? (ನಾನು) ಹೇಳಿ
ದರೂ ಕೇಳುತ್ತಿಲ್ಲವಲ್ಲ! ನಿಮ್ಮದು ಬಾಯೋ? ಅಥವಾ, ~~ನಾನು~~ ಮಹಾಪಾಪಿಷ್ಠ
ಳಾದ ನಾನೂ (ನನ್ನ) ಗೆಳತಿಯೂ ದುಃಖಪಡುವಂಥ 'ಅಯ್ಯೋ' ಎಂಬ ಮಾತೋ?
ಸುಡುವ ಕೂಗೋ? ವಂಚನೆಯೋ? ಇದನ್ನು ತಿಳಿಯುವುದಕ್ಕೆ ಸಾಧ್ಯವಾಗದಲ್ಲ! (10)

ಈ ಪಾಶುರದಲ್ಲಿ ನಾಯಕಿಯು ತನ್ನಂತೆ ವಿರಹವೇದನೆಯನ್ನು ಅನುಭವಿಸುವ ಇತರ ಯುವತಿಯರನ್ನು ಕುರಿತು ಹೇಳುತ್ತಾಳೆ:

ಬಳ್ಳಿಯ ಕುಡಿಗಳಂತಿರುವ ಹೆಂಗಳೇ, ನೀವೂ ನನ್ನಂತೆ ಅತ್ಯಾಶ್ಚರ್ಯಕರವಾದ ಸರ್ವೇಶ್ವರನು ಅಗಲಿರುವ ತಾಪದುಃಖಗಳನ್ನು ಆಚರಿಸುತ್ತಿದ್ದೀರಾ? ನಿಮಗೂ ವಿರಹವೇದನೆಯೇ? ನನ್ನ ಮಾತು (ದುಃಖದ ಮಾತು) ನಿಮ್ಮ ಕಿವಿಗೆ ಬೀಳುತ್ತಿಲ್ಲವೇ? 'ಅಯ್ಯೋ' ಎಂದು ನಿಮ್ಮ ದುಃಖವನ್ನು ವ್ಯಕ್ತಪಡಿಸುತ್ತಿದ್ದೀರಾ? ಇಲ್ಲವೇ, ಮಹಾಪಾಪಿಷ್ಠಳಾದ ನನ್ನನ್ನು, ನನ್ನ ಗೆಳತಿಯನ್ನು ಇನ್ನೂ ಹೆಚ್ಚು ದುಃಖಪಡಿಸುವಂಥ ಮೂದಲಿಕೆಯ ಮಾತೋ ಅದು? ಇಲ್ಲವೇ, ನನ್ನ ಹೃದಯವನ್ನು ದಹಿಸುವಂಥ ಕೂಗೋ ಅದು? ಇಲ್ಲವೇ, ನನ್ನನ್ನು ವಂಚಿಸುವುದಕ್ಕಾಗಿ ತೋರಿಸುವ ನಿಮ್ಮ ಅನುಕಂಪವೋ? ಆ ನಿಮ್ಮ ಮಾತಿನ ಅರ್ಥವೇ ನನಗೆ ತಿಳಿಯಲು ಅಸಾಧ್ಯವಾಗಿದೆಯಲ್ಲ!

11. அரியன யாமின்று காண்கின்றன, கண்ணன் விண்
ணனையாய்!
பெரியன காதம் பொருட்கோ பிரிவென, ஞாலமை
ய்துற்
உரியன ஒண்முத்தும் பைம்பொன்னுமேந்தி யோ
ரோகுடங்கைப்
பெரியன கெண்டைக்குலம், இவையோ வந்து
பேர்கின்றவே.

ಅರಿಯನ ಯಾಮಿನ್ರು ಕಾಣ್ಗಿನ್ರನ, ಕಣ್ಣನ್ ವಿಣ್ಣನೈಯಾಯ್!
ಪೆರಿಯನ ಕಾದಮ್ ಪೊರುಟ್ಕೋ ಪಿರಿವೆನ, ಞಾಲಮೆಯ್ದುಱ್ಱು
ಉರಿಯನ ಒಣ್ ~~[illegible]~~ ಮುತ್ತಮ್ ಪೈಮ್ಪೊನ್ನುಮೇನ್ದಿ ಯೋರೋಕುಡಙ್ಗೈಪ್
ಪೆರಿಯನ ಕೆಣ್ಡೈಕ್ಕುಲಮ್, ಇವೈಯೋ ವನ್ದು ಪೇರ್ಗಿನ್ರನವೇ.
(ಅರ್ಥಾನುವಾದವು),

ಅರಿಯನ அரியன = ಅಮೂಲ್ಯವಾದವು, ಯಾಮ್ யாம் = ನಾವು, ಇನ್ರು இன்று = ಈಗ, ಕಾಣ್ಗಿನ್ರನ காண்கின்றன = ನೋಡತಕ್ಕವುಗಳು, ಕಣ್ಣನ್ கண்ணன் = ಅಶ್ಚರ್ಯಕರ~~[illegible]~~ನ, ವಿಣ್ விண் = ಪರಮಪದಕ್ಕೆ, (ಪ್ರೋಲಕನಾಗ) ಅನೈಯಾಯ್ அனையாய் = ಸಮನಾದ ~~[illegible]~~ (ಸದೃಶನಾದ), ಪೆರಿಯನ பெரியன = ದೊಡ್ಡದಾದ, ಕಾದಮ್ காதம் = ಗಾವುದದ, ಪೊರುಟ್ಕೋ பொருட்கோ =

Garani Srinivasan

ವಸ್ತುಗಳಾಗಿಯೋ, ಹಿಂದೆ ಎನ ಪಿರಿವು ನಾಳ್ = ಈ ಅಗಲಿಕೆ ಎನ್ನುವಂತೆ, ಇಂದು ಮಾ ஞாலம் = ಲೋಕವನ್ನು (ಜಗತ್ತನ್ನು), ಎಯ್ದಳಿವು ನಾಯ್ ಕುற்கு = ಪಡೆದು ಕೊಳ್ಳುವುದಕ್ಕೆ (ಸೇರುವುದಕ್ಕೆ), ಉರಿಯನ உரிய = ತಕ್ಕುದಾದ, ಒಳ್ ಮುತ್ತಮ್ ನಾಳ್ முத்தம் = ಸೊಬಗಿನ ಮುತ್ತನ್ನು, ಪೈ ಪೊನ್ನುಮಾ ... பொன்னும் = ಸೊಗಸಾದ ಚಿನ್ನವನ್ನು, ಮೆನ್ನಿ ஏந்தி = ಧರಿಸಿ, ಒರುಂ ... = ಒಂದೊಂದು, ಕುಡಂಗೈ குடங்கை = ಅಂಗೈಯುಳ್ಳ, ಪೆರಿಯನ பெரியன = ದೊಡ್ಡದಾದ, ಕೆಣ್ಡೈ ಕುಲಮಾ கெண்டை குலம் = ಕೆಂಪೇ ಮೀನಿನ ಜಾತಿಯಾದ, ಇವೈಯೋ இவையோ = ಇವುಗಳೇಯೋ, ವನ್ದು வந்து = ಬಂದು, ಪೇರ್ಕಿನ್ರನವೇ பேர்க்கின்றனவே = ಚಲಿಸುತ್ತಿವೆಯಲ್ಲಾ!

ನಾಯಿಕೆ ನೋಡುತ್ತಿರುವುದು ಅಪರೂಪವಾದವು. ಅತ್ಯಾಶ್ಚರ್ಯಕರ ಪರಮಪದಕ್ಕೆ ಹೋಲಿಕೆಯಾದವು. ಬಹುದೂರದ ವಸ್ತುವಿನಾಗಿಯೋ ಈ ಅಗಲಿಕೆ ಎಂಬಂತೆ, ಜಗತ್ತನ್ನೇ ಪಡೆದುಕೊಳ್ಳುವುದಕ್ಕೆ (ಹೋಗಿ ಸೇರುವುದಕ್ಕೆ) ತಕ್ಕದಾದ ಸೊಬಗಿನ ಮುತ್ತನ್ನೂ, ಸೊಗಸಾದ (ಹೊಳೆಯುವ) ಚಿನ್ನವನ್ನೂ ಧರಿಸಿ, ಒಂದೊಂದು ಅಂಗೈಯುಳ್ಳ ದೊಡ್ಡದಾದ ಕೆಂಪೇ ಮೀನಿನ ಜಾತಿಯಾವು ಇವುಗಳೇಯೋ, ಬಂದು (ಇಲ್ಲಿ) ಚಲಿಸುತ್ತಿವೆಯಲ್ಲಾ! (11)

ಈ ಪಾಶುರದ ಅರ್ಥ ಸ್ಪಷ್ಟವಾಗಿದೆ. ಇದನ್ನು ಹೇಳುತ್ತಿರುವವರು ಯಾರು? ನಾಯಕಿಯೇ ತನ್ನ ಕಣ್ಣುಗಳನ್ನು, ತನ್ನ ಪ್ರಿಯತಮನಿಂದ ತನಗಾಗಿರುವ ಅಗಲಿಕೆಯನ್ನು ಗಮನಿಸಿ (ಮನಗಂಡು) ಅಲ್ಲೇ ವಿಚಿತ್ರವಾಗಿ ಹೇಳುತ್ತಿದ್ದಾಳೆಯೋ ಇಲ್ಲವೇ, ನಾಯಕಿಯ ಪರಿತಾಪವನ್ನು ಕಂಡ ಇತರರು ಹೇಳುತ್ತಿದ್ದಾರೆಯೋ?

'ಅರಿಯನ ಯಾವಿನ್ನಾಯ ಕಣ್ಣೋಟವನ್ನು' — ನಮ್ಮ ಕಣ್ಣೆದುರಿನ ಈ ದೃಶ್ಯ ಬಹಳ ಅಪರೂಪವಾದದ್ದು! ಎಂದೆಂದೂ ಕಂಡರಿಯದಂಥದ್ದು! ನಾಯಕಿಯ ಅಗಲಿಕೆಯಿಂದ ಆಗಿರುವ ಪರಿಣಾಮವೇ ಇದು ಇರಬಹುದಲ್ಲವೇ?

"ತನ್ನಾನ್ ಮಿಕ್ಕೊನ್ನೈಯಾಯ್" — ಅತ್ಯಾಶ್ಚರ್ಯಕರ ಸುಂದರನಾದ ಭಗವಂತನ ಪರಮ ಪದದ ನಿತ್ಯಾನಂದವನ್ನು ಇದಕ್ಕೆ ಹೋಲಿಸಬಹುದೇ? ಹಸಿವು, ನಿದ್ದೆ ಮುಂತಾದವುಗಳಿಗೆ ಎಡೆಕೊಡದಂತೆ, ತನ್ನ ಪ್ರಿಯತಮನನ್ನು ಕುರಿತು ಒಂದೇ ಮನದಲ್ಲಿ (ಒಂದೇ ಧ್ಯಾನವಾಗಿ) ಧ್ಯಾನಿಸುತ್ತಿರುವುದು ಆ ಆನಂದವನ್ನು ತರುತ್ತದೆಯೋ?

"ಪೆರಿಯನ ಕಾದಮಾ ಪ್ರಾರುಟ್ಟೋ" — ಬಹುದೂರದ ದೇಶದಿಂದ ಅಪರೂಪವಾದ ವಸ್ತುವನ್ನು ತರುವೆನೆಂದು ತನ್ನನ್ನು ನಂಬಿಸಿ, ತನ್ನ ಪ್ರಿಯತಮನು

Garani Srinivasan

ಹೊರಟು ಹೋದನೋ? ಅವನನ್ನು ಬಿಡಲಿಲ್ಲವೆಂದೋ ಈ ವಿರಹ?

"ಇಕಾಲಮೇ ಎಂಬುದಲ್ಲೇಶು ಉಂಡಾಯಿನ" — ಇದಿಯು ಜನಕ್ತನ್ನೇ ಬಿಡೆದುಕೊಳ್ಳುವೆನೆಂದೋ, ಅದಕ್ಕೆಂತಲೂ ಮಿಗಿಲಾದ ವಿರಹವಿದವನ್ನು ಹೋಗಿ ಸೇರುವೆನೆಂದೋ — ತನ್ನ ಆಶಯಕ್ಕೆ ತಕ್ಕುದಾಗಿ.

ನಾಯಕನು ತನ್ನನ್ನು ಅಗಲಿದನೆಂದು ನಾಯಕಿಗೆ ಉಂಟಾದ ವಿರಹದಿಂದ ಆಗಿರುವ ಕೆಲವು ಅಪಾರವಾದ ವಿಷಯಗಳು ಇವು: ಅವಳ ವಿಶಾಲವಾದ ಕಣ್ಣುಗಳಲ್ಲಿ ಮುತ್ತಿನಂಥ ಕಂಬನಿ ತುಂಬಿ ನಿಂತಿದೆ. ಅವಳ ಮೈ ಬಿಳಚಿಕೊಂಡು ಬಿಳಿಯ ಚಿನ್ನದ ಹಾಗೆ ಮಾರ್ಪಡಗೊಂಡಿದೆ. ಕತ್ತಲೆಗಳು ಚಂಚಲಗೊಂಡು ಅತ್ಯಂತ ಹೋರಾಡುತ್ತಿವೆ. ಇವೆಲ್ಲ ಏತಕ್ಕಾಗಿ? ತನಗೆ ಬದಲ ಅಪಾರವಾದ ವಸ್ತುವೊಂದನ್ನು ತಂದುಕೊಡುವೆನೆಂದು ತನ್ನ ಪ್ರಿಯತಮನು ತನ್ನನ್ನು ನಂಬಿಸಿ, ಬಿಟ್ಟು ದೂರದೇಶಕ್ಕೆ ಹೋದದ್ದರ ಪರಿಣಾಮವೋ ಇದು?

12\. பேர்கின்றது மணிமாமை பிறங்கியள்ளற்பயலை,
ஊர்கின்றது கங்குலூழிகளோ, இதுவெல்லாமினவே
ஈர்கின்ற சக்கரத்தெம்பெருமான் கண்ணன் தண்ணந்துழாய்
சார்கின்ற நன்னெஞ்சினார், தந்துபோன தனிவளமே

ಪೇರ್ಕಿನ್ಱದು ಮಣಿಮಾಮೈ ಪಿಱಙ್ಗಿಯಳ್ಳಱ್ ಪಯಲೈ,
ಊರ್ಕಿನ್ಱದು ಕಙ್ಗುಲೂೞಿಗಳೇ, ಇದೆಲ್ಲಾಮಿನವೇ
ಈರ್ಕಿನ್ಱ ಶಕ್ಕರತ್ತೆಮ್ಬೆರುಮಾನ್ ಕಣ್ಣನ್ ತಣ್ಣನ್ತುೞಾಯ್
ಶಾರ್ಕಿನ್ಱ ನನ್ನೆಂಜಿನಾರ್, ತನ್ದು ಪೋನ ತನಿವಳಮೇ.

ಪೇರ್ಕಿನ್ಱದು பேர்கின்றது = ಮಾರ್ಪಡಗೊಂಡಿರುವುದು, ಮಣಿ மணி = ದಿವ್ಯವಾದ (ಸುಂದರವಾದ), ಮಾಮೈ மாமை = ರೂಪವು, ಪಿಱಙ್ಗಿ பிறங்கி = ತುಂಬಿರುವ (ಉನ್ನತವಾದ), ಅಳ್ಳಲ್ உள்ளல் = ಉದ್ವೇಗ, ಪಯಲೈ பயலை = ಕಂಗಳನ್ನು, ಊರ್ಕಿನ್ಱದು ஊர்கின்றது = ಊರಿ ತುಂಬುತ್ತಿದೆ, ಕಙ್ಗುಲ್ கங்கு = ರಾತ್ರಿಯಕಾಲ, ಊೞಿಗಳೇ ஊழிகளோ = ಯುಗಗಳೇ ಆಗಿವೆ, ಇದು ಎಲ್ಲಾಮ್ ಇನವೇ இது எல்லாம் இனவே = ಇವೆಲ್ಲವೂ ದುಃಖವೇ (ಒಪ್ಪತಕ್ಕದ್ದೇ), ಈರ್ಕಿನ್ಱ ஈர்கின்ற = ಮಧುರವಾಗಿರುವ, ಶಕ್ಕರತ್ತು சக்கரத்து = ಚಕ್ರಾಯುಧದ, ಎಮ್ಬೆರುಮಾನ್ எம்பெருமான் = ನಮ್ಮ ಸ್ವಾಮಿಯಾದ, ಕಣ್ಣನ್ கண்ணன் = ಆಕರ್ಷಕ ಸುಂದರನ (ಶ್ರೀಕೃಷ್ಣನ), ತಣ್ தண் = ತಂಪಾದ, ಅಮ್ அம் = ಸುಂದರವಾದ, ತುೞಾಯ್ துழாய் = ತುಲಸಿಯ (ಹಾರವನ್ನು)ನ್ನು, ಶಾರ್ಕಿನ್ಱ சார்கின்ற = ಆಶಿಸುತ್ತಿರುವ, ನಲ್ನೆಂಜಿನಾರ್

Garani Srinivasan

ವಿದೆದುಕೊಂಡು (~~[illegible]~~)

நல் நெஞ்சத்தார் = ಬಿಳ್ಳಿಯ ಮನಸ್ಸಿನವರು, ತನ್ನ ಕ್ರಾಂತು = ಲಿ ಬಂದು ~~[illegible]~~ (~~[illegible]~~) ~~[illegible]~~ (~~[illegible]~~), ಪೇಲನ போனா = ತಲ್ಲೆದು ಕೊಂಡ, ತನಿ ಕ್ರಣ್ಣಿ = ನಾಚಿಯಿಲ್ಲದ, ವಳ್ಳಮೇ ಬಣ್ಣಮೆ = ಸೌಂದರ್ಯವೇ (ಇದು).

ದಿವ್ಯವಾದ ರೂಪ ಮಾರ್ಪೆಗೊಂಡಿದೆ. ಉನ್ನತವಾದ (ತುಂಬಿದ) ಉದ್ದೇಶ, ಹಳ್ಳದಲ್ಲಿ ಊರಿ ತುಂಬುತ್ತಿದೆ. ರಾತ್ರಿಯ ಕಾಲ ಯುಗನಲ್ಲೇ ಆಗಿವೆ. ಇದೆಲ್ಲಾ ವ್ಯಾಪದಜವೇ. ಮಧುರವಾಗಿರುವ ಚಿತ್ರ್ರಯುದ್ಧದ ನಮ್ಮ ಸ್ವಾಮಿಯಾದ ಆಶ್ಚರ್ಯದ ಸುಂದರನ (ಶ್ರೀಕೃಷ್ಣನ) ತಂಪಾದ ಸುಂದರವಾದ ತುಲಸಿಯನ್ನು ಆಶಿಸುವ ಬಿಳ್ಳಿಯ ಮನಸ್ಸವರು ವಿದೆದುಕೊಂಡು ಬಂದು ತಳ್ಳಿದುಕೊಂಡ (12) ನಾಚಿಯಿಲ್ಲದ ಸೌಂದರ್ಯವೇ (ಬಿಳ್ಳಿಯ ಸ್ವಭಾವವೇ) ಇದು!

ತನ್ನ ನಾಯಕನ ಅಗಲಿಕೆಯಿಂದ ನಾಯಕಿಗೆ ಆಗಿರುವ ಮಾರ್ಪೆಗಳನ್ನು ಇಲ್ಲಿ ಹೇಳಲಾಗಿದೆ:

"ಪೇರ್ಕಿನ್ರಾದು ಮಣಿ ಮಾಮೈ" — ನಾಯಕಿ ಅಪ್ರತಿಮ ಸುಂದರಿ. ಅವಳ ಮೈ ಕಾನ ಕೃಶವಾಗಿ ಹೋಗಿದೆ. ಮೈಬಣ್ಣ ಬಿಳಿಚಿಕೊಂಡಿದೆ. ರೂಪವೇ ಮಾರ್ಪೆಗೊಂಡಿದೆ. ಅವಳು ಬಾಡಿ ಬಳಲಿ ಹೋಗಿದ್ದಾಳೆ.

"ಮಾಮೈ மாமை" — ಎಂಬುದಕ್ಕೆ 'ಸೊಗಸು', 'ಬಣ್ಣ', 'ರೂಪ' ಎಂದು ಅರ್ಥ ಹಾಗುತ್ತದೆ.

"ಪಿರಳ್ವ್ಯಯುಳ್ಳ ವಿಯಲ್ತ್ತೆ ಊರ್ಕಿನ್ರಾದು" — ಅವಳ ಉದ್ದೇಶ ಘನವಾದದ್ದು. ತನ್ನ ನಾಯಕನೊಡನೆ ತಾನು ಕೂಡಿ ಆನಂದಿಸುವ ವಿಷಯವನ್ನು ~~[illegible]~~ ಯೋಚನೆಯಲ್ಲಿ ಅವಳ ಹೃದಯವನ್ನು ತುಂಬಿ ಬಿಟ್ಟಿದೆ.

"ಕಳಿಯುಲಾ ಉಿದಳ್ಳೆ" — ತನ್ನ ಆಶಯದಂತೆ ತನ್ನ ಪ್ರಿಯತಮನು ರಾತ್ರಿಯ ವೇಳೆಗೆ ಬರಲಿಲ್ಲ. ಅಗಲಿಕೆಯಿಂದ ರಾತ್ರಿಯನ್ನು ಕಳೆಯುವುದೇ ಕಷ್ಟವಾಗಿದೆ. ತನ್ನಿನಿದ್ದೆ ಬರುತ್ತಿಲ್ಲ. ಒಂದೊಂದು ಘಳಿಗೆಯೂ (ಕ್ಷಣವೂ) ಒಂದೊಂದು ಯುಗವಾಗಿ ~~[illegible]~~ ಮಿಸುತ್ತದೆ.

"ಇದೆಲ್ಲಾ ಮಿನವೇ" — ಎಲ್ಲಾ ವಿರಹಗಳಿಗೂ ಆಗುವ ಸ್ವಾಭಾವಿಕವಾದ ಅನುಭವಗಳೇ ಇವು. ಆದ್ದರಿಂದ ಇವು ವಿದಜವಾದವು.

"ಕಾರ್ಕಿನ್ರಲಿ ತಣ್ಣರುತ್ತಿಮ್ಬರು ಮಾನ್ ಕಣ್ಣಾನ್ ~~[illegible]~~ ತಣ್ಣಾನ್ಸುಲಾಯ್ ವಾರ್ಕಿನ್ರಲಿ ನನ್ನೆಂಜನಾರ್, ತನ್ನು ಪೇಲನ ತನಿ ವಳ್ಳವೇ" — ~~[illegible]~~ ಹೋಳೆಯುವ ಚಿತ್ರ್ರಯುದ್ಧವನ್ನು ಹಿಡಿದ ಆಶ್ಚರ್ಯದ ಸುಂದರನಾದ ಶ್ಯಾಮವರ್ಣದ ಪ್ರೇಮದ ತಂಪಾದ ತುಲಸಿಯ ಹಾರವನ್ನು ಮನಸಾರ ಆಶಿಸುವ ಪ್ರೇಮಪೂರ್ಣವಾದ ಮನಸ್ಸುಳ್ಳವರಿಗಿಲ್ಲ ಆಗುವ ವಿರಹಾವಸ್ಥೆಯೇ ಇದು! ತಮ್ಮ ನಾಚಿಯಿಲ್ಲದ

ಸೌಂದರ್ಯವನ್ನು ರೂಪವನ್ನು ಕಳೆದುಕೊಂಡು, ರಾತ್ರಿಹಗಲು ಕೊರಗುತ್ತಾ ಕೃಶಳಾಗಿ ರುವುದೇ! ಆ ನಾಯಕನ (ಪ್ರಿಯತಮನ) ಅವಳಿಗೆ ಒದಗಿಸಿಕೊಟ್ಟ ಅಗಲಿಕೆಯಿಂದ ಗಡಜಸ್ಥಾವಳೇ ಇದು!

"ವಳ್ಳಮೂ ವಣಾಮ" – ಎಂಬುದಕ್ಕೆ 'ಸಮೃದ್ಧಿ', 'ಐಶ್ವರ', 'ಸಿರಿ', 'ಬಳ್ಳಿಯಾಕಾರ', 'ಹೊಂಬಗು', 'ಜಯ', 'ಮಾರ್ಗ' – ಎಂದು ಮುಂತಾಗಿ ಆಗುತ್ತದೆ.

13. தனிவளர் செங்கோல் நடாவ், தழல்வா யரசவியப்
பனிவளர் செங்கோ லிருள்வீற் றிருந்தது, பார்முழுதும்
துனிவளர் காதல் துழாயைத் துழாவு தண் வாடைதடிந்
தினிவளை காப்பவரார்?, எனை யூழிகளாய் வனவே.

ತನಿವಳರ್ ಶೆಙ್ಗೋಲ್ ನಡಾವು, ತಳಲ್ವಾಯರಶವಿಯ
ಪ್ಪನಿವಳರ್ ಶೆಙ್ಗೋಲಿರುಳ್ ವೀಟ್ರಿರುನ್ದದು, ಪಾರ್ಮುಳುದುಮ್
ತುನಿವಳರ್ ಕಾದಲ್ ತುಳಾಯ್ಯೆತ್ತುಳಾವು ತಣ್ವಾಡೆತಡಿ
ನ್ದಿನಿವಳೈ ಕಾಪ್ಪವರಾರ್?, ಎನ್ನೆಯೂಳಿಗಳ್ ವನವೇ.

ತನಿ தனி = ಸಾಟಿಯಿಲ್ಲದೆ, ವಳರ್ வளர் = ಬೆಳೆಯುವ, ಶೆಙ್ಗೋಲ್ செங்கோல் = ಕಟ್ಟಳೆಯನ್ನು, ನಡಾವು நடாவு = ನಡೆಸಲಿಕ್ಕೆ, ತಳಲ್ தழல் = ಕೆಂಡದ (ಬೆಂಕಿಯ), ವಾಯ್ வாய் = ಬಾಯುಳ್ಳ (ಮುಖವುಳ್ಳ), ಅರಶು அரசு = ಅರಸನು, ಅವಿಯ அவிய = ಮುಳುಗಲು, ಪನಿ பனி = ಶೈತ್ಯವನ್ನು, ವಳರ್ வளர் = ಬೆಳೆಸುವ, ಇರುಳ್ இருள் = ರಾತ್ರಿಯೆಂಬುದು, ಶೆಙ್ಗೋಲ್ செங்கோல் = ಕಟ್ಟಳೆಯ, ವೀಟ್ರಿರುನ್ದು வீற்றிருந்து = ರಾಜ್ಯಭಾರ ನಡೆಸುತ್ತ, ಪಾರ್ பார் = ಭೂಮಿಯನ್ನು, ಮುಳುದುಮ್ முழுதும் = ಪೂರ್ತಿಯಾಗಿ, ತುನಿ துனி = ದುಃಖವನ್ನು (ಅಗಲಿಕೆಯನ್ನು), ವಳರ್ வளர் = ಬೆಳೆಸುವ, ಕಾದಲ್ காதல் = ಪ್ರೇಮದ, ತುಳಾಯ್ಯೆ துழாயை = ತುಳಸಿಯನ್ನು (ತುಳಸಿಯ ಹಾರವನ್ನು), ತುಳಾವು துழாவு = ಅಲೆದು (ಅದರ ಮೇಲೆ ಪ್ರಸರಿಸಿ ಬೀಸುತ್ತಾ), ತಣ್ವಾಡೆ தண் வாடை = ತಂಗಾಳಿಯು, ತಡಿನ್ದು தடிந்து = ಕೊಲೆಗೈದು, ಇನಿ இனி = ಇನ್ನು, ವಳೈಯೆ வளை = ಕೈಬಳೆಯನ್ನು, ಕಾಪ್ಪವರ್ ಯಾರ್ காப்பவர் யார் = (ಕಳಚಿ ಬೀಳದಂತೆ) ಕಾಪಾಡುವವರು ಯಾರು? ಎನ್ನೆ எனை = ನನ್ನನ್ನು, ಊಳಿಗಳ್ ஊழிகள் = ಯುಗಗಳು, ಆರ್ವನವೇ ஆர் வனவே = ಸವೆಸುತ್ತಿವೆಯಲ್ಲ!

ಸಾಟಿಯಿಲ್ಲದೆ ಬೆಳೆಯುವ ಕಟ್ಟಳೆಯನ್ನು ನಡೆಸಲಿಕ್ಕೆ ಕೆಂಡದ ಮುಖವುಳ್ಳ ಅರಸನು ಮರೆಯಾಗಲು (ಮುಳುಗಲು), ಶೈತ್ಯವನ್ನು ಬೆಳೆಸುವ ಕಟ್ಟಳೆಯು ರಾತ್ರಿಯೆಂಬುದು ರಾಜ್ಯಭಾರ ಮಾಡುತ್ತಾ, ಭೂಮಂಡಲವನ್ನೆಲ್ಲಾ ಅಗಲಿಕೆಯ

Garani Srinivasan

ದುಃಖವನ್ನು ಹೆಚ್ಚಿಸುವ ಪ್ರೇಮದ (ಆಶೆಯ) ತುಲಸಿಯ ಹಾರವನ್ನು ನನಗೆಂದೇ
ಬಂದು ಬೀಸುವ ತಂಗಾಳಿಯು (ನನ್ನನ್ನು) ಕೊಲ್ಲಲೆಂದೇ ಹೊರಟಿದೆ. ಇನ್ನು ನನ್ನ
ಕೈಬಳೆಗಳು ಕಳಚಿ ಬೀಳದಂತೆ ರಕ್ಷಿಸುವವರು ಯಾರು? ನನ್ನ ಯುಗ (13)
ಗಳು ನವೆಯುತ್ತಿವೆಯಲ್ಲಾ!

ಹಿಂದಿನ ಎರಡು ಪಾಶುರಗಳಲ್ಲಿ ತಂಗಾಳಿಯು ಹೇಗೆ ನಾಯಕಿಯ ವಿರಹ ವೇದನೆಯನ್ನು ಹೆಚ್ಚಿಸುವುದೆಂದು ಹೇಳಲಾಯಿತು. ಈ ಪಾಶುರದಲ್ಲಿ ತಂಗಾಳಿಗೆ ಜೊತೆಗೂಡುವ ರಾತ್ರಿಯಿಂದಲೂ ತನಗೆ ಆಗುವ ವೇದನೆಯನ್ನು ನಾಯಕಿಯು ಇಲ್ಲಿ ಹೇಳಿಕೊಳ್ಳುತ್ತಾಳೆ.

ಹಗಲು ಸೂರ್ಯನ ರಾಜ್ಯಭಾರಕ್ಕೆ ಸೇರಿದ್ದು. ಆಗ ತಂಗಾಳಿ ಬೀಸಿದರೂ ಸಹ, ಸೂರ್ಯನ ತಾಪದಿಂದ ಅದರ ಸ್ವರೂಪ ಕಡಮೆಯಾಗುತ್ತದೆ. ಸೂರ್ಯನು ಅಸ್ತಮಿಸಿದನೆಂದರೆ, ಚಂದ್ರನೂ ತಾರೆಗಳೂ ತಮ್ಮ ಶೀತಲ ಕಿರಣಗಳನ್ನು ಪ್ರಸರಿಸುವುದರಿಂದ, ರಾತ್ರಿಯ ರಾಜ್ಯಭಾರ ಸ್ವೈರ್ಯಶಾಲಿ ತಂಗಾಳಿಗೆ ಆಶ್ರಯವಾಗಿ ಉತ್ತೇಜ ಕೊಡುವುದು. ಅಲ್ಲದೆ, ರಾತ್ರಿಯೆಲ್ಲ ವಿಶ್ರಮಿಸುವ ಕಾಲವಾದ್ದರಿಂದ, ಪ್ರಣಯಿಯು ತನ್ನ ಪ್ರಿಯತಮನ ಸಾಮೀಪ್ಯ, ಸಹವಾಸವನ್ನು ಬಯಸುವಾಗ ಅದೇ ಸಮಯವು ಆಗಲೇ. ಹಗಲು ಹೊತ್ತಿನಲ್ಲಾದರೆ, ಇಂದ್ರಿಯಗಳು ಜಾಗೃತ ನಾನಾ ವ್ಯಾಪಾರಗಳತ್ತ ಆಕರ್ಷಿತವಾಗುತ್ತವೆ. ರಾತ್ರಿಯಾದಾಗಲ್ಲ.

ನಾಯಕಿ ಹೇಳುತ್ತಾಳೆ: ಸೂರ್ಯನು ಮರೆಯಾದ. ತನ್ನ ಆಡಳಿತವನ್ನು ಮುಗಿಸಿ, ರಾತ್ರಿಗೆ ಎಡೆಕೊಟ್ಟ. ರಾತ್ರಿಯೊಡನೆ ಸ್ವೈರ್ಯಶಾಲಿ ಕುಳಿರ್ಗಾಳಿಗಳಿಗೆ ಅವಕಾಶ ಮಾಡಿಕೊಟ್ಟಿತು. ಆ ಕುಳಿರ್ಗಾಳಿಯೊಡನೆ ನಾನು ಅತ್ಯಂತ ಆಶಿಸುವ ನನ್ನ ಪ್ರಿಯತಮನು (ಭಗವಂತನ) ಧರಿಸಿರುವ ತುಲಸಿಯ ಹಾರವನ್ನು ಅಲುಗಿಸಿ, ಅದರ ಪರಿಮಳವನ್ನು ಹೊತ್ತು ನನ್ನ ಮೇಲೆ ಬೀಸುತ್ತಿದೆ. ಇದರಿಂದ ನನ್ನ ವಿರಹ ಇನ್ನಷ್ಟು ಹೆಚ್ಚಿದೆ. ಅಲ್ಲದೆ ನನ್ನ ದೇಹವು ಸೊರಗಿ ಹೋಗುವಂತೆ ಆಗಿದೆ. ನನ್ನ ಮೈ ಕೂಡಲೇ ಬಿಳುಪಾಗಿದೆ. ನನ್ನ ಕೈಬಳೆಗಳು ಕಳಚಿ ಬೀಳುತ್ತಿವೆ. ರಾತ್ರಿಯನ್ನು ಕಳೆಯುವುದು ಕಷ್ಟಕರವಾಗಿದೆ. ಒಂದೊಂದು ಕ್ಷಣವೂ ಒಂದು ಯುಗವಾಗಿ ಕಂಡುಬರುತ್ತದೆ. ಇಂತಹ ಸನ್ನಿವೇಶದಲ್ಲಿ ನನಗೆ ರಕ್ಷಕನಾದ ನನ್ನ ಪ್ರಿಯತಮನಿಲ್ಲವಲ್ಲ!

14. ஏர்வண வேனு மஞ்சேனும், உயிர் மேல் மிளிர்ந்திலை யோ
பேர்வணவோ வல்ல தெய்வநல் வேட்கையே, பேரொளியே
சேர்வன நீலச்சுடர் விடு மேனியம்மான் விசும்பூர்
தேர்வன, தெய்வமன்னீர கண் ணோ விச்சைழுந்த கயலே.

ಈರ್‌ವನವೇಲು ಮಂಜೇಲುಮ, ಉಯಿರ್ ಮೇಲ್ ಮಿಳಿರ್‌ನ್ದಿವ್ವೆಂಯೋ
ಪೇರ್‌ವನವ್ವೋ ವಲ್ಲ ದೆಯ್ವನಲ್ ವೇಟ್ಕಣ್ಣೋ, ಪೇಶೋಳಿಂಯೋ
ಶೋರ್‌ವನ ನೀಲಚ್ಚುದರ್ ವಿಡು ಮೇನಿಯುಮ್ಮಾನ್ ವಿಶುಮ್ಬೂರ್
ಶೇರ್‌ವನ, ದೆಯ್ವ ಮನ್ನೀರ ಕಣ್ಣೋ ವಿಚ್ಚೆಲುಳ್ಳಯಲೇ.

ಈರ್‌ವನ ஈர்வண = ನಪ್ಪುರಾನ ನೋಯಿಸುವಂಥ, ವೇಲುಮ ವேலும் = ಶೂಲ ಎಂಬುದು, (ವೇಲಾಯುಧವು), ಅಮ ಅம் = ಅಂದವಾದ, ಶೇಲುಮ சேலும் = ಶೇಲ್ ಜಾತಿಯ ಮೀನು ಎಂಬುದು, ಉಯಿರ್ ಮೇಲ್ உயிர் மேல் = ಪ್ರಾಣದ ಮೇಲೆ, ಮಿಳಿರ್‌ನ್ದು மிளிர்ந்து = ಕೂಡಿಕೊಂಡು (ಇರುವುವು) ಇವ್ವೆಂಯೋ இரண்டாவையோ = ಇವೆಂಯೋ, ಪೇರ್‌ವನವ್ವೋ ಅಲ್ಲ பேர்வனவோ அல்ல = ಬಿಟ್ಟು ಕೊಲಲು ವುವ್ವೋ ಅಲ್ಲ, ದೆಯ್ವವಮ தெய்வம் = ದೇವತ್ವಭಾವದ, ನಲ್ ನಲ್ = ಒಳ್ಳೆಯ, ವೇಳ್ ವேள் = ಮನ್ಮಥನ, ಕಣ್ಣೋ கணை = ಬಾಣಗಳಂತೆ, ಪೇರ್ ಒಳ್ಳಯೋ ಪேர் ஓளியே = ದಿವ್ಯವಾದ ಹೊಳಪನ್ನೇ, ಶೋರ್‌ವನ சோர்வண = ಪ್ರಕಾಶದಂತೆ, ಹರಡುವ, ನೀಲವಮ நீலம் = ನೀಲಮಣಿಯ, ಶುದರ್ ಕುடர் = ಪ್ರಕಾಶದಂತೆ, ವಿಡು ವಿடு = ಹೊಳೆಯುವ, ಮೇನಿ மேனி = ದೇಹ ಕಾಂತಿಯುಳ್ಳ, ವಿಶುಮ್ಬು ಊರ್ விசும்பு ஊர் = ಅಮ್ಮಾನ್ அம்மான் = ಪರಮೇಶ್ವರನ, ವಿಶುಮ್ಬು ನೆಲೆಗೊಂಡ ಪರಮಪದವನ್ನು, ಶೇರ್‌ವನ சேர்வண = ಹೃದು ಶುತ್ತಿರುವ, ದೆಯ್ವವಮ ಅನ್ನೀರ தெய்வம் அன்னீர = ದೇವತೆಯ, ಕಣ್ಣೋ கண்ணோ = ಕಣ್ಣೋಯೋ, ಇ. ಶೇಲು - ಕಯಲೇ இ - சேஉ - கயலே = ಈ ಸುಂದರವಾದ ಕಯಲ್ ಮೀನುಗಳೋ?

ನಪ್ಪುರಾನ ನೋಯಿಸುವ ಶೂಲವ್ವೋ (ವೇಲಾಯುಧವ್ವೋ), ಅಂದವಾದ ಶೇಲ್ ಮೀನೋ, ಪ್ರಾಣದ ಮೇಲೆ ಕೂಡಿಕೊಂಡು (ಅಂಟಿಕೊಂಡು) ಇರುವುವು ಇವೆಂಯೋ? ಬಿಟ್ಟು ಕೊಲಲುವುವ್ವೋ ಅಲ್ಲ! ಒಳ್ಳೆಯ ಮನ್ಮಥದೇವನ ಬಾಣಗಳಂತೆ ದಿವ್ಯವಾದ ಹೊಳಪನ್ನೇ ಹರಡುವ (ಪ್ರಸರಿಸುವ) ನೀಲಮಣಿಯ ಪ್ರಕಾಶದಂತೆ ಹೊಳೆಯುವ ದೇಹಕಾಂತಿಯುಳ್ಳ ಪರಮೇಶ್ವರನ ನೆಲೆಗೊಂಡ ಪರಮಪದವನ್ನು ಹೃದು ಶುತ್ತಿರುವ ದಿವ್ಯ ದೇವತೆಯ ಕಣ್ಣೋಯೋ, ಈ ಸುಂದರವಾದ ಕಯಲ್ ಮೀನುಗಳೋ? (14)

ದಿವ್ಯ ಸುಂದರವಾದ ಪಾಶುರ ಇದು. ನಾಯಕಿಯ ಕಣ್ಣುಗಳ ಅತಿ-ಸುಂದರವಾದ ವಿವರಣೆ ಉಪಮಾನಗಳಿಂದ ಕಂಡು ಮೆರೆಯುತ್ತಿದೆ.

ನಾಯಕಿಯ ನೋಟದಲ್ಲಿ ಆಕರ್ಷಣೆಯ ನಪ್ಪುರು ಕಂಡುಬರುತ್ತದೆ. ಜೊತೆಗೆ, ಅದು ಅಷ್ಟೇ ದುಷ್ಟವಾಗಿ, ಮನ ಮುಟ್ಟುವಂತೆ, ನೋಯಿಸುವಷ್ಟು ಆಗದೆ. ಚಪಲ-

-తేయల్లో అప్పు మీనిగె సమవాగావె. ఈ ఎరడు స్వభావగళూ ఒట్టిగే సేరుత్తేందు నాయకయన్ను ఉంపిసుత్తివె. అవళన్ను బిళ్ళు హోలువుదల్లవెన్నత్తవె. తన్న ప్రియకమనాద సర్వేశ్వర నేలెయింద విరమ విదవన్న ఘుఘుకంత్తిరువుదే అవళ దృష్టియ కేలస. అవనాదరో మన్మథదేవన బాణగళు ప్రదమన ఆకర్షక సుందరవాద కాంతియన్నుళ్ళ బిళ్ళియ నీలమణియ దివ్యప్రకాశదంతె హోళెయుత్తానే! అవనన్ను కూడ బేడవే? ఈ కారణదిం దలే అవళ కణ్ణుగళిగె ఈ బగెయ జీవిలతె! సుందరవాద కయలు మీనను గళంతె చంచల!

15. கயலோ நுமகண்கள் என்று களிறு வினவி நிற்றீர்,
அயலோர் அறியிலும் ஈதென்ன வார்த்தை!, கடல்கவர்ந்த
புயலோடுலாம் கொண்டல் வண்ணன் புனவேங்கடத்தெம்
மோடும்
பயலோவிலீர், கொலைகாக்கின்ற நாளும் பலபலவே.

కయలో నుమ కణ్గళ్ ఎన్ఱు కళిఱు వినవి నిఱ్ఱీర్,
అయలోర్ అఱియిలుమ్ ఈదెన్న వార్త్తై!, కడల్ కవర్న్ద
పుయలోడులామ్ కొణ్డల్ వణ్ణన్ పున వేఙ్గడత్తెమ్మోడుమ్
పయలో విలీర్, కొలైక్కాక్కిన్ఱ నాళుమ్ పలపలవే.

కయలో கயலோ = కయల్ మీనుగళో, నుమ కణ్గళ్ நுமகண் కళ్ = నిమ్మ కణ్ణుగళు, ఎన్ఱు ఎన్றும் = ఎందు, కళిఱు களிறு = ఆన్యయువిష్యయనాన్న, వినవి வினவி = ప్రశ్నిసి, నిఱ్ఱీర్ நிற்றீர் = నింతిద్దీర, అయలోరు அயலோரு = ఇతరరు (బేరెయవరు), అఱియిలుమ అறியிலும் = (తిళి) తిళిదరే, ఈదు ఎన్న వార్త్తై ஈது என்ன வார்த்தை = ఇదు ఎంథా మాతాగుత్తదె, కడల్ కవర్న్ద கடல் கவர்ந்த = కడల సే బాచికొండిరువ, పుయలోడు புயலோடு = మళెయొందనే, ఉలావు உலாவு = సంచరిసువ, కొణ్డల్ వణ్ణాన్ கொண்டல் வண்ணான் = కామెఘద బణ్ణదవన, పునమ్ புனம் = హొలగళ (బెళ్ళద తప్పలిన హొలగళు), వేఙ్గడత్తు வேங்கடத்து = తిరువేంకటగిరియల్లి, ఎమ్మోడుమ్ எம் மோடும் = నమ్మొందనే కూడి, పయలో ఇలీర్ பயலோ இலீர் = భావమైనసువవరల్ల, కొల్లై కొల్లై = హొలవన్ను, కాక్కిన్ఱ காக்கின்ற = కాయువ, నాళుమ్ நாளும் = దినవూ, పల పలవే పలప లவே = బదలాగుత్తేయల్లా!

Garani Srinivasan

'ನಿಮ್ಮ ಕಣ್ಣುಗಳು ಕಯಲ್ ಮೀನುಗಳೋ' ಎಂದಾಗ, ಆಸೆಯ ವಿಷಯವಾಗಿಯೂ ಪ್ರಶ್ನಿಸಿ ನಿಂತಿದ್ದೀರಲ್ಲ! ಬೇರೆಯವರು (ಇದನ್ನು ಕೇಳಿ) ತಿಳಿದರೆ ಏನಾಗ? ಇದೆಂಥ ಮಾತು? ಕಡಲನ್ನೇ ಬಾಚಿಕೊಂಡು ಮಳೆಯಾಗಿ ಸುರಿಸುವ ಕಾರ್ಮುಗಿಲ ಬಣ್ಣದವನ ತಿರುವೆಂಕಟಾದ್ರಿಯ ತಪ್ಪಲಿನ ತೋಟಗಳಲ್ಲಿ ನಮ್ಮೊಡನೆ ಕೂಡಿ (ತೋಟ ಕೆಲಸದಲ್ಲಿ) ಭಾಗವಹಿಸುವವರಲ್ಲ! ತೋಟವನ್ನು ಕಾಯುವ ದಿನಗಳು ಬದಲಾಗಿವೆ (15)
ಯಲ್ಲ!

ತಿರುವೆಂಕಟಾದ್ರಿಯ ತಪ್ಪಲಿನ ತೋಟದಲ್ಲಿ ತನ್ನ ನಾಯಕನನ್ನು ಅಕಸ್ಮಾತ್ತಾಗಿ ತಾನು ಸಂಧಿಸಿದಂತೆಯೂ, ಅವನು ತನ್ನ ಸೌಂದರ್ಯಕ್ಕೆ ಆಕರ್ಷಿತನಾಗಿರುವಂತೆಯೂ, ಯಾವುದೋ ನೆಪವಿಟ್ಟು ಅವನು ತನ್ನೊಡನೆ ಮಾತನಾಡಿದಂತೆಯೂ, ಊಹಿಸಿಕೊಂಡು (ಕನಸುಕಂಡು) ನಾಯಕಿಯು ಜೋರಾಗಿ ಉತ್ತರಕೊಡುವುದು ಈ ಪಾಶುರ.

ತನ್ನ ಮುಂದೆ ನಿಂತಿರುವವನು ತನ್ನ ಪ್ರಿಯತಮನೇ ಎಂದು ನಾಯಕಿಯ ಭಾವನೆ. ಆದರೆ, ತಾನಿರುವುದು ತಿರುವೆಂಕಟಾದ್ರಿಯ ತಪ್ಪಲಿನ ತೋಟದಲ್ಲಿ! ಒಂಟಿಯಾಗಿ! ತಾನು ಯುವತಿ! ಈ ಮರೆಯಾಗಿ ಸಂಧಿಸಿದ್ದನ್ನು, ಅವರಾಡುವ ಮಾತುಗಳನ್ನು ಇತರರು ಯಾರಾದರೂ ಕೇಳಿದರೆ ಏನಾಗ? ತನ್ನ ಮೇಲೆ ನಿಂದೆಯೋ ಅಪವಾದವೋ ಬರುವುದಲ್ಲ ಎಂಬ ಅಳುಕು. ಆದ್ದರಿಂದ, ತನ್ನ ನಲ್ಲನೊಡನೆ ಇನ್ನಷ್ಟು ಕಾಲ ಮಾತನಾಡಬೇಕೆಂಬ ಆಸೆ. ಅವನು ಕೇಳಿದ ಪ್ರಶ್ನೆಗಳು ಪುಟ್ಟವು. ಅರ್ಥಗರ್ಭಿತ. ಅದಕ್ಕೆ ಅವಳ ಉತ್ತರವಾದರೋ ಸ್ವಲ್ಪ ಉದ್ದವಾಗಿಯೇ, ವಿಮರ್ಶಾತ್ಮಕವಾಗಿ, ಕುಲೀನ ಯುವತಿಗೆ ತಕ್ಕದಾಗಿ. ತನ್ನ ಅಂದವನ್ನು ಇನ್ನಷ್ಟು ಕಾಲ ಅವನು ನೋಡಲಿ, ತನ್ನ ಕಡೆಗೆ ಆಕರ್ಷಿತನಾಗಲಿ, ಎಂಬುದೇ ಆಶಯ.

"ಕಡಲ್ ಕವರ್ನ್ದ ಪುಯಲೋಡುಲಾವಿಯ ಕೊಣ್ಡಲ್ ವಣ್ಣನ್" – ಕಾರ್ಮುಗಿಲು ಕಡಲನ್ನೇ ಬಾಚಿ ತುಂಬಿಕೊಳ್ಳುವುದಂತೆ, ಮೆಲ್ಲಮೆಲ್ಲನೆ ಸಂಚರಿಸುತ್ತಾ ಅಲ್ಲಲ್ಲಿ ಸಮೃದ್ಧಿಯಾಗಿ ಮಳೆ ಸುರಿಸುವುದಂತೆ. ಅಂಥ ಪರಮೋದಾರ ವ್ಯಕ್ತಿ, ಆಕರ್ಷಕಸುಂದರನಾದ ಕಾರ್ಮುಗಿಲ ಬಣ್ಣದವನು – ಸರ್ವೇಶ್ವರ.

ನಾಯಕಿ ಕೇಳುತ್ತಾಳೆ: "ಏನು? 'ನಿನ್ನ ಕಣ್ಣುಗಳು ಕಯಲ್ ಮೀನುಗಳೋ?' ಎಂದು ಪ್ರಶ್ನಿಸಿದಿರಿ. ಆಸೆಯ ವಿಷಯವನ್ನು ತುಂಬಾ ಕೇಳಿದಿರಿ. ಒಂದಕ್ಕೊಂದು ಅಸಂಬದ್ಧವಾಗಿ ಮಾತನಾಡುತ್ತೀರಿ? ನೀವು ನನ್ನೊಡನೆ ಹೀಗೆಲ್ಲ ಮಾತನಾಡುವುದನ್ನು ಕಂಡರೆ, ಇತರರು ಏನೆಂದಾರು? ತಿರುವೆಂಕಟಾದ್ರಿಯ ತಪ್ಪಲಲ್ಲಿ ಬಹುಕಾಲದಿಂದಲೂ ತೋಟ ಕಾಯುವ ಕೆಲಸ ನಮ್ಮದು. ಅಲ್ಲಿ, ನಿಮ್ಮನ್ನು ಒಂದು ಬಾರಿಯಾದರೂ ಕಂಡಿಲ್ಲವಲ್ಲ! ನೀವಿಲ್ಲಿಗೆ ಹೊಸಬರೇ ಇದ್ದಂತೆ ತೋರುತ್ತದೆ.

Garani Srinivasan

16. பலபல ஊழிகளாயிடும், அன்றியோர் நாழிகையைப்
பலபல கூறிட்ட கூறாயிடுமே, கண்ணன் விண்ணனையாய்!
பலபல நாளன்பர் கூடிலும் நீங்கிலும் யாமெலிதும்
பலபல சூழலுடைத்து, அம்ம! வாழியிப் பாயிருளே.

ಪಲಪಲ ಊಳಿಗಳಾಯಿಡುಮ್, ಅನ್ರಿಯೋರ್ ನಾಳಿಗೈಯೈಪ್
ಪಲಪಲ ಕೂರಿಟ್ಟ ಕೂರಾಯಿಡುಮೇ, ಕಣ್ಣನ್ ವಿಣ್ಣನೈಯಾಯ್!
ಪಲಪಲ ನಾಳನ್ಬರ್ ಕೂಡಿಲುಮ್ ನೀಙ್ಗಿಲುಮ್ ಯಾಮೆಲಿದುಮ್
ಪಲಪಲ ಶೂಳಲುಡೈತ್ತು, ಅಮ್ಮ! ವಾಳಿಯಿಪ್ಪಾಯಿರುಳೇ.

ಪಲ ಪಲ பலபல = ಹಲವಾರು, ಊಳಿಗಳ್ ஊழிகள் = ಯುಗಗಳೇ, ಆಯಿಡುಮ್ ஆயிடும் = ಆಗಬಿಡುವುದು, ಅನ್ರಿ அன்றி = ಇಲ್ಲವೇ, ಓರ್ ನಾಳಿಗೈಯೈ ஓர் நாழிகையை = ಒಂದು ಘಳಿಗೆಯನ್ನು, ಪಲ ಪಲ பலபல = ಹಲವಾರು (ಅನೇಕ), ಕೂರು ಇಟ್ಟ கூறு இட்ட = ಭಾಗಗಳಾಗಿ ಮಾಡಿದ, ಕೂರು கூறு = (ಒಂದು ಅಲ್ಪವಾದ) ಭಾಗ, ಆಯಿಡುಮೇ ஆயிடுமே = ಆಗಬಿಡುವುದಲ್ಲ, ಕಣ್ಣನ್ கண்ணன் = ಆಶ್ಚರ್ಯ ಚೇಷ್ಟಿತನ, ವಿಣ್ ವிண் = ಪರಮಪದದಷ್ಟೇ, ಅನ್ನೈಯಾಯ್ அனையாய் = ಶೀಲಶಕ್ತನಾದ (ಧರ್ಮಮನಾದ), ಪಲ ಪಲ ನಾಳ್ பலபல நாள் = ಹಲವಾರು ದಿನಗಳು, ಅನ್ಬರ್ அன்பர் = ಪ್ರಿಯತಮನು, ಕೂಡಿಲುಮ್ கூடிலும் = ಕೂಡಿರಲು, ನೀಙ್ಗಿಲುಮ್ நீங்கிலும் = ನೀಗಿರಲು (ಅಗಲಿರಲು), ಯಾಮ್ யாம் = ನಾವು, ಮೆಲಿನ್ದುಮ್ மெலிந்தும் = ಕೃಶರಾಗಿರಲು), ಪಲ ಪಲ பலபல = ಹಲವಾರು, ಶೂಳಲ್ சூழல் = ಆಲೋಚನೆಗಳನ್ನು, ಉಡೈತ್ತು உடைத்து = ಉಳ್ಳದ್ದಾಗಿ, ಅಮ್ಮ அம்ம = ಅಮ್ಮಾ!, ವಾಳಿ வாழி = ಜಯವಾಗಲಿ, (ಗೆಲ್ಲಲಿ), ಇ- ಪಾಯ್ - ಇರುಳೇ இ பாய் இருளே = ಈ ಹರಡಿರುವ ರಾತ್ರಿಯೇ.

ಹಲವಾರು ಯುಗಗಳೇ ಆಗಬಿಡುವುದು, ಇಲ್ಲವೇ, ಒಂದು ಘಳಿಗೆಯನ್ನು ಅನೇಕ ಭಾಗಗಳಾಗಿ ಮಾಡಿದ ಒಂದು ಭಾಗವೇ ಆಗಬಿಡುವುದು, ಆಶ್ಚರ್ಯ ಚೇಷ್ಟಿತನ ಪರಮಪದದಷ್ಟೇ ಧರ್ಮಮನಾದ ಪ್ರಿಯತಮನು ಹಲವಾರು ದಿನಗಳು ಕೂಡಿರಲು, ಅಗಲಿರಲು. ಅಮ್ಮಾ! ನಾವು (ನಾನು) ಕೃಶಳ, ನಾನಾ ಆಲೋಚನೆಗಳು ಉಂಟಾಗುವ ಉಳ್ಳದ್ದಾಗಿರುವ ಈ ವಿಸ್ತಾರವಾಗಿ (ಹರಡಿರುವ) ರುವ ರಾತ್ರಿಯೇ ನಿನಗೆ ಜಯವಾಗಲಿ (16)

ಈ ಪಾಶುರದಲ್ಲಿ ನಾಯಕಿಯು ರಾತ್ರಿಯನ್ನು ಹೊಗಳುವ ರೀತಿಯಲ್ಲಿ ನಿಂದಿಸುತ್ತಾಳೆ. ಬೇರೆ ಬೇರೆ ಸಮಯಗಳಲ್ಲಿ ರಾತ್ರಿಯ ಕಾಲ ತನಗೆ ಹೇಗಿರುವುದು ಹೇಗೆ ಕಾಣಬರುವುದು ಎಂದು ವಿವರಿಸುತ್ತಾಳೆ.

Garani Srinivasan

ನಾಯಕಿ ಹೇಳುತ್ತಾಳೆ: ನನ್ನ ಪ್ರಿಯತಮನೊಡನೆ ನಾನು ಕೂಡಿಕೊಂಡಿರುವಾಗ ರಾತ್ರಿಯೆಂಬುದು ಬಲು ಬೇಗ ಮುಗಿದುಹೋಗುವುದು. ಒಂದು ಘಳಿಗೆಯ ~~[illegible]~~ ಅನೇಕ ಭಾಗಗಳಲ್ಲಿ ಒಂದು ಅಲ್ಪಭಾಗದಂತೆ ಅದು ಮುಗಿಯುವುದು. ಅದೇ ರಾತ್ರಿ, ನಾಯಕನಿಂದ ನಾನು ಅಗಲಿರುವಾಗ ಎಷ್ಟೋ ಯುಗಗಳು ಕಳೆಯುವ ಹಾಗೆ, ದೀರ್ಘವಾಗುವುದು. ನಾಯಕನ ಅಗಲಿಕೆಯಿಂದ ನಾನು ದುಃಖದಿಂದ ಕೃಶಳಾಗಿ ಹೋಗುವಂತೆಯೂ, ನಾನಾ ಬಗೆಯ ಆಲೋಚನೆಗಳನ್ನು ಮಾಡುತ್ತಿರುವಂತೆಯೂ ಮಾಡುವುದು. ರಾತ್ರಿಯೆಂಬುದು ಮುಗಿಯುವುದೇ ಇಲ್ಲವಲ್ಲ, ಎಷ್ಟು ವಿಸ್ತಾರವಾದದ್ದು ಇದು ಎನ್ನುವಂತಾಗುವುದು. ~~ರಾತ್ರಿಯೇ~~ ಅಮ್ಮ! ರಾತ್ರಿಯ ಪ್ರತಾಪ ಎಂಥದ್ದು! ರಾತ್ರಿಯೇ ನಿನಗೆ ಜಯವಾಗಲಿ (ಮಂಗಳವಾಗಲಿ).

ಕಣ್ಣನ್ ವಿಣ್ಣೋ ಅನ್ನೈಯೂಲ್ ಅನ್ಬರ್" — ಅತ್ಯಾಕರ್ಷಕನೂ, ನವ ಯೌವನ ಸುಂದರನೂ ಆದವನ ವಿರಹ ವಿದವು ನೀಡುವ ತಾಪತಾನಂದವನ್ನು ಉಂಟು ಮಾಡುವ ನನ್ನ ಪ್ರಿಯತಮನು — ಎಂದರೆ ದಿವ್ಯೇಶ್ವರನು.

ನಾಲಿಕ್ಕೈ - நாழிகை :— 24 ನಿಮಿಷಗಳಿಗೆ ಸಮನಾದ ಕಾಲ. ಅದನ್ನು ಅನೇಕ ಪಾಲು ಭಾಗ ಮಾಡಿದರೆ ಬರುವುದು (ಸೆಕೆಂಡುಗಳು) ಕ್ಷಣಗಳು, ಕಣ್ಣುಬಡಿಯುವಷ್ಟು ಕಾಲ, ಇತ್ಯಾದಿ. — ಅಂಶ ಬಲು ಅಲ್ಪವಾದ ಕಾಲ.

17. இருள்விரிந்தாலன்ன மாநீர்த் திரைகொண்டு வாழியரோ,
இருள்பிரிந்தாரன்பர் தேர்வழி தூரல், அரவணைமேல்
இருள்விரிநீலக் கருநாயிறு சுடர்காலவது போல்
இருள்விரி சோதி, பெருமானுறையு மெறிகடலே!

ಇರುಳ್ ವಿರಿನ್ದಾಲನ್ನ ಮಾನೀರ್ ತ್ತಿರೈಕೊಣ್ಡು ವಾಳಿಯರೋ,
ಇರುಳ್ ಪಿರಿನ್ದಾರನ್ಬರ್ ತೇರ್ ವಳಿ ತೂರಲ್, ಅರವಣೈ ಮೇಲ್
ಇರುಳ್ ವಿರಿ ನೀಲಕ್ಕರು ನಾಯಿಱು ಶುಡರ್ ಕಾಲ್ವದು ಪೋಲ್
ಇರುಳ್ ವಿರಿ ಶೋದಿ, ಪೆರುಮಾನುಱೈಯು ಮೆಱಿ ಕಡಲೇ!

ಇರುಳ್ இருள் = ರಾತ್ರಿಯು (ಕತ್ತಲೆಯು), ವಿರಿನ್ದಾಲ್ ಅನ್ನ விரிந்தால் அன்ன = ಹರಡಿರುವ ಹಾಗೆ, ಮಾ ನೀರ್ மாநீர் = ಕಡಲಿನ (ವಿಸ್ತಾರವಾದ ನೀರಿನ), ತಿರೈ ಕೊಣ್ಡು திரை கொண்டு = ಅಲೆಗಳಿಂದ, ವಾಳಿಯರೋ வாழியரோ = ಬಹುಕಾಲ ಬಾಳುವಂತಾಗಲಿ, ಇರುಳ್ இருள் = ರಾತ್ರಿಯಲ್ಲಿ, ಪಿರಿನ್ದಾರ್ பிரிந்தார் = ಅಗಲಿದ, ಅನ್ಬರ್ அன்பர் = ಪ್ರಿಯತಮನ್ನು, ತೇರ್ ವಳಿ தேர் வழி = ರಥದ ಗುರುತು, ತೂರಲ್ தூரல் = ಅಳಿಸುವಂತೆ (ಅಳಿಸಿ ಹೋಗದೆ), ಅರವು ಅಣೈ ಮೇಲ್ அரவு அணை மேல் = ಶೇಷಶಯನದಲ್ಲಿ, ಇರುಳ್ இருள் = ~~[illegible]~~ ಕತ್ತಲೆಯನ್ನು, ವಿರಿ விரி = ಹೊರಚೆಲ್ಲುವಂತೆ, ನೀಲಮಾ நீலம் = ನೀಲಮಣಿಯ ~~[illegible]~~ ಹಾಗೆ,

ಕರು கரு = ಕರಿಯ, ನಾಯಿಱು ஞாயிறு = ಸೂರ್ಯನ, ಕದಿರ್ கதிர் = ಕೆಂಜನ್ನು, ಕಾಲ್‌ವದು ಪೋಲ್ கால்வது போல் = ಹರಡುವ ಹಾಗೆ, ಇರುಳ್ இருள் = ಕತ್ತಲನ್ನು, ಎಱಿ எறி = ವಿಲಯಿಸುವ (ಮುಳುಗಿಸುವ), ಕೋಲಚೋದಿ சோதி = ಜ್ಯೋತಿಯನ್ನುಳ್ಳ, ಪೆರುಮಾನ್ பெருமான் = ಸ್ವಾಮಿಯು, ಉಱೈಯುಮ್ உறையும் = ಪವಡಿಸುವ, ಎಱಿ ಕಡಲೇ எறி கடலே = ಅಲೆಗಳಿಂದ ತುಂಬಿದ ಕಡಲೇ!

~~[illegible]~~ ಕಪ್ಪು ಬಣ್ಣವನ್ನು ಹೊರಚೆಲ್ಲುವ ನೀಲಮಣಿಯ ಹಾಗೆ ಕಪ್ಪುಬಣ್ಣದ ಸೂರ್ಯನ ಕೆಂಜನ್ನು ಹರಡುವ ಹಾಗೆ, ಆ ಕಪ್ಪು ಬಣ್ಣವನ್ನು (ಕತ್ತಲೆಯನ್ನು) ಮುಳುಗಿಸುವ ಜ್ಯೋತಿಯನ್ನುಳ್ಳ ಶೇಷನ ಹಾಸಿಗೆಯಲ್ಲಿ ಅಗಲದ ಸ್ವಾಮಿಯು ಪವಡಿಸುವಂಥ ಅಲೆಗಳಿಂದ ಕೂಡಿದ ಕಡಲೇ, ರಾತ್ರಿಯಲ್ಲಿ ನನ್ನನ್ನು ಪ್ರಿಯಾಕಮನ ರಥದ ಗುರುತು ಅಳಿಸುವಂಥ ಕತ್ತಲೆಯು ಹರಡುವ ಹಾಗೆ (17)
ವಿಸ್ತಾರವಾದ ನೀಲಿಯ ಅಲೆಗಳಿಂದ ಬಪ್ಪರಾಲ ಬಾಳು!

ಉಪಮಾನಗಳು ಪರಸ್ಪರ ಬೆರೆತುಹೋಗಿ, ಒಂದರಲ್ಲೊಂದು ಹೆಣೆದು ಕೊಂಡು ಈ ಪಾಶುರವನ್ನು ಕಠಿಣ ಮಾಡಿದೆ. ಅವುಗಳನ್ನು ಬಿಡಿಸಿ ಹೇಳಬೇಕೆನಿಸುತ್ತದೆ.

ಸೂರ್ಯನಿಗೆ, ನೀಲಮಣಿಗೆ, ಕತ್ತಲ ರಾತ್ರಿಗೆ ಉಪಮಾನ: ಹಗಲಲ್ಲಿ ಸೂರ್ಯನ ಪ್ರಕಾಶದಿಂದ ಕೂಡಿ ಬೆಳಗುವವನೆಂದೂ, ರಾತ್ರಿಯಲ್ಲಿ ಅವನು ಕಪ್ಪನೆಯ ಕೆಂಜನ್ನು ಭಾಗವಾಗಿ ಮೇಲೆ ಹರಡುವನೆಂದೂ ಭಾವಿಸಿ ಕೊಂಡ ಉಪಮಾನವಿದು. ನೀಲಮಣಿ ಹೇಗೆ ಕಪ್ಪನೆಯ ಪ್ರಕಾಶವನ್ನು ಕನ್ನ ಹರಡುತ್ತದೆಯೋ ಹಾಗೆಯೇ ಸೂರ್ಯನು ರಾತ್ರಿಯಲ್ಲಿ ಕತ್ತಲನ್ನು ಹರಡುತ್ತಾನೆ.

ರಾತ್ರಿಯ ಸೂರ್ಯನಿಗೆ, ಕಪ್ಪನೆಯ ಕಡಲಲ್ಲಿ ಪವಡಿಸಿರುವ ಭಗವಂತನಿಗೆ ಉಪಮಾನ: ರಾತ್ರಿಯ ಸೂರ್ಯನು ಕತ್ತಲನ್ನು ಹರಡಿ ಎಲ್ಲವನ್ನೂ ಮುಚ್ಚಿ ಮಾಡುವ ಹಾಗೆ, ಕಗ್ಗತ್ತಲೆಯನ್ನು ಹರಡುವ ಕಡಲಲ್ಲಿ ಶೇಷನ ಹಾಸಿಗೆಯಲ್ಲಿ ಭಗವಂತನು ಪವಡಿಸಿದ್ದಾನೆ. ಸೂರ್ಯನ ಕತ್ತಲೆಯನ್ನು ಮುಳುಗಿಸಿದ ಕಗ್ಗತ್ತಲೆಯನ್ನು ಸುತ್ತಲೂ ಹರಡುತ್ತಾನೆ. ಇದು ಮಹಾಪ್ರಳಯದ ಬಳಿಕ ಬರುವ ಕಲ್ಪಗಳ ಕಾಲದ ಕಗ್ಗತ್ತಲೆಯ ಸೂಚನೆ.

ರಾತ್ರಿಯ ಕತ್ತಲೆಗೆ ರಾತ್ರಿಯ ಕಡಲಿನ ಅಲೆಗಳಿಗೆ ಹೋಲಿಕೆ: ರಾತ್ರಿಯಲ್ಲಿ (ಕತ್ತಲೆಯಲ್ಲಿ) ಪ್ರಿಯಕಮನು ಹೋಗಿದ ರಥದ ಗುರುತು ಸ್ಪಷ್ಟವಾಗಿ ಕಾಣಿಸುವುದಿಲ್ಲ. ಒಂದು ವೇಳೆ ಅದನ್ನು ಹಗಲಲ್ಲಿ ಕಾಣಬಹುದೆಂದರೂ, ಅದನ್ನು ರಾತ್ರಿಯಲ್ಲಿ ಕಪ್ಪನೆಯ ಕಡಲಿನ ಅಲೆಗಳು ವಿಸ್ತಾರವಾಗಿ ಹರಡಿ ಬಂದು,

Garani Srinivasan

Garani Srinivasan

ಆ ರಥದ ಚಿತ್ರದ ಗುರುತುಗಳನ್ನು ಅಳಿಸಿ ಬಿಡುತ್ತವೆ. (ನೆಲದ ಮೇಲೆ ಇರುವ ಹಾಗೆ ಗುರುತು ನೀರಿನ ಮೇಲೆ ಇರುತ್ತದೆಯೇ?)

"ಇರುಳ್ ಪಿರಿನ್ದಾರನ್ನರ್ ಶೇರ್ ವಳಿ ತೂರಲ್" — ಇಲ್ಲಿ ಶ್ರೀರಾಮನು ವನವಾಸಕ್ಕೆ ಹೊರಟಾಗ ನಡೆದ ಸಂಗತಿ ನೆನಪಿಗೆ ಬರುತ್ತದೆ. ಹದಿನಾಲ್ಕು ವರ್ಷ ವನವಾಸಕ್ಕಾಗಿ ಶ್ರೀರಾಮನು ಸೀತಾಲಕ್ಷ್ಮಣರೊಡನೆ ಹೊರಡುವುದು ನಿರ್ಧಾರವಾಯಿತು. ಅಯೋಧ್ಯೆಯ ಜನರಿಗೆ ಅದು, ಎಂದರೆ, ತಮ್ಮ ಪ್ರಿಯತಮನಿಂದ ಅಗಲುವುದು ಅಸಾಧ್ಯವಾಯಿತು. ಆದ್ದರಿಂದ ಅವನೊಡನೆ ಕಾಡಿನಲ್ಲಿರುವುದಕ್ಕೆ ಸಿದ್ಧರಾದರು. ಇದನ್ನರಿತ ಶ್ರೀರಾಮನು ಸೀತಾಲಕ್ಷ್ಮಣರೊಡನೆ ರಾತ್ರಿಯ ಕಗ್ಗತ್ತಲೆಯಲ್ಲಿ ರಥದಲ್ಲಿ ಕುಳಿತು ವನವಾಸಕ್ಕೆ ತೆರಳಿದನು. ಅವನು ಹೋದ ರಥದ ಜಾಡು ನೋಡ ಅವರಿಗೆ ಅವಕಾಶದಂತೆ ಮಾಡಿ ಹೋಯಿತು. ಕತ್ತಲೆಯ ಕೆಲಸ ಅದು ಎಂದರ್ಥ.

ನಾಯಕಿ ಹೇಳುತ್ತಾಳೆ: ತಪ್ಪದೆಯ ಅಲೆಗಳಿಂದ ವಿಸ್ತಾರವಾಗ ಹರಡಿಕೊಂಡಿರುವ ಕಡಲೇ, ನಿನ್ನ ಮೇಲೆ ಸರ್ಪದ ಹಾಸಿಗೆಯಲ್ಲಿ ಪವಡಿಸಿರುವ ದೇವೇಶ್ವರನಾದ ನನ್ನ ಪ್ರಿಯತಮನು ರಾತ್ರಿಯ ಕಗ್ಗತ್ತಲೆಯಲ್ಲಿಯೇ ನನ್ನನ್ನಗಲಿ ಹೋದನು. ಅವನ ರಥದ ಜಾಡನ್ನು ಗುರುತಿಸದಹಾಗೆ ಅಳಿಸುವ ನಿನ್ನ ತಪ್ಪದೆಯ ಅಲೆಗಳೊಡನೆ ನೀನು ಬದುಕಿ ಬಾಳು.

ನಾಯಕಿಯು ತನ್ನನ್ನಗಲಿದ ತನ್ನ ಪ್ರಿಯತಮನನ್ನು ಹುಡುಕುತ್ತ, ಅವನು ವಾಸಿಸುವ ಸ್ಥಳವನ್ನು ತಾನೇ ಹೋಗಿ ನೋಡಬೇಕೆಂಬ ಹೆಬ್ಬಯಕೆಯನ್ನು ಹೊತ್ತಿದ್ದಾಳೆ, ಪಾಪ. ನೆಲದ ಮೇಲೆ (ಭೂಮಿಯ ಕೆನಾಲಿಯವರ್ಗ) ರಥದ ಚಿತ್ರದ ಜಾಡು ಸಿಕ್ಕಬಹುದೇನೋ! ಆದರೆ, ಕಡಲಲ್ಲಿ ಮಲಗಿಕೊಂಡಿರುವ ಸ್ವಾಮಿಯ ಬಳಿಗೆ ಹೋಗುವುದಾದರೂ ಹೇಗೆ? ಎಲ್ಲಿದೆ ಅದಕ್ಕೆ ಜಾಡು (ಗುರುತು)?

ನಾಯಕಿಗೆ ಕಡಲನ್ನು ಕಂಡು ಎಷ್ಟು ದಿಗಿಲು ಉಂಟಾಯಿತೋ?

18, கடல்கொண்டெழுந்தது வானம், அவ்வானத்தை யன்றிச்
சென்று
கடல்கொண்டொழிந்த வதுவறிந்து, கண்ணன் மண்ணும்
விண்ணும்
கடல்கொண்டெழுந்த வக்காலங்கொலோ? புயற்
காலங்கொலோ
கடல்கொண்ட கண்ணீர், அருவி செய்யாநிற்கும்
காரிகையே.

GaraniSrinivasan

ಕಡಲ್ ಕೊಣ್ಡೆಳುನ್ದ ವಾನಮ್, ಅವ್ವಾನತ್ತೈ ಯನ್ಱಿ ಚ್ಚೆನ್ಱು
ಕಡಲ್ ಕೊಣ್ಡೆಳುನ್ದ ವದನಾಲಿದು, ಕಣ್ಣನ್ ಮಣ್ಣುಮ್ ವಿಣ್ಣುಮ್
ಕಡಲ್ ಕೊಣ್ಡೆಳುನ್ದ ಅಕ್ಕಾಲಙ್ಗೊಲೋ? ಪುಯಲ್ ಕಾಲಙ್ಗೊಲೋ?
ಕಡಲ್ ಕೊಣ್ಡ ಕಣ್ಣೀರ್, ಅರುವಿ ಶೆಯ್ಯಾ ನಿಱ್ಕುಙ್ಗಾರಿಕೈಯೇ.

ಕಡಲ್ கடல் = ಕಡಲನ್ನೇ (ಕಡಲ ನೀರನ್ನು), ಕೊಣ್ಡು கொண்டு = ತುಂಬಿಕೊಂಡು, ಎಳುನ್ದ எழுந்து = ಮೇಲೆದ್ದು, ವಾನಮ್ வானம் = ಕಾರ್ಮುಗಿಲು, ಅವ್ವಾನತ್ತೈ அவ்வானத்தை = ಆ ಆಕಾಶವನ್ನು, ಅನ್ಱಿ அன்றி = ಅಲ್ಲದೆ,(ತಪ್ಪಿ) ಚೆನ್ಱು சென்று = ಹೋಗಿ, ಕಡಲ್ ಕೊಣ್ಡು கடல் கொண்டு = ಕಡಲನ್ನೇ ಸೇರಿ, ಅಳಿನ್ದ ಅದನಾಲ್ அழிந்த அதனால் = ಅಳಿದು ಹೋದದ್ದರಿಂದ, ಇದು இது = ಇದು (ಈ ಕಾಲವು), ಕಣ್ಣನ್ கண்ணன் = ಆಕರ್ಷಕನು (ಸರ್ವೇಶ್ವರನು), ಮಣ್ಣುಮ್ மண்ணும் = ಭೂಮಿಯನ್ನು, ವಿಣ್ಣುಮ್ விண்ணும் = ಆಕಾಶವನ್ನು, ಕಡಲ್ ಕೊಣ್ಡು கடல் கொண்டு = ಕಡಲನ್ನು ಉಕ್ಕಿಸಿಕೊಂಡು, ಎಳುನ್ದ எழுந்த = ಎದ್ದ, ಅ-ಕಾಲಮ್ ಕೊಲೋ அக்காலம் கொலோ = ಆ ಕಾಲವೇಯೋ? ಪುಯಲ್ ಕಾಲಮ್ ಕೊಲೋ புயல் காலம் கொலோ = ಮಳೆಗಾಲವೇಯೋ? ಕಡಲ್ ಕೊಣ್ಡ கடல் கொண்ட = ಕಡಲನಷ್ಟು ವಿಸ್ತಾರವಾದ, ಕಣ್ಣೀರ್ கண்ணீர் = ಕಣ್ಣೀರು, ಅರುವಿ அருவி = ಹೊಳೆಯನ್ನು, ಶೆಯ್ಯಾ ನಿಱ್ಕುಮ್ செய்யா நிற்கும் = ಮಾಡುತ್ತಿರುವ, ಕಾರಿಕೈಯೇ காரிகையே = ಸೊಬಗೆ (ಸುಂದರಿಯೇ)

ಕಡಲನ್ನೇ ತುಂಬಿಕೊಂಡು ಮೇಲೆದ್ದ ಕಾರ್ಮುಗಿಲು ಆ ಆಕಾಶವನ್ನೇ ತಪ್ಪಿ, ಹೋಗಿ, ಕಡಲನ್ನೇ ಸೇರಿ ಅಳಿದು ಹೋದದ್ದರಿಂದ, ಇದು (ಈ ಕಾಲವು), ಆಕರ್ಷಕನು (ಸರ್ವೇಶ್ವರನು) ಭೂಮಿಯನ್ನು ಆಕಾಶವನ್ನು (ಕೂಡಿದಲು) ಕಡಲನ್ನು ಉಕ್ಕಿಸಿಕೊಂಡು ಎದ್ದ ಆ ಕಾಲವೇಯೋ? ಮಳೆಗಾಲವೇಯೋ? ಕಡಲನಷ್ಟು ವಿಸ್ತಾರವಾದ ಕಣ್ಣೀರ ಹೊಳೆಯನ್ನು ಮಾಡುತ್ತಿರುವ ಈ ಸೊಬಗು? (18)
(ಈ ಸುಂದರಿಯ ಸೊಬಗು?)

ನಾಯಕನನ್ನಗಲಿದ ನಾಯಕಿಯ ವಿರಹವೇದನೆ ಎಷ್ಟು ಗಾಢವಾದ್ದೆಂದು ಬಲು ಸುಂದರವಾಗಿ ಈ ಪಾಶುರ ವಿವರಿಸುತ್ತದೆ.

ನಾಯಕಿಯ ಕಣ್ಣೀರು ಹೊಳೆಯಾಗಿ ಹರಿದು, ಅದು ಕಡಲನಷ್ಟು ವಿಸ್ತಾರವಾಗಿ ನಿಂತಿದೆ! ಅದೇ ಒಂದು ಸೋಜಿಗವು! ಹೌದೇ? ಎಂಥ ಉತ್ಪ್ರೇಕ್ಷೆ! ಎಷ್ಟು ಗಾಢವಾದ ಸಂಕಟ!

ಸ್ವಾಭಾವಿಕವಾಗಿ, ಸ್ವೈರವಾಗಿ, ನಡೆಯಬೇಕಾದ ಕೆಲಸ ತಪ್ಪಿ
ನಡೆದುದಾದರೆ ಆಗುವುದು ಅನರ್ಥವೇ ಅಲ್ಲವೇ? ಹಾಗಿದೆ ಇಲ್ಲಿನ ವಿಷಯ.

ಕಡಲಿನಿಂದ ನೀರನ್ನು ಸಮೃದ್ಧಿಯಾಗಿ ತುಂಬಿಕೊಂಡು, ಕಡಲನ್ನು ಬಿಟ್ಟು,
ಮೇಲಕ್ಕೆದ್ದು, ಆಕಾಶವನ್ನು ತಲುಪಿ, ಅಲ್ಲಿ, ಮೆಲ್ಲಮೆಲ್ಲನೆ [illegible]
ಸಂಚಯಿಸುತ್ತಾ, ನೆಲದ ಮೇಲೆ ಉದಾರವಾಗಿ, ಮಳೆಯ ರೂಪದಲ್ಲಿ, ನೀರನ್ನು
ಸುರಿಸುವುದು, ಮತ್ತು ಆ ನೀರು ನೆಲವನ್ನು ತೋಯಿಸಿ, ಸುಂದರಗೊಳಿಸಿ, ಹೊಳೆಗಳ
ರೂಪದಲ್ಲಿ ಮತ್ತೆ ಕಡಲನ್ನು ಸೇರುವುದು ಸ್ವಾಭಾವಿಕವಾದ ನಿಸರ್ಗದ ಕಾರ್ಯ.
ಆದರೆ, ಕಡಲಿನಿಂದೆದ್ದ ಆ ಕಾರ್ಮುಗಿಲು ತನ್ನ ಅಪರಿಮಿತವಾದ ಭಾರವನ್ನು
ಸಹಿಸದೆ, ಆಕಾಶವನ್ನು ತಪ್ಪಿ, ಕೆಳಕ್ಕೆ ಕಡಲಿನಲ್ಲೇ ಬಿದ್ದರೆ, ಆಗ ಭೂಭಾಗಕ್ಕೆ
ಸಹಿಸದ, ಬೆಟ್ಟಗಳನ್ನು ಒಂದಾಗಿಸುವಂಥ ಭಯಂಕರವಾದ ಮಳೆಸುರಿಯುವುದಷ್ಟೆ! ಬೆಟ್ಟ
ನಡೆಯಬಹುದಾದದ್ದು ಪ್ರಳಯಕಾಲದಲ್ಲೇ! ಆಗ, ಕಡಲಿನ ನೀರು ಉಕ್ಕಿ ಹರಿಯು
ತ್ತಾ ಆಕಾಶವನ್ನು ಭೂಮಿಯನ್ನು ಒಂದಾಗ ಮಾಡಿಸುತ್ತಾ, ಜಲಮಯವಾಗುವುದು
ಸರ್ವನಾಶವಾಗಿಸುವ ಕಾಲವೇ ಆ ಪ್ರಳಯಕಾಲ!

ತಾನೇ ಕಣ್ಣೀರಿನ ಹೊಳೆಯನ್ನು ಹರಿಸುತ್ತಿರುವ ನಾಯಕಿಗೆ, ತನ್ನ ಹಾಗೆಯೇ
ಎಡೆಬಿಡದಂತೆ ನೀರನ್ನು ಸುರಿಸುತ್ತಿರುವ ನಿಸರ್ಗದ ಕಾಲ ಯಾವುದಾಗಬಹುದು
ಎಂಬ ಶಂಕೆ ಮೂಡಿಬಂದಿದೆ.

"ಇದೇನು ನಿಜವಾದ ಮಳೆಗಾಲವೋ? ಇಲ್ಲವೇ, ಸರ್ವನಾಶವಾ
ಗುವ ಪ್ರಳಯಕಾಲವೋ?" ಎಂದು ಯೋಚಿಸುತ್ತಾಳೆ.

ಹೊರಗೆ, ಎಡೆಬಿಡದಂತೆ, ಸುರಿಯುವ ಮಳೆಗಾಲವೂ ಒಂದು ವಿಧವು!
ಅಗಲಿದ ನಲ್ಲನಿಗಾಗಿ ಎಡೆಬಿಡದಂತೆ ಕಣ್ಣೀರು ಸುರಿಯುವ ಸುಂದರಿಯದು
ಒಂದು ವಿಧವು!

19. காரிகையார் நிறை காப்பவர் யாரென்று, கார்கொண்டின்னே
மாரி கையேறி யறையிடுங் காலத்தும், வாழியரோ
சாரிகைப்புள்ளா ரந்தண்ணந் துழாயிறை கூயருளார்-
சேரி கையேறும், பழியாய் விளைந்ததென் சின்மொழிக்கே.

ಕಾರಿಗೈಯಾರ್ ನಿಱೈ ಕಾಪ್ಪವರ್ ಯಾರೆನ್ಱು, ಕಾರ್ಕೊಣ್ಡಿನ್ನೇ
ಮಾರಿ ಕೈಯೇಱಿ ಯಱೈ ಯಿಡುಙ್ಗಾಲತ್ತುಮ್, ವಾೞಿಯರೋ
ಶಾರಿಗೈಪ್ಪುಳ್ಳಾ ರನ್ದಣ್ಣನ್ದುೞಾಯಿಱೈ ಕೂಯರುಳಾರ್-
ಶೇರಿ ಕೈಯೇಱುಮ್, ಪೞಿಯಾಯ್ ವಿಳೈನ್ದದೆನ್ ಶಿನ್ಮೊೞಿಕ್ಕೇ.

Garani Srinivasan

ಕಾಂಚ್ಯೆಯಾರ್ காரிகையார் = ಸ್ತ್ರೀಯರ, ನಿಚ್ಚೆ நிறை = ಪಾತಿವ್ರತ್ಯ ವನ್ನು, ಕಾಪ್ಪವರ್ காப்பவர் = ರಕ್ಷಿಸುವವರು ಯಾರು, ಎನ್ಱು என்று = ಎಂದು, ಕಾರ್ ಕೊಂಡು கார் கொண்டு = ಕಪ್ಪಾಗಿ, ಇನ್ನೆ இணை = ಜೊತೆ, ಮಾಂ மாரி = ಕಾರ್ಮುಗಿಲು, ಕೈ ವಿಟ್ ಟೈಕ ஏற்றி = ಕೆಳವಿಂದ ಮೇಲಕ್ಕೇರಿ, ಅಜ್ಜೆ ಇರುಮ್ அதிரும் = ಘರ್ಜಿಸುವ, ಕಾಲತ್ತುಮ್ காலத்தும் = ಕಾಲ ದಲ್ಲೂ, ಕಾಂಚ್ಯೆ ಪೃಕ್ಷರ್ ಅಮ காரிகை புணார் அம் = ಸುಂದರವಾದ ಮುನ್ನಡೆಯ ವಿಷ್ಣುವಾದನನ್ನು, ತಣ್ ಅಮ ತುಲಾಯ್ தண் அம் துழாய் = ತಂಪಾದ ಸೊಬಗಿನ ತುಲಸಿಯನ್ನು, ಇಚ್ಚೆ இறை = ಒಡೆಯನಾಗಿ (ಪತಿಯಾಗಿ), ಕೂಂಯ್ கூய் = ಕೂಗಿ, ಅರುಳಾರ್ அருளார் = ಕೃಪೆಮಾಡುವುದಿಲ್ಲ, ಶೇರಿ சேரி = ಊರಿನ, ಕೈ ~~ಪಿಡುಮ~~ ನೈಕೆ ஏறும் = ಬಳಕೆಯಾಗಿ ಹರಡುವ, ಪಳಿ ಆಯ್ பழி ஆய் = ನಿಂದನೆಯಾಗಿ, ವಿಳೈನ್ದದು விளைந்தது = ಬೆಳೆದಿ ರುವುದು, ಎನ್ ನಾಣ್ = ನನ್ನ, ಶಿನ್ ಚಿನ್ = ಚಿಕ್ಕ (ದಣ್ಣ) ಮೆಲ್ಲಿಯಲ್ ಮಾಟ್ಟಿ க்கே = ಮಾತಿಗಾಗಿಯೇ (ಭಾಷೆಗಾಗಿಯೇ, ಕೂಗಿಗೇ), ವಾಳಿಯರೋ வாழி யரோ = ಮಂಗಳವಾಗಲಿ.

ಸ್ತ್ರೀಯ ಪಾತಿವ್ರತ್ಯವನ್ನು ರಕ್ಷಿಸುವವರು ಯಾರು ಎಂದು, ಜೊತೆ ಕಪ್ಪಾಗಿ, ಕಾರ್ಮುಗಿಲು ಕೆಳವಿಂದ ಮೇಲಕ್ಕೇರಿ ಘರ್ಜಿಸುವ ಕಾಲದಲ್ಲೂ, ಸುಂದರವಾದ ಮುನ್ನಡೆಯ ವಿಷ್ಣುವಾದನನು (ತನ್ನ) ತಂಪಾದ ಸೊಬಗಿನ ತುಲಸಿಯನ್ನು ಕೃಪೆ ಮಾಡುವುದಿಲ್ಲ. ಊರಿನ ಬಳಕೆಯಾಗಿ ಹರಡುವ ನಿಂದನೆಯಾಗಿ (ಅಪವಾದ ವಾಗಿ) ಬೆಳೆದಿರುವುದು ನನ್ನ ನಾಣ (ಚಿಕ್ಕ) ಮೆಲ್ಲನೆಯ ಕೂಗಿಗೇ, ಮಂಗಳವಾಗಲಿ (ಜಯವಾಗಲಿ). (19)

ಈ ಪಾಶುರದಲ್ಲಿ, ನಾಯಕಿಯು ಜನಾಪವಾದಕ್ಕೆ ಹೆದರದೆ, ತನ್ನ ಪ್ರಿಯತಮನ ಕೃಪೆಗಾಗಿ ಹಾತೊರೆಯುತ್ತಾ ಕಣ್ಣೀರಿಡುತ್ತಾಳೆ ಎಂದೂ, ಅದು ಅವಳಿಗೆ ತಪ್ಪದೆ ಲಭಿಸುವುದೆಂಬ ನಂಬಿಕೆ ಅವಳಿಗೆ ಪೂರ್ಣವಾಗಿದೆ ಎಂಬುದು ವ್ಯಕ್ತಪಡುತ್ತದೆ.

ಮಳೆಗಾಲದಲ್ಲಿ ಕಾರ್ಮುಗಿಲು ~~ಗಗ~~ನವನ್ನೆಲ್ಲಾ ಸಂಪೂರ್ಣವಾಗಿ ಆವರಿಸುತ್ತದೆ. ಆಗಲೇ ಭಯಂಕರವಾಗಿ ಗುಡುಗುತ್ತದೆ. ಇದು ಸ್ವಾಭಾವಿಕವಾದದ್ದು.

ಕಾರ್ಕಾಲದಲ್ಲಿ ಬಂದು ತನ್ನನ್ನು ಕಲೆತುಕೊಳ್ಳುವೆನೆಂದು ನಂಬಿಸಿ ಅಗಲಿದ ನಾಯಕನನ್ನು ಕೃಪೆಮಾಡೆಂದು ತನ್ನ ಮೊರೆದನಿಯಲ್ಲಿ ನಾಯಕಿ, ಕಾರ್ಕಾಲ ಬಂದಿರುವುದರಿಂದ, ಬೇಡುತ್ತಿದ್ದಾಳೆ.

ಈ ಮೊರೆದನಿಗೂ ಮೇಘ ಘರ್ಜನೆಗೂ ಒಂದು ಬಗೆಯ

Garani Srinivasan

Garani Srinivasan

ಸ್ಪರ್ಧೆಯಿದ್ದಂತೆ ಎಂಬಂತೆ ಸುಂದರವಾದ ವರ್ಣನೆ ಇದೆ.

⊛ ನಾಯಕಿಯನ್ನು ಕುರಿತು ಅವಳ ಊರಿನಲ್ಲಿ, ಬಳಕೆಯಾದಾಗ ಹರಡಿರುವ ಅಪವಾದಕ್ಕೆ ಹೆದರಿಕೊಂಡು ಕಾರ್ಮುಗಿಲು ಗುಡುಗು ತ್ತದೆ. ಅದರ ಗುಡುಗಾಗೆ ಜನ ಹೆದರುವರೇ? ನಿಂದನೆಯ ಮಾತುಗಳನ್ನು ಅವಹೇಳನವನ್ನು, ನಿಲ್ಲಿಸುವರೇ? ಅವರಿಗೇನು ಭಯ?

[illegible]

ನಾಯಕ ಹೇಳುತ್ತಾಳೆ: ಕಾರ್ಕಾಲ ಬಂತು. ಆಕಾಶದಲ್ಲಿ ಕಾರ್ಮುಗಿಲು ದಟ್ಟವಾಗಿ ಹರಡಿಕೊಂಡಿದೆ. ನನ್ನ ಊರಿನ ಜನ ನನ್ನ ಮೇಲೆ ಅಪವಾದವನ್ನು ಹೊರಿಸಿ, ಅದನ್ನು ಹರಡುತ್ತಿದ್ದಾರೆ. ಈ ವಿಷಯ ಮುಗಿಲನ್ನು ಮುಟ್ಟಿರಬೇಕು. ಅದಕ್ಕಾಗಿಯೇ "ಸ್ತ್ರೀಯ ಪಾತಿವ್ರತ್ಯವನ್ನು ರಕ್ಷಿಸುವವರು ಯಾರು? ಅನ್ಯಾಯವಾಗಿ ಈ ಪತಿವ್ರತೆ ಕಠಿಣವಾದ ಅಪವಾದಕ್ಕೆ ಸಿಕ್ಕಿ ನರಳುತ್ತಿದ್ದಾಳಲ್ಲಾ!" ಎಂದು ಪ್ರತ್ಯಕ್ಷ ನಿಜವಾದ ಕರೆಕೆ ಗರುಡ ವಿಷಯವನ್ನು, ದಿವಸ ಕಾರ್ಮುಗಿಲು ಘರ್ಜಿಸುತ್ತಿದೆ. ಸುಂದರವಾದ ಅದರಿಂದ ಬರುವ ಕಾರ್ಮುಗಿಲ ಅತ್ತರವನ್ನು ರಕ್ಷಿಸುವುದಕ್ಕಾಗಿ, ಬೇಗ ಬಂದಿತು ಬರುವ ಬಣ್ಣದ ನನ್ನ ಪ್ರಿಯತಮನು ಬರಲಿಲ್ಲವಲ್ಲ! ಅವನ ಕಂಪಾದ ನೀಲಬಣ್ಣದ ತುಲಸಿಯನ್ನು ನನಗೆ ಕೃಪೆ ಮಾಡಲಿಲ್ಲವಲ್ಲ! ಸ್ತ್ರೀ ನಿಜವಾದ ವೇಲುದನಿ ನನ್ನ ಪ್ರಿಯರಿಂದ ಮಾಡುವ ನನ್ನ ಕೊಂಗದೆ ತಪ್ಪದೆ ಜಯವಾಗುತ್ತದೆ. ನನ್ನ ಪ್ರಿಯನು ನನ್ನ ಕೈ ಬಿಡುವುದಿಲ್ಲ. ಇದು ನನ್ನ ದೃಢ ನಂಬಿಕೆ. ⊛

20. சின்மொழி நோயோ கழிபெருந் தெய்வம்-இது
நோயினை தென்
இன்மொழி கேட்டு மினாந்தைய்வ மன்றிது -
வேலு! நில்நீ
என்மொழி கேண்மினென் னம்மனைமீர்! உலகே
ழுமுண்டான்
சொன்மொழி, மாலையந் தண்ணந் துழாய்கொண்
டு சூடுமினே.

ಶಿನ್ಮೊಳಿ ನೋಯೋ ಕಳಿ ಪೆರುನ್ದೆಯ್ವಮ್ - ಇದು ನೋಯಿನದೆನ್
ಇನ್ಮೊಳಿ ಕೇಟ್ಟು ಮಿಳನ್ದೆಯ್ವ ಮನ್ಱಿದು - ವೇಲ! ನಿಲ್‌ನೀ
ಎನ್ಮೊಳಿ ಕೇಣ್ಮಿನೆನ್ನಮ್ಮನೈಮೀರ್! ಉಲಗೇಳುಮುಣ್ಡಾನ್
ಶೊನ್ಮೊಳಿ, ಮಾಲೈಯನ್ದಣ್ಣನ್ದುಳಾಯ್ ಕೊಣ್ಡು ಶೂಡುಮಿನೇ

ಶಿಲ್ ಮೊಳಿ சில் மொழி = ಇತರರಾಡುವ ಮಾತಿನ, ನೋಯೋ நோ
யோ = ರೋಗವೋ, ಕಳಿ ಪೆರು ದೆಯ್ವಮ್ கழி பெரு தெய்வம் =

ಬಲು ದೊಡ್ಡ ದೈವದ (ವಿಷಯದಲ್ಲಿ ಉಂಟಾದ) ಸಂಶಯವನ್ನೋ, ಇದು ನೋಯ್ ಇತ್ತು ನೋಗಾಯ್ = ಈ ಸಂಶಯವು, ಇನದು ಎನ್ ಇಲ್ಲ ಇನಿ ತ್ತು ಗಾಣಾರು = ಇಂದ್ದಾದ್ದು ಎಂದು, ಇನ್ ಮೇಲ್ ಕೇಳ್ಬ್ಯುವರ್ ಇನ್ ಗಾಮಾಟ್ಟಿ ಕೋಟ್ಟಂ = ಮನೆಯ (ಇಲ್ಲದ) ಮಾತನ್ನು ಕೇಳುವ, ಇಳ ದೆಯ್ವಮ್ ಇನ್ ಗಾತಾಯ್ಯಮ್ = ಚಿಕ್ಕ (ಅಲ್ಪ) ದೈವವು, ಅನ್ಯಿ ಇದು ಅನ್ಯಾರು ಇತ್ತು = ಇದಲ್ಲ, ವೇಲ ಬೇರು = ಕತ್ತುವೇ, ನಿಲ್ ನೀ ಗ್ರಿನ್ಕ್ರೋ = ನೀನು ನಿಲ್ಲು, ~~ಗಾಣ್~~ ಎನ್ ಮೇಲ್ ಗಾಣ್ ಗಾಮಾಟ್ಟಿ = ನನ್ನ ಮಾತನ್ನು, ಕೇಳ್ಮ್ಮೇನ್ ಕೇಣ್ಮಿನ್ = ಕೇಳಿರಿ, ಎನ್ ಅಮ್ಮನ್ನೈಮಾರ್ ಗಾಣ್ ಅಮ್ಮನಿಮಾರ್ = ನನ್ನ ಅಮ್ಮಂದಿರೇ, ಉಲಕ್ಕು ಮೇಲುಮ್ ಉಯ್ಯ ಗ್ಗಾಮ್ = ವಿಶ್ವಲೋಕಗಳನ್ನು, ಉಣ್ಡಾನ್ ಉಣ್ಟಾಣ್ = ಉಂಡವನು, ಕಣ್ ಮೇಲ್ ಗಾಣ್ ಗಾಮಾಟ್ಟಿ = ತೆಳ್ಳ (ಕ್ರೋಧ) ಮಾತು (ಮಾತಿನಿಂದ ಉಂಟಾದ ಸಂಶಯ), ಮಾಟ್ಟು ಗಾಟಿ ಆಮ್ = ಸೊಬಗಿನ ಸಂಜೆಯಲ್ಲಿ, ಕಣ್ ಅಮ ಕ್ಕಣ್ ಆಮ್ = ಸುಂದರವಾದ ಅರಳಕಣ್ಣು ಆದ, ಕುಲುಂಯ್ ತ್ತುಟ್ಟಾಯ್ = ಕುಲಪಯನ್ನು, ಕಣ್ಡು ಗಾಣ್ಡು = ಕಂಡು, ಕಂಡುಮಿನೇ ಕ್ಕುಡು ಮಿಣೇ = (ನನಗೆ) ಮುಡಿಸಿರಿ.

ಇತರರಾಡುವ ಮಾತಿನ ಸಂಶಯವನ್ನೋ, ಬಲು ದೊಡ್ಡ ದೈವದ ವಿಷಯದಲ್ಲಿ ಮನೆಯ ಮಾತ ಉಂಟಾದ ಸಂಶಯವನ್ನೋ? ಈ ಸಂಶಯವು ಇಂದ್ದಾದ್ದು ಎಂದು ಮನೆಯ ಮಾತನ್ನು (ಇಲ್ಲದ ಸಲ್ಲದ ಮಾತನ್ನು) ಕೇಳುವ ಚಿಕ್ಕ (ಅಲ್ಪ) ದೈವವು ಇದಲ್ಲ. ಕತ್ತುವೇ ನೀನು ನಿಲ್ಲು! ಅಮ್ಮಂದಿರೇ, ನನ್ನ ಮಾತನ್ನು ಕೇಳಿರಿ. ವಿಶ್ವಲೋಕಗಳನ್ನು ಉಂಡವನು ತೆಳ್ಳ (ಕ್ರೋಧ) ಮಾತದು (ಮಾತಿನಿಂದಾದ ಸಂಶಯವಿದು), ಸೊಬಗಿನ ಸಂಜೆಯಲ್ಲಿ ಸುಂದರವಾದ ಅರಳಕಣ್ಣು ಆದ ಕುಲಪಯನ್ನು ಕಂಡು (ನನಗೆ) ಮುಡಿಸಿರಿ. (20)

ನಾಯಕಿಯ ಸಂಶಯವನ್ನು ಕಂಡು ಊರಿನ ತಾಯಂದಿರು ಮರುಗಿದರು. ಅವಳ ಸಂಶಯ ತೀರಲೆಂದು ಯತ್ನಿಸಿದರು. ಆಗ ಆಕೆಯ ತಾಯಿಯಂತೆ, ಊರದೇವತೆಯನ್ನು ಕೇಳಿ, ಅದಕ್ಕೆ ತಕ್ಕ ಪರಿಹಾರವನ್ನು ಕಂಡುಕೊಳ್ಳಲು ಯತ್ನಿಸಿದರು. ಅಲ್ಲೊಂದು ವೇಲನ ದೇವಾಲಯ. ಪೂಜಾರಿಯ ಮೈಮೇಲೆ ದೇವತೆ ಬಂದು ಜನ ಕೇಳುವ ಪ್ರಶ್ನೆಗಳಿಗೆ ತಕ್ಕ ಸಮಾಧಾನ ಹೇಳುತ್ತದೆ. ಹಾಗೆಯೇ ಈ ನಾಯಕಿಯನ್ನು ವೇಲನ ಮುಂದೆ ನಿಲ್ಲಿಸಿದರು. ನಾಯಕಿಯ ಸಂಶಯಕ್ಕೆ ಕಾರಣವೇ ಅಲ್ಲಿ ದೊರಕಲಿಲ್ಲ. ಪೂಜಾರಿಯ ಮಾತುಗಳಲ್ಲಿ ಎಷ್ಟು ನಿಜವೋ!

ನಾಯಕಿಯೇ ಈಗ ಸಮಾಧಾನ ಕೊಡುತ್ತಾಳೆ: ತಾಯಂದಿರೇ ಕೇಳಿ. ಇದು ಊರಿನ ಜನಗಳು ಆಡುವ ಇಲ್ಲದ ಸಲ್ಲದ ಮಾತುಗಳಿಗೆ ಸಮಾಧಾನ ಕೊಡುವ ದೈವವೂ ಅಲ್ಲ. ನನ್ನ ಅಂತರಂಗವನ್ನು ಕಂಡುಕೊಳ್ಳುವುದೂ ಅಲ್ಲ. ನಾವು ಇಲ್ಲಿಂದ ಹೊರಟು ಹೋಗೋಣ. ಇದನ್ನೆಲ್ಲ ನಿಲ್ಲಿಸಿಬಿಡಿ. ವಿಶ್ವಲೋಕಗಳನ್ನು ಉಂಡ ನನ್ನ ಪ್ರಿಯತಮನು ನನಗೆ ಹೇಳಿ ಹೋದ ಮಾತಿನಂತೆ,

ಅವನು ನನ್ನ ಬಳಿಗೆ ಬರಲಿಲ್ಲವಲ್ಲ ಎಂಬ ಕೊರಗಿನ ದುಃಖ ಇದು. ಮೊದಲಿನಂತೆ ಅವನು ಬಂದೇ ಬರುತ್ತಾನೆ. ಆದ್ದರಿಂದ ಈ ಸುಂದರವಾದ ಸಂಜೆಯ ವೇಳೆಗೆ ಒಳ್ಳೆಯ ಪರಿಮಳವುಳ್ಳ ತುಲಸಿಯನ್ನು ನನಗೆ ಮುಡಿಸಿ, ನನ್ನನ್ನು ಅಲಂಕರಿಸಿ. ನನ್ನ ಪ್ರಿಯತಮನನ್ನು ಕತ್ತಲೆಯಲ್ಲಿ ಬರಮಾಡಿಕೊಳ್ಳುವುದಕ್ಕೆ ಅದು ಅನುಕೂಲವಾಗುವುದು.

"ಉಲಗೇಲುಂ ಉಣ್ಡಾನ್" - ಪ್ರಳಯ ಕಾಲ ಬಂದಾಗ ಇಡೀ ಬ್ರಹ್ಮಾಂಡವನ್ನು ಸರ್ವೇಶ್ವರನು ಕಬಳಿಸಿ ತನ್ನ ಹೊಟ್ಟೆಯಲ್ಲಿಟ್ಟು ರಕ್ಷಿಸುತ್ತಾನೆ. ಮರುಸೃಷ್ಟಿಯ ಕಾಲದವರೆಗೂ ಸಂರಕ್ಷಿಸುತ್ತಾನೆ. ಅಂಥ ಸರ್ವರಕ್ಷಕ ಸ್ವಾಮಿ.

ಸರ್ವೇಶ್ವರನನ್ನು ಆಶ್ರಯಿಸದವರಿಗೆ ಅನ್ಯದೇವತೆಗಳ ಗೋಜೇಕೆ? ಎಂಬುದೂ ಇಲ್ಲಿ ಸೂಚನೆ ಎನ್ನಬಹುದು.

21. சூட்டு நன்மாலைகள் தூயன ஏந்தி, விண்ணோர்கள் நன்னீர்
ஆட்டி அந்தூபம் தராநிற்கவே அங்கு, ஓர் மாயையினால்
ஈட்டிய வெண்ணெய் தொடுவுண்ணப் போந்திமிலேற்று வன்கூன்
கோட்டிடை யாடினை கூத்து, அடலாயர் தங் கொம்பினுக்கே.

ಸೂಟ್ಟು ನನ್ಮಾಲೈಗಳ್ ತೂಯನವೇಂದಿ, ವಿಣ್ಣೋರ್ಗಳ್ ನನ್ನೀ
ರಾಟ್ಟಿಯಂದೂಪಂ ತರಾನಿಱ್ಕವೇಯಂಗು, ಓರ್ ಮಾಯೈಯಿನಾಲ್
ಈಟ್ಟಿಯ ವೆಣ್ಣೆಯ್ ತೊಡುವುಣ್ಣಪ್ ಪೋಂದಿಮಿಲೇಱ್ಱು ವನ್ ಕೂನ್
ಕೋಟ್ಟಿಡೈ ಯಾಡಿನೈ ಕೂತ್ತು, ಅಡಲಾಯರ್ ತಂಗೊಂಬಿನುಕ್ಕೇ.

ಸೂಟ್ಟು சூட்டு = ಮುಡಿಸುವುದಕ್ಕೆ, ನಲ್ ಮಾಲೈಗಳ್ நல் மாலைகள் = ಉತ್ತಮವಾದ ಹೂವಿನ ಹಾರಗಳನ್ನು, ತೂಯನವು தூயனவு = ಪರಿಶುದ್ಧವಾದವನ್ನು, ಏಂದಿ ஏந்தி = ತೆಗೆದುಕೊಂಡು, ವಿಣ್ಣೋರ್ಗಳ್ விண்ணோர்கள் = ಪರಮಪದವಾಸಿಗಳು, ನಲ್ நல் = ಒಳ್ಳೆಯ (ಪರಿಮಳಪೂರ್ಣವಾದ), ನೀರ್ நீர் = ನೀರನ್ನು, ಆಟ್ಟಿ ஆட்டி = ಮಜ್ಜನಮಾಡಿಸಿ, ಅಮ್ ஆம் = ಸೊಗಸಾದ, ತೂಪಮ್ தூபம் = ಧೂಪವನ್ನು, ತರಾನಿಱ್ಕವೇ தரா நிற்கவே = ಸಮರ್ಪಿಸುತ್ತಿರುವಾಗಲೇ, ಅಂಗು அங்கு = ಅಲ್ಲಿ (ನಂದಗೋಕುಲದಲ್ಲಿ), ಓರ್ ஓர் = ಅದ್ಭುತವಾದ, ಮಾಯೈಯಿನಾಲ್ மாயையினால் = ಮಾಯೆಯಿಂದ, ಈಟ್ಟಿಯ ஈட்டிய = ಕೂಡಿಟ್ಟ, ವೆಣ್ಣೆಯ್ வெண்ணெய் = ಬೆಣ್ಣೆಯನ್ನು, ತೊಡುಪೋನ್ನ

Garani Srinivasan

எடுக்கப் போந்து = ಎತ್ತಿಕೊಳ್ಳುವುದಕ್ಕೆ ಬಂದು, ಇವಾಳ್ இமில் = (ಎತ್ತರ
ವಾದ) ಹೆಗಲುಳ್ಳ, ಮೆಯ್ ஏறு = ಗೂಳಿಗಳ, ವಲ್ ಕೂನ್ ಮರುಪ್ಪು ಕೊಣ್ =
ಬಲವಾದ, ಬಗ್ಗಿದ, ಕೋಡುಗಳ ಕோட்டிடை = ಕೊಂಬುಗಳ ನಡುವೆ,
ಆಡಿನೈ (ಕೂತ್ತು) ஆடினை கூத்து = ಕುಣಿದಾಡಿದೆಯಲ್ಲ, ಅಡಲ್ அடல் =
ಬಲಿಷ್ಠನಾದ, ಆಯರ್ ತಮ್ ஆயர் தம் = ಗೋವಳನ, ಕೊಬ್ಬಿನಂತೆ
கொம்பினுக்கே = ಕಡಳ್ಳಿಯ ಕೂಸಿಗಾಗಿಯೇ.

ಪರಮಪದವಾಸಿಗಳು ~~ಹಕ್ಕಿ~~ ಮುಡಿಸುವುದಕ್ಕೆ ಉತ್ತಮವಾದ ಹೂವಿನ ದಾರಗಳನ್ನು, ಪರಿಶುದ್ಧವಾದವನ್ನು ತೆಗೆದುಕೊಂಡು, ಒಳ್ಳೆಯ (ಪರಿಮಳ ಪೂರ್ಣವಾದ) ನೀರಿನಿಂದ ಮಜ್ಜನ ಮಾಡಿಸಿ, ದೇವನಾದ ಧೂಪವನ್ನು ಸಮರ್ಪಿಸುತ್ತಿರುವಾಗಲೇ, ಅಲ್ಲಿ (ನಂದಗೋಕುಲದಲ್ಲಿ) ಸಾಟಿಯಿಲ್ಲದ ಮಾಯೆಯಿಂದ ಕೂಡಿಟ್ಟ ಬೆಣ್ಣೆಯನ್ನು ಎತ್ತಿಕೊಳ್ಳುವುದಕ್ಕೆ ಬಂದು, (ಎತ್ತರವಾದ) ಹೆಗಲುಳ್ಳ ಗೂಳಿಗಳ ಬಲವಾದ, ಬಗ್ಗಿದ, ಕೊಂಬುಗಳನಡುವೆ, ಬಲಿಷ್ಠಗೋವಳನ ಕಡಳ್ಳಿಯ ಕೂಸಿಗಾಗಿಯೇ, ಕುಣಿದಾಡಿದೆಯಲ್ಲ! (೨೧)

ಭಗವಂತನ ಶ್ರೀಕೃಷ್ಣನ ಎರಡು ಆಶ್ಚರ್ಯಕರವಾದ ವಿಷಯಗಳನ್ನು ಇಲ್ಲಿ ಹೇಳಲಾಗಿದೆ.

ಮೊದಲನೆಯದು ನಂದಗೋಕುಲದಲ್ಲಿ ಶ್ರೀಕೃಷ್ಣನು ಬೆಳೆಯುತ್ತಿದ್ದಾಗ, ಅವನ ಬಾಲಚೇಷ್ಟೆಗಳಲ್ಲಿ ಒಂದು — ಅದು, ಎತ್ತರದ ನೆಲುವಿನ ಮೇಲೆ ಕೂಡಿಟ್ಟ ಬೆಣ್ಣೆಯನ್ನು ಯಾವುದೋ ಮಾಯದಲ್ಲಿ ಯಾರಿಗೂ ತಿಳಿಯದಂತೆ ಬಂದು ತಿಂದದ್ದು. ಮತ್ತೊಂದು, ಅವನು ದೊಡ್ಡವನಾದ ಮೇಲೆ, ಗೊಲ್ಲರ ಕುಲದ ಬಲಿಷ್ಠ ಮುಂದಾಳಾದ ಕುಂಭನೆಂಬವನ ಮಗಳಾದ ನಪ್ಪಿನ್ನೈ ಎಂಬವಳನ್ನು (ನಪ್ಪಿನ್ನೈದೇವಿಯನ್ನು) ಮದುವೆಯಾಗಿ, ಅವಳ ಕೊರಗನ್ನು ತಪ್ಪಿಸಿದ್ದು.

ಇಲ್ಲಿ, ನಾಯಕಿಗೆ, ತನ್ನ ಪ್ರಿಯತಮನಾದ ಭಗವಂತನ ಆಶ್ಚರ್ಯಕರ ಸಾಮರ್ಥ್ಯವೇನೆಂದು ತಿಳಿದಿದೆ. ಅವನೆಂಥ ಸಮರ್ಥ! ಎಂಥ ಮಾಯಾವಿ! ಅದೇ ಚಮತ್ಕಾರವನ್ನು ಬಳಸಿಕೊಂಡು ಅವನು ತನ್ನ ಬಳಿಗೆ ಬರಬಾರದೇ? ತಪ್ಪದೆ ಬಂದೇ ಬರುವನೆಂಬ ನಂಬಿಕೆ ಅವಳಿಗೆ.

(ತನ್ನ ಮನದಲ್ಲಿ ಪ್ರಿಯತಮನನ್ನು ಕುರಿತು) ನಾಯಕಿ ಹೇಳುತ್ತಾಳೆ:

ಸ್ವಾಮೀ! ನಿಮಗೆ ಪರಮಪದದಲ್ಲಿ ಅದ್ಭುತವಾದ ಸೇವೆ ನಡೆಯುತ್ತದೆ. ಅಲ್ಲಿ ವಾಸಿಸುವ ನಿತ್ಯಸೂರಿಗಳು, ನಿಮ್ಮ ಮಜ್ಜನಕ್ಕಾಗಿ ಪರಿಶುದ್ಧವೂ ಪರಿಮಳಪೂರ್ಣವೂ ಆದ ನೀರನ್ನು ಸಿದ್ಧಪಡಿಸುತ್ತಾರೆ. ಮಜ್ಜನವನ್ನು ಸಮರ್ಪಿಸ

ಸೊಗಸಾದ ಧೂಪವನ್ನು ಹಾಕುತ್ತಾರೆ. ಆ ಮೇಲೆ, ಉತ್ಕೃಷ್ಟವಾದ, ಅಪಾರವಾದ ಹೂವಿನ ಹಾರಗಳಿಂದ ಅಲಂಕರಿಸುತ್ತಾರೆ. ಇಂಥ ಅಪರಿಮಿತವಾದ ಸುಖ ಭೋಗಯೋಗಗಳಿದ್ದಾಗಲೂ, ನೀವು ಅದೇ ಕಾಲದಲ್ಲಿಯೇ, ನಂದ ಗೋಕುಲದಲ್ಲಿ ಗೋವಳರ ಮಗನಾಗಿ ಅವತರಿಸಿ, ಕೂಡಿಟ್ಟಿದ್ದ ಬೆಣ್ಣೆಯನ್ನು ಕದ್ದುದಕ್ಕೆ ಹೊಡೆದರಲ್ಲ! ಗೋವಳರಲ್ಲಿ ಬಲಿಷ್ಠನಾದವನು ಕಟ್ಟಿ ಬೈದಾಗ ಚಿಕ್ಕದಾದ ಮಣ್ಣು ಕೊಬ್ಬಿದ ಗಾಳಿಗಳನ್ನು ನೀವೇ ಬ್ಬರೇ ಎದುರಿಸಿ, ಮಳೆಗೆ, ಕಟ್ಟಿ ಹಾಕಿದಿರಲ್ಲ! ನಿಮ್ಮ ಬರುವಿಕೆಯೇ ನಮ್ಮ ಕಾಡಿನಲ್ಲಿ ಕೋರಮವ ನನ್ನ ಬಳಿಗೆ ಅದೇ ಮಾಯೆಯಿಂದ ಬರಬಾರದೇ? ನನ್ನನ್ನು ರಕ್ಷಿಸಬಾರದೇ?

22. கொம்பார் தழைகை சிறுநாணெறிவிலம்,
வேட்டைகொண்டாட்டு
அம்பார் களிறு வினவுவதையர், புள்ளூருங்
கள்வர்
தம்பாரகத் தென்று மாடாதன தம்மிற் கூடாதன
வம்பார் விளச்சொல்லவோ, எம்மை வைத்
திவ் வான்புனத்தே?

ಕೊಂಬಾರ್ ತಳೈಕ್ಕೈ ಶಿರುನಾಣೆರಿವಿಲಮ್, ವೇಟ್ಟೈ ಕೊಣ್ಡಾಟ್ಟು
ಅಂಬಾರ್ ಕಳಿರು ವಿನವುವದೈಯರ್, ಪುಳ್ಳೂರುಙ್ಗಳ್ವರ್
ತಂಬಾರಗತ್ತೆನ್ರು ಮಾಡಾದನ ತಮ್ಮಿಲ್ ಕೂಡಾದನ
ವಂಬಾರ್ ವಿನಾಚ್ಚೊಲ್ಲವೋ, ಎಮ್ಮೈ ವೈತ್ತಿವ್ವಾನ್ ಪುನತ್ತೇ?

ಕೊಂಬು கொம்பு = ಕೊಂಬೆಯು, ಆರ್ ஆர் = ತುಂಬಿ ಇರುವ, ತಳೈ தழை = ಚಿಗುರೆಲೆಗಳಿರುವ, ಕೈ கை = ಕೈಗಳು, ಶಿರು சிறு = ಸಣ್ಣದಾದ, ನಾಣ್ நாண் = ಬಿಲ್ಲಹಗ್ಗ (ನಾಣಿನ), ಎರಿವು எறிவு = ಸದ್ದು, ಇಲಮ್ இலம் = (ಕೇಳಲಿಲ್ಲ ನಾವು), ವೇಟ್ಟೈ வேட்டை = ಬೇಟೆಯೆಂಬುದು, ಕೊಣ್ಡಾಟ್ಟು கொண்டாட்டு = ಒಂದು ಸಂತೋಷದ ಕೆಲಸ, ಅಮ್ಬು ಆರ್ அம்பு ஆர் = ಅಂಬು ನೆಟ್ಟಿರುವ (ತುಂಬಿರುವ), ಕಳಿರು களிறு = ಆನೆ, ಎಂದು, ವಿನವುವದು வினவுது = ಪ್ರಶ್ನಿಸುವವರು, ಐಯರ್ ஐயர் = ಸ್ವಾಮಿಗಳು, ಪುಳ್ ಊರುಮ್ புள் ஊரும் = ಪಕ್ಷಿವಾಹನನಾದ, ಕಳ್ವರ್ கள்வர் தம் ಮಾಯಾವಿ (ಮೋಸಗಾರ), ಪಾರ್ பார் = ಭೂಮಿಯ, ಅಗತ್ತು அகத்து = ಮನೆಯಲ್ಲಿ, ಎನ್ರುಮ್ என்றும் = ಯಾವಾಗಲೂ (ಎಂದಿಗೂ), ಆಡಾದನ ஆடாதன = ಆಡದೆ ಇರುವುದನ್ನು, ತಮ್ಮಿಲ್ தம்மில் = ತಮ್ಮಿಂದ, (ತಮ್ಮಲ್ಲಿ)

Garani Srinivasan

ಕುಂದಾದನ ಈ ಟಾಕ್ರ್ = ಆಗಬಾರದ್ದನ್ನು (ಕೆಟ್ಟದ್ದನ್ನು, ಅಸಂಬದ್ಧವಾದದ್ದನ್ನು), ವಮ್ಬು ಆರ್ ಜುಮ್ಲಾ ಆರ್ = ಕೆಟ್ಟದ್ದು ತುಂಬಿರುವ (ಹೊಲಸು ತುಂಬಿರುವ), ಜವಾಬ್ = ಉತ್ತರವನ್ನು, ಕೊಲ್ಲಪ್ಪೋಲ್ ... = ಹೇಳುವುದಕ್ಕಾಗಿಯೋ, ಎವಮ್ಮಾತ್ರ ನಾಂ ಮಾ = ನಮ್ಮನ್ನು, ಪೈಕರಿದು ... = ಇಟ್ಟಿರುವುದು, ಇ-ದಾನ್ ಪ್ರಸ್ತೋ ... = ಈ ದೊಡ್ಡ ಹೊಲದಲ್ಲಿ?

ಕೈಯಲ್ಲಿ ದಿನಾ ರೊಟ್ಟಿಗಳು ತುಂಬಿರುವ ಮರದ ತಟ್ಟೆ. ಬಿಲ್ಲು ಹೂಡಿಯು ದನ್ನಾ ಬದ್ದಾನದ ಇಲ್ಲ. ಬೇಟೆಯೆಂಬುದು ಬರಿ ವಿನೋದಕ್ಕಾಗಿಯೇ. ಅಂಬು ನೆಟ್ಟಿರುವ ಆನೆ (ಇಲ್ಲಿ ಬಂತೆ)? ಎಂದು ಪ್ರಶ್ನಿಸುವ ಪ್ರಾಯಸ್ಥನು (ವಯಸ್ಸಾದ), ವೇಷಧಾರನಾದ ಮಾಯಾವಿಯು (ಮೋಸಗಾರನ) ಮಾತು—ಭಾವಿಯು ಮೇಲೆ ಲೌ ಮನೆಯಲ್ಲಿ ಎಂದಿಗಾ (ಯಾವ ಕಾಲಕ್ಕೂ) ಆತನ ಇರುವುದನ್ನು, ಕಾವ್ಯ ಮಾಡಬಾರದ್ದನ್ನು. ಕೆಟ್ಟದ್ದು ತುಂಬಿರುವ (ಅರ್ಥಸಹಿತವಾದ) ಪ್ರಶ್ನೆಗಳಿಗೆ ಉತ್ತರವನ್ನು ಕೊಡುವುದಕ್ಕಾಗಿಯೋ ನಮ್ಮನ್ನು ಈ ದೊಡ್ಡ ಹೊಲದಲ್ಲಿ (22) ಇಟ್ಟಿರುವುದು?

ಈ ಪಾಠದ ಸಂಕೇತ ಸ್ಪಷ್ಟವಾದದ್ದು. ನಾಯಕಿ ತಾನು ತಿರುವೊಂಟಗಿಂತಲು ಕಷ್ಟದ ಹೊಲದಲ್ಲಿ ಕಾವಲು ಕೆಲಸ ಮಾಡುವುದಾಗಿ ಹಿಂದೆಯೇ ಹೇಳಿದ್ದಾಳೆ. ಈಗ, ಆ ಹೊಲ ಕಾಯುವ ಕೆಲಸದಲ್ಲಿ ತಾನಿದ್ದಾಗಲೇಯೂ, ಯಾವುದೋ ವೇಷಧಾರನಾಗಿ ತನ್ನ ಪ್ರಿಯತಮನು ಅಲ್ಲಿಗೆ ಬಂದಾಗಲೇಯೂ, ನೆಪ ಹಾಕಿಕೊಂಡು ಅವನು ನಾಯಕಿಯೊಡನೆ ಮಾತನಾಡಲು ಮೊದಲು ಮಾಡಿದಂತೆಯೂ, ಅದಕ್ಕೆ ಅವಳು ಏನುತ್ತರ ಕೊಡುವಳು? ಎಂಬ ಒಂದು ಸುಂದರ ಚಿತ್ರವಿದೆ.

ನಾಯಕಿ ಮನದಾಳ ಆಶಿಸುವುದು ತನ್ನ ನಾಯಕನನ್ನು ಸಂಧಿಸಬೇಕೆಂದು, ಅವನೊಡನೆ ಏಕಾಂತವಾಗಿ ಮಾತನಾಡಬೇಕೆಂದು. ಆದರೂ ತನ್ನ ಸ್ತ್ರೀಸಹಜವಾದ ಸಂಕೋಚವನ್ನು ಬಿಟ್ಟುಕೊಡುವುದೇ? ಹೊರನೋಟಕ್ಕೆ ಪರಪುರುಷನಾದ ಅವನೊಡನೆ ಒಂಟಿಯಾಗಿ ಮಾತನಾಡುವುದೇ? ಲೋಕದ ಜನವೇನೆಂದಾರು?

ನಾಯಕಿ ಹೇಳುತ್ತಾಳೆ: ನಮ್ಮ ಮುಂದೆ ನಿಂತಿರುವವನು ವಿಚಿತ್ರ ಪುರುಷ. ಅವನು ಕೇಳುವ ಪ್ರಶ್ನೆಯಾದರೋ 'ಅಂಬಿನಿಂದ ಗಾಯಗೊಂಡ ಆನೆಯನ್ನು ಕಂಡಿರಾ?' ಎಂಬುದು. ಅವನ ಕೈಯಲ್ಲಿರುವುದು ಬಿಲ್ಲಲ್ಲ, ದಿನಾ ರೊಟ್ಟಿಗಳು ತುಂಬಿರುವ ಮರದ ತಟ್ಟೆ ಮಾತ್ರ. ಬೇಟೆಯ ವಿನೋದಕ್ಕಾಗಿ ಅವನು ಬಂದಿರುವನೆಂದರೂ ನಿಜ, ಅವನ ಬಿಲ್ಲಿನ ನಾಣಿನ ನಿದ್ದು

Garani Srinivasan

ನಮಗೆ ಸ್ವಲ್ಪವಾದರೂ ಕೇಳಿಸಬೇಡವೇ? ಅವನ ವಾಹನವೋ ಗರುಡಪಕ್ಷಿ. ಆದ್ದರಿಂ
ದ ಅವನು ಮೌನವಾಗಿಯೇ ಇರಬೇಕು. ಭಗವಂತನ ಮೇಲೆ ಯಾವ ಮಹಿಯ
ಲ್ಲೂ ಯಾವ ಕಾಲಕ್ಕೂ ಆದರ ಅಸಂಬದ್ಧವಾದ ಮಾತುಗಳನ್ನಾಡುತ್ತಾನೆ? ಮಹಾರ
ಕ್ಷನಾದವನು ಮಾಡಬಾರದ ಕೆಲಸವನ್ನು ಮಾಡುತ್ತಾನಲ್ಲ! ಇಂಥ ಅಸಂಬದ್ಧ
ಅರ್ಥಗರ್ಭಿತವೂ ಆದ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕಾಗಿಯೋ ನೀವು
ಈ ದೊಡ್ಡ ಹೊಲಕ್ಕೆ ಬಂದಿರುವುದು?

ಯಾರು ಯಾರು ಯಾವ ಯಾವ ಕೆಲಸ ಮಾಡಬೇಕೋ ಅದನ್ನು ಮಾಡುವುದೂ,
ಅದಕ್ಕೆ ತಕ್ಕಂತೆ ಮಾತನಾಡುವುದೂ ಸಹಜವಾದದ್ದು. ಮಾತಿನಲ್ಲಾದರೂ, ನಡತೆಯ
ಲ್ಲಾದರೂ ತಪ್ಪಿ ನಡೆದರೆ, ಅದು ಆಕ್ಷೇಪಾರ್ಹವೇ! ಹೊಲತಿಯ ತರುಣಿ
ಯನ್ನು ಅವಿವೇಕಿಯುವಕನು ಬಂದು ಮಾತನಾಡಿಸುವುದೇ? ಇದು ನಿಂದೆಯೋ?

23. புனமோ? புனத்தயலே வழிபோகு மருவினையேன்
மனமோ?, மகளிர் நுங்காவல் சொல்லீர், புண்டரீகத்தங் கேழ்
வனமோரினைய கண்ணான் வானாட மருந்தெய்வத்
தினமோரினையீர்களாய் - இவையோநும் மியல்புகளே?

ಪುನಮೋ? ಪುನತ್ತಯಲೇ ವಳಿಪೋಗು ಮರುವಿನೈಯೇನ್
ಮನಮೋ?, ಮಗಳಿರ್ ನುಙ್ಗಾವಲ್ ಶೊಲ್ಲೀರ್, ಪುಣ್ಡರೀಕತ್ತಙ್ಗೇೞ್
ವನಮೋರಿನೈಯ ಕಣ್ಣಾನ್ ವಾನಾಡ ಮರುನ್ದೆಯ್ವ
ತ್ತಿನಮೋರಿನೈಯೀರ್‌ಗಳಾಯ್ - ಇವ್ವೈಯೋ ನುಮ್ಮಿಯಲ್ಪುಗಳೇ?

ಪುನಮೋ புனமோ = ಹೊಲವೋ, ಪುನತ್ತು ಅಯಲೇ புனத்து அய
லே = ಹೊಲದ ಪಕ್ಕದಲ್ಲಿ, ವಳಿ ಪೋಗುಮ வழி போகும் = ದಾರಿಯಲ್ಲಿ
ಹೋಗುವ, ಅರುವಿನೈಯೇನ್ அருவினையேன் = ಅವರಾಗಿ ಪ್ರಶ್ನಿಸು
ವವನ (ಮಹಾಪಾಪಿಯಾದವನ), ಮನಮೋ மனமோ = ಮನಸ್ಸೋ, ಮಗಳಿ
ರ್ மகளிர் = ಹೆಣ್ಣುಮಕ್ಕಳೇ, (ಹೆಂಗಳೇ), ನುಮ ಕಾವಲ್ நும் காவல்
= ನಿಮ್ಮ ಕಾವಲು, ಶೊಲ್ಲೀರ್ சொல்லீர் = ಹೇಳಿರಿ, ಪುಣ್ಡರೀಕತ್ತು புண்ட
ரீகத்து = ತಾವರೆಯ, ಅಮ್ அம் = ಸುಂದರ, ಕೇೞ್ கேழ் = ಪ್ರಕಾಶ,
ವನಮ್ ಓರ್ வனம் ஓர் = ನಾಟಿಯಿಲ್ಲದ ವನಕ್ಕೆ, ಅನ್ನೈಯ அனைய = ಸಮನಾದ
(ಹೋಲಿಕೆ ಬಳ್ಳದ), ಕಣ್ಣಾನ್ கண்ணான் = ಕಣ್ಣುಗಳುಳ್ಳವನ, ವಾನ್ ನಾಡು
வான் நாடு = ಪರಮಪದದಲ್ಲಿ ಅಮರುವ அமரும் = ವಾಸಿಸುವ, ದೆಯ್
ವತ್ತು ಇನಮ್ தெய்வத்து இனம் = ನಿತ್ಯಸೂರಿಗಳ ಕೂಟಕ್ಕೆ, ಓರ್
ಅನ್ನೈಯೀರ್ ಗಳ್ ಆಯ್ ஓர் அனையீர்கள் ஆய் = ಒಂದು ರೀತಿಯಲ್ಲಿ
ಹೋಲುವವರಾಗಿ, ಇವ್ವೈಯೋ இவையோ = ಇವೇಯೋ, ನುಮ ನும

Garaji Srinivasan

ದಿವ್ಯ, ಇಯಲ್‌ವರಲೈ (இயல்புகளோ = ಸ್ವಭಾವಗಳೇ.

ಹೆಂಗಳೇ, ನಿಮ್ಮ ಕಾವಲು ಹೊಲವೋ, ಹೊಲದ ಮಗ್ಗುಲಲ್ಲಿ, ದಾರಿಯಲ್ಲಿ ಹೋಗುವ, ಅಪರಾಧಿಯಾಗಿ ಪ್ರಶ್ನಿಸುವವನ (ಮರ್ದಾಪಿಯಾದವನ) ಮನಸ್ಸೋ? ಹೇಳಿರಿ. ಕೆಂದಾವರೆಯು ನಾಟಿಯಲ್ಲದ ವನದ ಹೊಳೆಯುವ ಹೊಳಪಿಗೆ ಸಮನಾದ ಕಣ್ಣು ಗಳುಳ್ಳವನ ವಿರಮವಿವರದಲ್ಲಿ ವಾಸಿಸುವ ನಿರ್ಮಾಣಗಳ ಕೂಟಕ್ಕೆ ಬಂದು ರಾತ್ರಿಯಲ್ಲಿ ಹೋಗುವವರಾದ ನಿಮ್ಮ ಸ್ವಭಾವಗಳು ಇವೇಯೋ? (23)

ಇಂದಿನ ಪಾಠದಲ್ಲಿ ಅವಂಬಿಕನ ಅಸಂಬದ್ಧವಾದ ಪ್ರಶ್ನೆಗಳ ವಿಷಯದಲ್ಲಿ ನಾಯಕಿ ಆಕ್ಷೇಪಿಸಿ ನುಡಿದಳು. ಅದಕ್ಕೆ ಮರುತ್ತರವಾಗಿ ನಾಯಕನ ಸ್ವಾರಸ್ಯವಾದ ಪ್ರಶ್ನೆಯನ್ನು ಇಲ್ಲಿ ಕಾಣಬಹುದು.

ಆ ಹೆಂಗಸರು (ಮುಖ್ಯವಾಗಿ ನಾಯಕಿ) ಹೊಲ ಕಾಯುವುದಕ್ಕಾಗಿಯೇ ಇದ್ದಾರೆ, ನಿಜ. ಯುವಕನೇ ಅವಂಬಿಕನು ಬಂದು ಅವರನ್ನು (ಅವಳನ್ನು) ಪ್ರಶ್ನಿಸಿದರೆ, ಅವರೇನು ಮಾಡಬೇಕು? ಬಜಾರಿಗಳಂತೆ ಅವನನ್ನು ಬೈದು ಕಳುಹಿಸುವುದೇ? ಗೌರವಪೂರ್ಣ ದಾಕ್ಷಿಣ್ಯದಿಂದ, ಅವನನ್ನು ನೋಡಿ, ಸುಮ್ಮನೆ ಇರುವುದೇ?

ಅವಂಬಿಕನು ಹೇಳುತ್ತಾನೆ: ಹೆಂಗಳೇ, ನೀವು ಮಾಡುತ್ತಿರುವ ಕೆಲಸ ಯಾವುದು? ಹೊಲ ಕಾಯುವುದೇ? ಅಥವಾ, ಹೊಲದ ಮಗ್ಗುಲ ದಾರಿಯಲ್ಲಿ ಹೋಗುವವರ ಮನಸ್ಸನ್ನು ಸೆಳೆಯುವ ಕೆಲಸವೇ? ಕೆಂದಾವರೆಯು ವನದಲ್ಲಿ, ಅವುಗಳ ದಿವ್ಯವಾದ ಸೊಬಗನ್ನು ಹೊಳಪನ್ನು ಬಿಚ್ಚಾಗಿ ತೋರುತ್ತಿರುವ ಕಣ್ಣುಗಳುಳ್ಳ ಪರಮೇಶ್ವರನ ವಿರಮವಿವರದಲ್ಲಿ ವಾಸಿಸುವ ನಿರ್ಮಾಣಗಳ ಕೂಟಕ್ಕೆ ನೀವು ಬಂದು ರಾತ್ರಿಯಲ್ಲಿ ಹೋಗುತ್ತಿದ್ದೀರಿ. ಆದರೆ, ನಿಮ್ಮ ಸ್ವಭಾವ ಅದಕ್ಕೆ ತಕ್ಕದ್ದಾಗಿಲ್ಲವಲ್ಲ!

ನಾಯಕಿಯು ಮುಗುಳ್ನಕ್ಕಳು. ಅವಂಬಿಕನನ್ನು ಸುಮ್ಮನೆ ನೋಡಿದಳು. (ಅವನೊಡನೆ ಮಾತನಾಡಲಿಲ್ಲ.) ಅವಳ ನೋಟಕ್ಕೆ ಅವನು ಮನಸೋತ. ಹೇಗಾದರೂ ಅವಳೊಡನೆ ಮಾತನಾಡ ಬಯಸಿದ. ಒಂದು ವಿಚಿತ್ರ ಪ್ರಶ್ನೆಯನ್ನು ಹಾಕಿದ: "ಆನೆ ಕಂಡಿರಾ?" ಎಂದ. ಅದಕ್ಕೆ ತಕ್ಕ ಉತ್ತರ ಸಿಕ್ಕಲಿಲ್ಲ. ಮತ್ತೆ ಅವಳನ್ನು ಕುರಿತು ಅರ್ಥಪೂರ್ಣವಾದ ಆಕ್ಷೇಪಣೆಯನ್ನೆತ್ತಿದ. ಇದರಲ್ಲಿ ಅವನ ಮನದ ಇಂಗಿತ ಅಡಗಿತ್ತು. ಅವಳಲ್ಲಿ ಅವನಿಗೆ ಪ್ರೇಮವಿದೆ ಎಂಬುದು.

'ವಾನಾಡ ಮರುನ್ದಿಯಪ್ ವತ್ತಿನ ಪೋಲರುಮ್ಪೈಯಿರುಳ್ ದಲ್ಲಾಯ್' — ವಿರಮವಿವರಾಸಿಗಳಿಗೆ ಒಂದೇ ಯೋಚನೆ, ಒಂದೇ ಕೆಲಸ. ಅದು ಭಗವಚ್ಚಿಂತನೆ, ಭಗವತ್ಸ್ತೋತ್ರ ಕೀರ್ತನ. ~~ಈ ನಾಯಕಿ~~ ಆ ವಿಷಯದಲ್ಲಿ ಅವರನ್ನು ಹೋಲುತ್ತಾಳೆ

ತನ್ನ ನಾಯಕನಾದ ಭಗವಂತನಲ್ಲಿ ವಿಶ್ವಾಸವಾದ ಭಕ್ತಿ. ಆದರೆ, ಅವಳು ಭಾಮಿನಿ ಹೇಳಿದವಳು. ಬಹಳ ಆಕರ್ಷಕವಾದ ಕಣ್ಣು, ಮೈಲುಳ್ಳವಳು. ಅದು ಅವಳ ತಪ್ಪೇ? ಅವಳು ಅವನನ್ನು ನೋಡಿದ್ದೇ ತಪ್ಪೇ? ಅವಳ ಸ್ವಭಾವನ್ನು ಕುರಿತು ಆಕ್ಷೇಪಿಸುವುದೇ? [ಕಣ್ಣುಗಳ ಸ್ವಭಾವವೇ ಅದು - ಚಪಲತೆ!

24\. இயல்வாயின வஞ்ச நோய் கொண்டுலாவும், ஓரோ குடங்கைக்
கயல் பாய்வன பெருநீர்க் கண்கள் தம்மொடும், குன்றமொன்றால்
புயல் வாயின நிரை காத்த புள்ளூர்தி கள்ளூரும் துழாய்க்
கோயல் வாய் மலர் மேல், மனத்தொடென்னாங்கொ லெங்கோல்வளைக்கே (வளைக்கே)

ಇಯಲ್ವಾಯಿನ ವಂಜ ನೋಯ್ ಕೊಂಡುಲಾವುಮ್, ಓರೋ ಕುಡಂಗೈ
ಕ್ಕಯಲ್ ಪಾಯ್ವನ ಪೆರುನೀರ್ಕ್ಕಣ್‌ಗಳ್ ತಮ್ಮೊಡುಮ್, ಕುನ್ರುಮೊನ್ರಾಲ್
ಪುಯಲ್ವಾಯಿನ ನಿರೈಕಾತ್ತ ಪುಳ್ಳೂರ್ತಿ ಕಳ್ಳೂರುಮ್ ತುೞಾಯ್
ಕ್ಕೊಯಲ್ ವಾಯ್ ಮಲರ್ ಮೇಲ್, ಮನತ್ತೊಡೆನ್ನಾಂಗೊ ಲೆಂಗೋಲ್ವಳೈಕ್ಕೇ

ಇಯಲ್ವು ಆಯಿನ (இயல்வு ஆயின) = ಸ್ವಭಾವಸಿದ್ಧವಾದ, ವಂಜವು வஞ்சம் = ವಂಚಿಸಿ ವಂದ, ನೋಯ್ நோய் = ಸಂಕಟವನ್ನು, ಕೊಂಡು கொண்டு = ಹೊಂದಿ, ಉಲಾವುಮ್ உலாவும் = ಚಂಚಲವಾಗಿರುವ, ಓರೋ ஓரோ = ಒಂದೊಂದು, ಕುಡಂಗೈ குடங்கை = ಅಂಗೈಯಷ್ಟು ಅಗಲವಾದ, ಕಯಲ್ கயல் = ಕಯಲ್ ಮೀನುಗಳಂತೆ, ಪಾಯ್ವನ பாய்வன = ಚಲಿಸುತ್ತಿರುವ, ಪೆರುನೀರ್ பெருநீர் = ನೀರು ತುಂಬಿರುವ, ಕಣ್‌ಗಳ್ ತಮ್ಮೊಡುಮ್ கண்கள் தம்மொடும் = ಕಣ್ಣುಗಳೊಡನೆ, ಕುನ್ರುಮ್ குன்றம் = ಬೆಟ್ಟ, ಒನ್ರಾಲ್ ஒன்றால் = ಒಂದರಿಂದ, ಪುಯಲ್ ವಾಯ್ புயல் வாய் = ಬಿರುಮಳೆಯ, ಇನಮ್ ನಿರೈ இனம் நிரை = ದನಗಳ ಹಿಂಡುಗಳನ್ನು, ಕಾತ್ತ காத்த = ಕಾಪಾಡಿದ, ಪುಳ್ಳೂರ್ತಿ புள் ஊர்தி = ಪಕ್ಷಿವಾಹನನ, ಕಳ್ಳೂರುಮ್ கள் ஊறும் = ಜೇನನ್ನು ಸ್ರವಿಸುವ, ತುೞಾಯ್ துழாய் = ತುಳಸಿಯ, ಕೊಯಲ್ ವಾಯ್ கோயல் வாய் = ಚಿಗುರು ಕೊಳ್ಳುತ್ತ, ಮಲರ್ ಮೇಲ್ மலர் மேல் = ಹೂವಿನ ಮೇಲೆ, ಮನತ್ತೊಡು மனத்தொடு = ಮನಸ್ಸುಳ್ಳವಳಾ, ಎನ್ ಆಮ್ ಕೊಲ್ என் ஆம் கொல் = ಏನಾಗುವುದೋ, ಎನ್ ಎಣ் = ನನ್ನ, ವಳೈಕ್ಕೇ வளைக்கே = ಕೈಬಳೆಗಳಿಗೇ?

ಸ್ವಭಾವತಃ ವಂಚಿಸುವಂಥ, (ವಿರಹದ) ಸಂಕಟವನ್ನು ಹೊಂದಿ ಚಂಚಲವಾಗಿರುವ, ಒಂದೊಂದು ಅಂಗೈಯಷ್ಟು ಅಗಲವಾದ ಕಯಲ್ ಮೀನುಗಳಂತೆ

(48)

ಜಲ ಸುರಿಸುತ್ತಿರುವ, ನೀರು ತುಂಬಿರುವ ಕಣ್ಣುಗಳೊಡನೆ, ಬೆಟ್ಟದಿಂದಂಬ ಬಿರುಸು ಮಳೆಯಲ್ಲಿ ದನಗಳ ಕಂದಗಳನ್ನು ರಕ್ಷಿಸಿದ ವಿಷ್ಣಾದನನ, ಜೇನನ್ನು ಪ್ರವಹಿಸುವ, ಪಡೆದುಕೊಳ್ಳುವುದಕ್ಕೆ ತುಲಸಿಯ ಹೂವಿನ ಮೇಲೆ ಮನಸ್ಸುಳ್ಳವಳಾ, ನನ್ನ ಕೈಬಳೆಗೇ ಏನಾಗುವುದೋ ಕಾಣೆನಲ್ಲ! (24)

ಭಗವಂತನಲ್ಲಿ ತುಂಬ ವ್ಯಾಮೋಹದಿಂದ ಅವನ ಪ್ರೀತಿಯನ್ನು ತಾನು ಗಳಿಸಿಕೊಳ್ಳಬೇಕೆಂಬ ಅತ್ಯಾತುರದಿಂದ, ತಾನು ಮಾಡಿದ ಕೆಲಸ ಸರಿಯೋ ತಪ್ಪೋ ಎಂದು ಸಂಶಯಗೊಂಡು ನಾಯಕಿಯು ಮಾತನಾಡುತ್ತಾಳೆ.

ನಾಯಕಿಯ ಕಣ್ಣುಗಳು ಅಂಗ್ಲಿಯಷ್ಟು ದೊಡ್ಡವು. ಕಯಲ್ ಮೀನುಗಳಂತೆ ಅವು ಚಂಚಲ. ಇತರರನ್ನು ಮಂಚಿಸುವಂಥವು. ಇವು ಸ್ತ್ರೀಸಹಜವಾದವು. ಆದರೆ, ಅವುಗಳಲ್ಲಿ ನೀರು ತುಂಬಿದೆ. ವಿಷ್ಣುವಾದನನಾದ ತನ್ನ ಪ್ರಿಯತಮನು ಧರಿಸಿರುವ ಜೇನು ಸುರಿಸುವ/ಹೂ ತುಂಬಿದ ತುಲಸಿಯನ್ನು ಪಡೆದುಕೊಳ್ಳುವುದಕ್ಕಾಗಿ ಅವಳಿಗೆ ಬಹಳ ಆಸೆಯಾಗಿದೆ. ಇಂದ್ರ ಮಬ್ಬು ತುಂಬಿದ ಕಣ್ಣುಗಳಲ್ಲಿ ಅವಳು ಆ ದಾರಕ್ಕೆ ಕೈ ಚಾಚಿದ್ದಾಳೆ.

ನಾಯಕಿ ತನ್ನಲ್ಲಿಯೇ ಹೇಳಿಕೊಳ್ಳುತ್ತಾಳೆ: ನಾನು ಮಾಡುತ್ತಿರುವ ಕೆಲಸ ತಪ್ಪೇನೋ? ಭಗವಂತನ ತುಲಸಿಯ ದಾರ ನನಗೆ ಏಕೆ ಬೇಕು ಇಲ್ಲವೋ? ಈ ಮಡದಾಳೆ ನನ್ನನ್ನು ಇನ್ನೂ ಹೆಚ್ಚಿನ ಸಂಕಟಕ್ಕೆ ಗುರಿಮಾಡಬಹುದಲ್ಲವೇ? ಅದಕ್ಕೆ ಆಸೆಪಟ್ಟು ನನ್ನ ಕೈಬಳೆಗಳೇ ಕಳಚಿ ಹೋದರೋ?"

ಅತಿಯಾಗಿ ಬಯಸುವ ವಸ್ತು ದೊರೆಯದೆ ಹೋದರೆ, ಅದರಿಂದ ದುಃಖ ಹೆಚ್ಚುವುದು ಸಹಜವೇ!

25. எங்கோல் வளை முதலாக் கண்ணன் மண்ணும் விண்ணும் மளிக்கும்,
செங்கோல் வளைவு விளைவிக்குமால், திறல் சேரமரர்
தங்கோனுடைய தங்கோன் உம்பரெல்லாயவர்க்குந் தங்கோன்
நங்கோனுக்கருள் துழாய், என் செய்யாதினி நாணுக்கே?

ಎಙ್ಗೋಲ್ ವಳೈ ಮುದಲಾಕ್ಕಣ್ಣನ್ ಮಣ್ಣುಮ್ ವಿಣ್ಣುಮ್ ಮಳಿಕ್ಕುಮ್,
ಶೆಙ್ಗೋಲ್ ವಳೈವು ವಿಳೈವಿಕ್ಕುಮಾಲ್, ತಿರಲ್ ಶೇರಮರರ್
ತಙ್ಗೋನುಡೈಯ ತಙ್ಗೋನ್ ಉಮ್ಬರೆಲ್ಲಾಯವರ್ಕ್ಕುನ್ ತಙ್ಗೋನ್
ನಙ್ಗೋನುಕ್ಕರುಳ್ ತುೞಾಯ್, ಎನ್ ಶೆಯ್ಯಾದಿನಿ ನಾಣುಕ್ಕೇ?

ಎನ್ ஏண் = ನನ್ನ, ಕೋಲ್ கோல் = ಚೆಲುವಾದ, ವಳೈ வளை = ಕೈಬಳೆ

(49)

ಮುದಲ್ ಆ ಮುಕ್ಕಾಲ್ ಆ = ಮೊದಲಾಗಿ, ಕಣ್ಣಾನ ಕಣ್ಣಾಣ್ = ಆಕರ್ಷಕನಾದ ಸರ್ವೇಶ್ವರನು, ಮಣ್ಣುಮ್ ಮಣ್ಣಾಣ್ಣುಮ್ = ಭೂಲೋಕವನ್ನು, ವಿಣ್ಣುಮ್ ವಿಣ್ಣಾಣ್ಣುಮ್ = ಪರಮಪದವನ್ನು (ಮೇಲಣ ಲೋಕಗಳನ್ನು), ಅಳಿಕ್ಕುಮ್ ಅಳಿಕ್ಕುಮ್ = ರಕ್ಷಿಸುವ, ಶೆಙ್ಕೋಲ್ ವಾಙ್ಗುಕೋಲ್ = ಕಣ್ಣುಳ್ಳಯು, ವಳ್ಳಲ್ ವಿಣಾ ಲ್ಲ = ಮುಕ್ತಿಕೊಂಡು (ಆವರಣವು) ಪಲ್ಲವಿತ್ತುಮಲ್ ವಿಣಾ ವಿಕ್ಕುಮಾಲ = ಫಲಕಾರಿಯಾಗುವುದರಿಂದ, ಶಿವಾಲ್ ಶೇರ್ ತಿರುಸ್ ಶೇರ್ = ಬಲಿಷ್ಠರಾದ, ಅಮರರ್ ಕಮ್ ಅಮರರ್ಕ್ಕುಮ್ = ಅಮರರ (ದೇವತೆಗಳ), ಕೋಲನುಕ್ಕೆಯು ಕೋಣ್ಣಾಟ ಕಮ್ ಕೋಲನ್ ಕ್ಕುಮ್ ಕೋಣ್ = ಮತ್ತು ನಮ್ಮೆಲ್ಲರ ಅಧಿಪತಿಯು = ಅಧಿಪತಿಯ, ಕಮ್ ಕೋಲನ್ ಕ್ಕುಮ್ ಕೋಣ್ = ಉಂಬರ್ ಯೂ (ಅಧಿಪತಿಯಾದ), ಉಮ್ಬರ್ ಎಲ್ಲಾವರ್ಕ್ಕುಮ್ ಕಮ್ ಕೋಲನ್ ಉಂಬರ್ ಯೂ = ಎಲ್ಲಾ ನಿತ್ಯಸೂರಿಗಳಿಗಾ ಒಡೆಯನೂ, ನಾಙ್ಗಳ್ ವಾರ್ ಕ್ಕುಮ್ ಕ್ಕುಮ್ ಕೋಣ್ = ಎಲ್ಲಾ ನಿತ್ಯಸೂರಿಗಳಿಗಾ ಒಡೆಯನೂ, ನಮಕ್ಕು ಕೋಲನ್ ಕ್ಕುಮ್ ಕೋಣ್ = ನಮ್ಮ ಒಡೆಯನೂ ಆಗಿರುವ, ಶುಲಾಯ್ ಆಗಿರುವ ಸರ್ವೇಶ್ವರನು, ಉದಕ್ಕುಮ್ ಉಕ್ಕ್ಕುಮ್ = ಆಶಿಸುವ, ಶುಲಾಯ್ ತುಳಾಯ್ = ತುಳಸಿಯು, ಎನ್ ಶೆಯ್ಯಾದು ನಾಣ್ ವಾಸಯ್ ಯಾಙ್ಗು = ಏನು ಮಾಡಲಾರದು, ಇನಿ ಇಣ್ಣಿ = ಇನ್ನು, ನಾನಿಲತ್ತೇ ನಾಣ್ಣಿಲ ಕ್ಕೆ = ಈ ಲೋಕದಲ್ಲಿ (ಭೂಲೋಕದಲ್ಲಿ)?

ನನ್ನ ಸುಂದರವಾದ ಕೈಬಳೆಗಳು ಮೊದಲಾಗಿ ಭೂಲೋಕವನ್ನು ರಕ್ಷಿಸುವ ಆಕರ್ಷಕನಾದ ಮೇಲಣ ಲೋಕಗಳನ್ನು (ಪರಮಪದವನ್ನು) ರಕ್ಷಿಸುವ ಆಕರ್ಷಕನಾದ ಸರ್ವೇಶ್ವರನ ಕಣ್ಣುಗಳು ಆವರಣವು ಫಲಕಾರಿಯಾಗುವುದರಿಂದ, ದೇವತೆಗಳ ಅಧಿಪತಿಯು (ದೇವೇಂದ್ರನ ಅಧಿಪತಿಯು) ಅಧಿಪತಿಯೂ, ನಿತ್ಯಸೂರಿಗಳ ಒಡೆಯನೂ, ನಮ್ಮ ಒಡೆಯನೂ ಆಗಿರುವ ಸರ್ವೇಶ್ವರನು ಆಶಿಸುವ ತುಳಸಿಯು ಇನ್ನು ಈ ಲೋಕದಲ್ಲಿ (ಭೂಲೋಕದಲ್ಲಿ) ಏನನ್ನು ಮಾಡಲಾರದು? (25)

ಹಿಂದಿನ ಪಾಶುರದಲ್ಲಿ, ತಾನು ಸರ್ವೇಶ್ವರನು ಧರಿಸಿರುವ ಪರಿಮಳಪೂರ್ಣವಾದ ತುಳಸಿಯು ದಾರಕ್ಕೆ ಕೈಚಾಚಿದ್ದು ತಪ್ಪಾಗಿ, ಅದರ ಫಲವಾಗಿ ತನ್ನ ಕೈಬಳೆಗಳು ಏನಾಗುವುವೋ, ಎಂದು ನಾಯಕಿ ಸಂಶಯಗೊಂಡಳಷ್ಟೆ. ತನ್ನ ಈ ಸಂಶಯಕ್ಕೆ ತಾನೇ ಈ ಪಾಶುರದಲ್ಲಿ ಸಮಾಧಾನವನ್ನು ಕಂಡುಕೊಂಡಿದ್ದಾಳೆ.

ನಾಯಕಿ ಹೇಳುತ್ತಾಳೆ: ನನ್ನ ಪ್ರಿಯತಮನಾದ ಸರ್ವಾಕರ್ಷಕನ ಸರ್ವ-ರಕ್ಷಕತ್ವವೆಂಬ ಕಣ್ಣುಗಳು ಎಲ್ಲೆಲ್ಲಿಯೂ ವ್ಯಾಪಿಸಿದೆ. ಅದು ಪರಮಪದದಲ್ಲಿ ವಾಸಿಸುವ ನಿತ್ಯಸೂರಿಗಳಿಗೆ ಮಾತ್ರವಲ್ಲ. ಮೇಲಣ ಲೋಕಗಳಲ್ಲಿ ವಾಸಿಸುವ ದೇವತೆಗಳಿಗಾ ಅವರ ಒಡೆಯನಾದ ಬ್ರಹ್ಮನಿಗಾ ಮಾತ್ರವಲ್ಲ. ಇಡೀ ಬ್ರಹ್ಮಾಂಡದಲ್ಲಿರುವ ಸಕಲ ಚರಾಚರ ವಸ್ತುಗಳ ಮೇಲೆಲ್ಲಾ ಸಮನಾಗಿ ಆವರಿಸಿದೆ. ಆದ್ದರಿಂದ, ನಮ್ಮೆಲ್ಲರ ಒಡೆಯನಾಗಿರುವ ಸರ್ವೇಶ್ವರನು

Garani Srinivasan

ಕಟ್ಟಳೆಯು ನನ್ನ ಕೈಬಳೆಗಳ ಮೇಲೂ ಇದೆ. ಅದು ನನ್ನ ಕೈಬಳೆಗಳನ್ನು ಖಂಡಿತ-ವಾಗಿಯೂ ರಕ್ಷಿಸುತ್ತದೆ. ಅತ್ಯಂತ ಪ್ರಭಾವಶಾಲಿಯಾದ (ಸರ್ವೇಶ್ವರನು) ನನ್ನ ಪ್ರಿಯತಮನು ತೋಳಿಂದ ಧರಿಸಿರುವ ಶಂಖವೂ ಬದ ತನ್ನ ಪ್ರಭಾವವನ್ನು ಕಾಲಾಂತರದಲ್ಲಿ ತಪ್ಪದೆ ಬೀರುತ್ತದೆ. ಅದು ನನ್ನಂತೆ ಎಲ್ಲರನ್ನೂ ವ್ಯಾಮೋಹಗೊಳಿಸುವುದು ಖಂಡಿತ!

26. நானிலம் வாய்க்கொண்டு நன்னீரறமென்று
கோதுகொண்ட,
வேனிலஞ் செல்வன் சுவைத்துமிழ் பாலை, கடந்த
பொன்னே!
கானிலந் தோய்ந்து விண்ணோர் தொழுங் கண்ணன்
வெஃகாவுதம்பூந்
தேனிளஞ்சோலை யப்பாலது, எப்பாலைக்குஞ்
சேமத்ததே.

ನಾನಿಲಮ್ ವಾಯ್ ಕೊಣ್ಡು ನನ್ನೀರರುಮೆನ್ರು ಕೋದುಕೊಣ್ಡ,
ವೇನಿಲಂಜೆಲ್ವನ್ ಶುವೈತ್ತುಮಿೞ್ ಪಾಲೈ, ಕಡನ್ದ ಪೊನ್ನೇ!
ಕಾನಿಲನ್ದೋಯ್ನ್ದು ವಿಣ್ಣೋರ್ ತೊೞುಂ ಕಣ್ಣನ್ ವೆಃಕಾವುದಮ್ಪೂ
ನ್ದೇನಿಳಂಜೋಲೈ ಯಪ್ಪಾಲದು, ಎಪ್ಪಾಲೈಕ್ಕುಂ ಶೇಮತ್ತದೇ.

ನಾನಿಲಮ್ நானிலம் = ನಾಲ್ಕು ಬಗೆಯ ನೆಲಗಳನ್ನು, ವಾಯ್ ಕೊಣ್ಡು வாய் கொண்டு = ಬಳಸಿಕೊಂಡು, ನನ್ನೀರ್ நன்னீர் = ನೀರುತುಂಬಿದ ಪ್ರದೇಶವನ್ನು (ಕೆಳಭಾಗ ಪ್ರದೇಶವನ್ನು), ಅರು அறு = ಜೀರ್ಣಿಸಿಕೊಂಡಂತೆ, ಮೆನ್ರು மென்று = ಮೆದ್ದು, ಕೋದುಕೊಣ್ಡ கோதுகொண்ட = ಸಾರವಿಲ್ಲದಂತೆ ಮಾಡುವ, ವೇನಿಲ್ வேனில் = ಉಷ್ಣವನ್ನು, ಅಮ್ அம் = ತನ್ನ ಕೆಲಬಾಗ ಉಳ್ಳ, ಶೆಲ್ವನ್ செல்வன் = ಸುಂದರನು (ಸೂರ್ಯನು), ಶುವೈತ್ತು சுவைத்து = ರುಚಿನೋಡಿ, ಉಮಿೞ್ உமிழ் = ಉಗುಳಿದ, ಪಾಲೈ பாலை = ಸುಡುಗಾಡನ್ನು, ಕಡನ್ದ கடந்த = ದಾಟಿಬಂದ, ಪೊನ್ನೇ பொன்னே = ಚಿನ್ನದಂಥವಳೇ, ಕಾಲ್ கால் = ಕಾಲುಗಳು, ನಿಲಮ್ நிலம் = ನೆಲವನ್ನು, ತೋಯ್ನ್ದು தோய்ந்து = ಸ್ಪರ್ಶಿಸಿ, ವಿಣ್ಣೋರ್ விண்ணோர் = ದೇವತೆಗಳು, ತೊೞುಮ್ தொழும் = ಪೂಜಿಸುವ (ಎರಗುವ), ಕಣ್ಣನ್ கண்ணன் = ಆಕರ್ಷಕನ, ವೆಃಕಾ வெஃகா = ತಿರುವೆಃಕಾ ಕ್ಷೇತ್ರದ, ಉದು உது = ಆಚೆನ, ಅಮ್ அம் = ಸುಂದರವಾದ, ಪೂ பூ = ಹೂಗಳನ್ನು, ತೇನ್ தேன் = ಜೇನನ್ನು ಉಳ್ಳ, ಇಳ இள = ಎಳೆಯ, ಶೋಲೈ சோலை = ತೋಟದ, ಅಪ್ಪಾಲದು அப்பாலது = ಆಚೆಯದಾಗಿ, ಎಪ್ಪಾಲೈಕ್ಕುಮ್ எப்பாலைக்கும் =

ಎಲ್ಲಾ ಸಂಕಟಗಳಿಗೂ, ಶೇಮಮುತ್ತದು ಚೇಮಕ್ಕರತ್ತು = ಕ್ಷೇಮಕರವಾದದ್ದು.

ನಾಲ್ಕು ಬಗೆಯ ನೆಲಗಳನ್ನು ಬಳಸಿಕೊಂಡು, ಕೊಳಚೆ ಪ್ರದೇಶವನ್ನು ಜೀರ್ಣಿಸಿ ಹೋಗುವಂತೆ ಮೆದ್ದು, ನೀರವಿಲ್ಲದಂತೆ ಮಾಡುವ, ಉಷ್ಣವನ್ನೇ ತನ್ನ ನೇಬಗಾ ಮಾಡಿಕೊಂಡಿರುವ ಸೂರ್ಯನು ರುಚಿನೋಡಿ ತ್ಯಜಿಸಿದ ಸುಡುಗಾಡನ್ನು (ನೆಲದವೇಲಟ್ಟು) (ಮರಳುಗಾಡನ್ನು) ದಾಟಿಬಂದ ಚಿನ್ನವೇ, ಕಾಲುಗಳನ್ನು ನೆಲವನ್ನು ಸ್ಪರ್ಶಿಸದ ದೇವತೆಗಳೂ ಬಂದು ಪೂಜಿಸುವ ತಿರುವೇಂಕಟ ಕ್ಷೇತ್ರದ ಆಚೆ ಇರುವ ಸುಂದರವಾದ ಹೂಗಳನ್ನು ಜೇನನ್ನು ಉಳ್ಳ ಎಳೆಯ ಕೋಂಪಿನ ಆಚಿನದಾ, ಎಲ್ಲಾ ಸಂಕಟಗಳಿಗೂ ಕ್ಷೇಮ (26) ಕರವಾದದ್ದು.

"ನಾನಿಲಮ" — ನಾಲ್ಕು ಬಗೆಯ ನೆಲಗಳು: ಕಾಡು, ಕಾಡಿನ ಮಗ್ಗಲು, ಮೇಡು ಮೇಡಿನ ಮಗ್ಗಲು (ಬೆಟ್ಟ, ಬೆಟ್ಟದ ತಪ್ಪಲು) — ಈ ನಾಲ್ಕು ಬಗೆಯ ಫಲವತ್ತಾದ ನೆಲಗಳು. ಇವುಗಳಲ್ಲದೆ, ಬಯಲುನೆಲ, ಕೊಳಚೆನೆಲ, ಸುಡುಗಾಡು, ಮರಳು-ಗಾಡು ಇವುಗಳೂ ಇವೆ. ಸೂರ್ಯನು ಎಲ್ಲಾ ನೆಲಗಳ ಮೇಲೂ ತನ್ನ ಪ್ರಖರವಾದ ಕಿರಣಗಳನ್ನು ಪ್ರಸರಿಸುತ್ತಾನೆ. ಫಲವತ್ತಾದ ನೆಲವನ್ನು ಹುಲುಸು ಮಾಡುತ್ತಾನೆ. ಕೊಳಚೆನೆಲವನ್ನು ಕೊಳಚೆಯಿಲ್ಲದಂತೆ ಮಾಡುತ್ತಾನೆ. ಸುಡುಗಾಡು, ಮರಳುಗಾಡುಗಳಲ್ಲಿ ನೀರಂಶವನ್ನು ಇಂಗಿಸುತ್ತಾನೆ. ಸೂರ್ಯನ ವಿವಿಧ ಕಾರ್ಯಗಳು.

"ಕಾನಿಲಮ ತೋಯನ್ದು" — ದೇವತೆಗಳು ಸಾಮಾನ್ಯವಾಗಿ ಮನುಷ್ಯರು ನಡೆಯುವ ನೆಲದ ಮೇಲೆ ಕಾಲನ್ನಿಡುವುದಿಲ್ಲ ಎಂಬುದು ವಾಡಿಕೆಯ ಮಾತು. ಆದರೆ, ಅವರು ತಿರುವೇಂಕಟ ಕ್ಷೇತ್ರಕ್ಕೆ (ಮತ್ತು ತಿರುಮಲೈ, ಮೊದಲಾದ ಇನ್ನು ಕೆಲವು ಕ್ಷೇತ್ರಗಳಿಗೆ) ದೇವತೆಗಳು ತಪ್ಪದೆ ಬಂದು ಅರ್ಚಾವತಾರಿಯಾದ ಭಗವಂತನನ್ನು ಸಂದರ್ಶಿಸಿ, ಅವನ ತಿರುವಡಿಗಳಿಗೆರಗಿ, ಹೋಗುತ್ತಾರೆ. ಆಗ ಅವರು ನೆಲದ ಮೇಲೆ ಕಾಲನ್ನಿಡಲೇಬೇಕಷ್ಟೆ. ಇದು ಆ ಕ್ಷೇತ್ರದ ವೈಶಿಷ್ಟ್ಯ — ಎಂದರೆ, ದೇವತೆಗಳಿಗೆ ತಮ್ಮ ಲೋಕದಷ್ಟೇ ಪವಿತ್ರ.

ತನ್ನ ಪ್ರಿಯತಮನಾದ ಭಗವಂತನನ್ನು ಹುಡುಕುತ್ತಾ ಹೊರಟ ಈ ನಾಯಕಿಗೆ ಜನ ತಿಳಿವಳಿಕೆ ಕೊಡುತ್ತಾರೆ:

ಚಿನ್ನವೇ (ಚಿನ್ನದಂಥವಳೇ) ನೀನು ಎಲ್ಲಾ ಬಗೆಯ ನೆಲಗಳನ್ನು ದಾಟಿ ಬಂದಿರುವೆ. ಇನ್ನು ಸ್ವಲ್ಪ ದೂರದಲ್ಲಿಯೇ ತಿರುವೇಂಕಟ ಕ್ಷೇತ್ರವಿದೆ. ಅದರ ಮಗ್ಗುಲಲ್ಲಿ ಸುಂದರವಾದ ಎಳೆಯ ಕೋಂಪಿದೆ. ಅದು ಹೂ ಜೇನುಗಳಿಂದ ತುಂಬಿ ಬಹಳ ಆಕರ್ಷಕವಾಗಿದೆ. ಅದರ ಆಚೆಯಲ್ಲಿಯೇ ಇರುವ ಪ್ರದೇಶ ಎಲ್ಲಾ ಸಂಕಟಗಳನ್ನು ನಿವಾರಿಸಿ, ಸುಖ ಶಾಂತಿಗಳನ್ನು ತರುತ್ತದೆ. ನೀನು ಅಲ್ಲಿಗೆ ಹೋಗು.

27. சேமஞ் செங்கோனருளே – செறுவாரு நட்பாகுவரென்று
ஏமம் பெற வையஞ் சொல்லும் மெய்யே – பண்டெல்லாம் அறைகூய்
யாமங்கடோ றெரிவீசு நங்கண்ணா ணாந்துழாய்த்
தாமம் புனைய – அவ்வாடை யீதோ வந்து தண்ணென்றதே.

ಶೇಮಞ್ ಶೆಙ್ಗೋನರುಳೇ – ಶೆಱುವಾರು ನಟ್ಪಾಗುವರೆನ್ಱು
ಏಮಮ್ ಪೆಱ ವೈಯಞ್ ಶೊಲ್ಲುಮ್ ಮೆಯ್ಯೇ – ಪಣ್ಡೆಲ್ಲಾಮ್ ಅಱೈಕೂಯ್
ಯಾಮಙ್ಗಡೋ ಱೆರಿವೀಶು ನಙ್ಗಣ್ಣಾ ಣಾನ್ದುೞಾಯ್
ತ್ತಾಮಮ್ ಪುನೈಯ – ಅವ್ವಾಡೈ ಯೀದೋ ವನ್ದು ತಣ್ಣೆನ್ಱದೇ.

ಶೇಮಮ್ சேமம் = ಕ್ಷೇಮಕರವಾದದ್ದು, ಶೆಮ್ ಕೋನ್ செம் கோன் = ಒಳ್ಳೆಯ (ದಯಾಳುವಾದ) ಸರ್ವೇಶ್ವರನ, ಅರುಳೇ அருளே = ಕೃಪೆಯೇ, ಶೆಱುವಾರುಮ್ செறுவாரும் = ಶತ್ರುಗಳು (ವಿರೋಧಿಗಳು), ನಟ್ಪು நட்பு = ಒಳ್ಳೆಯವರು (ಅನುಕೂಲರು), ಆಗುವರ್ ಎನ್ಱು ஆகுவர் என்று = ಆಗುತ್ತಾರೆಂಬ, ಏಮಮ್ ஏமம் = ಸಂತೋಷವನ್ನು, ಪೆಱ பெற = ಪಡೆಯುವುದು, ವೈಯಮ್ வையம் = ಲೋಕವು, ಶೊಲ್ಲುಮ್ சொல்லும் = ಹೇಳುವ, ಮೆಯ್ಯೇ மெய்யே = ಸತ್ಯವೇ, ಪಣ್ಡು பண்டு = ಹಿಂದೆ, ಎಲ್ಲಾಮ್ எல்லாம் = ಎಲ್ಲಾ, ಅಱೈ ಕೂಯ್ அறை கூய் = ಸ್ಪರ್ಧಿಸುವ, ಯಾಮಙ್ಗಳ್ யாமங்கள் = ಝಾವಗಳು, ತೋಱು தோறு = ಉದ್ದಕ್ಕೂ, ಎರಿ ವೀಶುಮ್ எரி வீசும் = ಬೆಂಕಿಯನ್ನು ಬೀಸುವ, ನಮ್ ಕಣ್ಣನ್ நம் கண்ணன் = ನಮ್ಮ ಸರ್ವೇಶ್ವರನ, ಕಣ್ ಅಮ್ ತುೞಾಯ್ கண் அம் துழாய் = ಸೊಬಗಿನ ತಂಪಾದ ತುಲಸಿಯ, ತಾಮಮ್ தாமம் = ಹಾರವನ್ನು, ಪುನೈಯ புனைய = ಧರಿಸಲು, ಅವ್ವಾಡೈ அவ்வாடை = ಆ ಮಂದಮಾರುತವು, ಈದೋ ஈதோ = ಈಗಲೇ, ವನ್ದು வந்து = ಬಂದು, ತಣ್ಣೆನ್ಱದೇ தண்ணென்றதே = ತಣ್ಣಗಿರುವುದಲ್ಲ!

ಒಳ್ಳೆಯ (ದಯಾಳುವಾದ) ಸರ್ವೇಶ್ವರನ ಕೃಪೆಯೇ ಕ್ಷೇಮಕರವಾದದ್ದು. (ಅದರಿಂದ) ವಿರೋಧಿಗಳೂ ಅನುಕೂಲರಾಗುತ್ತಾರೆಂಬ ಲೋಕದ ಹೇಳುವುದು ನಿಜವೇ. ಹಿಂದೆಲ್ಲಾ ಸ್ಪರ್ಧಿಸುತ್ತಿದ್ದ ಝಾವಗಳು, ಉದ್ದಕ್ಕೂ ಬೆಂಕಿಯನ್ನು ಬೀಸುವ ತಂಗಾಳಿ, ನಮ್ಮ ಸರ್ವೇಶ್ವರನ ಸೊಬಗಿನ ತಂಪಾದ ತುಲಸಿಯನ್ನು ಸ್ಪರ್ಶಿಸಿದ್ದರಿಂದ (ಧರಿಸಿದ್ದರಿಂದ), ಈಗಲೇ ಬಂದು ತಣ್ಣಗಿರುವುದಲ್ಲ!

ನಾಯಕಿ ಹೇಳುತ್ತಾಳೆ: ಸರ್ವೇಶ್ವರನು ಬಳ್ಳಿಯವನು, ದಯಾಪೂರ್ಣನು. ಅವನ ಕೃಪೆಯನ್ನು ಪಡೆದುಕೊಂಡುದಾದರೆ, ಎಲ್ಲವೂ ಸುಖಮಯವಾಗುತ್ತದೆ. ಹಗಲುಗಳು ನಿಂಬರಾಗುತ್ತಾರೆ. ವಿರಹಿಣಿಯರಿಗಳು ಅನುಕೂಲರಾಗುತ್ತಾರೆ. ಲೋಕದ ಜನ (ತಿಳಿದವರು) ಹೇಳುವ ಈ ಮಾತು ಸತ್ಯವಾದದ್ದು. ಅದು ನನ್ನ ಅನುಭವಕ್ಕೂ ಬಂದಿದೆ. ಒಂದೆಲ್ಲಾ ರಾತ್ರಿಯು ಒಂದೊಂದು ಯುಗವಷ್ಟು ಒಂದರ ಹಿಂದೊಂದು ಸ್ಪರ್ಧಿಸುತ್ತಿತ್ತು. ನನ್ನನ್ನು ಹಿಂಸಿಸುತ್ತಿತ್ತು. ಆ ತಂಗಾಳಿಯು ನನಗೆ ಸುಡುವ ಗಾಳಿಯಾಗಿ ಬೀಸುತ್ತಿತ್ತು. ~~ಈಗ~~ ನಾನು ಭಗವತ್ಕೃಪೆಗೆ (ನನ್ನ ಪ್ರಿಯತಮನ ಪ್ರೇಮಕ್ಕೆ) ಪಾತ್ರಳಾಗಿರುವುದರಿಂದಲೂ, ~~ಆ ತಂಗಾಳಿ~~ ಪ್ರಿಯತಮನ ಸೊಬಗಿನ ತಂಪಾದ ತುಳಸಿಯ ಹಾರವನ್ನು ನಾನು ಧರಿಸಿರುವುದರಿಂದಲೂ, ಮತ್ತು, ಆ ತಂಗಾಳಿ ಭಗವಂತನು ಧರಿಸಿದ ತುಳಸಿಯ ಹಾರವನ್ನು ಸ್ಪರ್ಶಿಸಿ ಬಂದಿರುವುದರಿಂದಲೂ, ರಾತ್ರಿಯ ಯುಗಗಳು, ತಂಗಾಳಿಯೂ ನನಗೆ ಅನುಕೂಲಗಳು. ತಂಗಾಳಿಯು ನನಗೆ ಹಿತಕರವಾಗಿ, ಅದರ ಸುಖ ಸ್ಪರ್ಶವನ್ನು ನಾನು ಅನುಭವಿಸುತ್ತಿದ್ದೇನೆ.

28. தண்ணாந் துழாய் வளை கொள்வது யாமிழப்போம் —
நடுவே
வண்ணாந் துழாவி யோர்வாடை யுலாவும் — வள்
வாயலகால்
புண்ணாந் துழாமே பொருநீர்த் திருவரங்கா!
அருளாய்
எண்ணாந் துழாவுமிடத்து — உளவோ பண்டு
மின்னன்னவே?

ತಣ್ಣನ್ತುೞಾಯ್ ವಳೈ ಕೊಳ್ವದು ಯಾಮಿೞಪ್ಪೋಮ್ — ನಡುವೇ
ವಣ್ಣನ್ತುೞಾವಿ ಯೋರ್ ವಾಡೈ ಯುಲಾವುಮ್ — ವಳ್ ವಾಯಲಗಾಲ್
ಪುಣ್ಣನ್ತುೞಾಮೇ ಪೊರುನೀರ್ ತ್ತಿರುವರಙ್ಗಾ! ಅರುಳಾಯ್
ಎಣ್ಣನ್ತುೞಾವುಮಿಡತ್ತು — ಉಳವೋ ಪಣ್ಡು ಮಿನ್ನನ್ನವೇ?

ತಣ್ ಅಮ್ ತುೞಾಯ್ தண் அம் துழாய் = ತಂಪಾದ ಸುಂದರವಾದ ತುಳಸಿಯು, ವಳೈ ಕೊಳ್ವದು வளை கொள்வது = ನನ್ನ ಬಳೆಗಳನ್ನು ಕೊಳ್ಳೆಹೊಡೆಯುವುದು, ಯಾಮ್ யாம் = ನಾವು (ನಾನು), ಇೞಪ್ಪೋಮ್ இழப்போம் = ದುಃಖಿಸುತ್ತೇವೆ (ದುಃಖಿಸುತ್ತೇನೆ), ನಡುವೇ நடுவே = (ಅದಲ್ಲದೆ) ಈ ನಡುವಲ್ಲಿ, ವಣ್ಣಮ್ வண்ணம் = ನನ್ನ ಮೈಬಣ್ಣವನ್ನು, ತುೞಾವಿ

துழாவி = ನೇವರಿಸಿಕೊಂಡು, ಈರ ವಾಡೈ ஈர வாடை = ನಾಚಿಯಿಲ್ಲದ (ಬಂದು) ತಂಗಾಳಿಯು, ಉಲಾವುಮ್ உலாவும் = ಸಂಚರಿಸುತ್ತಿದೆ, ವಳ್ ವಣ್ = ಕ್ರೂರವಾದ (ಕಠೋರವಾದ), ವಾಯ್ ಅಲಕಾಲ್ வாய்அல கால் = ಬಾಯ ಅಲಗಿನಿಂದ, ಪುಣ್ புண் = (ನನ್ನ) ಹುಣ್ಣನ್ನು, ಅವರ್ ತುೞಾ ಮೇಲ அம் துழாமே = ಹೆಚ್ಚಾಗಿ ಸವರಿದಂತೆ, ಪೊರುನೀರ್ பொருநீர் = ಅಲೆಗಳಿಂದ ತುಂಬಿದ ನೀರಿನ, ತಿರು ಅರಙ್ಗಾ திரு அரங் கா = ಶ್ರೀರಂಗನಾಥನೇ, ಅರುಳಾಯ್ அருளாய் = ಕೃಪೆದೋರು, ಎನ್ನೆಞ್ಜಮ್ என்னெஞ்சம் = ಮನಸ್ಸು, ತುೞಾವುಮ್ துழாவும் = ಅಲೆದಾಡುತ್ತಿರುವ (ಎಡವಿ ಕಡವುತ್ತಿರುವ), ಇಡಕ್ಕು இடக்கு = ನಡುವಲ್ಲಿ, ಪಣ್ಡುಮ್ பண்டும் = ಹಿಂದೆಯೂ (ಇದ್ದ), ಇನ್ನಣ್ಣ இன்னணம் = (ಇದ್ದ) ಈ ಬಗೆಯುವು, ಉಳ್ಳತೇ உளதே = (ಈಗಲೂ) ಉಂಟೇ?

ತಂಪಾದ ಸುಂದರವಾದ ತುಲಸಿಯು ನನ್ನ ಬಳೆಗಳನ್ನು ಅಪಹರಿಸುವುದಕ್ಕೆ ನಾನು ದುಃಖಿಸುತ್ತೇನೆ. ಅದಲ್ಲದೆ, ನನ್ನ ಮೈಬಣ್ಣವನ್ನು ನೇವರಿಸಿಕೊಂಡು (ನಾಚಿಯಿಲ್ಲದ) ಬಂದು ತಂಗಾಳಿ ಸಂಚರಿಸುತ್ತಿದೆ (ನನ್ನ ಸುತ್ತಮುತ್ತ ಅಲೆದಾಡುತ್ತಿದೆ). ಅದರ ಕಠೋರವಾದ ಬಾಯ ಅಲಗಿನಿಂದ ನನ್ನ ಹುಣ್ಣನ್ನು ಹೆಚ್ಚಾಗಿ ಸವರಿದಂತೆ (ಹೆಚ್ಚು ಮಾಡಿದಂತೆ), ಅಲೆಗಳಿಂದ ತುಂಬಿದ ನೀರಿನ ಶ್ರೀರಂಗನಾಥನೇ ಕೃಪೆದೋರು. ಮನಸ್ಸು ಎಡವಿ ಕಡವಿ ಕಷ್ಟಪಡುತ್ತಿರುವಾಗ ಈ ಬಗೆಯು (ದುಃಖವು). ಈಗಲೂ ಇರಬಹುದೇ? (28) (ಇರುವುದುಂಟೇ?)

ಹಿಂದಿನ ಪಾಶುರದಲ್ಲಿ ತಂಗಾಳಿ, ನಾಯಕಿಗೆ ಒಂದು ಬಗೆಯ ಭಯವನ್ನು ತಂದು ಕೊಟ್ಟಿತ್ತು. ಅದಕ್ಕೆ ಕಾರಣ, ತನ್ನ ಪ್ರಿಯತಮನಾದ ಭಗವಂತನು ಧರಿಸಿದ್ದ ತಂಪಾದ ಸುಂದರವಾದ ತುಲಸಿಯ ಹಾರವನ್ನು ಆ ತಂಗಾಳಿ ಸ್ಪರ್ಶಿಸಿ ಬಂದು ಅವಳ ಮೇಲೆ ಬೀಸಿದ್ದು. ಆದರೆ, ಅದು ಘೋರವಾದ ಹಿತವಾಯಿತಷ್ಟೆ. ಈಗ ಮತ್ತೆ ತಂಗಾಳಿ ಬೀಸಿದಾಗ ಅದರ ಹಿಂದಿನ ಹಿಂಸೆಯನ್ನೇ ಮುಂದುವರಿಸುವುದೆಂದಿತು. ಹಾಗೆ ಅದು ತನ್ನನ್ನು ಮತ್ತೆ ಹಿಂಸಿಸಬಾರದೆಂದು ನಾಯಕಿ ತನ್ನ ನಾಯಕನನ್ನು ಪ್ರಾರ್ಥಿಸುತ್ತಾಳೆ.

ನಾಯಕಿ ಹೇಳುತ್ತಾಳೆ: ನನ್ನ ಪ್ರಿಯತಮನಾದ ಶ್ರೀರಂಗನಾಥನೇ, ಈ ತಂಗಾಳಿಯು ನನ್ನ ಮೇಲೆ ಬೀಸಿ ನನ್ನನ್ನು ಹಿಂಸಿಸಿದಂತೆಯೂ, ನಾನು ಕೃಶ

Garani Srinivasan

ಹೊಂದಿದಂತೆಯೂ ತರುಣಿಸು. ನನ್ನ ಸೌಭಾಗ್ಯದಿಂದಾಗಿ ಕೃಪೆಯುಳ್ಳವಳನ್ನು ಅದು ಅವಿದಂಚದಿರಲಿ. ನಿನ್ನ ಅಗಲಿಕೆಯಿಂದ ಉಂಟಾದ ದುಃಖ. ನಿನ್ನ ಕಡೆಗೆ ಯಿಂದಲೇ ನಿವಾರಣೆಯಾಗಬೇಕು. ಆ ದುಃಖವನ್ನು ಈ ಕಣ್ಣುಗಳ ತನ್ನ ಕೆಲಸವನ್ನು ನಾಲಿಗೆಯಿಂದ ಪ್ರಸ್ತುತ ಅದನ್ನು ದೊಡ್ಡದು ಮಾಡದಂತೆ ~~ಮಾಡ~~ ಆಗಲಿ. ನನ್ನ ಮನಸ್ಸು ಈ ವರೆಗೆ ತುಂಬ ವ್ಯಗ್ರವಿತ್ತು. ಅದರ ಕಷ್ಟಗಳನ್ನು ಈ ಕಣ್ಣುಗಳು ಇನ್ನು ಚುಚ್ಚು ಮಾಡದಿರಲಿ. ನಿನ್ನ ಕೃಪೆಯಿಂದ ಮಾತ್ರವೇ ಈ ಬಗೆಯ ಒಂದಿಗೆಗಳ್ಳ ವೂ ನೀಗುವವು. ಆದ್ದರಿಂದ ನೀನು ಕೃಪೆದೋರು.

21. இன்னன்ன தூதெம்மை யாளற்றப்பட்டிரந்தா னிவனென்று,
இன்னன்ன சொல்லாப் பெடையொடும் போய்வரும், நீலமுண்ட
மின்னன்ன மேனிப் பெருமானுலகிற் பெண்தூது செல்லா
அன்னன்ன நீர்மை கொலோ? குடிச்சீர்மையி லன்னங்களே.

ಇನ್ನನ್ನ ತೂದೆಮ್ಮೈ ಯಾಳಱ್ಱಪ್ಪಟ್ಟಿರನ್ದಾ ಳಿವಳೆನ್ಱು,
ಇನ್ನನ್ನ ಶೊಲ್ಲಾ ಪ್ಪೆಡೈಯೊಡುಮ್ ಪೋಯ್ ವರುಮ್, ನೀಲಮುಣ್ಡ
ಮಿನ್ನನ್ನ ಮೇನಿ ಪ್ಪೆರುಮಾನುಲಗಿಱ್ ಪೆಣ್ತೂದು ಶೆಲ್ಲಾ
ಅನ್ನನ್ನ ನೀರ್ಮೈಕೊಲೋ? ಕುಡಿಚ್ಚೀರ್ಮೈಯಿಲನ್ನಙ್ಗಳೇ.

ಇನ್ನನ್ನ இன்னன்ன = ಇಂಥ, ತೂದು தூது = ದೂತನಾಗಿ, ಎಮ್ಮೈ எம்மை = ನಮ್ಮನ್ನು, ಆಳ್ ಅಱ್ಱುಮ್ ಪಟ್ಟು ஆள் அற்றம் பட்டு = ಆಳು ಇಲ್ಲದ್ದರಿಂದ (ಕಳಿಸಲಾಗದ್ದರಿಂದ), ಇನ್ನನ್ನ ಶೊಲ್ಲಾ அன்னன்ன சொல்லா = ಅಂಥ ದೂತಕಾರ್ಯವನ್ನು ಹೇಳದಂತೆ, ಪೆಡೈಯೊಡುಮ್ பெடையொ(டு)ம் = (ತಮ್ಮ) ಹೆಂಗಳೊಡನೆ, ಪೋಯ್ ವರುಮ್ போய்வரும் = ಹೋಗಿ ಬರುವ, ನೀಲಮ್ ಉಣ್ಡ நீலம் உண்ட = ನೀಲವರ್ಣದ, ಮಿನ್ ಅನ್ನ மின் அன்ன = ಮಿಂಚಿನಂಥ, ಮೇನಿ மேனி = ಶರೀರ ಸೌಂದರ್ಯ ಉಳ್ಳ, ಪೆರುಮಾನ್ பெருமான் = ಭಗವಂತನ, ಉಲಗಿಲ್ உலகில் = ಲೋಕದಲ್ಲಿ, ಪೆಣ್ ತೂದು பெண் தூது = ಹೆಣ್ಣುಗಳಿಗಾಗಿ ದೌತ್ಯವನ್ನು, ಶೆಲ್ಲಾ செல்லா = ನಡೆಸದ, ಅನ್ನನ್ನ அன்னன்ன = ಅಂಥ, ನೀರ್ಮೈಕೊಲೋ நீர்மை கொலோ = (ಬುದ್ಧಿಯ) ಸ್ವಭಾವ ಹೊಂದಿದೆಯೋ,

ಕುಡಿ ಶೀರ್ಮೈ (ಕುಡಿ ಶೀರ್ಮೈ = ಕುಲದ ಹೆಚ್ಚುಗಾರಿಕೆ, ಇಲ್ ಇರು = ಇಲ್ಲದ, ಅನ್ನಙ್ಗಳೇ ಅನ್ನಙ್ಗಾಳ್ = ಹಂಸಪಕ್ಷಿಗಳೇ.

ಇಂಥ ದೂತಕಾರ್ಯಕ್ಕೆ ನಮ್ಮನ್ನು ~~ಕಳು~~ ಕಳುಹಿಸದೆ ಇದ್ದದ್ದರಿಂದ, ಅಂಥ ದೂತವಾರ್ತೆಯನ್ನು ಹೇಳದಂತೆ (ವಿವರಿಸದಂತೆ), (ತಮ್ಮ) ಹೆಣ್ಣುಗಳೊಡನೆ ಹಾಯಾಗಿ ಸಂಚರಿಸುತ್ತಿರುವ, ನೀಲವರ್ಣದ ಬಿಂಬದಂಥ ಸೌಂದರ್ಯದ ಪೂರ್ಣ ಭಗವಂತನ ಲೀಲೆಯಲ್ಲಿ, ಹೆಣ್ಣುಗಳಿಗಾಗಿ ದೌತ್ಯವನ್ನು ವಹಿಸಿದ, ಕುಲದ ಹೆಚ್ಚುಗಾರಿಕೆಯಿಲ್ಲದ ಈ ಹಂಸಪಕ್ಷಿಗಳು ಅಂಥ ಒಳ್ಳೆಯ (29) ಸ್ವಭಾವವನ್ನು ಹೊಂದಿರುವುವೋ ಕಾಣೆ!

ಇದುವರೆಗೆ ತಂಗಾಳಿಯ ಬಂದಿಯನ್ನು ನಾಯಕಿ ವಿವರಿಸಿದಳಷ್ಟೆ. ಈ ಕಾಲದಲ್ಲಿ ನಾಯಕಿಯ ಗಮನ ಹಂಸಪಕ್ಷಿಗಳತ್ತ ಹರಿಯುತ್ತದೆ. ಆ ಪಕ್ಷಿಗಳು ತಮ್ಮ ತಮ್ಮ ಹೆಣ್ಣು ಪಕ್ಷಿಗಳೊಡನೆ, ಸ್ವೇಚ್ಛೆಯಿಂದ ಹಾ ಅತ್ತಿತ್ತ ಅಲೆದಾಡುತ್ತಿವೆ — ವಿಹರಿಸುತ್ತಿವೆ. ಅವುಗಳನ್ನು ನೋಡಿದ ನಾಯಕಿಗೆ ಹಂಸಪಕ್ಷಿಗಳು ಹಿಂದೆ ನಡೆಸಿದ ಪ್ರೇಮದೌತ್ಯದ ನೆನಪು ಬರುತ್ತದೆ. ಹಿಂದೆ ನಳ-ದಮಯಂತಿಗಳ ಪ್ರೇಮವನ್ನು ಪರಸ್ಪರ ಅರಿವುಮಾಡಿಕೊಟ್ಟು, ಅವರಿಬ್ಬರ ನಡುವೆ ದೌತ್ಯವನ್ನು ನಡೆಸಿ, ಅವರಿಬ್ಬರನ್ನೂ ಕೂಡಿಸಿದ್ದು ಹಂಸಪಕ್ಷಿಯೇ ಅಲ್ಲವೇ? ರುಕ್ಮಿಣೀದೇವಿಯ ಅನನ್ಯ ಪ್ರೇಮವನ್ನೂ, ತನ್ನನ್ನು ಬಲವಂತದಿಂದ ಶಿಶುಪಾಲನೊಡನೆ ಮದುವೆ ಮಾಡಿಸ ಬಯಸಿದ್ದ ವಿಷಯವನ್ನೂ, ಸಕಾಲದಲ್ಲಿ ಬಂದು ತನ್ನನ್ನು ರಕ್ಷಿಸಿ, ತನ್ನನ್ನು ಮದುವೆಯಾಗಬೇಕೆಂದು ಶ್ರೀಕೃಷ್ಣನಿಗೆ ಸಂದೇಶ ತಂದದ್ದು ಹಂಸವೇ ಅಲ್ಲವೇ?

ನಾಯಕಿಯಾದರೋ ಅವರಂತೆ ಕುಲೀನಸ್ತ್ರೀ ಅಲ್ಲ. ಅವಳು ಸಾಮಾನ್ಯ ಸ್ತ್ರೀ. ತಾನೂ ಅವರಂತೆ ತನ್ನ ಪ್ರೇಮವನ್ನು ತನ್ನ ಪ್ರಿಯತಮನಾದ ಭಗವಂತನಲ್ಲಿ ಅರಿಕೆಮಾಡಿಕೊಳ್ಳಲು ಹಂಸಗಳು ಸಹಾಯ ಮಾಡವೆ, ತಮ್ಮಷ್ಟಕ್ಕೆ ತಾವು ಇವೆಯಲ್ಲ!

ನಾಯಕಿ ಹೇಳುತ್ತಾಳೆ: ಈ ಹಂಸಗಳು ನನ್ನ ಪ್ರೇಮದೌತ್ಯವನ್ನು ~~ಮಾ~~ ಮಾಡಲು ಅಪ್ರಾಕೃತ ಸುಂದರನಾದ ಭಗವಂತನ ಬಳಿಗೆ ಹೋಗಬಲ್ಲ ತಕ್ಕ ಒಳ್ಳೆಯ ಸ್ವಭಾವವನ್ನು ಹೊಂದಿವೆಯೋ? ಇಲ್ಲವೇ, ಭಗವಂತನ ಲೀಲೆಯಲ್ಲಿ, ಕುಲದ ಹೆಚ್ಚುಗಾರಿಕೆಯನ್ನು ಪಾಲಿಸುವವರಿಗೆ ಮಾತ್ರವೇ ಅವು ದೌತ್ಯವನ್ನು ನಡೆಸಬೇಕೆನ್ನುತ್ತವೆಯೋ? ಅವುಗಳು

Garani Srinivasan

ಶಮ್ಮ ಶಮ್ಮ ಹಿಡ್ಡಿನಲ್ಲಿಡನೆ ಉಳ್ಳಾದ ಬಂದ ದಾಯ.. ಅಲೆದಾಡುತ್ತಿವೆ ಯಲ್ಲ!

ಭಗವಂತನ ಸ್ವಷ್ಟಪದ-ಲೀ ಶ್ರೀಲಂಗದಲ್ಲಿ – ಎಲ್ಲಾ ದಿನ. ಎಲ್ಲಂಗಾ ಹಿಂದೇ ಬಹಳ ಶಷ್ಟನೆ ಭಗವಂತನದು. ಮೇಲು ಕಲ್ಲು, ನಿಜೀವ, ನಿಜೀವ ಎಂಬ ಭೇದ ವಿಲ್ಲ. ಬಲಹರುವಾಗ, ದಂಪ ದಿಷ್ಟಗಳು ಪ್ರೇಮದ ದೇಶ್ವದಲ್ಲಿ ಶಾರಶಮ್ಯ ಮೊದಲು ಸಾಧ್ಯವಾಗುವುದೇ? ಅವು ನಾಯಕಿಯ ದಿದಾಯತ್ಕೆ ಬರಲೇ ಬೇಕು.

30. அன்னாருஞ் செல்வீரும் வண்டானமுஞ் செல்வீருந் தொழுதிரந்தேன்,
முன்னாருஞ் செல்வீர்கள் மறவேன்மினோ, கண்ணன் வைகுந்தனோ
டென்னைருஞ் சிறுரைக் கண்டாலென்னைச் சொல்லியவரிடை நீர்
இன்னாருஞ் சொல்லீரோ?, இதுவோ? தகவென்றிசை மின்களோ.

ಅನ್ನಂ ಜೆಲ್ವೀರುಮ್ ವಣ್ಡಾನಂ ಜೆಲ್ವೀರು ತೊಳುದಿರನ್ದೇನ್,
ಮುನ್ನಂ ಜೆಲ್ವೀರ್ಗಳ್ ಮಱವೇಲ್ಮಿನೋ, ಕಣ್ಣನ್ ವೈಕುನ್ದನೋಡು
ಎನ್ನೆಂಜಿನಾರೈಕ್ ಕಣ್ಡಾಲೆನ್ನೈಚ್ ಚೊಲ್ಲಿ ಅವರಿಡೈ ನೀರ್
ಇನ್ನಂ ಜೆಲ್ಲೀರೋ?, ಇದುವೋ? ತಗವೆನ್ಱಿಶೈಮಿನ್ಗಳೇ.

ಅನ್ನಮ ಶೆಲ್ವೀರುಮ್ அன்னம் செல்வீரும் = ಹಂಸಗಳಾಗಿ ಹಾರುವವರೇ (ಹಾರುವ ಹಂಸಪಕ್ಷಿಗಳೇ), ವಣ್ಡಾನಮ ಶೆಲ್ವೀರುಮ್ வண்டானம் செல்வீரும் = ಕೊಕ್ಕರೆಗಳಾಗಿ ಹಾರುವವರೇ (ಹಾರುವ ಕೊಕ್ಕರೆಗಳೇ), ತೊಳುದು தொழுது = ನಮಸ್ಕರಿಸಿ, ಇರನ್ದೇನ್ இரந்தேன் = ಪ್ರಾರ್ಥಿಸುತ್ತೇನೆ, ಮುನ್ನಂ ಶೆಲ್ವೀರ್ಗಳ್ முன்னம் செல்வீர்கள் = ಮುಂಚೆಯೇ ಹಾರುವವರೇ ಶೆಲ್ವೀರ್ಗಳ್, ಮಱವೇಲ್ಮಿನೋ மறவேன்மினோ = ಮರೆಯಬೇಡಿರಿ, ಕಣ್ಣನ್ ಕಣ್ಣನ್ = ಆಕರ್ಷಕನಾದ, ವೈಕುನ್ದನೋಡು வைகுந்தனோடு = ವೈಕುಂಠನಾಥನೊಡನೆ, ಎನ್ ಎನ್ = ನನ್ನ, ನೆಂಜಿನಾರ್ நெஞ்சினார் = ಮನಸ್ಸನ್ನು, ಕಣ್ಡಾಲ್ கண்டால் = ಕಂಡರೆ, ಎನ್ನೈ ಎನ್ನை = ನನ್ನ ವಿಷಯವಾಗ, ಶೊಲ್ಲಿ சொல்லி = ಹೇಳಿ, ಅವರಿಡೈ அவரிடை = ಅವರಲ್ಲಿ, ನೀರ್ நீர் = ನೀವು, ಇನ್ನಮ್ இன்னம் = ಇನ್ನೂ, ಶೆಲ್ಲೀರೋ செல்லீரோ = ಹೇಳಬಲ್ಲಿರೋ (ಹೇಳುವಿರೋ?) ?, ಇದುವೋ இதுவோ = ಇದು ವಿಷಯವೋ, ತಗವೋ தகவோ = (ನಿಮಗೆ) ತಕ್ಕದ್ದೇ (ಯೋಗ್ಯವೇ), ಎನ್ಱು என்று = ಎಂದು, ಇಶೈಮಿನ್ಗಳೇ இசைமின்களே = ಹೇಳಿರಿ.

ಹಾರುವ ಹಂಸ ಪಕ್ಷಿಗಳೇ, ಹಾರುವ ಕೊಕ್ಕರೆಗಳೇ, ನಿಮಗೆ ನಮಸ್ಕರಿಸಿ ಪ್ರಾರ್ಥಿಸುತ್ತೇನೆ. ನಿಮಗಿಂತಲೂ ಮುಂಚೆ ಹಾರುವವರು ನನ್ನನ್ನು ಮರೆಯಬೇಡಿರಿ. ಆಕರ್ಷಕನಾದ ವೈಕುಂಠವಾಸಿಯೊಡನೆ ನನ್ನ ಮನಸ್ಸನ್ನು ಕಂಡರೆ, ನನ್ನ ವಿಷಯ ವಾ ಹೇಳಿ, ಅವರಲ್ಲಿ ನೀವು ಈ ರೀತಿಯಾಗಿ (ವಿವರ) ಹೇಳುವಿರೋ? (30)
ಹೀಗೆ ಮಾಡುವುದು ನಿಮಗೆ ತರವೇ ಎಂದು ಹೇಳಿರಿ.

ಈ ಪಾಶುರದಲ್ಲಿ, ನಾಯಕಿಯು ಹಾರುತ್ತಿರುವ ಹಂಸಗಳನ್ನೂ ಕೊಕ್ಕರೆಗಳನ್ನೂ ನೋಡಿ, ಅವುಗಳನ್ನು ಸಂಬೋಧಿಸುತ್ತಾಳೆ. ಅವಳು ಬಹಳ ಸಂಕಟ ಸ್ಥಿತಿಯಲ್ಲಿದ್ದಾಳೆ. ಅವಳ ದೇಹವನ್ನು ಹೀಗೆ ತೊರೆದು, ಏನೇನೋ ಹೋಗುವುದಕ್ಕೆ ಬಿಟ್ಟು, ಅವಳ ಮನಸ್ಸು ಅವಳ ಪ್ರಿಯತಮನಾದ ವೈಕುಂಠವಾಸಿಯನ್ನು ಹಂಬಲಿಸಿ ಹೊರಟು ಹೋಗಿದೆ. ಆಕಾಶದಲ್ಲಿ ಎತ್ತರಕ್ಕೆ ಹಾರಬಲ್ಲ ಈ ಹಂಸ, ಕೊಕ್ಕರೆಗಳು ಬೇಗನೆ ವೈಕುಂಠದವರೆಗೆ ಹಾರಬಲ್ಲವೆಂಬ ಆಸೆಯೂ ನಂಬಿಕೆಯೂ ನಾಯಕಿಗೆ ಇದೆ. ಆದ್ದರಿಂದ, ತನ್ನ ಕೊರಗಿನ ಸಂದೇಶವನ್ನು ಅವುಗಳೊಡನೆ ಕಳುಹಿಸುತ್ತಿದ್ದಾಳೆ.

ಹಂಸಗಳು ಹಿಂದೆ ಪ್ರಣಯಿಗಳ ನಡುವೆ ದೌತ್ಯವನ್ನು ನಡೆಸಿದ್ದವಲ್ಲ! ಅಂಥ ದೌತ್ಯ ಇದಲ್ಲ. ಇದು ನಾಯಕಿ ತನ್ನನ್ನು ಅಗಲಿ ಹೋದ ತನ್ನ ಮನಸ್ಸಿಗೆ ಹೇಳಿ ಕಳುಹಿಸುವ ಕೆಲಸ.

ನಾಯಕಿ ಹೇಳುತ್ತಾಳೆ: ಹಂಸಗಳೇ, ಕೊಕ್ಕರೆಗಳೇ, ನಿಮ್ಮನ್ನು ನಮಸ್ಕರಿಸಿ ಬೇಡುತ್ತೇನೆ. ನನ್ನನ್ನಗಲಿ ಹೋದ ನನ್ನ ಪ್ರಿಯತಮನಾದ ವೈಕುಂಠವಾಸಿಯನ್ನು ಹಂಬಲಿಸಿ ನನ್ನ ಮನಸ್ಸು ಹೊರಟುಹೋಗಿದೆ. ನೀವು ದಯಮಾಡಿ ಅದನ್ನು ಕಂಡು, ನನ್ನ ಈಗಿನ ಶೋಚನೀಯವಾದ ಸ್ಥಿತಿಯನ್ನು ತಿಳಿಸಿರಿ. ಅಲ್ಲದೆ, 'ಅವರು' (ನನ್ನ ಪ್ರಿಯತಮನು) ನನ್ನನ್ನು ಈ ಸ್ಥಿತಿಗೆ ಈಡುಮಾಡಿ ಹೋಗಿರುವುದು ಅವರ ಗುಣ ಸ್ವಭಾವಗಳಿಗೆ ತಕ್ಕುದೇ ಎಂಬುದನ್ನು 'ಅವರಿಗೆ' ತಿಳಿಸುವಂತೆ ನನ್ನ ಮನಸ್ಸಿಗೆ ಹೇಳುವಿರಾ?

31. இசைமின்கள் தூதென் றிசைத்தா லிசையிலம்
— என் தலைமேல்
அசைமின்கள் என்றால் அசையுங்கொலாம்? —
அம்பொன் மாமணிகள்
திசைமின் மிளிரும் திருவேங்கடத்துவன்
தாட்சிமயம்
மிசை - மின் மிளிரிய போவான் வழிக்கொண்ட
மேகங்களே.

Garani Srinivasan

ಇಕ್ಕೈಮಿನ್‌ದಳ್ ಕೂದಿನ್ ಮೆಕ್ಕಿತ್ತಾ ಅಕ್ಕೈಯುಂ ಅಮ್ಮಾ — ಎನ್ ತಲೈ ಮೇಲ್
ಅಕ್ಕೈಮಿನ್‌ದ ಳೆನ್ ಊಲಕ್ಕೈಯುಂ ಇಳ್ಗೋಲಾ ಮಾ? — ಅಮ್ಮೆನ್ ಮಾಮಣಿದಳ್
ಕಿಕ್ಕೈಮಿರ್ ಮುಳರುಮಾ ಕಿರು ವೇಙ್ಗದತ್ತು ವನ್ ಶಿಲ್ಲಿ ಮುಯುಮಾ
ಮುಕ್ಕೈ — ಮಿನ್ ಮಿಳಿಯುನ ಪೋವಾನ್ ವೆಖಿಕ್ಕೊಣ್ಡ ಮೇಘಙ್ಗಳೇ.

ಇಕ್ಕೈಮಿನ್‌ದಳ್ ಕೂದು இசைமின்கள் தூது = ಕಾರ್ಯವನ್ನು ಹಾಡಿ ಹೇಳಿ, ಎನ್‌ಟು ನಾಣ್ಣು = ಎಂದು, ಇಕ್ಕೈತ್ತಾಲ್ இசைக்குத்தாய் = (ನಾನು) ಹೇಳಿದರೆ, ಇಕ್ಕೈಯುಲಮಾ இசையிலம் = (ಹಾಗೆ) ಮಾತನಾಡಲಾರಿರಿ (ಹೇಳಲಾರಿರಿ), ಎನ್ ತಲೈ ಮೇಲ್ ನಾಣ் தலைமேல் = ನನ್ನ ತಲೆಯ ಮೇಲೆಯೇ, ಅಕ್ಕೈಮಿನ್‌ದಳ್ ಎನ್‌ಊಲ್ ನಾಣ್ಗುಳ್ = ಎಂದರೆ, அசை மின்னுகள் = ಮೆಲ್ಲಗೆ ಅಲೆದಾಡುತ್ತಿ, ಅಕ್ಕೈಯುಮಾ ಕೊಲ್ ಆಮಾ அசையும் கொல் ஆம் = ಹಾಗೆ, ಕುಣಿದಾಡುತ್ತಿರುವಿರಿ ಎಂದು ಕೇಳುತ್ತದೆ, ಅಮ್ಮೆನ್ அம்பொன் = ಉತ್ತಮವಾದ (ಶ್ರೀಗನಾದ) ಚಿನ್ನವೂ, ಮಾ ಮಣಿದಳ್ மா மணிகள் = ಶ್ರೇಷ್ಠ ರತ್ನಗಳೂ, ಕಿಕ್ಕೈ திசை = ಎಲ್ಲಾ ದಿಕ್ಕುಗಳಲ್ಲೂ, ಮಿನ್ ಮುಳರುಮಾ மின் மின்னும் = ಮಿಂಚಿನಂತೆ ಹೊಳೆಯುವ, ಕಿರು ವೇಙ್ಗದತ್ತು திரு வேங்கடத்து = ತಿರುವೇಙ್ಗಡದ, ಕಲ್ ತಾನ್ = ಕಲ್ಲಿನಿಂದಾದ, ಶಿಲ್ಲಿ = ಬಲಿಷ್ಠವಾದ, ಶಿಕರದ ಮೇಲೆ, ಮಿನ್ மின் = ಮಿಂಚು, ಮುಕ್ಕೈ சிமயம் திசை = ಶಿಖರದ ಮೇಲೆ, ಮುಕ್ಕೈ ಮಿಂಚನ್ನು, ಮಿಳಿಯುನ மின்னியன = ಹೊಳೆದಿಲು, ಪೋವಾನ್ போயான் = ಹೋಗುವುದಕ್ಕೆ, ವೆಖಿಕ್ಕೊಣ್ಡ வழிக்கொண்ட = ದಾರಿ ಹಿಡಿದಿರುವ, ಮೇಘಙ್ಗಳೇ மேகங்களோ = ಮೇಘಗಳೇ.

ದಿಕ್ಕು ದಿಕ್ಕಿಗೂ ಮಿಂಚಿನಂತೆ ಹೊಳೆಯುವ ಚಿನ್ನವೂ, ಶ್ರೇಷ್ಠ ರತ್ನಗಳೂ, ದಿಕ್ಕು ದಿಕ್ಕಿಗೂ ಮಿಂಚಿನ ಹೊಳೆಯುವ ಕಲ್ಲಿನಿಂದಾದ ಶಿಖರದ ಮೇಲೆ ಇರುವ ತಿರುವೇಙ್ಗಡದ ಬಲವಾದ ಕಲ್ಲಿನಿಂದಾದ ಶಿಖರದ ಮೇಲೆ ಯತ್ತಿರುವ ತಿರುವೇಙ್ಗಡದ ಬಲವಾದ ಕಲ್ಲಿನ ಮೇಲೆ, ಮಿಂಚನ್ನು ಹೊಳೆದಿಲು ಹೋಗುವುದಕ್ಕೆ ದಾರಿ ಹಿಡಿದಿರುವ ಮೇಘಗಳೇ, (ನನಗಾಗಿ) ಕಾರ್ಯವನ್ನು ಹಾಡಿ ಹೇಳಿರಿ ಎಂದು ನಾನು ಕೇಳಿದರೆ, ಹಾಗೆ ಮಾತನಾಡಲಾರಿರಿ; ನನ್ನ ತಲೆಯ ಮೇಲೆಯೇ ಮೆಲ್ಲಗೆ ಸುಳಿದಾಡಿರಿ ಎಂದು (ನಾನು) ಕೇಳಿದರೆ ಹಾಗೆ ಕುಣಿದಾಡುತ್ತಿರುವಿರಿ ಎಂದು ಕೇಳುತ್ತದೆ. 31

ಒಂದಿನ ಪಾಶುರದಲ್ಲಿ ನಾಯಕಿ ಕಂಡ ಕಾರ್ಯಗಳನ್ನು ತನ್ನ ಬಗೆಗೆ ದೌತ್ಯ ನಡೆಸೆಂದು ಕೇಳಲಾಯಿತು. ಈಗ ನನದಲ್ಲಿ ಸುಳಿದಾಡುವ ಮೋಡಗಳನ್ನು ಕಂಡು, ಅವುಗಳಿಗೆ ತನ್ನ ದೌತ್ಯದ ವಿಷಯವನ್ನು ಹೇಳುತ್ತಾಳೆ.

ಮಳೆಗಾಲದ ಮೋಡಗಳು ಮೆಲ್ಲ ಮೆಲ್ಲನೆ ಚಲಿಸುತ್ತಾ, ಮಿಂಚು, ~~ಗುಡುಗು~~

Garani Srinivasan

ಗುಡುಗನ್ನು ಹೊತ್ತು ಹೋಗುವುದು ಪ್ರತ್ಯಕ್ಷವಾಗಿ. ನಾಯಕಿಗೆ ಅಪ್ಪಳಿಸುವ ದಿಕ್ಕು ತಿರುವೇಂಗಡಂ ಎಂಬ ಕಡೆಗೆ ಎಂದು ಕಂಡು ಬರುತ್ತದೆ. ಆ ಬೆಟ್ಟದ ಮೇಲೆಯೇ ಶಿಖರಕ್ಕೆ ಸಮೀಪದಲ್ಲಿ ಅಪ್ಪಳಿಸುತ್ತಿರುವಾಗ, ಅವನ ಪ್ರೇಮದೌತ್ಯವನ್ನು ನಡೆಸಬೇಕೆಂದು ಸ್ವಾಮಿಗೆ ತನ್ನನ್ನು ಕುರಿತು ಹೇಳಬೇಕೆಂದು ನಾಯಕಿಯ ಆಶೆ.

ನಾಯಕಿ ಹೇಳುತ್ತಾಳೆ: ಮೇಘಗಳೇ, ಹೊಂಬಣ್ಣದ ಚಿನ್ನವೂ, ಉತ್ತಮವಾದ ರತ್ನಗಳೂ ತುಂಬಿರುವ ತಿರುಮಲೆಯ ಭವ್ಯವಾದ ಶಿಖರದ ಮೇಲೆಯೇ ನೀವು ಸುಳಿದಾಡುತ್ತಾ, ಮಿಂಚನ್ನು ಹೊತ್ತು, ಆ ಶಿಖರದ ಸೊಬಗನ್ನು ನಿಮ್ಮದಾಗಿ ಹೊಂದಿದವರಾಗಬೇಕೆಂದು ಉದ್ದೇಶಿಸಿ, ಅತ್ತ ಕಡೆ ಪ್ರಯಾಣ ಬೆಳೆಸುತ್ತಿದ್ದೀರಾ? ಅಲ್ಲಿ ನೆಲಸಿರುವ ಸ್ವಾಮಿಯ ಬಳಿಯಲ್ಲಿ, ನನ್ನ ಪ್ರೇಮದೌತ್ಯವನ್ನು ನಡೆಸಿ ಎಂದು ನಾನು ನಿಮ್ಮನ್ನು ಬೇಡಿದರೆ, ನೀವು ಅದನ್ನು ಮಾಡಲಾರಿರಲ್ಲ. ಇಲ್ಲಿಯೇ ನನ್ನ ತಲೆಯ ಮೇಲೆಯೇ, ಸುಳಿದಾಡುತ್ತಿರಿ. ಎಂದರೆ ಮಾತ್ರ ನಿಮಗೆ ಬದಲ ದಂತಿರುವಿರೋ? ಇಲ್ಲಿಯೇ (ನನ್ನ ಸಂಕಟವನ್ನು ಕಂಡು) ನೀವು ನಲಿದಾಡುವಿರಾ?

32. மேகங்களோ! வுரையீர், திருமால் திருமேனியொக்கும்
யோகங்களுங்களுக்கெவ்வாறு பெற்றீர்?, உயிரளிப்பான்
மாகங்களெலாந் திரிந்து நன்னீர்கள் சுமந்து நுந்தம்
ஆகங்கள் நோவ, வருத்துந் தவமா மருள் பெற்றதே

ಮೇಘಂಗಳೋ! ವುರೈಯೀರ್, ತಿರುಮಾಲ್ ತಿರುಮೇನಿ ಯೊಕ್ಕುಮ್
ಯೋಗಂಗಳುಙ್ಗಳುಕ್ಕೆವ್ವಾರು ಪೆಟ್ರೀರ್? ಉಯಿರಳಿಪ್ಪಾನ್
ಮಾಗಂಗಳೆಲ್ಲಾನ್ದಿರಿನ್ದು ನನ್ನೀರ್ಗಳ್ ಶುಮನ್ದು ನುನ್ದಮ್
ಆಗಙ್ಗಳ್ ನೋವ, ವರುತ್ತುನ್ದವಮಾ ಮರುಳ್ ಪೆಟ್ರದೇ.

ಮೇಘಙ್ಗಳೋ மேகங்களோ = ಮೇಘಗಳೇ, ಉರೈಯೀರ್ உரையீர் = ಹೇಳಿರಿ, ತಿರುಮಾಲ್ திருமால் = ಸರ್ವೇಶ್ವರನ, ತಿರುಮೇನಿ திருமேனி = ದಿವ್ಯರೂಪವನ್ನು, ಒಕ್ಕುಮ್ ஒக்கும் = ಹೋಲುವ, ಯೋಗಙ್ಗಳ್ யோகங்கள் = ಉಪಾಯಗಳು, ಉಙ್ಗಳುಕ್ಕು உங்களுக்கு = ನಿಮಗೆ, ಎವ್ವಾರು எவ்வாறு = ಯಾವ ರೀತಿಯಾಗಿ, ಪೆಟ್ರೀರ್ பெற்றீர் = ಪಡೆದುಕೊಂಡಿರಿ? ಉಯಿರ್ உயிர் = ಜೀವವನ್ನು

ಅಱಿವಾನ್ அணிப்பாண் = ರಕ್ಷಿಸುವುದಕ್ಕಾಗಿ, ಮೂಡಙ್ಗಳ್ மாகங்கள் =
ಮೇಲಣಲೋಕಗಳನ್ನು, ಎಲ್ಲಾಮ್ ಎಲ್ಲಾಮ್ = ಎಲ್ಲವನ್ನೂ,
ಕಿಡನ್ದು ಕೀಱಿನ್ದು = ಅಲೆದಾಡಿ, ನಲ್ ನೀರ್ಗಳ್ ನಲ್ನೀರ್ಗಳ್ = ಒಳ್ಳೆಯ
(ಬಗೆಬಗೆಯ) ನೀರನ್ನು, ಕುಮನ್ದು ಕುಮನ್ದು = ಹೊತ್ತು, ನುಮ್ಮ ತಮ್ಮ ನುಮ್
ತಮ್ = ನಿಮ್ಮ, ಆಙ್ಗಳ್ ஆகங்கள் = ದೇಹಗಳು, ನೋವ நோய =
ನೋಯುವಂತೆ, ವರುತ್ತುಮ್ வருத்தும் = ಬಾಧೆಪಡಿಸುವ, ತವಮುಮ್ ತವಮ
ತವಮ್ ஆம் = ತಪಸ್ಸು ಹೇಗೆ, ಅರುಳ್ ಪೆಱ್ಱದೇ அருள் பெற்றதே =
ಕ್ಷಾಲೆ ಮಾಡಿರುವುದು?

ಮೇಘಗಳೇ ಹೇಳಿರಿ — ಪರಮೇಶ್ವರನ ದಿವ್ಯರೂಪವನ್ನು ಹೋಲುವ ಉಪಾಯಗಳನ್ನು ನೀವು ಯಾವ ರೀತಿಯಿಂದ ಪಡೆದುಕೊಂಡಿರಿ? ಜೀವವನ್ನು ರಕ್ಷಿಸುವುದಕ್ಕಾಗಿ ಮೇಲಣ ಲೋಕಗಳೆಲ್ಲವನ್ನೂ ಅಲೆದಾಡಿ, ಒಳ್ಳೆಯ (ಬಗೆಬಗೆಯ) ನೀರನ್ನು ಹೊತ್ತು, ನಿಮ್ಮ ದೇಹಗಳು ನೋಯುವಂತೆ (32) ಬಾಧೆಪಡಿಸುವ ತಪಸ್ಸು ಹೇಗೆ (ಇದನ್ನು) ಕ್ಷಾಲೆ ಮಾಡಿರುವುದು?

ಶಾಂತಸ್ವರೂಪವಾದ ಪ್ರಾರ್ಥನೆಯಿದು! ಮೇಘಗಳಿಗೆ ಭಗವಂತನ ರೂಪ, ಗುಣ, ಸೌಂದರ್ಯಗಳು ಹೇಗೆ ಲಭ್ಯವಾಗಿರಬಹುದು? ಅವುಗಳನ್ನು ಪಡೆದುಕೊಳ್ಳುವುದಕ್ಕೆ ಅವುಗಳಿಗೆ (ಶಾಮಮೇಘಗಳಿಗೆ) ಒದಗಿ ಬಂದ ಉಪಾಯವಾದರೂ ಏನಿರಬಹುದು? ಅವುಗಳ ದೇಹಶ್ರಮವನ್ನು ಲೆಕ್ಕಿಸದ ಪ್ರಾರ್ಥನಾಶೀಲತೆ ಉಪಕಾರವೇ? ದೇಹವನ್ನು ದಂಡಿಸುವ ಅಂಥ ರೀತಿಯ ತಪಸ್ಸೇ! ಮತ್ತಾವುದಾದರೂ ಇರಬಹುದೇ?

ಶಾಮಮೇಘಗಳು ಎಲ್ಲೆಲ್ಲಿ ನೀರಿನ ಸೆಲೆ ಸಿಕ್ಕರೂ ಅಲ್ಲಿಂದ ನೀರನ್ನು ಸಂಗ್ರಹಿಸಿಕೊಳ್ಳುತ್ತಾ ತನ್ನಲ್ಲಿ ತುಂಬಿಸಿಕೊಳ್ಳುತ್ತದೆ. ಆಕಾಶದಲ್ಲಿ ಮೆಲ್ಲಮೆಲ್ಲನೆ ಸಂಚರಿಸುತ್ತದೆ. ದಿವ್ಯವಾದ ಆಕರ್ಷಕವಾದ ರೂಪವನ್ನು ಪಡೆದುಕೊಳ್ಳುತ್ತದೆ. ನೆಲದ ಮೇಲೆ ಎಲ್ಲಾ ಕಡೆಗಳಲ್ಲೂ ತಾರತಮ್ಯವಿಲ್ಲದಂತೆ ಸ್ವಚ್ಛಂದವಾಗಿ ನಿಷ್ಪಕ್ಷಪಾತವಾಗಿಯೂ ಮಳೆಯನ್ನು ಸುರಿಸುತ್ತದೆ. ಎಲ್ಲ ಬಗೆಯ ಜೀವಗಳಿಗೂ ಒಳ್ಳೆಯದು ಅನುಕೂಲ ಮಾಡಿಕೊಡುತ್ತದೆ. ತಾನು ಮಾಡಿದ ಉಪಕಾರಕ್ಕೆ ಅದು ಪ್ರತಿಯಾಗಿ ಯಾವ ಫಲವನ್ನೂ ಅಪೇಕ್ಷಿಸುವುದಿಲ್ಲ. ತನ್ನ ಶ್ರಮವನ್ನು ಲೆಕ್ಕಿಸುವುದಿಲ್ಲ.

ಭಗವಂತನು ಶಾಮಮೇಘದಂತೆಯೇ ಆಕಾಶತತ್ವದವನು. ಅವನು ಹೊತ್ತಿರುವುದಲ್ಲ ಸೃಷ್ಟಿಯ ಮೇಲೆ ಪಂಪ್ರಾಣವಾದ ಕ್ಷಾಲೆ ರೀತಿ! ಔದಾರ್ಯದಲ್ಲಿ, ಉಪಕಾರದಲ್ಲಿ, ದಯೆ ರಕ್ಷಣೆಯಲ್ಲಿ ಭಗವಂತ

Garani Srinivasan

ಸಾಟಿಯೇ ಇಲ್ಲ.

ಮೋಕ್ಷದಲ್ಲಿ ನಾಲ್ಕು ಬಗೆ ಎನ್ನುತ್ತಾರೆ: ಸಾಮೀಪ್ಯ, ಸಾರೂಪ್ಯ, ಸಾಲೋಕ್ಯ, ಸಾಯುಜ್ಯ ಎಂಬವು. ಕಾಮುಕಿಗಳಲ್ಲಿ ನಾಯಕಿ ಎರಡನ್ನು ಸಾಧಿಸಿಕೊಂಡಿವೆ ಎಂದು ಕಂಡುಕೊಳ್ಳುತ್ತಾಳೆ. ಮೇಲಣ ಲೋಕದಲ್ಲಿ ತೇಲಾಡಿ ಅಲೆದಾಡುವುದರಿಂದ ಕಾಮುಕಿಗಳು ಭಗವಂತನ ಲೋಕಕ್ಕೆ ಹತ್ತಿರ ಸಾಮೀಪ್ಯವನ್ನು ಪಡೆದಂತೆಯೇ. ಆಕರ್ಷಕವಾದ ಭಗವಂತನ ರೂಪವನ್ನು, ಅವನ ಸೌಂದರ್ಯವನ್ನು, ಜೀವರಕ್ಷಕತ್ವವನ್ನು ಹೊಂದಿರುವುದರಿಂದ ಭಗವಂತನ ಸಾರೂಪ್ಯವನ್ನು (ಸಮೀಪಿಸಿದಂತೆಯೇ) ಪಡೆದುಕೊಂಡಂತೆಯೇ ಆಯಿತು.. ಇಷ್ಟು ಮಟ್ಟಿನ ಸ್ಥಿತಿಗೆ ಬರುವುದಕ್ಕೆ ಕಷ್ಟಸಾಧನೆಯು ಹೆಚ್ಚೇನೂ ಇರಬೇಕಿಲ್ಲ!

ನಾಯಕಿ ಹೇಳುತ್ತಾಳೆ: ಕಾಮುಕಿಗಳೇ, ಸರ್ವೇಶ್ವರನ ಬಣ್ಣವಾದ ರೂಪ ಸೌಂದರ್ಯವನ್ನು ಹೊಂದುವ ಉಪಾಯ ನಿಮಗೆ ತಿಳಿಯಿತೆ? ಅದನ್ನು ಪಡೆದುಕೊಂಡದ್ದು ಹೇಗೆ? ನಿಮ್ಮ ಮಹೋಪಕಾರದ ಕೆಲಸದಿಂದಲೇ? ಬೇರೆ ಬೇರೆ, ಎಲ್ಲಾ, ನಲ್ಲೆಲೆಗಳಿಂದಲೂ ನೀರನ್ನು ಹೀರಿಕೊಂಡು, ಹೊಟ್ಟೆ ಬಿರಿಯುವಂತೆ ತುಂಬಿಕೊಂಡು, ನಿಮ್ಮ ದೇಹಕ್ಕೆ ಆಗುವ ಬಾಧೆಯನ್ನು ಲೆಕ್ಕಿಸದೆ, ಅದನ್ನು ಹೊತ್ತು ಮೇಲಣ ಎಲ್ಲಾ ಲೋಕಗಳಲ್ಲೂ ಅಲೆದಾಡಿ, ಅಲ್ಲಲ್ಲಾ ಉದಾರವಾಗಿ ನೀರನ್ನು ಸುರಿಸುವ ಈ ನಿಮ್ಮ ಕಠಿಣ ತಪಸ್ಸೇ ಅದಕ್ಕೆ ಕಾರಣವೆನ್ನಬಹುದೇ? ಹೇಳಿ.

33. அருளார் திருச்சக்கரத்தால் அகல்விசும்பும் நிலனும்,
இருளார் வினைகெடச் செங்கோல் நடாவுதிர், ஈங்கோர் பெண்பால்
பொருளோவெனு மிகழ்வோ? இவற்றின் புறத்தாளென்றெண்ணோ?
தெருளோம் அரவணையீர்!, இவள் மாமை சிதைக்கின்றதே.

ಅರುಳಾರ್ ತಿರುಚ್ಚಕ್ಕರತ್ತಾಲ್ ಅಗಲ್ ವಿಶುಮ್ಬುಮ್ ನಿಲನುಮ್,
ಇರುಳಾರ್ ವಿನೈಕೆಡಚ್ ಚೆಂಗೋಲ್ ನಡಾವುದಿರ್, ಈಂಗೋರ್ ಪೆಣ್ಪಾಲ್
ಪೊರುಳೋವೆನು ಮಿಗಳ್ವೋ? ಇವಟ್ರಿನ್ ಪುಱತ್ತಾಳೆನ್ಱೆಣ್ಣೋ?
ತೆರುಳೋಮ್ ಅರವಣೈಯೀರ್!, ಇವಳ್ ಮಾಮೈ ಶಿದೈಕ್ಕಿನ್ಱದೇ.

ಅರುಳ್ ಆರ್ அருள் ஆர் = ಕೃಪೆ (ಕರುಣೆ) ತುಂಬಿದ, ತಿರುಚಕ್ಕರತ್ತಾಲ್ திருசக்கரத்தால் = ಪವಿತ್ರವಾದ ಚಕ್ರಾಯುಧದಿಂದ, ಅಗಲ್ அகல் = ವಿಶಾಲವಾದ

ವಿಶುಮ್ಬುಮ್ விசும்பும் = ಮೇಲಣಾಲೋಕಗಳನ್ನು, ನಿಲನುಮ್ நிலனும் = ಭೂಲೋಕವನ್ನು, ಇರುಳ್ ಆರ್ இருள் ஆர் = ಕತ್ತಲೆಯಂತೆ ಕ್ರೂರವಾದ, ವಿನೈ வினை = ಪಾಪಗಳು, ಕೆಡ கெட = ನಾಶವಾಗುವಂತೆ, ಶೆಙ್ಗೋಲ್ செங்கோல் = ಕಟ್ಟಳೆಯನ್ನು, ನಡಾವುದಿರ್ நடாவுதீர் = ನಡೆಸುತ್ತೀರಿ, ಈಙ್ಗು ஈங்கு = ಇಲ್ಲಿ, ಓರ್ ஓர் = ಒಬ್ಬ, (ಒಂಟಿಯಾದ), ಪೆಣ್ಪಾಲ್ பெண்பால் = ಹೆಣ್ಣಿನ ವಿಷಯದಲ್ಲಿ, ಪೊರುಳೋ ಎನುಮ್ பொருளோ எனும் = (ಯಾವ) ಮಹತ್ವವಿದೆ ಎಂಬ, ಇಕಳ್ವೋ இகழ்வோ = ಅನಾದರಯೋ?, (ನನ್ನ ಆಡಳಿತದ ಕಟ್ಟಳೆಗಳಿಗೆ), ಪುಱ- ಇವಟ್ರಿನ್ இவற்றின் = ಇವುಗಳಿಗೆ (ನನ್ನ ಆಡಳಿತದ ಕಟ್ಟಳೆಗಳಿಗೆ), ಪುಱ-ತ್ತಾಳ್ புறத்தாள் = ಹೊರಗಿನವಳು, ಎನ್ಱು என்று = ಎಂಬ, ಎಣ್ಣೋ எண்ணோ = ಅಭಿಪ್ರಾಯವೋ?, ತೆರುಳೋಮ್ தெருளோம் = ತಿಳಿಯಲಾರೆವು, ಅರವು ಅಣೈಯಿಲ್ அரவு அணையீர் = ಶೇಷನ ಹಾಸುಗೆಯಾಗಿ ಉಳ್ಳವರೇ, ಇವಳ್ இவள் = ಇವಳ, ಮಾಮೈ மாமை = ದೇಹಸೌಂದರ್ಯವು, ಶಿದೈಕ್ಕಿನ್ಱದೇ சிதைக்கின்றதே = ಶಿಥಿಲವಾಗುತ್ತಿದೆಯಲ್ಲ!

ಕೃಪೆ (ಕರುಣೆ) ತುಂಬಿದ ಪವಿತ್ರವಾದ ಚಕ್ರಾಯುಧದಿಂದ ವಿಸ್ತಾರವಾದ ಮೇಲಣಾಲೋಕಗಳನ್ನು ಭೂಲೋಕವನ್ನು ಕತ್ತಲೆಯಂತೆ ಕ್ರೂರವಾದ ಪಾಪಗಳು ನಾಶವಾಗುವಂತೆ ಕಟ್ಟಳೆಯನ್ನು ನಡೆಸುತ್ತೀರಿ, ಶೇಷನ ಹಾಸುಗೆಯಾಗಿ ಉಳ್ಳವರೇ, ಇಲ್ಲಿ ಒಂಟಿಯಾದ ಹೆಣ್ಣಿನ ವಿಷಯದಲ್ಲಿ ಯಾವ ಮಹತ್ವವಿದೆ ಎಂಬ ಅನಾದರಯೋ? ಇವುಗಳಿಗೆ (ನನ್ನ ಕಟ್ಟಳೆಗಳಿಗೆ) ಇವಳು ಹೊರಗಿನವಳು ಎಂಬ ಅಭಿಪ್ರಾಯವೋ? ತಿಳಿಯಲಾರೆವು. ಇವಳ ದೇಹಸೌಂದ- (33)
ರ್ಯವು ಶಿಥಿಲವಾಗುತ್ತಿದೆಯಲ್ಲ!

"ಅರುಳಾರ್ ತಿರುಚ್ಚಕ್ಕರತ್ತು" — ಭಗವಂತನು ಹಿಡಿದಿರುವ ಚಕ್ರಾಯುಧವು ಕೃಪಾಪೂರ್ಣವಾದದ್ದು ಎಂದು ಹೇಳಲಾಗಿದೆ. ಬಲಿಷ್ಠವಾದ ಹಲ್ಲುಗಳುಳ್ಳ ಅದು ದುಷ್ಟರ ವಿಷಯದಲ್ಲಿ ಕಡುಕ್ರೂರವಾದದ್ದು. ಆದರೆ, ಶಿಷ್ಟರ ಪರವಾಗಿ ಮಾಡುವ ಈ ಕೆಲಸದಲ್ಲಿ ಅದಕ್ಕೆ ನಿಷ್ಕರುಣೆ. ಶಿಷ್ಟರಲ್ಲಿ ಅದಕ್ಕೆ ಪರಿಪೂರ್ಣವಾದ ಕನಿಕರ.

"ಅರವಣೈಯಿಲ್ ಅಕಲ್ ವಿಶುಮ್ಬುಮ್ ನಿಲನುಮ್ ಇರುಳಾರ್ ವಿನೈ ಕೆಡ ಚೆಙ್ಗೋಲ್ ನಡಾವುದಿರ್" — ಭಗವಂತನು ಶೇಷಶಯನನಾ

ಪಾಲ್ಗಡಲಲ್ಲಿ ವಿಹರಿಸಿ ಯೋಗನಿದ್ರೆಯಲ್ಲಿದ್ದಾಗಲೂ, ಅವನ ಆಡಳಿತ ಚಕ್ರಾಯುಧದ ಮೂಲಕ ನಡೆಯುತ್ತದೆ. ಎಲ್ಲ ಲೋಕಗಳೂ ಅವನ ಕಟ್ಟಳೆಗೆ ಬದ್ಧವಾಗಿವೆ. ಆ ಕಟ್ಟಳೆ ಕಡುಕ್ರೂರವಾದ ಪಾಪಿಗಳನ್ನು ನಿರ್ಮೂಲಗೊಳಿಸಿ, ಪ್ರತಿ ಜೀವನನ್ನೂ ಮುಕ್ತನಾಗುವುದಕ್ಕೆ ಅನುಕೂಲ ಮಾಡಿಕೊಡುತ್ತದೆ. ಜೀವರಲ್ಲಿ ಭಗವಂತನಿಗಿರುವ ಅಪಾರ ಕಾರುಣ್ಯವೇ ಇದಕ್ಕೆ ಕಾರಣ.

ನಾಯಕಿ ಹೇಳುತ್ತಾಳೆ: ಸ್ವಾಮೀ, ನೀವು ಶೇಷನನ್ನು ಹಾಸಿಗೆಯಾಗಿ ಮಾಡಿಕೊಂಡು, ನಿಶ್ಚಿಂತರಾಗಿ, ಪಾಲ್ಗಡಲಲ್ಲಿ ವಿಹರಿಸುತ್ತೀರಿ. ನಿಮ್ಮ ಕಟ್ಟಳೆಯನ್ನು ನಿಮ್ಮ ಚಕ್ರಾಯುಧದ ಮೂಲಕ ಎಲ್ಲಾ ಲೋಕಗಳಲ್ಲೂ ತಪ್ಪದೆ ನಡೆಸುತ್ತಿದ್ದೀರಿ. ಎಲ್ಲಾ ಜೀವನರ ಕಡುಕ್ರೂರ ಪಾಪಗಳೂ ನಾಶವಾಗುವಂತೆ ನೀವು ಆಡಳಿತ ನಡೆಸುತ್ತಾ, ಅವರು ಪರಮಪದವನ್ನು ಪಡೆದುಕೊಳ್ಳುವುದಕ್ಕೆ ದಾರಿ ಮಾಡಿಕೊಡುತ್ತೀರಿ. ಹೀಗೆ, ಪರಿಪೂರ್ಣರಾದ ನೀವು, ನಿಮ್ಮನ್ನೇ ಪರಿಪೂರ್ಣವಾಗಿ ನಂಬಿರುವ, ಒಂಟಿಯಾಗಿ, ನಿಮಗಾಗಿ ಕಾತರದಿಂದ ಕೊರಗುತ್ತಿರುವ ಹೆಣ್ಣಿನ ವಿಷಯದಲ್ಲಿ ಅಲಕ್ಷ್ಯ ತೋರುತ್ತೀರಿ. ಇವಳ ವೈಶಿಷ್ಟ್ಯವೇನು ಎಂತಲೇ? ಹೊರಗಿನವಳಾಗಿ ನನ್ನ ಕಟ್ಟಳೆಗೆ ಇವಳು ಬದ್ಧಳಲ್ಲ ಎಂತಲೇ? ನಿಮ್ಮ ಮನೋಹರತೆಯೇ ತಿಳಿಯಲು ಸಾಧ್ಯವಿಲ್ಲವಲ್ಲ! ಇವಳು ದಿನದಿನವೂ ಕ್ಷೀಣಿಸುತ್ತಾ, ತನ್ನ ದೇಹಸೌಂದರ್ಯವನ್ನು ಕಳೆದುಕೊಳ್ಳುತ್ತಾ ಇದ್ದಾಳೆ. ಇವಳನ್ನು ಕನಿಕರಿಸಬಾರದೇ?

ಭಗವಂತನ ಸೃಷ್ಟಿಯಲ್ಲಿ ಯಾರೇ ಆದರೂ ಅವನ ಕಟ್ಟಳೆಗೆ ಹೊರಗಿನವರಾಗಿರುವುದಕ್ಕೆ ಸಾಧ್ಯವೇ ಇಲ್ಲ. ನಾಯಕಿಗೆ ಒಂದು ಬಗೆಯ ಅನುಮಾನ: ತಾನು ಆ ಕಟ್ಟಳೆಗೆ ಹೊರಗಿನವಳಾದಳೆಂಬ ಅದಕ್ಕೆ ತನ್ನ ಪ್ರಿಯತಮನು ತೊರೆದಿರಬಹುದೇ ಎಂದು. ತನಗೆ ಬೇಕೆಂದಾಗ ತಾನು ಕರೆದಾಗ ಅವನು ಬರಲಿಲ್ಲವೆಂಬ ಕಾರಣದಿಂದ.

34. சிதைக்கின்ற தாழி யென்றாழியைச்சீறி, தன்
சீறடியால்
உதைக்கின்ற நாயகந் தன்னொடு மாலே!, உனது
தண்டார்
ததைக்கின்ற தண்ணந்துழா யணிவானதுவே
மனமாய்ப்
பதைக்கின்ற மாதிந் திறத்து, அறியேன்
செயற்பாலதுவே.

ಶಿದೈಕ್ಕನ್ ಉದಾಲಿ ಯೆನ್ ಊಲಿಯೈಪ್ಪೇಲಿ, ಶಿನ್ ಶೇಲಡಿಯಾಲ್
ಉದೈಕ್ಕನ್ ಉ ನಾಯುದನ್ದನ್ನೋಡು ಮಾಳೇ!, ಉನದು ಶನ್ದಾರ್
ಶದೈಕ್ಕನ್ ಉ ಶಣ್ಣುಲುಡಾ ಯನೀವಾನದುವೇ ಮನಮಾಯ್
ಪದೈಕ್ಕನ್ ಉ ಮಾದಿನ್ ತಿಲಿಕ್ಕು, ಅಟಿಯೋನ್ ಶೆಯಲ್ ಆವಾಲದುವೇ.

ಶಿದೈಕ್ಕನ್ ಉದು ಚಿತೈಕ್ಕಿನ್ರದು = ಚೆದರುತ್ತಿದೆ, ಊಲಿ ಊಳ್ = (ನನ್ನ) ವೃತ್ತವನ್ನು, ವೃತ್ತವು, ಎನ್ ಉ ಎನ್ನು = ಎಂದು, ಊಲಿಯೈ ಊಳ್ ಹೀಳ್ = ಆ ವೃತ್ತವನ್ನು, ಶೇಲಡಿ ಶೇರ್ = ಕೋಪಿಸಿ, ಶಿನ್ ತನ್ = ಚಿನ್ನ, ಶೇಲಡಿಯಾಲ್ ಶೇರ್ ಅಡಿಯಾಲ್ = ಕೋಪದ ಕಾಲಿನಿಂದ, ಉದೈಕ್ಕನ್ ಉ ಉದೈಕ್ಕಿನ್ರ = ಒದೆಯುವ, ನಾಯುದನ್ದನ್ನೋಡು ನಾಯಕಂ ತನ್ನೋಡು = ಒಡೆಯನಿಂದ, ಮಾಳೇ ಮಾಳೆ = ಒಡೆಯ ತನ್ನೋಡು ನಾಯಕಂ ತನ್ನೋಡು = ಒಡೆಯನಿಂದ, ಮಾಳೇ ಮಾದೇವ = ಒಡೆಯ ಶಿವನೇ, ಉನದು ಉನದು = ನಿನ್ನ, ಶನ್ದಾರ್ ತನ್ದಾರ್ = ತಂಪಾದ ಹೂಗಳು, ಶದೈಕ್ಕನ್ ಉ ತದೈಕ್ಕಿನ್ರ = ತುಂಬಿರುವ, ಶಣ್ ಅವಳ್ ತಣ್ ಅಂ = ತಂಪಾಗಿ, ಶಣ್ಣುಲುಡಾಯ್ ತುಳಾಯ್ = ತುಳಸಿಯನ್ನ, ಅನೀವಾನ್ ಅಣಿವಾನ್ = ಧರಿಸಿರುವ, ಶುಳುಯ್ ತುಳಾಯ್ = ತುಳಸಿಯನ್ನು, ಅದುವೇ ಮನಮಾಯ್ ಅದುವೇ ಮಾನಮಾಯ್ = ಅದೇ ಮುಡಿಯು ಪ್ರದಕ್ಕಾಗಿ, ಅದುವೇ ಮನಮಾಯ್ ಅತುವೇ ಮಾನಮಾಯ್ = ಅದೇ ಮನದಿಂದ, ಪದೈಕ್ಕನ್ ಉ ಪದೈಕ್ಕಿನ್ರ = ಸಂಕಟ ಪಡುತ್ತಿರುವ, ಮಾದಿನ್ ತಿಲಿಕ್ಕು ಮಾದ್ ತಿನ್ ತಿಳಿಕ್ಕು = ಈ ಹೆಣ್ಣಿನ ವಿಷಯದಲ್ಲಿ, ಅಟಿಯೋನ್ ಅಡಿಯೇನ್ = ಮೂಢ ಶಕ್ತನಾದ ನಾನು, ಶೆಯಲ್ ಆವಾಲದು ಶೆಯ್ಯಪ್ಪಾಲದು = ನಾನರಿಯೆನು, ಎಂಬುದು.

(ನನ್ನ) ವೃತ್ತವು ಚೆದರುತ್ತಿದೆ ಎಂದು ಆ ವೃತ್ತದ ಮೇಲೆ ಕೋಪಿಸಿ, ಚಿನ್ನ ಕೋಪದ ಕಾಲಿನಿಂದ ಒದೆಯುವ ಒಡೆಯನಿಂದಲೇ, ಒಡೆಯನೇ! ನಿನ್ನ ತಂಪಾದ ಹೂಗಳು ತುಂಬಿರುವ ತಂಪಾಗಿ ಹೊಗದಾಗಿರುವ ನಿನ್ನ ತುಳಸಿಯನ್ನ ಮುಡಿಯು ಪ್ರದಕ್ಕಾಗಿ, ಅದೇ ಮನದಿಂದ ಸಂಕಟ ಪಡುತ್ತಿರುವ ಈ ಹೆಣ್ಣಿನ ವಿಷಯದಲ್ಲಿ ಮೂಢ ಶಕ್ತನಾದ ನಾನು ಎಂಬುದನ್ನು ನಾನರಿಯೆನಲ್ಲ! (34)

"ಶಿದೈಕ್ಕನ್ ಉದಾಲಿ" — ಚಿನ್ನ ಪ್ರಿಯ ಕರನಿಂದ ಬೇರ್ಪಟ್ಟ ಪ್ರಿಯೆಯು (ಹೆಣ್ಣು) ಮತ್ತೆ ಕಮ್ಮಿಬ್ಬರ ಸಮಾಗಮವಾಗ ಬೇಕೆಂಬುದಕ್ಕಾಗಿ ಮಾಡುವ ಪ್ರಕ್ರಿಯೆಂಬಿದೆ: ವಿಂಶುದ್ಧವಾದ ಮತ್ತು ಸುಟ್ಟಾದ ಸ್ಥಳದಲ್ಲಿ, ಚಿನ್ನ ಮತ್ತು ಚಿನ್ನ ಪ್ರಿಯಕರನ ಕೂಡಿಕೆಯ ಸಂಕಲ್ಪವನ್ನ ಸ್ಮರಿಸಿಕೊಳ್ಳುತ್ತಾ, ಮೊದಲು ಒಂದು ವೃತ್ತವನ್ನು ಮರಳಿನ ಮೇಲೆ ಬರೆಯುವುದು. ಆ ಮೇಲೆ, ದಿನ ದಿನವೂ ಆ ವೃತ್ತದ ಸುತ್ತಲೂ ಒಂದೊಂದು ವೃತ್ತವನ್ನು ಬರೆಯುತ್ತಾ ಹೋಗುವುದು. ಒಂದು ಮಂಡಲ ಅಥವಾ ನಿರ್ದಿಷ್ಟವಾದ ದಿನಗಳವರೆಗೆ ಹಾಗೆ ವೃತ್ತಗಳನ್ನು ಬರೆಯುತ್ತಾ, ಅವುಗಳನ್ನು ಪೂಜಿಸುವುದು ಸಂಪ್ರದಾಯ.

Garani Srinivasan

ವ್ರತಗಳನ್ನು ಬರೆಯುವಾಗ ಆಗಲಿ, ಅನಂತರವಾಗಲಿ, ಅಪ್ರಿಯ ಬಾರದು - ಚಿಂತೆ ಬಾರದು - ಇದು ನಿಯಮ. ಕಷ್ಟದ್ರೋಹದರೆ, ತಮ್ಮ ಕೋರಿಕೆಗೆ ಭಂಗ ಬರುವುದೆಂಬುದು ನಂಬಿಕೆ.

ಈ ಕಾಲದಲ್ಲಿ, ನಾಯಕಿ ಈ ವ್ರತವನ್ನು ಕೈಕೊಂಡಿದ್ದಾಳೆ. ಅದನ್ನು ಶ್ರದ್ಧೆಯಿಂದ ನಡೆಸುತ್ತಿದ್ದಾಳೆ. ಎಂದೋ ಒಂದಾನ, ಒಂದು ರಡಿಯಲ್ಲಿ ತನ್ನ ವ್ರತಗಳಿಗೆ ಭಂಗವುಂಟಾಯಿತೆಂದು ಕಂಡಳು. ಅವಳಿಗೆ ಕೋಪ ಬಂತು. ತಮ್ಮ ನಡುವಣ ಪ್ರೇಮಕ್ಕೆ ಭಂಗವುಂಟಾಯಿತಲ್ಲ ಎಂಬ ಕೋಪದಿಂದ, ದುಡುಕಿ, ತನ್ನ ಕಾಲಿನಿಂದ ಆ ವ್ರತಗಳನ್ನು ಒದೆದು ಅಪವಿತ್ರ ಮಾಡಿದಳು.

ಹೀಗೆ ಮಾಡುವುದು ಯಾವ ನ್ಯಾಯ? ನಾಯಕಿಗೆ ತನ್ನ ತಪ್ಪು ಅರಿವಾಯಿತು. ಈಗ ಮಾಡುವುದೇನು? ಅದನ್ನು ತಿದ್ದಿಕೊಳ್ಳುವುದಕ್ಕೆ ಮಾಡಬೇಕಾದ್ದೇನು? ತನ್ನ ಮನದಾಶೆಯನ್ನು ಪೂರೈಸುವುದು ಹೇಗೆ? ಇದು ಇಲ್ಲಿನ ಸಮಸ್ಯೆ.

ನಾಯಕಿ ಹೇಳುತ್ತಾಳೆ: ನನ್ನೊಡೆಯಾ, ನೀನು ಧರಿಸಿರುವ [illegible] ಪರಿಮಳಭರಿತವಾದ ತುಳಸಿಯನ್ನು ನಾನು ಮುಡಿಯಬೇಕೆಂಬ ಆಸೆಯಿಂದ ಮರಳಿನ ಮೇಲೆ ವ್ರತಗಳನ್ನು ಬರೆದು ಪೂಜಿಸುವ ವ್ರತವನ್ನು ಕೈಕೊಂಡೆ. ನನ್ನ ವ್ರತಗಳು ಚೆದರುತ್ತ ಬಂದದ್ದನ್ನು ಕಂಡು ನನಗೆ ಕೋಪ ಬಂತು. ಆ ಕೋಪದಿಂದಲೇ, ಆ ವ್ರತಗಳನ್ನು ಕಾಲಿನಿಂದ ಒದೆದು ಅಪವಿತ್ರಗೊಳಿಸಿದೆನು. ಹೀಗಾಗಿ, ನನ್ನ ವ್ರತವು ಮುರಿಯಿತಲ್ಲ, ನನ್ನ ಸಂಕಲ್ಪವು ತಪ್ಪಿತಲ್ಲ. ಈಗ, ನನ್ನ ಮನದಾಶೆಯನ್ನು ಪೂರೈಸಲು, ನಾನೇನು ಮಾಡಬೇಕೆಂದೇ ಅರಿಯೆನಲ್ಲ!

35. பால்வாய்ப் பிறைப்பிள்ளை யொக்கலைக்கொண்டு பகலிழந்த,
மேல்பாற்றிசைப்பெண் புலம்புறு மாலை, உலகளந்த
மால்பாற்றுழாய்க்கு மனமுடையார்க்கு நல்கிற்றையெல்லாம்
சொல்வான் புகுந்து, இதுவோர் பனிவாடை துழாக்கின்றதே.

ಪಾಲ್ವಾಯ್ ಪ್ಪಿಱೈಪ್ಪಿಳ್ಳೈ ಯೊಕ್ಕಲೈಕ್ಕೊಣ್ಡು ಪಗಲಿೞನ್ದ,
ಮೇಲ್ಪಾಱ್ತಿಸೈಪ್ಪೆಣ್ ಪುಲಮ್ಬುಱು ಮಾಲೈ, ಉಲಗಳನ್ದ
ಮಾಲ್ಪಾಱ್ತುೞಾಯ್ಕ್ಕು ಮನಮುಡೈಯಾರ್ಕ್ಕು ನಲ್ಗಿಱ್ಱೈಯೆಲ್ಲಾಮ್
ಸೊಲ್ವಾನ್ ಪುಗುನ್ದು, ಇದುವೋರ್ ಪನಿವಾಡೈ ತುೞಾಕ್ಕಿನ್ಱದೇ.

Garani Srinivasan

ಪಾಲ್ ವಾಯ್ ಪಾಱ್ ಮಾಱು = ಹಾಲಿನ ಬಾಯುಳ್ಳ, ಪಿಱೈ ಪಿಳ್ಳೈ ಪಿಱೈ
ಪಿಱೈಯೆ = ಬಾಲಚಂದ್ರನೆಂಬ ಮಗುವನ್ನು, ಒಕ್ಕಲೈ ಕೊಣ್ಡು ತಿಕಳ ಕೊಣ್ಡು
= ಸೊಂಟದಲ್ಲಿಟ್ಟುಕೊಂಡು, ಪಿಱಲ್ ಇಱಿನ್ದ ಮೇಲ್ ಪಕ್ಕ ಇಱುನ್ದ ಮೇಱು = ಹಗಲು ಮುಗಿ
ದ ಮೇಲೆ, ಪಾಲ್ ಶಿತ್ತ ಪೆಱ್ ಪಾಱ್ ಕೆಲ್ಲೈ ಪೆಣ್ = ಆದಿಕ್ಕೆಂಬ ಹೆಣ್ಣು, ಪುಲಮ್ಬು
ಬಿಱುವ ಮಾಲೈ ಪುಱಮ್ಪು ಉಱುಮ್ = ಬರಲ್ಪಾಗ ಸಂಜೆಬಪಿಡುವ, ಮಾಲೈ ಮಾಲೈ =
ಸಂಧ್ಯಾಕಾಲವು, ಬಲದಪ್ಪು ಅಳನ್ದ ಉಲಗು ಅಳನ್ದ = ಲೋಕಗಳನ್ನು ಅಳೆದ,
ಮಾಲ್ ಪಾಲ್ ಮಾಱ್ ಪಾಱ್ = ಭಗವಂತನಲ್ಲಿನ, ತುಳಾಯ್ಕ್ಕು ತುೞಾಯ್ಕ್ಕು =
ತುಲಸಿಗಾಗಿ, ಮನಮ್ ಉದ್ದೈಯಾರ್ಕ್ಕು ಮಣಮ್ ಉಡೈಯಾರ್ ಕ್ಕು = ಆಸೆ
ಯುಳ್ಳವಳಿಗೆ, ನಲ್ಪಾಡ್ರ್ಕ್ಕೆ ಎಲ್ಲಾಮ್ ನ್ರುವ ಕಿಱ್ರೈ ನಾಲ್ ನಾಮ್ = ಕ್ರೂರ
ಡುವಯುವಕಾರವಲ್ಲವನ್ನು, ಕೋಲ್ ಮಾನ್ ಶೋಱ್ ಯಾಣ್ = ಕೊಡತಕ್ಕ ಬಿಳ್ಳುವು
ದಕ್ಕಾಗಿ, ಪುಕುನ್ದು ಪುಗುನ್ದು = ಬಂದು, ಇದು ಓರ್ ಇಡು ಧಾರ್ = ಇದೊಂದು
ವನವಾಸ್ಯ ಪಣಿ ಯಾಡೈ = ಶಂಗಾಳಯು, ತುಳಾಕ್ಕಿನ್ ಅದೇ ತುೞಾಕ್
ಕಿಣ್ಣಱ್ರೇ = ಸ್ವಾರಸ್ಯವಿಲ್ಲ!

ಹಾಲಿನ ಬಾಯುಳ್ಳ ಬಾಲಚಂದ್ರನೆಂಬ ಮಗುವನ್ನು ಸೊಂಟದಲ್ಲಿಟ್ಟು
ಕೊಂಡು, ಹಗಲು ಮುಗಿದ ಮೇಲೆ, ಆ ದಿಕ್ಕೆಂಬ ಹೆಣ್ಣು ಬರಲ್ಪಾಗ ಸಂಜೆ
ಬಪಿಡುವ ಸಂಧ್ಯಾಕಾಲವು, ಲೋಕಗಳನ್ನಳೆದ ಭಗವಂತನಲ್ಲಿನ ತುಲಸಿ
ಗಾಗಿ ಆಸೆಯುಳ್ಳವಳಿಗೆ ಕ್ರೂರವಾಡುವ ಬಿಕಾರಗಳೆಲ್ಲವನ್ನು ಕೊಡತಕ್ಕ (35)
ಕೊಳ್ಳುವುದಕ್ಕಾಗಿ ಬಂದು, ಇದೊಂದು ಶಂಗಾಳಯು ಸ್ವಾರಸ್ಯವಿಲ್ಲ!

"ಪಾಲ್ ವಾಯ್ ಪಿಱೈ ಪ್ಪಿಳ್ಳೈ" — ಹುಟ್ಟಿದ, ಬಿಳಿ ಎಳೆಯ ಮಗುವನ್ನು 'ಹಾಲಹಸು
ಳೆ' ಎನ್ನುತ್ತಾರೆ. ಇಲ್ಲಿ ಅಂಥ 'ಹಾಲುಕೂಸು' ಬಾಲಚಂದ್ರನೇ. ಶುಕ್ಲಪಕ್ಷದ ಮೊದಲ
ಅಥವಾ ಎರಡನೆಯ ದಿನದ ಚಂದ್ರನು ಈ ಹಾಲಹಸುಳೆ.

ಇದೊಂದು ಬಹು ಸುಂದರವಾದ ರೂಪಕ: ಹಾಲುಕೂಸನ್ನು ತನ್ನ ಎದೆಗೆ
ಅಪ್ಪಿಕೊಂಡಿರುವ ಹೆಣ್ಣು ಹೇಗೋ ಹಾಗೆ, ಸೂರ್ಯನು ಮುಳುಗಿದ ಬಳಿಕ, ಎಳೆಯ
ಚಂದ್ರನನ್ನು ಎತ್ತಿಕೊಂಡಿದ್ದಾಳಂತೆ ಪಶ್ಚಿಮದಿಕ್ಕೆಂಬ ಹೆಣ್ಣು. ಪಶ್ಚಿಮದಿಕ್ಕನ್ನು ಹೆಣ್ಣಿಗೆ
ಹೋಲಿಸಲಾಗಿದೆ. ಬಾಲಚಂದ್ರ ಅವಳ ಮಗು. ಸೂರ್ಯನೇ ಅವಳ ಪತಿ. ಸಂಜೆಯ
ಹೊತ್ತಿನಲ್ಲಿ, ಸೂರ್ಯನು ಪಶ್ಚಿಮದಲ್ಲಿ ಮುಳುಗುತ್ತಲೇ, ಪತ್ನಿ ಕೆಂಪೇರಿರುವಂತೆ
ಬಾಲಚಂದ್ರನು ಕಾಣಿಸಿಕೊಳ್ಳುತ್ತಾನೆ. ಆದರೆ, ತನ್ನ ಪತಿಯಿಂದ ಅಗಲಿದ ಆ ಹೆಣ್ಣಿ
ಗೆ ಸಂಕಟ. ಕ್ರೌರ್ಯವಿಲ್ಲ ಇದರಲ್ಲಿ.

"ಬಲದಳನ್ದ ಮಾಲ್" — ಭಗವಂತನ ತ್ರಿವಿಕ್ರಮಾವತಾರದ ಸ್ಮರಣೆ ಇದು

ನಾಯಕಿ ಹೇಳುತ್ತಾಳೆ: ಸೂರ್ಯನು ಪಶ್ಚಿಮದಲ್ಲಿ ಮುಳುಗಿದನು.
ಸಂಜೆ ಬಂತು. ಬಾಲಚಂದ್ರನು ಕಾಣಿಸಿಕೊಂಡನು. ಪಶ್ಚಿಮದಿಕ್ಕೆಂಬ

Garani Srinivasa

ಹೀಗೂ, ತನ್ನ ಪಕ್ಕದಿಂದ ಸೂರ್ಯದೇವನ ಅಸಹನೀಯ ಸಂತಾಪವನ್ನು ಅನುಭವಿಸುತ್ತಾ, ತನ್ನ ದಾಲುಕೊನೆದ ಚಂದ್ರನನ್ನು ಎತ್ತಿಕೊಂಡಿರುವ ಕಾಲ ಇದು. ಅವಳ ದಾರಿಯಲ್ಲೇ, ಶ್ರೀವಿಕ್ರಮನಾದ ಭಗವಂತನು ಧರಿಸಿರುವ ತುಲಸಿಗಾಗಿ ಆಶಿಸಿಕೊಂಡಿರುವವರೆಲ್ಲಾ, ಆ ಸ್ವಾಮಿಯಿಂದ ಕಾಪು ಪಡೆದುಕೊಂಡ ಶ್ರೀವೈಷ್ಣವರಾದ ಉಪಕಾರಕರಲ್ಲನ್ನು ಎಲ್ಲವನ್ನು ಒಂದೊಂದಾಗಿ ಸ್ಮರಿಸಿಕೊಳ್ಳುವ ಕಾಲ ಇದು. ಅಂಥ ಈ ದಿಲ್ಲಾ ವೇಳೆ (ಸಾಯಂಕಾಲ ವೇಳೆ), ಈ ಕುಳ್ಳಿಗಾರ್ಲಿ ಇಯೆಂದು ಬೇಸ್, ಇವಳನ್ನು ಬಂಸು ಶ್ರೀದೇವರಲ್ಲ!

36. துழாநெடுஞ்சூழிருளென்று, தன் தண்டாரதுபெயரா
எழாநெடு ஊழி யெழுந்தவிக் காலத்து, எங்கொலோ
வழாநெடுந்துன்பத்த ளொன்றிரங்கார் அம்மனோ!, இலங்கைக்
குழாநெடு மாட மிடித்த பிரானார் கொடுமைகளே!

ತುಳಾ ನೆಡುಂಜೂಳಿರುಳೆನ್ರು, ತನ್ ತಣ್ಡಾರದು ಪೆಯರಾ
ಎಳಾ ನೆಡು ವೂಳಿ ಯೆಳುಂದವಿಕ್ಕಾಲತ್ತು, ಎಙ್ಗೊಲೋ
ವಳಾ ನೆಡುನ್ದುನ್ಬತ್ತಳೊನ್ರಿರಙ್ಗಾರಮ್ಮನೋ!, ಇಲಙ್ಗೈ
ಕ್ಕುಳಾ ನೆಡುಮಾಡಮಿಡಿತ್ತ ಪಿರಾನಾರ್ ಕೊಡುಮೈಗಳೇ!

ತುಳಾ துழா = ಕದಡದಂಥ, ನೆಡು ತುಳಾ நெடுசூழ் = ದಟ್ಟವಾಗಿ (ದೀರ್ಘವಾಗಿ) ಮುಸುಕಿಕೊಂಡಿರುವ, ಇರುಳ್ ಎನ್ರು இருள் என்று = (ಕತ್ತಲೆ ಎಂದು), ತನ್ தன் = ತನ್ನ, ತಣ್ தண் = ತಂಪಾದ, ತಾರ್ ಅದು தார் = ಹಾರ, ಪೆಯರ್ ಆ பெயரா = ವಿಷಯವಾಗಿ, ಎಳಾ எழா = ದಾರದ, ನೆಡು நெடு = ದೀರ್ಘವಾದ, ಊಳಿ ஊழி = ಯುಗಗಳು = ಉಂಟಾಗಲಾರದ, ನೆಡು நெடு = ದೀರ್ಘವಾದ, ಊಳಿ ஊழி = ಯುಗಗಳು (ಕಲ್ಪವು), ಎಳುನ್ದ எழுந்த = ಉಂಟಾದ, ಇ-ಕಾಲತ್ತು இ-காலத்து = (ಈ ಕಾಲದಲ್ಲಿ) ಈ ಸಮಯದಲ್ಲಿ, ಎಙ್ಗು எங்கு = ಇಲ್ಲ, ಇವಳೋ இவளோ = ಈ ನಾಯಕಿಯೋ, ವಳಾ வழா = ತಪ್ಪಿಸಿಕೊಳ್ಳಲಾಗದ, ನೆಡು ತುನ್ಬತ್ತಳ್ ನೆ(ಡು) துன்பத்தள் = ಗಾಢವಾದ ದುಃಖ ಪಡುವವಳು, ಎನ್ರು என்று = ಎಂದು, ಇರಙ್ಗಾರ್ இரங்கார் = ಕನಿಕರಿಸರಲ್ಲ, ಅಮ್ಮನೋ அம்மனோ = (ಆಯುದ್ಧದ) ಅಯ್ಯೋ, ಇಲಙ್ಗೈ இலங்கை = ಲಂಕೆಯ, ಕುಳಾ குழா = ಗುಂಪು ದಲ್ಲಿ, ನೆಡುಮಾಡಮ್ நெடுமாடம் = ಎತ್ತರವಾದ ಮಹಡಿಮನೆಗಳನ್ನೆಲ್ಲಾ ಇಡಿತ್ತ இடித்த = ನಾಶಪಡಿಸಿದ, ಪಿರಾನಾರ್ பிரானார் = ಸ್ವಾಮಿಯ,

ಕೇಡುಮೈಗಳೇ கொடுமைகளோ = ಪರಾಕ್ರಮಗಳೇ ಇವು?

ತಡಕಾಡುವಂಥ ದಟ್ಟವಾಗ (ದೀರ್ಘವಾಗಿ) ಮುಚ್ಚಿಕೊಂಡಿರುವ ಕತ್ತಲೆ ಎಂದು, ತನ್ನ ತಂಪಾದ (ತುಲಸಿಯ) ದಾರದ ವಿಷಯವಾಗ, ಉಂಟಾಗಲಾರದ, ದೀರ್ಘವಾದ (ಪ್ರಳಯ) ಕಲ್ಪವೇ ಉಂಟಾದ ಈ ಸಮಯದಲ್ಲಿ, ಇಲ್ಲಿ ಈ ನಾಯಕಿಯಾದರೋ, ತಡೆಯಲಾರದ ಗಾಢವಾದ (ವಿರಹ) ಸಂಕಟಪಡುವವಳು ಎಂದು, (ಅವರು) ಕನಿಕರಿಸರಲ್ಲ! ಅಯ್ಯೋ!! ಲಂಕೆಯ ಯುದ್ಧ ಹೂಡಿದಲ್ಲಿ ಎತ್ತರವಾದ ಮಹಡಿ ಮನೆಗಳನ್ನೆಲ್ಲಾ ನಾಶಪಡಿಸಿದ ಪರಾಕ್ರಮಗಳೇ ಇವು!? (36)

ಇಲ್ಲಿ ಸುಂದರವಾದ ವ್ಯಾಜಸ್ತುತಿ - ನಿಂದಾಸ್ತುತಿ ಇದೆ. ಭಗವಂತನು ಯಾರಲ್ಲಿ ಕನಿಕರ ಬೇಕು, ಯಾರಲ್ಲಿ ನಿಷ್ಠುರನಾಗಬೇಕು ಎಂಬುದನ್ನ ಅರಿಯನೇ? ಆಶ್ರಿತರ ಬಗ್ಗೆ ಅವನಿಗೆ ಅಪಾರವಾದ ಕರುಣೆ. ಆಶ್ರಿತವಿರೋಧಿಗಳ ಬಗ್ಗೆ ಅವನಿಗೆ ಅತ್ಯಂತ ಕಾಠಿಣ್ಯ.

ನಾಯಕಿ ಹೇಳುತ್ತಾಳೆ: ರಾತ್ರಿಯೂ ಯುಗವು. ಇದೇನು ಬಲು ದೀರ್ಘವಾದ ಕಗ್ಗತ್ತಲೆಯ ಪ್ರಳಯ ಕಲ್ಪವೋ ಎಂಬಂತೆ, ವಸ್ತುಗಳೇ ಕಾಣಿಸದೆ ಅವುಗಳನ್ನ ತಡಕಾಡುವ ಕತ್ತಲು ಕವಿಯಿತು. ಇಂಥ ಸಮಯದಲ್ಲಿ, ತಾನು ಧರಿಸಿರುವ ತಂಪಾದ ತುಲಸಿಯ ದಾರದ ವಿಷಯವಾಗ, ಇವಳಿಗೆ ತಡೆಯಲಾರದ ಸಂಕಟವುಂಟಾಗಿದೆಯಲ್ಲ ಎಂದಾದರೂ ಅದನ್ನ ದಯೆನೀಡುವುದಕ್ಕಾಗಿ ಸ್ವಾಮಿಯು ಇವಳಲ್ಲಿ ಕನಿಕರಿಸಲಿಲ್ಲವಲ್ಲ! ಅಯ್ಯೋ!! ಲಂಕೆಯನ್ನ ಮುತ್ತಿ, (ಅಲ್ಲಿ ಸೆರೆಯಲ್ಲಿ ಸಂಕಟಪಡುತ್ತಿದ್ದ ಸೀತಾದೇವಿಗಾಗಿ) ಅದನ್ನ ನಿರ್ನಾಮಗೊಳಿಸಿದ ಶ್ರೀರಾಮನಾದ ಭಗವಂತನ (ಸ್ವಾಮಿಯ) ನಿಷ್ಠುರತ್ವವೋ ಇದು? ಆ ಪರಾಕ್ರಮವನ್ನ ಈ ದೀನಳ ಮೇಲೆ ಏಕೆ ತೋರಿಸುವುದು?

37. கொடுங்காற்சிலையர் நிரைகோளுழவர், கொலை
யில் வெய்ய
கடுங்காலிளைஞர் துடிபடுங்கவ்வைத்து, அரு
வினையேன்
நெடுங்காலமுங் கண்ணன் நீண்மலர்ப்பாதம்
பரவிப்பெற்ற
தொடுங்காலொசியுமிடை, இளமான்சென்ற
சூழ்கடமே.

ಕೊಡುಙ್ಗಾಲ್ ಕಿಲ್ಲೈಯರ್ ನಿಕ್ಕ ಕೋಲಿಳುಲಿವರ್, ಕೊಲ್ಲೈಯಿಲ್ ವೆಯ್ಯ
ಕಡುಙ್ಗಾಲಿಳ್ಳೈಞರ್ ಕುಡಿ ಪಿಡುಙ್ಗ ಪ್ಪೆಯರ್ತ್ತು, ಅರುವಿನ್ನೈಯೂಲನ್
ನೆಡುಙ್ಗಾಲಮುಙ್ಗಣ್ಣಾನ್ ನೀಳ್ನೋ ಮಲರ್ ಪ್ಪಾದಮುಂ ಪರವಿ ಪ್ಪಿಣ್ರ
ಕೊಡುಙ್ಗಾಲೊ ಕಯುಮಿಡ್ರ್ರೆ. ಇಳ್ಳಮೂನ್ ಶೆನ್ನಾಟಿ ಕೂಲಿರ್ ಕಡಮೇ.

ಕೊಡುಙ್ಗಾಲ್ ಕಿಲ್ಲೈಯರ್ கொடுங்காற் கில்லையர் = ಬಿಲ್ಲನ್ನು (ಬಗ್ಗಿಸಿ,
ಹೆದೆಯೇರಿಸಿ, ಅಂಬನ್ನು ಕೂಡಿಸಿ, ಕಿವಿಯವರೆಗೆ ಎಳೆದು) ಸಿದ್ಧವಾಗಿ ಹಿಡಿದವರೂ,
ನಿಕ್ಕೆ ಕೋಲಿಳ್ ಉಲಿವರ್ நிரை கோல் உழுவர் = ವಿಶೂಲಗಳನ್ನು ಕೊಲ್ಲು
ವುದರಲ್ಲಿ ಕೊಡಗಿರುವವರೂ, ಕೊಲ್ಲೈಯಿಲ್ ವೆಯ್ಯ கொல்லையிற் வெய்ய =
ಕೊಲೆಮಾಡುವುದರಲ್ಲಿ ಕ್ರೂರಿಗಳೂ, ಕಡು ಕಾಲ್ கடுங்கால் = ಬಲುದೂರ (ಬೇಗ)
ನಡೆಯುವ ಶಕ್ತ ಕಾಲುಗಳುಳ್ಳವರೂ, ಇಳ್ಳೈಞರ್ இளைஞர் = ವೀರಯುವಕರೂ,
~~(ಸುಡಿಸಾವ)~~, ಕುಡಿ குடி = ದರೆಯು, ಪಿಡುಮಾ படும் = ~~[illegible]~~ ಉಂಡು
ಮಾಡುವ, ಕಪ್ಪೆಯರ್ತ್ತು கவ்வைத்து = ಅಬ್ಬರದಲ್ಲಿ (ಅಬ್ಬರದ ಗೊಂದಲದಲ್ಲಿ),
ಅರುವಿನ್ನೈಯೂಲನ್ அருவினையேன் = ಸಹಿಸಲಾರದ (ಭರಿಸಲಾರದ) ಪಾಪ
ಮಾಡಿರುವ ನಾನು, ನೆಡುಕಾಲಮುಮ் நெடுங்காலமும் = ಬಹಳಕಾಲದಿಂದ
ಲೂ, ಕಣ್ಣಾನ್ கண்ணான் = ಅಕ್ಷ್ಯಕರ್ಷಕನ (ಕೃಷ್ಣನ), ನೀಳ್ நீள் =
ವಿಸ್ತಾರವಾದ, ಮಲರ್ ಪಾದಮುಂ மலர் பாதம் = ಪಾದಕಮಲವನ್ನು (ಹೂವಿ
ನಂತೆ ಕೋಮಲವಾದ ಪಾದವನ್ನು), ಪರವಿ பரவி = ಭಜಿಸಿ, ಪಿಣ್ರು பிணங்கு = (ನೀಳಿಯನ್ನು),
ಪಡೆದುಕೊಂಡ, ಕೊಡು ಕಾಲ್ கொடுங்கால் = ಬಂಧನದ ದಾರಿಯನ್ನು, ಜಿಕಿಯು
ಮಾ ஒசியும் = ~~[illegible]~~ ನಾಶಪಡಿಸುವ, ಇಡ್ಡೆ இடை = ~~[illegible]~~ ನಡುವೆ, ಇಳ್ಳಮೂನ್ இளமா
ಮಾನ್ = ಎಳೆಯ ಜಿಂಕೆಯು, ಶೆನ್ನಾಟಿ சென்று = ~~[illegible]~~ ಹೋಗುವ, ಕೂಲಿರ್ ಕಡಮೇ
கூழ் கடமே = ದಟ್ಟವಾಗಿ ಬೆಳೆದುಕೊಂಡಿರುವ (ಮುಬ್ಬಿದ) ಕಾಡೇ.

ಬಿಲ್ಲನ್ನು ಸಿದ್ಧವಾಗಿ ಹಿಡಿದಿರುವವರೂ, ವಿಶೂಲಗಳನ್ನು ಕೊಲ್ಲುವುದರಲ್ಲಿ ಕೊಡ-ಗಿರುವವರೂ, ಕೊಲೆಗಡುಕರೂ, ಬಲು ಬೇಗ ನಡೆಯುವ ಕಾಲುಳ್ಳವರೂ, ವೀರ-ಯುವಕರೂ ಉಂಡು ಮಾಡುವ ದರೆಯ ಅಬ್ಬರದ ಗೊಂದಲದಲ್ಲಿ, ಭರಿಸಲಾರದ ಪಾಪ ಮಾಡಿರುವ ನಾನು, ಬಹುಕಾಲದಿಂದಲೂ ಅಕ್ಷ್ಯಾಕರ್ಷಕನ ವಿಸ್ತಾರವಾದ ಹೂವಿನಂತೆ ಕೋಮಲವಾದ ಪಾದವನ್ನು ಭಜಿಸಿ ಪಡೆದುಕೊಂಡ ಬಂಧನದ ದಾರಿಯನ್ನು (ನೀಳಿಯನ್ನು) ನಾಶಪಡಿಸುವ ನಡುವೆ, ~~[illegible]~~ ಎಳೆಯು ಜಿಂಕೆಯು ಹೋಗುವ ದಟ್ಟವಾದ ಕಾಡೇ!

ನಾಯಕಿ ಹೇಳುತ್ತಾಳೆ: ಅಗಲಿದ ಪ್ರಿಯತಮನು ಬರಲಿಲ್ಲ. ನನ್ನ ತೊರೆದು ಹೋದನು. ಅದನ್ನು ಸಹಿಸಲಾರದೆ, ನಾನೇ ಅವನ ಬಳಿಗೆ ಹೋಗುವುದೆಂದು ಯೋಚಿಸಿ ಹೊರಟರೆ, ಕೊಳ್ಳೆಗಾರರಿಂದಲೂ, ನಾನಾ ಬಗೆಯ ಕ್ರೂರ ಜಂತುಗಳಿಂದಲೂ, ಅವರು ಬಾರಿಸುವ ಹರಿಯತೊಂದಲದಿಂದಲೂ ತುಂಬಿರುವ ದಟ್ಟವಾದ ಕಾಡಿನಲ್ಲಿ ಅವರ ಕೈಯಿಂದ ತಪ್ಪಿಸಿಕೊಂಡು ಓಡುವ ದಿಕ್ಕುಕಾಣದ ಎಳೆಯ ಜಿಂಕೆಯಂತೆ ನನ್ನ ಸ್ಥಿತಿ ಆಗಿದೆಯಲ್ಲ! ನಾನೆಂಥ ಕಡುಪಾಪಿ! ಅತ್ಯಾಕರ್ಷಕನ ಹೂವಿನಂಥ ಕೋಮಲವಾದ ಪಾದಗಳನ್ನು ನಾನು ಬಹುಕಾಲ ಭಜಿಸಿದ್ದರ ಫಲವಾಗಿ, ಸಂಸಾರ ಬಂಧನದಿಂದ ಬಿಡಿಸಿಕೊಳ್ಳುವ ಮಾರ್ಗದಲ್ಲೇ ನನಗೆ ಭಯಂಕರವಾದ ತೊಡಕುಗಳು ಬಂದು, ನನ್ನನ್ನು ಹೆದರಿಸುತ್ತಿವೆಯಲ್ಲ!

38. கடமாயினகள் கழித்துத் தம் கால் வண்மையால், பலநாள்
கடமாயின புக்கு நீர்நிலை நின்ற தவமிது கொல்?,
குடமாடி யிம்மண்ணும் விண்ணுங் குலுங்கவுலகளந்து
நடமாடிய பெருமான், உருவொத்தன நீலங்களே.

ಕಡಮಾಯಿನಗಳ್ ಕಳಿತ್ತುತ್ತಮ್ ಕಾಲ್ ವಣ್ಮೈಯಾಲ್, ಪಲನಾಳ್
ಕಡಮಾಯಿನ ಪುಕ್ಕು ನೀರ್ ನಿಲೈನಿನ್ರ ತವಮಿದು ಕೊಲ್?,
ಕುಡಮಾಡಿ ಯಿಮ್ಮಣ್ಣುಮ್ ವಿಣ್ಣುಙ್ಗುಲುಙ್ಗವುಲಗಳನ್ದು
ನಡಮಾಡಿಯ ಪೆರುಮಾನ್, ಉರುವೊತ್ತನ ನೀಲಙ್ಗಳೇ.

ಕಡಮ್ ಆಯಿನಗಳ್ கடம் ஆயினகள் = ಕಾಡಾಗಿರುವುದನ್ನು, ಕಳಿತ್ತು கழித்து = ಕಳೆದು (ದಾಟಿ), ತಮ್ ಕಾಲ್ தம் கால் = ತಮ್ಮ ಕಾಲಿನ, ವಣ್ಮೈಯಾಲ್ வண்மையால் = ಶಕ್ತಿಯಿಂದ, ಪಲನಾಳ್ பல நாள் = ಅನೇಕ ದಿನಗಳು, ಕಡಮ್ ಆಯಿನ கடம் ஆயின = ಕಾಡಾ ಕಾಡಾಗಿರುವುದನ್ನು, ಪುಕ್ಕು புக்கு = ಪ್ರವೇಶಿಸಿ, ನೀರ್ நீர் = ನೀರಿನಲ್ಲಿ, ನಿಲೈನಿನ್ರ நிலை நின்ற = ಭದ್ರವಾಗಿ (ನೆಲೆಯಾಗಿ) ನಿಂತಿರುವ, ತವಮ್ தவம் = ತಪಸ್ಸು, ಇದು ಕೊಲ್ இது கொல் = ಇದೇನೋ?, ಕುಡಮ್ ಆಡಿ குடம் ஆடி = ಕೊಡದ ಕುಣಿತವನ್ನಾಡಿ, ಇಮ್ಮಣ್ಣುಮ್ ವಿಣ್ಣುಮ್ இ மண்ணும் விண்ணும் = ಈ ಭೂಲೋಕವನ್ನೂ ಮೇಲಣಲೋಕಗಳನ್ನೂ, ಕುಲುಙ್ಗ குலுங்க = (ಕಂಪಿಸುವಂತೆ) ನಡುಗುವಂತೆ, ಉಲಗು ಅಳನ್ದು உலகு = ಲೋಕಗಳನ್ನು,

ಅಳನ್ದು அளந்து = ಅಳೆದುಕೊಂಡು, ನಡಮಾಡಿಯ நடமாடிய = ಓಡಾಡಿದ, ಪೆರುಮಾನ್ பெருமான் = ಪರಮಪುರುಷನ, ಉರು ಒತ್ತನ உரு ஒக்கும் = ರೂಪವನ್ನು (ಬಣ್ಣವನ್ನು) ಹೋಲುವ, ನೀಲಕ್ಕುವಳೈ குவளை = ನೀಲೋತ್ಪಲ (ಕಮಲಗಳೆ) — ಕನ್ನೈದಿಲೆಗಳೆ.

ತಮ್ಮ ಕಾಲಿನ ಬಲದಿಂದ ಕಾಡುಗಳನ್ನು ದಾಟಿ, ಅನೇಕ ಕಾಲ ವಿಸ್ತಾರವಾಗಿರುವ ನೀರ್ನೆಲೆಯನ್ನು ಹೊರತು ಅಲ್ಲಿ ನೆಲೆಯಾಗಿ ನಿಂತಿರುವ ~~ತ~~ ತಮಸ್ಸು ಇದೇಯಲ್ಲ? ನೀಲೋತ್ಪಲಗಳೇ, ಕೇಡದ ಕಾಣಿಕವನ್ನಿತ್ತಿ, ಈ ಭೂಲೋಕವನ್ನು ಮೇಲಣ ಲೋಕಗಳನ್ನು ಕಾಲುಕವಂತೆ ಲೋಕಗಳನ್ನಳೆದುಕೊಂಡು ಓಡಾಡಿದ ಪರಮಪುರುಷನ ರೂಪವನ್ನು (ಬಣ್ಣವನ್ನು) ಹೋಲುವವು! (38)

ನಾಯಕಿಗೆ ನೀರ್ನೆಲೆಯಲ್ಲಿ ಬೆಳೆದಿರುವ ನೈದಿಲೆಗಳು ಕಾಣಿಸಿದವು. ಅವುಗಳ ಆಕರ್ಷಕವಾದ ಬಣ್ಣವು ತನ್ನ ಪ್ರಿಯತಮನಾದ ಭಗವಂತನ ನೆನಪನ್ನು ತಂದುಕೊಟ್ಟಿತು. ಅಲ್ಲದೆ, ನಿರ್ಜನವಾದ ಭಯಂಕರವಾದ ಕಾಡಿನಲ್ಲಿಯೂ, ಆಳವಾದ ಮತ್ತು ವಿಸ್ತಾರವಾದ ನೀರ್ನೆಲೆಗಳಲ್ಲಿಯೂ ಬಹುಕಾಲ ನಿಂತು ದೇಹವನ್ನು ದಂಡಿಸಿ, ಭಗವಂತನನ್ನು ಒಲಿಸಿಕೊಳ್ಳುವುದಕ್ಕಾಗಿ, ಮಾಡುವ ತಪಸ್ಸಿನ ನೆನಪು ಬಂತು. ತಾನು ಹಾಗೆ ಮಾಡಲಿಲ್ಲ. ~~ತಾನು~~ ತಾನು ಅಂತರಂಗದಲ್ಲಿ ತನ್ನ ಪ್ರಿಯತಮನಿಗಾಗಿ ಕಾತರಳಾಗಿ, ದೇಹವನ್ನು, ಹೃದಯವನ್ನು ತಪಸ್ಸಿಗೆ ಒಳಪಡಿಸಿದ್ದು ಮಾತ್ರವೇ! ತನಗೆ ಪ್ರಿಯತಮನ ಸಾನ್ನಿಧ್ಯವು ಹೇಗೆ ಬಂದು ದೊರೆಗುವುದು?

"ಕೂತ್ತಾಡಿ" — ಶ್ರೀಕೃಷ್ಣನ ಕಾಲದ ನೆನಪು ಮಾಡುವುದು ಇದು. ಬಾಲಕೃಷ್ಣನು ನಂದಗೋಕುಲದಲ್ಲಿ ಗೋಪಿಯರ ಕೂಡಿದ ಕುಣಿತದಲ್ಲಿ ಅದ್ಭುತ ನೃತ್ಯವನ್ನು ತೋರಿಸಿ, ಅವರ ಪ್ರೀತಿಗೂ ಮೆಚ್ಚುಗೆಗೂ ಪಾತ್ರನಾದ.

"ಇ- ಮಣ್ಣುಮ್ ವಿಣ್ಣುಮ್ ಕಾಲಜ್ಞ ವುಲದಳನ್ದ" — ಇದು ಭಗವಂತನ ತ್ರಿವಿಕ್ರಮಾವತಾರದ ಅದ್ಭುತಲೀಲೆಯನ್ನು ನೆನಪು ಮಾಡುವುದು. ಬಲಿಚಕ್ರವರ್ತಿಯಿಂದ, ವಾಮನ ಮೂರ್ತಿಯಾಗಿ ಬಂದು, ಭಗವಂತನು ಬೇಡಿಕೊಂಡ ಮೂರು ಹೆಜ್ಜೆಗಳ ನೆಲವನ್ನು, ತಾನು ಮುಂದೆ ತ್ರಿವಿಕ್ರಮನಾಗಿ ಬೆಳೆದು ಅಳೆದುಕೊಂಡನಷ್ಟೆ. ಅವನ ಒಂದು ಹೆಜ್ಜೆ ಭೂಮಂಡಲದಷ್ಟು ವಿಸ್ತಾರವಾಗಿ ಹರಡಿ, ಅದನ್ನು ಅಳೆದುಬಿಟ್ಟಿತು. ಇನ್ನೊಂದು ಹೆಜ್ಜೆ ಮೇಲಣ ಲೋಕಗಳೆಲ್ಲವನ್ನು ಆವರಿಸಿ, ಅವೆಲ್ಲವನ್ನೂ ಅಳೆದು ಬಿಟ್ಟಿತು. ಆಗ ಎಲ್ಲ ಲೋಕಗಳ ವರ್ಗ ಭಯಬೀದ ನಡುಗಾ ಹೋದರು.

"ನಡಮಾಡಿಯ" — ಭಾರ್ಗವರಾಮನಾಗಿ, ಶ್ರೀರಾಮನಾಗಿ, ಬಲರಾಮನಾಗಿ, ಶ್ರೀಕೃಷ್ಣನಾಗಿ ಭಗವಂತನು ಭೂಮಿಯ ಮೇಲೆ ನಡೆಸಿದ ಆಶ್ಚರ್ಯಕರ ಲೀಲೆಗಳನ್ನು ಒಂದೇ ಮಾತಿನಿಂದ ಇಲ್ಲಿ ಹೇಳಲಾಗಿದೆ.

Garani Srinivasan

ನಾಯಕಿ ಹೇಳುತ್ತಾಳೆ: ನೈದಿಲೆಗಳೇ, ಶ್ರೀ ಕೃಷ್ಣನಾ, ವಾಮನ-ತ್ರಿವಿಕ್ರಮ ರಾಮ, ಭೂಮಿಯ ಮೇಲೆ ನಡೆದು ನಡೆಸಿದ ಆಶ್ಚರ್ಯಕರವಾದ ಕಾರ್ಯಗಳನ್ನು ನಡೆಸಿದ ಆ ಪರಮಪುರುಷನ ದಿವ್ಯಾಕರ್ಷಕ ದೇಹದ ಬಣ್ಣವನ್ನು ನೀವು ಪಡೆದುಕೊಂಡ ಬಗೆ ಹೇಗೆ? ಕಾಡಿನಲ್ಲಿ ಬೆಳೆಯುವುದನ್ನು ಬಿಟ್ಟು, ವಿಸ್ತಾರವಾದ ನೀರ್ನೆಲೆಗಳಲ್ಲಿ ನೀವು ಬೆಳೆಯುವುದೇ ಕಾರಣವೋ? ಬಹುಕಾಲ ನೀರಿನಲ್ಲಿ ನಿಂತು ನೀವು ಮಾಡಿದ ತಪಸ್ಸಿನ ಫಲವೋ ಇದು?

39. நீலத்தடவரை மேற் புண்டரீக நெடுந்தடங்கள்
போல, பொலிந்தெமக் கெல்லா விடத்தவும், பொங்குமுந்நீர்
ஞாலப்பிரான் விசும்புக்கும்பிரான் மற்றும் நல்லோர் பிரான்
கோலங் கரியபிரான், எம்பிரான் கண்ணின் கோலங்களே.

ನೀಲತ್ತಡವರೈಮೇಲ್ ಪುಣ್ಡರೀಕ ನೆಡುನ್ತಡಙ್ಗಳ್
ಪೋಲ, ಪೊಲಿನ್ದೆಮಕ್ಕೆಲ್ಲಾ ವಿಡತ್ತವುಮ್, ಪೊಙ್ಗುಮುನ್ನೀರ್
ಞಾಲಪ್ಪಿರಾನ್ ವಿಶುಮ್ಬುಕ್ಕುಮ್ ಪಿರಾನ್ ಮಱ್ಱುಮ್ ನಲ್ಲೋರ್ ಪಿರಾನ್
ಕೋಲಙ್ಗರಿಯ ಪಿರಾನ್, ಎಮ್ಬಿರಾನ್ ಕಣ್ಣಿನ್ ಕೋಲಙ್ಗಳೇ.

ನೀಲಮ್ நீலம் = ನೀಲಿಯ ಬಣ್ಣದ, ತಡವರೈ ಮೇಲ್ தடவரை மேல் = ವಿಸ್ತಾರವಾದ (ದೊಡ್ಡ) ಬೆಟ್ಟದ ಮೇಲೆ, ಪುಣ್ಡರೀಕಮ್ புண்டரீகம் = ಕೆಂದಾವರೆಗಳ, ನೆಡು நெடு = ವಿಸ್ತಾರವಾದ (ಬಲುದೊಡ್ಡ), ತಡಙ್ಗಳ್ தடங்கள் = ಸರೋವರಗಳ, ಪೋಲ போல = ಹಾಗೆ, ಪೊಲಿನ್ದು பொலிந்து = ಹೊಳೆಯುತ್ತಾ, ಎಮಕ್ಕು எமக்கு = ನಮಗೆ, ಎಲ್ಲಾ ವಿಡತ್ತವುಮ್ எல்லா விடத்தவும் = ಎಲ್ಲಾ ಸ್ಥಳಗಳಲ್ಲಿರುವವು, ಪೊಙ್ಗುಮುನ್ನೀರ್ பொங்குமுந்நீர் = ಅಲೆ ಏಳುವ ಉಕ್ಕಿರುವ ಕಡಲಿನಿಂದ ಸುತ್ತುವರಿದ, ಞಾಲಮ್ ஞாலம் = ಭೂಮಿಗೆ, ಪಿರಾನ್ பிரான் = ಒಡೆಯನೂ, ವಿಶುಮ್ಬುಕ್ಕುಮ್ ಪಿರಾನ್ விசும்புக்கும் பிரான் = ಮೇಲಣ ಲೋಕಗಳಿಗೂ (ಪರಮಪದಕ್ಕೂ), ಒಡೆಯನೂ, ಮಱ್ಱುಮ್ மற்றும் = ಮತ್ತು, ನಲ್ಲೋರ್ ಪಿರಾನ್ நல்லோர் பிரான் = ಒಳ್ಳೆಯವರ ಒಡೆಯನೂ, ಕೋಲಮ್ கோலம் = ಸುಂದರವಾದ, ಕರಿಯ ಪಿರಾನ್ கரிய பிரான் = ಕಪ್ಪುಬಣ್ಣದ ಸ್ವಾಮಿಯೂ, ಎಮ್ಪಿರಾನ್ எம்பிரான் = ನಮ್ಮ ಸ್ವಾಮಿಯೂ, ಆದವನ, ಕಣ್ಣಿನ್ கண்ணின் =

Garani Srinivasan

ಕಣ್ಣುಗಳು, ಕಾಲುಗಳೇ கோலங்களோ = ಎಂಬುವುಗಳೇ.

ನೀಲಿಯ ಬಣ್ಣದ ದೊಡ್ಡ ಬೆಟ್ಟದ ಮೇಲೆ ಕೆಂದಾವರೆಗಳ ವಿಸ್ತಾರವಾದ ಸರೋವರಗಳಂತಾಗಿ, ಹೊಳೆಯುತ್ತಾ, ನಮಗೆ ಎಲ್ಲಾ ಸ್ಥಳಗಳಲ್ಲಿಯೂ ಕಾಣುವುದೆಲ್ಲವೂ ಅಲೆಗಳಿಂದ ತುಂಬಿದ ಕಡಲಿನಿಂದ ಸುತ್ತುವರಿದ ಭೂಮಿಗೆ ಒಡೆಯನೂ, ಮೇಲಣ ಲೋಕಗಳ (ಪರಮಪದ) ಒಡೆಯನೂ, ಸುಂದರವಾದ ಕರಿಯ ಸ್ವಾಮಿಯೂ, ಮತ್ತು ಒಳ್ಳೆಯ ವರ ಒಡೆಯನೂ, ನಮ್ಮ ಸ್ವಾಮಿಯೂ ಆದವನ ಕಣ್ಣುಗಳ ಎಂಬುವುಗಳೇ. (39)

ಹಿಂದಿನ ಪಾಶುರದಲ್ಲಿ ಕಠಿಣ ತಪಸ್ಸಿನ ವಿಷಯವನ್ನು ಹೇಳಲಾಯಿತು. ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುವುದಕ್ಕೆ ಅಷ್ಟು ಶ್ರಮ ಪಡಬೇಕೇ? ~~ಅವನು~~ ಸೃಷ್ಟಿಯ ಎಲ್ಲಾ ವಸ್ತುಗಳ ರೂಪದಲ್ಲೂ ಅವನಿದ್ದಾನೆ. ಪವಿತ್ರ ಕ್ಷೇತ್ರಗಳಲ್ಲಿ ಅರ್ಚಾಸ್ವರೂಪಿಯಾಗಿ ಅವನಿದ್ದಾನೆ. ಅದನ್ನೆಲ್ಲಾ ಕಂಡು, ಅರಿತು, ಅನುಭವಿಸುವುದರಿಂದಲೇ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಬಹುದು ಎಂದು ಇಲ್ಲಿ ಹೇಳಲಾಗುತ್ತದೆ.

"ನೀಲರತ್ನದವರ್ಪ್ಪ ಮೇಲ್ ಪದ್ಮಂಗಳ್ ನೆಡುನ್ತಡಙ್ಗಳ್ ಪೋಲ" — ಇದೊಂದು ಸುಂದರವಾದ ಉಪಮಾನ: ನೀಲಿ ಬಣ್ಣದಿಂದ ಹೊಳೆಯುವ ಬಲು ದೊಡ್ಡ ಬೆಟ್ಟಕ್ಕೂ ಭಗವಂತನ ಆಕರ್ಷಕ ದೇಹಕ್ಕೂ ಹೋಲಿಕೆ. ಬೆಟ್ಟದ ಮೇಲಿರುವ ವಿಶಾಲವಾದ ಕೆಂದಾವರೆಗಳ ಸರೋವರಕ್ಕೂ ಭಗವಂತನ ಆಕರ್ಷಕ ಸುಂದರವಾದ ಕಣ್ಣುಗಳಿಗೂ ಹೋಲಿಕೆ. ಸೃಷ್ಟಿಯ ಸೌಂದರ್ಯದಲ್ಲಿ ಇದೊಂದು ನಿದರ್ಶನ ಮಾತ್ರವೇ. ಹೀಗೆಯೇ ಪ್ರಕೃತಿಯಲ್ಲಿ ಕಂಗೊಳಿಸುವ ವಿಶಿಷ್ಟ ವಸ್ತುಗಳಲ್ಲೂ ಸೊಬಗನ್ನು ಕಾಣಬೇಕು. ಇವಿಷ್ಟು ಸೌಂದರ್ಯರಾಶಿಯೂ ಭಗವಂತನ ದಿವ್ಯ ಸೌಂದರ್ಯದ ಬಿಂದು ಮಾತ್ರವೇ! ದೇಹಕ್ಕೆ ಕಣ್ಣು ಹೇಗೋ ಹಾಗೆ.

ಅಂತರ್ಜ್ಞಾನ ಕಣ್ಣಿನಿಂದಲೇ ಪ್ರಕೃತಿಯನ್ನು ಗಮನಿಸುತ್ತಾ, ಸೃಷ್ಟಿಯ ಸೊಬಗನ್ನೆಲ್ಲ ಕಂಡು ನಲಿಯುತ್ತಾ, ಭಗವಂತನನ್ನು ಅರಿತುಕೊಂಡು ಸಾಕ್ಷಾತ್ಕರಿಸಿಕೊಳ್ಳಬಹುದು. ಇದಕ್ಕೆ ಇನ್ನಷ್ಟು ಒತ್ತಾಸೆ ಕೊಡುವುದು, ಭೂಮಿಯ ಮೇಲೆ ಪವಿತ್ರ ಕ್ಷೇತ್ರಗಳಲ್ಲಿ ನೆಲೆಸಿರುವ ಕರಿಯ ಸುಂದರವಾದ ಅರ್ಚಾಮೂರ್ತಿಗಳು.

40. கோலப்பகற் களிறொன்று கற்புய்ய, குழாம்விரிந்த
நீலக்கங்குற் களிறெல்லாம் நிரைந்தன, நேரிழையீர்!
ஞாலப்பொன்மாதின் மணாளன் துழாய்நங்கள் சூழ்குழற்கே
ஏலப்புனைந்தென்னைமார், எம்மை நோக்குவதென்று
கொலோ?

ಕೋಲಪ್ಪಗಲ್ ಕಳಿಱೊನ್ಱು, ಕಲ್ ಪುಯ್ಯ, ಕುಳಾಮ್ ವಿರಿನ್ದ
ನೀಲಕ್ಕಙ್ಗುಲ್ ಕಳಿಱೆಲ್ಲಾಮ್ ನಿರೈತ್ತನ, ನೇರಿಳೈಯೀರ್!
ಞಾಲಪ್ಪೊನ್ ಮಾದಿನ್ ಮಣಾಳನ್ ತುಳಾಯ್ ನಙ್ಗಳ್ ಸೂಳ್ ಕುಳಲ್ಕೇ
ಏಲಪ್ಪುನೈನ್ದೆನ್ನೈಮಾರ್, ಎಮ್ಮೈ ನೋಕ್ಕುವದೆನ್ಱು ಕೊಲೋ?

ಕೋಲಮ್ கோலம் = ಸುಂದರವಾದ, ಪಗಲ್ பகல் = ಸೂರ್ಯನೆಂಬ, ಕಳಿಱು ಒನ್ಱು களிறு ஒன்று = ಸಲಗವೊಂದು, ಕಲ್ கல் = (ಪಶ್ಚಿಮ) ಪರ್ವತದಲ್ಲಿ, ಪುಯ್ಯ புய்ய = ಮರೆಯಾಗಲು, ಕುಳಾಮ್ ವಿರಿನ್ದ குழாம் விரிந்த = ದಟ್ಟವಾಗಿ (ಒಟ್ಟಾಗಿ) ಹರಡಿದ, ನೀಲಮ್ நீலம் = ಕಪ್ಪುಬಣ್ಣದ, ಕಙ್ಗುಲ್ கங்குல் = ರಾತ್ರಿಯೆಂಬ, ಕಳಿಱು ಎಲ್ಲಾಮ್ களிறு எல்லாம் = ಆನೆಗಳೆಲ್ಲಾ, ನಿರೈತ್ತನ நிரைத்தன = ತುಂಬಿಕೊಂಡವು (ನೆರೆದವು), ನೇರ್ ಇಳೈಯೀರ್ நேரிழையீர் = ಶ್ರೇಷ್ಠ ಆಭರಣಗಳುಳ್ಳವರೇ, ಞಾಲಮ್ ஞாலம் = ಭೂದೇವಿ, ಪೊನ್ ಮಾದಿನ್ பொன் மாதின் = ಶ್ರೀದೇವಿ, ಇವರ, ಮಣಾಳನ್ மணாளன் = ಪತಿಯ, ತುಳಾಯ್ துழாய் = ತುಳಸಿಯನ್ನು, ನಙ್ಗಳ್ நங்கள் = ನಮ್ಮ, ಸೂಳ್ சூழ் = ಸುತ್ತಿರುವ, ಕುಳಲ್ಕೇ குழற்கே = ತಲೆಗೂದಲಿಗೆ, ಏಲ ஏல = ಒಪ್ಪುವಂತೆ, ಪುನೈನ್ದು புனைந்து = ಮುಡಿಸಿ, ಎನ್ನೈಮಾರ್ என்னைமார் = ನನ್ನ ತಂದೆ ತಾಯಿಗಳು, ಎಮ್ಮೈ எம்மை = ನಮ್ಮನ್ನು, ನೋಕ್ಕುವದು நோக்குவது = ನೋಡುವುದು, ಎನ್ಱು ಕೊಲೋ என்று கொலோ = ಎಂದಿಗೋ?

ಸುಂದರವಾದ ಸೂರ್ಯನೆಂಬ ಸಲಗವೊಂದು (ಪಶ್ಚಿಮ) ಪರ್ವತದಲ್ಲಿ ಮರೆಯಾಗಲು, ದಟ್ಟವಾಗಿ ಹರಡಿರುವ ಕಪ್ಪನೆಯ ರಾತ್ರಿಯೆಂಬ ದಿಗ್ಗಾನೆಗಳೆಲ್ಲಾ ನೆರೆದವು. ಶ್ರೇಷ್ಠ ಆಭರಣಗಳನ್ನು ಧರಿಸಿರುವವರೇ, ಭೂದೇವಿ ಮತ್ತು ಶ್ರೀದೇವಿಯವರ ಪತಿಯ ತುಳಸಿಯನ್ನು ನಮ್ಮ ಸುತ್ತಿರುವ ತಲೆಗೂದಲಿಗೆ (ತುರುಬಿಗೆ) ಒಪ್ಪುವಂತೆ ಮುಡಿಸಿ, ನನ್ನ ತಂದೆ ತಾಯಿಗಳು (40)
ನಮ್ಮನ್ನು ನೋಡುವುದು ಎಂದಿಗೋ?

ಇಲ್ಲೊಂದು ಸುಂದರವಾದ ಸಾದೃಶ್ಯ ಕಲ್ಪನೆ ಇದೆ: ಬಲಿಷ್ಠವಾದ ಸಲಗನಿಗೆ ಸೂರ್ಯನಿಗೆ ಹೋಲಿಕೆ, ಆನೆಗಳಗುಂಪಿಗೆ ಕತ್ತಲೆಗೆ ಹೋಲಿಕೆ, ಬಂದಿದೆ.

ಆನೆಗಳ ಗುಂಪಿಗೆ ಬಲಿಷ್ಠ ಸಲಗನೇ ಯಜಮಾನ. ಆ ಸಲಗನು ಕಣ್ಣೆದುರಿಗೆ ಇರುವವರೆಗೆ ಇತರ ಆನೆಗಳು ಸ್ವೇಚ್ಛೆಯಿಂದ ಕಾಡಿನಲ್ಲಿ ಅಲೆದಾಡುತ್ತಿರುತ್ತವೆ. ಸಲಗನು ಕಣ್ಮರೆಯಾದರೆ, ಕೂಡಲೇ ಎಲ್ಲ ಆನೆಗಳು ಒಂದುಕಡೆ ಬಿಟ್ಟಾಗಿರುತ್ತವೆ. ಹಾಗೆಯೇ ಹಗಲಿಗೆ ಸೂರ್ಯನು ಒಡೆಯ.

Garani Srinivasan

ಅವನು ಅಸ್ತಂಗತನಾದನೆಂದರೆ, ಮೆಲ್ಲ ಮೆಲ್ಲನೆ ಕತ್ತಲೆ ಕವಿಯುತ್ತಾ ದಟ್ಟವಾದ ಕಗ್ಗತ್ತಲೆಯುಂಟಾಗುತ್ತದೆ.

ಆನೆಗಳ ಬಣ್ಣ ಕಪ್ಪು. ಎಲ್ಲ ಆನೆಗಳೂ ಒಟ್ಟುಗೂಡಿದವೆಂದರೆ, ಅಲ್ಲಿ ದಟ್ಟವಾದ ಕತ್ತಲೆ ಬಂದು ಕಂಬದಂತೆ ಆಗುತ್ತದೆ — ಇದೊಂದು ಉತ್ಪ್ರೇಕ್ಷೆ. ಕತ್ತಲೆಗೇಕೆ ಮುದುಗಿತು ಎಂಬುದನ್ನು ಹೇಳುತ್ತಿಲ್ಲ.

ಸೂರ್ಯನು ಪಶ್ಚಿಮದಲ್ಲಿ ಮುಳುಗಿದನು. ಕತ್ತಲೆ ಎಲ್ಲೆಲ್ಲೂ ಆವರಿಸಿ ಅದು ನಾಯಕಿಯ ವಿರಹವನ್ನು ಹೆಚ್ಚಿಸಿತು. ಈಗ ನಾಯಕಿ ತನ್ನ ಗೆಳತಿಯ ಕೂಡನೆ ತನ್ನ ಮನದಲ್ಲಿ ಅಡಗಿರುವ ದುಃಖವನ್ನು ಹೇಳಿಕೊಳ್ಳುತ್ತಿದ್ದಾಳೆ.

ನಾಯಕಿ ಹೇಳುತ್ತಾಳೆ: ನಿಮ ನಿಮಗೆ ಒಪ್ಪುವಂತೆ ಆಭರಣಗಳನ್ನು ಧರಿಸಿರುವ ಗೆಳತಿಯರೇ, ನನ್ನ ಮನದ ಸಂಕಟ ನಿಮಗೆ ಗೊತ್ತಿದೆ. ಶ್ರೀದೇವಿ ಭೂದೇವಿಯರ ಪತಿಯಾದ ಶ್ರೀಮನ್ನಾರಾಯಣನು ಧರಿಸಿರುವ ತುಲಸಿಯ ಹಾರವನ್ನು ನನ್ನ ತಲೆಯಲ್ಲಿ ಒಪ್ಪುವಂತೆ ನಾನು ಮುಡಿಯುವುದನ್ನು, ಶ್ರೀಮನ್ನಾರಾಯಣನನ್ನು ನಾನು ಕೈಹಿಡಿಯುವುದನ್ನು ನನ್ನ ತಂದೆತಾಯಿಗಳು ನೋಡುತ್ತಾರೆಯೋ ಇಲ್ಲವೋ? ಅದನ್ನು ಕಂಡು ಅವರು ಹರ್ಷಿಸುವರೋ ಇಲ್ಲವೋ? ಇದು ಒಂದು ನನ್ನ ಸಂಕಟವನ್ನು ಹೆಚ್ಚಿಸುತ್ತಿರುವುದು.

41. என்றும் புன்வாடை யிதுகண்டறிதும், இவ்வாறு வெம்மை
ஒன்று முருவுஞ் சுவடுந் தெரியிலம், ஓங்கசுரர்
பொன்றும்வகை புள்ளை யூர்வா னருளருளாது ஒழிந்தான்
மன்றில் நிறைபழி தூற்றி, நின்றென்னை வன் காற்றடுமே.

ಎನ್ರುಮ್ ಪುನ್ ವಾಡೈ ಯಿದುಕಣ್ಡಱಿದುಮ್, ಇವ್ವಾಱು ವೆಮ್ಮೈ
ಒನ್ರು ಮುರುವುಞ್ ಚುವಡುನ್ ದೆರಿಯಿಲಮ್, ಓಙ್ಗಸುರರ್
ಪೊನ್ರುಮ್ ವಗೈ ಪುಳ್ಳೈಯೂರ್ವಾನರುಳರುಳಾದೊೞಿನ್ದಾನ್
ಮನ್ರಿಲ್ ನಿಱೈಪೞಿ ತೂಱ್ಱಿ, ನಿನ್ರೆನ್ನೈ ವನ್ ಕಾಱ್ಱಡುಮೇ.

ಎನ್ರುಮ್ என்றும் = ಯಾವಾಗಲೂ, ಪುನ್ புன் = ಬಲಿಷ್ಠವಾದ, ವಾಡೈ வாடை = ತಂಗಾಳಿ, ಇದು இது = ಇದು, ~~ಕಣ್ಡು~~ ಕಣ್ಡು ಅಱಿದುಮ್ கண்டு அறிதும் = ಅನುಭವಿಸಿ ತಿಳಿಯೋಣ, ಇ-ಆಱು இ-ஆறு = ಈ ರೀತಿಯಾಗ, ವೆಮ್ಮೈ வெம்மை = (ಕಾವು) ಬಿಸಿಯನ್ನು,

Garani Srinivasan

ಒನ್ಱುಮ ತೋಣ್ಱುಂ = ನಾಟಿಯಿಲ್ಲದ, ಉರುವುಮ ಉಱುಪ್ಪುಂ = ರೂಪವನ್ನು, ಶೆವಡುಮ ಕಾಟ್ಟುಂ = ಸೊಬಗನೆಯನ್ನು, ಕೆಂಡಯಿಲಮ ಅಱಿಕ್ಕಿಲಂ = ತಿಳಿದಿಲ್ಲ (ನಾವು ತಿಳಿಯಲಾರೆವು), ಶಿಲ್ಲ ವಾಂಕು = ಹೆದರಾಂತ (ಬಲಿಷ್ಠರಾದ), ಅಶುರರ್ ಅಸುರರ್ = ಅಸುರರು, ಪೊನ್ಱುಮ ವಕೈ ಪೊಣ್ಱುಂ ಉಳಕ = ನಾಶವಾಗುವ ಹಾಗೆ, ಪುಳ್ಳೈ ಉಣ್ಣಾ = ಪಕ್ಷಿಯನ್ನು (ಗರುಡನನ್ನು), ಊರ್ವಾನ್ ಉಱ್ಱವಾಣ್ = ಏರಿ ಸಂಚರಿಸುವವನು (ವಾಹನವಾಗಿ ಉಳ್ಳವನು), ಅರುಳ್ ಅಱಿ = ಕೃಪೆಯನ್ನು, ಅರುಳಾದ ಅಱಿವಾಗ = ಅನುಗ್ರಹಿಸದ, ಇ-ನಾಳ್ ಇಗ್ಗಾಣ = ಈ ಕಾಲದಲ್ಲಿ, ಮನ್ ಅಯಿಲ್ ಮಣ್ಱಿಲ್ = (ಮನೆಯ) ಅಂಗಳದ, ನಿಲ್ಲೈ ತ್ರಿಣಾರು = ತುಂಬ, ಪಲಿ ಪಟ್ಟಿ = ನಿಂದನೆ (ಅಪವಾದ)ವನ್ನು, ಶುಟ್ರಿ ತೂಱ್ಱಿ = ಹರಡಿ, ನಿನ್ಱು ತ್ರಿಣ್ಱು = ಇದ್ದುಕೊಂಡು, ಎನ್ನೈ ಗಾಣೀ = ನನ್ನನ್ನು, ಎನ್ ಕೊಟ್ಟು ವಣ್ ಕಾಱ್ಱು = ಬಿರುಸಾದ ಗಾಳಿಯು, ಅಡುಮೇ = ಸುಡುತ್ತಿದೆಯಲ್ಲಾ!

ಇದು ಯಾವಾಗಲೂ ಬಲಿಷ್ಠವಾದ ತಂಗಾಳಿ. (ಇದನ್ನು) ಅನುಭವಿಸಿ ತಿಳಿಯಲೇ? ಈ ರೀತಿಯ ಬಿಸಿಯನ್ನು, ನಾಟಿಯಿಲ್ಲದ ರೂಪವನ್ನು, ಇದರ ಸೊಬಗನೆಯನ್ನು ನಾವು ತಿಳಿಯಲಾರೆವು. ಹೆದರಾಂತ (ಬಲಿಷ್ಠ) ಅಸುರರು ನಾಶವಾಗುವ ಹಾಗೆ (ಗರುಡ) ಪಕ್ಷಿಯನ್ನೇರಿ ಸಂಚರಿಸುವವನು (ಕೃಷ್ಣ) ಕೃಪೆಯನ್ನು ಅನುಗ್ರಹಿಸದ ಈ ಕಾಲದಲ್ಲಿ, ಈ ಬಿರುಸಾದ ಗಾಳಿ ಅಂಗಳದ ತುಂಬ ಅಪವಾದವನ್ನು ಹರಡುತ್ತಾ ಇದ್ದುಕೊಂಡು ನನ್ನನ್ನು ಸುಡುತ್ತಿದೆಯಲ್ಲಾ! (41)
(ಕೊಲ್ಲುತ್ತಿದೆಯಲ್ಲಾ!)

ಹಿಂದೆ, ನಾಯಕಿಯು ತಂಗಾಳಿಯನ್ನು ಕುರಿತು ಹೇಳಿದಳಷ್ಟೆ. ಅಲ್ಲಿ, ಅವಳ ಮೇಲೆ ಅದು ಬೀಸುತ್ತಾ, ಹೇಗೆ ಅವಳನ್ನು ಹಿಂಸಿಸುತ್ತಿದೆ ಎಂಬುದನ್ನು ಮಾತ್ರ. ಈಗ ಅದು ಅವಳನ್ನು ಮತ್ತೊಂದು ರೀತಿಯಲ್ಲಿ ಹಿಂಸಿಸುತ್ತಿದೆ ಎಂಬುದನ್ನು ಹೇಳುತ್ತಾಳೆ. ರಾತ್ರಿಯು ಕತ್ತಲೆಯ ಜೊತೆಗೆ ತಂಗಾಳಿ ಕೂಡಿಕೊಂಡಿದೆ. ಅವಳನ್ನು ಹೆಚ್ಚು ವಿರಹಿಯನ್ನಾಗಿ ಮಾಡುತ್ತಿವೆ.

ನಾಯಕಿ ಹೇಳುತ್ತಾಳೆ: ಇದು ಬಲು ಕೆಟ್ಟ ತಂಗಾಳಿ. ಇದಕ್ಕೆ ತಂಪು ಮಾಡುವ ಸ್ವಭಾವವೇ ಇಲ್ಲ. ಕಣ್ಣಿಗೆ ಕಾಣಿಸದಂಥ ಇದರ ನಾಟಿಯಿಲ್ಲದ ರೂಪವನ್ನು, ಸುಡುವ ಬಿಸಿಯನ್ನು, ಹಿಂಸಿಸುವ ಸೊಬಗನೆಯನ್ನು, ಆ ಬಳಿಕ ಉಂಟಾಗುವ ಯಾತನೆಯನ್ನು ವಿರಹಿಗಳಾದ ನಾವು ಅನುಭವಿಸಿಯೇ

Garani Srinivasan

ತಿಳಿಯಬೇಕು. ಲೋಕ ಪ್ರಚಂಡರೆನಿಸಿದ ಅಸುರರನ್ನು ನಾಶಗೊಳಿಸುವುದಕ್ಕಾಗಿ ಗರುಡವಾಹನನಾಗಿ ಸಂಚರಿಸುವ ನನ್ನ ನಾಯಕನಾದ ಶ್ರೀಮನ್ನಾರಾಯಣನು ತನ್ನ ಕೃಪೆಯನ್ನು ನನಗೆ ಇದುವರೆಗಾ ತೋರಲಿಲ್ಲ! ಇಂಥ ಕಾಲದಲ್ಲಿ ಈ ಬಿರುಸಾದ ಬಿರುಗಾಳಿ, ನಮ್ಮ ಅಂಗಳದಲ್ಲೆಲ್ಲಾ ನನ್ನ ಮೇಲೆ ಅಸಾಧವನ್ನು ತುಂಬಿ ಹರಡುತ್ತಾ, ಇಲ್ಲೇ ನಿಂತುಬಿಡುತ್ತಾ, ನನ್ನನ್ನು ಬಹಳ ಹಿಂಸಿಸುತ್ತಿದೆಯಲ್ಲ!

42. வன் காற்றறைய வொருங்கே மறிந்து கிடந்தலர்ந்த,
மென்காற் கமலத் தடம் போற் பொலிந்தன, மண்ணும் விண்ணும்
என்காற் களவின்மை காண்மினென் பானொத்து வான் நிமிர்ந்த
தன்காற் பணிந்தவென் பால், எம்பிரான் தடங்கண்களே.

ವನ್‌ಕಾಟ್ರುಱೈಯ ವೊರುಙ್ಗೇ ಮಱಿನ್ದು ಕಿಡನ್ದಲರ್ನ್ದ,
ಮೆನ್‌ಕಾಲ್ ಕಮಲತ್ತಡಮ್ ಪೋಲ್ ಪೊಲಿನ್ದನ, ಮಣ್ಣುಮ್ ವಿಣ್ಣುಮ್
ಎನ್‌ಕಾಲ್ ಕಳವಿನ್ಮೈ ಕಾಣ್ಮಿನೆನ್ ಪಾನೊತ್ತು ವಾನ್ ನಿಮಿರ್ನ್ದ
ತನ್‌ಕಾಲ್ ಪಣಿನ್ದ ಎನ್‌ಪಾಲ್, ಎಮ್ಬಿರಾನ್ ತಡಙ್ಗಣ್ಗಳೇ.

ವನ್‌ಕಾಟ್ರು வன் காற்று = ಬಲವಾದ ಗಾಳಿಯು, ಅಱೈಯ அறைய = ಹೊಡೆಯಲು, ಒರುಙ್ಗೇ ஒருங்கே = ಒಂದು ಪಕ್ಕಕ್ಕೆ, ಮಱಿನ್ದು மறிந்து = ಬಗ್ಗಿ, ಕಿಡನ್ದು கிடந்து = ಇರುತ್ತಾ, ಅಲರ್ನ್ದ அலர்ந்த = ಅರಳಿದ, ಮೆನ್‌ಕಾಲ್ மென் கால் = ಮೃದುವಾದ ಕಾವಿನ (ದಂಟು, ನಾಳ), ಕಮಲಮ್ கமலம் = ಕಮಲದ, ತಡಮ್ ಪೋಲ್ தடம் போல் = ತಟಾಕದಂತೆ, ಪೊಲಿನ್ದನ பொலிந்தன = ಹೊಳೆಯುತ್ತಿವೆ, ಮಣ್ಣುಮ್ மண்ணும் = ಭೂಲೋಕವೂ, ವಿಣ್ಣುಮ್ விண்ணும் = ಮೇಲಣ ಲೋಕಗಳೂ, ಎನ್‌ಕಾಟ್ಕು என் காற்கு = ನನ್ನ ಕಾಲಿಗೆ (ಪಾದಕ್ಕೆ), ಅಳವು ಇನ್ಮೈ அளவு இன்மை = ಅಳತೆಯಿಲ್ಲದ್ದನ್ನು, ಕಾಣ್ಮಿನ್ காண்மின் = ನೋಡಿರಿ, ಎನ್ ಪಾನ್ ಒತ್ತು என் பான் ஒத்து = ನನ್ನ ಸ್ವಭಾವಕ್ಕೆ ತಕ್ಕಂತೆ, ವಾನ್ வான் = ಮೇಲಣ ಲೋಕಗಳಲ್ಲಿ, ನಿಮಿರ್ನ್ದ நிமிர்ந்த (ವ್ಯಾಪಿಸಿ) = ನೆಟ್ಟಗಾದ (ಬೆಳೆದ - ಆವರಿಸಿದ), ತನ್ ಕಾಲ್ தன் கால் = ತನ್ನ ಕಾಲನ್ನು, ಪಣಿನ್ದ பணிந்த = ಎರಗಿದ, ಎನ್ ಪಾಲ್ என் பால் = ನನ್ನ ವಿಷಯದಲ್ಲಿ, ಎಮ್ಬಿರಾನ್

Garani Srinivasan

எம்பிரான் = ನನ್ನ ಸ್ವಾಮಿಯ, ಕದ ಕಣ್ಗಳ್ ಕಟ ಕಣ್ಣ ಕಣೋ = ವಿಶಾಲವಾದ ಕಣ್ಣುಗಳೇ.

ಭೂಲೋಕವೂ ಮೇಲಣ ಲೋಕಗಳೂ ನನ್ನ ಪಾದಕ್ಕೆ ಅಳತೆಯಿಲ್ಲದ್ದನ್ನು, ನನ್ನ ಸ್ವಭಾವಕ್ಕೆ ತಕ್ಕಹಾಗೆ, ನೋಡಿರಿ ಎಂದು ಮೇಲಣ ಲೋಕಗಳನ್ನು, ವ್ಯಾಪಿಸಿದ ಸ್ವಾಮಿಯ ಕಾಲನ್ನು ನಮಸ್ಕರಿಸಿದ ನನ್ನ ವಿಷಯದಲ್ಲಿ, ಬಲವಾದ ಗಾಳಿಯು ಹೊಡೆಯಲು ಒಂದು ಮಗ್ಗುಲಿಗೆ ಒರಗಿರುವ ಅರಳಿದ ಮೃದುವಾದ ದಂಟಿನ ಕಮಲದ ಕಟಾಕ್ಷದ ಹಾಗೆ, ನನ್ನ ಸ್ವಾಮಿಯ ವಿಶಾಲವಾದ ಕಣ್ಣುಗಳು ಹೊಳೆಯುತ್ತಿವೆ. (42)

ಮೇಲಿನ ಚಿತ್ರದಿಂದ ತೋರಿಬರುವ ಪಾಶುರ ಇದು.

ದೊಡ್ಡದೊಂದು ಸರೋವರ. ಅದರ ತುಂಬ ಅರಳಿದ ಕಮಲಗಳು. ಸರೋವರದ ~~[illegible]~~ ನೀರಿನಿಂದ ಸ್ವಲ್ಪ ಎತ್ತರಕ್ಕೆ ಕಾಣಿಸುವಂತೆ, ಮೃದುವಾದ ದಂಟಿನ ತುದಿಯಲ್ಲಿ ಆ ಸುಂದರವಾದ ತಾವರೆಗಳು ಅರಳಿ, ಆ ಸರೋವರವನ್ನೆಲ್ಲಾ ಶೋಭೆಯಿಂದ ತುಂಬಿ ತೋರಿಬರುತ್ತದೆ. ಇದು ಸ್ವಾಭಾವಿಕವಾದ ಪ್ರಕೃತಿಯ ಸುಂದರದೃಶ್ಯ. ಅಂಥ ಸರೋವರದ ಮೇಲೆ ಬಿರುಸಾಗಿ ಗಾಳಿಹೊಡೆದರೆ ಏನಾಗುತ್ತದೆ? ಆ ಕಮಲದ ದಂಟುಗಳನ್ನೆಲ್ಲಾ ಅದು ಒಂದು ಕಡೆಗೆ ವಾಲಿಸುತ್ತದೆಯಷ್ಟೆ. ಆಗಲೂ ಆ ಸರೋವರದ ಶೋಭೆ ಕುಂದುವುದಿಲ್ಲ, ತಾವರೆಗಳೆಲ್ಲಾ ಒಂದಂಚಿಗೆ ವಾಲಿದ್ದರೂ ಆಗಲೂ ಒಂದು ಹೊಸ ಶೋಭೆಯಿಂದ ತೋರಿಬರುತ್ತವೆಯಲ್ಲವೇ?

ಆಶ್ರಿತನಾದವನ ಮೇಲೆ ಭಗವಂತನ ಕೃಪಾಕಟಾಕ್ಷ ಬೀಳುವ ಹಾಗೆಯೇ ದಿವ್ಯಸುಂದರವಾಗಿ ಹೊಳೆಯುತ್ತಾ ತೋರಿಬರುವುದಂತೆ! — ಇದು ಒಂದು ಚಿತ್ರ.

ಭಗವಂತನು ತ್ರಿವಿಕ್ರಮನಾಗಿ ಅವತರಿಸಿದಾಗ, ತನ್ನ ಒಂದು ಹೆಜ್ಜೆಯನ್ನು ಭೂಮಂಡಲವನ್ನೆಲ್ಲಾ ಆವರಿಸಿದನು. ಮತ್ತೊಂದು ಹೆಜ್ಜೆಯಿಂದ ಮೇಲಣ ಎಲ್ಲಾ ಲೋಕಗಳನ್ನು ಆವರಿಸಿದನು. ಈ ವಿಷಯವನ್ನು ಕುರಿತು ಆಳ್ವಾರರು ಹೇಳುವ ಶೋಭೆಯನ್ನು ನೋಡಿ: ಭಗವಂತನ ಎರಡು ಪಾದಗಳ ಅಳತೆಗೆ ಈ ಭೂಮಂಡಲವಾಗಲಿ, ಮೇಲಣ ಎಲ್ಲಾ ಲೋಕಗಳಾಗಲಿ ಸಾಲದು. ಈ ವಿಷಯವನ್ನು ಬ್ರಹ್ಮಾದಿ ದೇವತೆಗಳಿಗೆ ಅರ್ಥಮಾಡಿಕೊಡುವುದಕ್ಕಾಗಿಯೇ ಭಗವಂತನು ತನ್ನ ಒಂದು ಪಾದದಿಂದ ಮೇಲಣ ಲೋಕಗಳನ್ನೆಲ್ಲಾ ಆವರಿಸಿದನು: ಇದೊಂದು ಚಿತ್ರ.

ಮೊದಲ ಚಿತ್ರದಿಂದ ಭಗವಂತನ ಕಾರುಣ್ಯವೂ, ಎರಡನೆಯ ಚಿತ್ರದಿಂದ ಸ್ವಾಮಿಯ ಅದ್ಭುತ ಸ್ವಭಾವವೂ ಕಂಡುಬರುತ್ತದೆ.

Garani Srinivasan

ನಾಯಕಿ ಹೇಳುತ್ತಾಳೆ: ಭಗವಂತನ ತಿರುವಡಿಗಳು ಅಳತೆಗೆ ಮೀರಿದವು. ಅವನ ಒಂದು ಪಾದ ಭೂಮಂಡಲವನ್ನೆಲ್ಲಾ ಆವರಿಸಿತು. ಮತ್ತೊಂದು ಪಾದ ಮೇಲಿನ ಎಲ್ಲಾ ಲೋಕಗಳನ್ನೂ ವ್ಯಾಪಿಸಿತು. ಇಂಥ ದಿವ್ಯಾದ್ಭುತವಾದ ತಿರುವಡಿಗಳಿಗೆ ನಾನು (ತಲೆಯಿಂದ) ಎರಗದ್ದರಿಲವಾ, ಅವನ ದಿವ್ಯ ಸುಂದರವಾದ ಕಣ್ಣುಗಳ ಕಟಾಕ್ಷವು ನನ್ನ ಕಡೆಗೆ ಬೀಳುತ್ತಿವೆ?

43. கண்ணும் செந்தாமரை கையும் அவை அடியோ அவையே,
வண்ணங் கரியதோர் மால்வரை போன்று, மதிவிகற்பால்
விண்ணுங் கடந்தும்பரப்பால் மிக்கு மற்றெப்பால் எவர்க்கும்
எண்ணுமிடத்ததுவோ?, எம்பிரானதெழில் நிறமே.

ಕಣ್ಣುಂಜೆನ್ದಾಮರೈ ಕೈಯುಮವೈ ಅಡಿಯೋವವೈಯೇ,
ವಣ್ಣಙ್ಗರಿಯದೋರ್ ಮಾಲ್ವರೈ ಪೋನ್ರು, ಮದಿವಿಕರ್ಪಾಲ್
ವಿಣ್ಣುಙ್ಗಡನ್ದುಮ್ಬರಪ್ಪಾಲ್ ಮಿಕ್ಕು ಮಱ್ಱೆಪ್ಪಾಲ್ ಎವರ್ಕ್ಕುಮ್
ಎಣ್ಣುಮಿಡತ್ತದುವೋ?, ಎಮ್ಬಿರಾನದೆೞಿಲ್ ನಿಱಮೇ.

ಕಣ್ಣುಮ್ கண்ணும் = ಕಣ್ಣುಗಳೂ, ಶೆಮ್ತಾಮರೈ செம்தா மரை = ಕೆಂದಾವರೆಯ ಹಾಗೆ, ಕೈಯುಮ್ கையும் = ಕೈಗಳೂ, ಅವೈ அவை = ಅವುಗಳೇ, ಅಡಿಯೋ அடியோ = ತಿರುವಡಿ~~ಗಳೇ~~ ಗಳೇ, ಅವೈಯೇ அவையே = ಅವುಗಳೇ, ವಣ್ಣಮ್ வண்ணம் =(ದೇಹದ) ಬಣ್ಣವು, ಕರಿಯದು கரியது = ಕರಿಯ, ಓರ್ ஓர் = ಸಾಟಿಯಿಲ್ಲದ, ಮಾಲ್ ವರೈ ಪೋನ್ರು மால் வரை போன்று = ದೊಡ್ಡ ಬೆಟ್ಟವನ್ನು ಹೋಲುತ್ತದೆ, ಮದಿ மதி = ತಿಳುವಳಿಕೆಯ, ~~ವಿಕರ್ಪಾಲ್~~ விகற்பால் = ಅರ್ಥದಿಂದ (ವೈಶಿಷ್ಟ್ಯದಿಂದ ~~ವಿಶೇಷವಾದ~~), ವಿಣ್ಣುಮ್ விண்ணும் = ಸ್ವರ್ಗವನ್ನು, ಕಡನ್ದು கடந்து = ದಾಟಿ, ಉಮ್ಬರಪ್ಪಾಲ್ உம்பர் அப்பால் = ದೇವತೆಗಳೆಲ್ಲರ ಆಚೆಗೆ, ಮಿಕ್ಕು மிக்கு = ಶ್ರೇಷ್ಠವಾದ (ಇರುವ), ಮಱ್ಱು ಎಪ್ಪಾಲ್ ಎವರ್ಕ್ಕುಮ್ மற்று எப்பால் எவர்க்கும் = ಇತರ ಎಂಥದ್ದಾದವರಿಗೂ (ಸರ್ವಜ್ಞರುಗಳಿಗೂ), ಎಣ್ಣುಮ್ எண்ணும் = ಊಹಿಸಲು (ತಿಳಿಯಲು), ಇಡತ್ತದುವೋ இடத்ததுவோ = ಅವಕಾಶಕೊಡುವಂಥದ್ದೇ, ಎಮ್ಬಿರಾನ எம்பிரான = ನನ್ನ ಸ್ವಾಮಿಯ, ಎೞಿಲ್ எழில் =

ಸುಂದರವಾದ, ನಿಱಮೇ ತಿಱಮೇ = ಬಣ್ಣವೇ.

ಕಣ್ಣುಗಳೂ ಕೆಂದಾವರೆ. ಕೈಗಳೂ ಅವೇ. ತಿರುವಡಿಗಳೋ ಅವುಗಳೇ. ದೇಹದ ಬಣ್ಣವಾದರೋ ಎಣೆಯಿಲ್ಲದ ಕರಿಯ ದೊಡ್ಡ ಬೆಟ್ಟದಂತೆ. ಕಿಳವಳಿಯ ಅರ್ಥದಲ್ಲಿ, ಸ್ವರ್ಗವನ್ನು ದಾಟಿ, ದೇವತೆಗಳೆಲ್ಲರ ಆಚೆಗೆ ಇರುವ (ಶ್ರೇಷ್ಠರಾದ) ಇತರ ಎಂಥೆಂಥವರೂ (ನಿತ್ಯಸೂರಿಗಳೂ) ಊಹಿಸಿ ತಿಳಿಯಲು ಅವರಿಗೆ ಕೂಡ ಸಾಧ್ಯವಾದದ್ದೇ ನನ್ನ ಸ್ವಾಮಿಯ (43) ಸುಂದರವಾದ ಬಣ್ಣ (ಸ್ವಭಾವ)?

ಹಿಂದಿನ ಪಾಶುರದಲ್ಲಿ ಭಗವಂತನ ಗುಣ ಸ್ವಭಾವಗಳನ್ನು ಕುರಿತು ಹೇಳಲಾಯಿತು. ಇಲ್ಲಿ ಭಗವಂತನ ಅತ್ಯಾಶ್ಚರ್ಯ ರೂಪವನ್ನು ಕುರಿತು ಹೇಳಲಾಗುತ್ತಿದೆ.

ಭಗವಂತನ ರೂಪ ಸೌಂದರ್ಯವನ್ನು ಹೊಗಳಿ ಹೇಳಲು ಶಕ್ತಿ ಉಳ್ಳ ಜನಗಳೇ ಸಿಕ್ಕುವುದಿಲ್ಲ. ಎಣೆಯಿಲ್ಲದ ಆ ವಸ್ತುವನ್ನು ವರ್ಣಿಸುವುದಾದರೂ ಹೇಗೆ?

ನಾಯಕಿ ಹೇಳುತ್ತಾಳೆ: ಭಗವಂತನ ಕಣ್ಣನ್ನು, ಕೈಯನ್ನು, ಪಾದಗಳನ್ನು ವರ್ಣಿಸ ಹೊರಟರೆ ಅವುಗಳೆಲ್ಲವೂ ಕೆಂದಾವರೆಯನ್ನೇ – ಎಂದರೆ, ಕೆಂದಾವರೆಯ ಬಣ್ಣ, ಅದರ ಆಕರ್ಷಣೆ, ಅದರ ಸೊಬಗು, ಮತ್ತು ಅದರ ಕೋಮಲತೆ – ಬಗೆಬಗೆಯಾಗಿ ತೋರುತ್ತವೆ. ಅವನ ದೇಹವಾದರೋ ದೊಡ್ಡದಾದ ಕರಿಯ ಬೆಟ್ಟದಂತೆ ಆಕರ್ಷಕ. ಭಗವಂತನ ರೂಪ ಸೌಂದರ್ಯಾನುಭವ ಭೂಲೋಕವಾಸಿಗಳಿಗೆ ಮಾತ್ರವೇ ಲಭಿಸುವುದು. ಕಿಳವಳಿಯ ಅರ್ಥದಲ್ಲಿ ಅದನ್ನು ಊಹಿಸಲು ಯಾರಿಗೂ ಆಗದು. ಸ್ವರ್ಗವಾಸಿಗಳಿಗೂ; ಇನ್ನೆತರ ಮೇಲಿನ ಲೋಕಗಳವರಾಗಲೀ, ಕಡೆಗೆ, ಪರಮಪದವಾಸಿಗಳಾಗಲೀ ಸಹ ನಮ್ಮ ಸ್ವಾಮಿಯ ಈ ದಿವ್ಯಸೌಂದರ್ಯವನ್ನು ಕಂಡು ಅನುಭವಿಸಲು ಸಾಧ್ಯವಿಲ್ಲ.

'ನಿಱಮ್ ತಿಱಮ್' – ಎಂಬುದಕ್ಕೆ 'ಬಣ್ಣ', 'ದೇಹ', 'ರೂಪ', 'ಸ್ವಭಾವ', 'ಗುಣ', 'ಹೊಳಪು', 'ಕಾಂತಿ', 'ಪದ', 'ಪ್ರಕಾಶ', ಎಂದು ಮುಂತಾದ ಅರ್ಥಗಳಾಗುತ್ತವೆ. ಯುಕ್ತವಾದದ್ದನ್ನು ಅಳವಡಿಸಿಕೊಂಡು ಇಲ್ಲಿ ಅರ್ಥವನ್ನು ಗ್ರಹಿಸಬಹುದು ಎನಿಸುತ್ತದೆ.

44. நிறமுயர் கோலமும் பேருமுருவு மிவையிவையென்று,
அறமுயல் ஞானச் சமயிகள் பேசிலும், அங்கங்கெல்லாம்
உறவுயர் ஞானச் சுடர் விளக்காய் நின்றதன்றி யொன்றும்
பெறமுயன் றாரில்லையால், எம்பிரான பெருமையையே.

Garani Srinivasan

ನಿಱಮುಯರ್ ಕೋಲಮುಮ್ ಪೇರುಮುರುವುಮಿವೈಯಿವೈಯೆನ್ಱು,
ಅಱಮುಯಲ್ ಞಾನಶ್ಚಮಯಿಗಳ್ ಪೇಶಿಲುಮ್, ಅಙ್ಗಙ್ಗೆಲ್ಲಾಮ್
ಉಱವುಯರ್ ಞಾನಶ್ಚುಡರ್ ವಿಳಕ್ಕಾಯ್ ನಿನ್ಱದನ್ಱಿ ಒನ್ಱುಮ್
ಪೆಱಮುಯನ್ಱಾರಿಲ್ಲೈಯಾಲ್, ಎಮ್ಪಿರಾನ ಪೆರುಮೈಯೈಯೇ.

ನಿಱಮ್ நிறம் = ಬಣ್ಣವನ್ನು, ಉಯರ್ உயர் = ಶ್ರೇಷ್ಠವಾದ (ಉತ್ಕೃಷ್ಟವಾದ), ಕೋಲಮುಮ್ கோலமும் = ಶೋಭೆಯನ್ನೂ, ಪೇರುಮ್ பேரும் = ಹೆಸರನ್ನು, ಉರುವುಮ್ உருவும் = ರೂಪವನ್ನೂ, ಇವೈ ಇವೈ ಎನ್ಱು இவை இவை என்று = ಇವು ಇವು ಎಂದು ನಿರ್ದೇಶಿಸುತ್ತಾ, ಅಱಮ್ அறம் = ಧರ್ಮಮಾರ್ಗದಲ್ಲಿ, ಮುಯಲ್ முயல் = ಶ್ರಮಿಸುತ್ತಾ, ಞಾನಮ್ ஞானம் = ಜ್ಞಾನವನ್ನು ಪಡೆದ (ಜ್ಞಾನಿಗಳಾದ), ಶಮಯಿಗಳ್ சமயிகள் = ಮತಾನುವರ್ತಿಗಳು, ಪೇಶಿಲುಮ್ பேசிலும் = ಮಾತನಾಡಿದರೂ, ಅಙ್ಗು ಅಙ್ಗ ಎಲ್ಲಾಮ್ அங்கு அங்கு எல்லாம் = ಆಯಾ ವಿಷಯಗಳಲ್ಲೆಲ್ಲಾ, ಉಱ ಉಯರ್ உற உயர் = ಮಹೋನ್ನತವಾದ, ಞಾನಮ್ ಶುಡರ್ ஞானம் சுடர் = ಜ್ಞಾನ ಜ್ಯೋತಿಯ, ವಿಳಕ್ಕಾಯ್ விளக்காய் = (ಪುಟ್ಟ) ದೀಪವಾಗಿ, ನಿನ್ಱದು நின்றது = ಇರುವುದು, ಅನ್ಱಿ அன்றி = ಅಲ್ಲದೆ, ಒನ್ಱುಮ್ ஒன்றும் = ಯಾವೊಂದು ಬಗೆಯಿಂದಲೂ, ಪೆಱ பெற = ಪಡೆಯ ~~…~~ ಬಲ್ಲಂತೆ, ಮುಯನ್ಱಾರ್ முயன்றார் = ಪ್ರಯತ್ನ ಪಡುವವರು, ಇಲ್ಲೈ இல்லை = ಇಲ್ಲ, ಆಲ್ ஆல் = ಅಯ್ಯೋ, ಎಮ್ ಪಿರಾನ எம் பிரான = ನಮ್ಮ ಸ್ವಾಮಿಯ, ಪೆರುಮೈಯೈಯೇ பெருமையையே = ಹಿರಿಮೆಯನ್ನೇ.

ನಮ್ಮ ಸ್ವಾಮಿಯ ಬಣ್ಣವನ್ನೂ ಉತ್ಕೃಷ್ಟವಾದ ಶೋಭೆಯನ್ನೂ, ಹೆಸರನ್ನು (ಕೀರ್ತಿಯನ್ನು), ರೂಪವನ್ನೂ, ಇಂಥಿಂಥವು ಎಂದು ನಿರ್ದೇಶಿಸುತ್ತಾ, ಧರ್ಮಮಾರ್ಗದಲ್ಲಿ ಶ್ರಮಿಸುತ್ತಾ ಜ್ಞಾನವಂತರಾದ ಮತಾನುವರ್ತಿಗಳು, ಹೇಳಿದರೂ ಸಹ ಆಯಾ ವಿಷಯಗಳಲ್ಲೆಲ್ಲಾ ಮಹೋನ್ನತವಾದ ಜ್ಞಾನಜ್ಯೋತಿಯ (ಪುಟ್ಟ) ದೀಪವಾಗಿ (ಬೆಳಕಾಗಿ) ಇರುವುದಲ್ಲದೆ, ನಮ್ಮ ಸ್ವಾಮಿಯ ಹಿರಿಮೆಯನ್ನೇ ಯಾವೊಂದು ಬಗೆಯಿಂದಲೂ (ವಿವರಿಸುವಂತೆ) (ಪಡೆಯುವಂತೆ) ಪ್ರಯತ್ನಿಸುವವರು ಇಲ್ಲ. (44)

ಹಿಂದಿನ ಪಾಶುರದ ವಿಷಯವನ್ನೇ ಇಲ್ಲಿಯೂ ಮುಂದುವರಿಸಲಾಗಿದೆ.

ನಾಯಕಿ ಹೇಳುತ್ತಾಳೆ: ನಮ್ಮ ಸ್ವಾಮಿಯ ರೂಪಸೌಂದರ್ಯವನ್ನು ಕುರಿತು ವರ್ಣಿಸಲು ಯಾರಿಂದಲೂ ಆಗುವುದಿಲ್ಲ. ನೀತಿನಿಯಮಗಳನ್ನು ಪಾಲಿಸುತ್ತಾ ಇರುವ ಜ್ಞಾನಿಗಳಾದ ಮತಾನುವರ್ತಿಗಳು ಜ್ಞಾನವಂತರಾದ

ಹೀಗಿದೆ, ಸೊಬಗು ಇಂತಿದ್ದು, ಗುಣಗಳು ಇವಿವು, ಕೀರ್ತಿ ಇಷ್ಟು, ಬಣ್ಣ ಇಂತಿದ್ದು ಎಂದು ವಿವರಿಸಿ ಹೇಳುತ್ತಾರೆ, ದಿಟ. ಆದರೆ, ಅವರ ಪ್ರಯತ್ನ ವಿಫಲವೂ ಆಗುತ್ತವೆ. ಅವೆಲ್ಲ ಮಹೋನ್ನತವಾದ ಜ್ಞಾನಜ್ಯೋತಿಯ ಮುಂದೆ ಒಂದು ಪುಟ್ಟ ದೀಪದ ಬೆಳಕಿನಂತೆಯೇ ಸರಿ. ನಮ್ಮ ಸ್ವಾಮಿಯ ಹರಿಯನ್ನು ಪರಿಪೂರ್ಣವಾಗಿ ವಿವರಿಸಿ ಹೇಳುವ ಯಾವ ಪ್ರಯತ್ನದಿಂದಲೂ ಅದು ಸಾಧ್ಯವಿಲ್ಲ'

ಮಾತಿಗೆ, ಮನಸ್ಸಿಗೆ, ವಿವರಣೆಗೆ ಎಟುಕದ ಅತಿಭವ್ಯವಾದ ರೂಪ ಸೌಂದರ್ಯವುಳ್ಳವನು ಸ್ವಾಮಿ ಎಂದಂತೆ ಅಲ್ಲವೇ?

45. பெருங்கேழலார் தம் பெருங் கண்மலர்ப் புண்டரீகம், நம்மேல்
ஒருங்கே பிறழவைத்தார் இவ்வகாலம், ஒருவர் நம்போல்
வருங்கேழ்பவருளரே? தொல்லை வாழியம் சூழ்பிறப்பு
மருங்கே வரப்பெறுமே?, சொல்லு வாழி மடநெஞ்சமே!

ಪೆರುಙ್ಗೇೞಲಾರ್ ತಮ್ ಪೆರುಙ್ಗಣ್ ಮಲರ್ ಪ್ಪುಣ್ಡರೀಗಮ್, ನಮ್ಮೇಲ್
ಒರುಙ್ಗೇ ಪಿಱೞವೈತ್ತಾರ್ ಇವ್ವಗಾಲಮ್, ಒರುವರ್ ನಮ್ಪೋಲ್
ವರುಙ್ಗೇೞ್ಬವರುಳರೇ? ತೊಲ್ಲೈ ವಾೞಿಯಮ್ ಶೂೞ್ ಪಿಱಪ್ಪು
ಮರುಙ್ಗೇ ವರಪ್ಪೆಱುಮೇ?, ಶೊಲ್ಲು ವಾೞಿ ಮಡನೆಂಜಮೇ!

ಪೆರುಙ್ಗೇೞಲಾರ್ பெருங் கேழலார் = ಮಹಾವರಾಹಸ್ವಾಮಿಯು, ತಮ್ தம் = ತಮ್ಮ, ಪೆರುಙ್ಗಣ್ ಮಲರ್ ಪ್ಪುಣ್ಡರೀಗಮ್ பெருங்கண் மலர் புண்டரீகம் = ದೊಡ್ಡ (ವಿಶಾಲವಾದ) ಅರಳಿದ ಕೆಂದಾವರೆಯ ಕಣ್ಣುಗಳನ್ನು, ನಮ್ ಮೇಲ್ நம் மேல் = ನಮ್ಮ (~~[illegible]~~) ಮೇಲೆ, ಒರುಙ್ಗೇ ஒருங்கே = ಪೂರ್ಣವಾಗಿ (ಏಕಕಾಲದಲ್ಲಿ), ಪಿಱೞವೈತ್ತಾರ್ பிறழ வைத்தார் = (ಹರಿ) ಹೊರಳಿಸಿದರು, ಇ ಅಗಾಲಮ್ இ-அகாலம் = ಈ ಅಕಾಲದಲ್ಲಿ (ಕಾಲವಲ್ಲದ ಕಾಲದಲ್ಲಿ), ಒರುವರ್ ஒருவர் = ಯಾರೊಬ್ಬರಾದರೂ, ನಮ್ ಪೋಲ್ நம் போல் = ನಮ್ಮಂತೆ, ವರುಮ್ ಕೇೞ್ಬವರ್ வரும் கேழ்பவர் = ಭಾಗ್ಯಶಾಲಿಗಳು (ಸಂತುಷ್ಟರಾದವರು), ಉಳರೇ உளரே = ಇದ್ದಾರೆಯೇ? ತೊಲ್ಲೈ தொல்லை = ಪುರಾತನಕಾಲದಿಂದಲೂ

Garani Srinivasan

(84)

ವಾಳಿಯುಮ್ ವಾಳ್ವಿಯುಂ = (ಭಗವಂತನೊಡನೆ) ಬಾಳಿದವರು ನಾವು, ಕೋಲ್

ಪಿಟಿಪ್ಪ ತ್ತಾಳ್ ಪಿರಪ್ಪು = ದುಃಖದ (ಪುನರಾವರ್ತಿಸುವ) ಜನ್ಮವು,

ಮರುಣ್ಗೇ ಮರುಂಗೆ = (ನಮ್ಮ) ಮುಂದೆ ಅಲ್ಲ, ಪರ ವೀರು ಮೇಲ ವಾರವರ

ಬೇ = ಬರಲು ಸಾಧ್ಯವೇ?, ಕೋಲ್ಲು ವಾಳಿ ಆಹಾಕ್ಕು ವಾಳ್ವಿ = ಉಜ್ಜೀವನ

ಗೊಳ್ಳು ಎಂದು ಹೇಳು, ಮದ ನೆಂಜಮೇ ಮಡ ನೆಂಜಮೇ = ಸಾಧುವಾದ

ಮನಸ್ಸೇ!

ಮಹಾವರಾಹ ನಾರಾಯಣನು ತಮ್ಮ ವಿಶಾಲವಾದ ಅರಳಿದ ಕೆಂದಾವರೆ

ಯ ಕಣ್ಣುಗಳನ್ನು / ನಮ್ಮ ಮೇಲೆ ಕಾಲವಲ್ಲದ ಕಾಲದಲ್ಲಿಯೂ ಪ್ರಾಣಾಯಾಮ ದಯೆ ತೋರಿಸಿದರು.

~~ಕಾಲವಲ್ಲದ ಕಾಲದಲ್ಲಿಯೂ~~ ನಮ್ಮಂತಹ ಭಾಗ್ಯಶಾಲಿಗಳು (ಸಂಸ್ಕೃತಿ

ರಾಯವರು) ಯಾರಾದರೂ ಇದ್ದಾರೆಯೇ? ಪ್ರಾಚೀನ ಕಾಲದಿಂದಲೂ ಸ್ವಾಮಿ

ಯೊಡನೆ ಬಾಳಿದವರು ನಾವು. ದುಃಖಿಯ ಜನ್ಮವು ನಮ್ಮ ಮುಂದೆ ಅಲ್ಲಿ

ಬರಲು ಸಾಧ್ಯವೇ? ಸಾಧುವಾದ ಮನಸ್ಸೇ 'ಉಜ್ಜೀವನಗೊಳ್ಳು' ಎಂದು (45)

ಹೇಳು.

ಹಿಂದಿನ ಐದು ಪಾಶುರದಲ್ಲಿ ಹೇಳಿದ್ದ 'ಭಗವಂತನು ತನ್ನ ಕೃಪಾಕಟಾಕ್ಷವನ್ನು

ನನ್ನ ಮೇಲೆ ಹರಿಸಿದನು' ಎಂಬುದನ್ನು ಇಲ್ಲಿ ಮತ್ತೆ ಜ್ಞಾಪಿಸಿಕೊಳ್ಳಲಾಗುತ್ತಿದೆ. ಅಲ್ಲದೆ,

ಅದರಿಂದ ಉಂಟಾಗುವ ಫಲವೇನು ಎಂಬುದನ್ನು ಹೇಳಲಾಗುತ್ತಿದೆ.

ಭಗವಂತನು ಮಹಾವರಾಹನಾಗಿ ಅವತರಿಸಿದ್ದು ಭೂದೇವಿಯನ್ನು, ಭೂಮಿ

ಯ ಮೇಲಿನ ಎಲ್ಲಾ ಜೀವರಾಶಿಗಳನ್ನು, ಉದ್ಧರಿಸುವುದಕ್ಕೆ. ದುಷ್ಟನಾದ ಹಿರಣ್ಯಾ

ಕ್ಷನನ್ನು ಕೊಂದು ಅವನಿಂದ ಭೂದೇವಿಯನ್ನು ರಕ್ಷಿಸಬೇಕಾದ ಕಾಲವಾಗಿತ್ತು

ಅದು.

ನಾಯಕಿ ಹೇಳುತ್ತಾಳೆ: ಸಾಧುವಾದ ಮನಸ್ಸೇ, ಹಿಂದೆ ಮಹಾವರಾಹನಾಗಿ

ಅವತರಿಸಿ ಭಗವಂತನು ಭೂದೇವಿಯನ್ನು ಹಿರಣ್ಯಾಕ್ಷನಿಂದ ರಕ್ಷಿಸಿದನು.

ಅಂಥ ಕಾಲವಲ್ಲದ ~~[illegible]~~ ಕಾಲವಿದ್ದರೂ ಸಹ, ಕರುಣಾಮೂರ್ತಿ

ಯಾದ ಸ್ವಾಮಿಯು ತನ್ನ ಪೂರ್ಣ ಕಟಾಕ್ಷವನ್ನು ನಮ್ಮ ಮೇಲೆ ಹರಿಸಿದ್ದಾನೆ!

ನಾವೆಷ್ಟು ಭಾಗ್ಯಶಾಲಿಗಳು! ನಮಗೆ ಎಂಥ ಐಶ್ವರ್ಯ! ಹಿಂದಿನಿಂದಲೂ ನಾವು

ಭಗವಂತನ ರಕ್ಷಣೆಯಲ್ಲಿಯೇ ಬಾಳಿದವರು. ಆದ್ದರಿಂದ ಪುನರ್ಜನ್ಮದ

ಅಂಜಿಕೆಯೇ ನಮಗಿಲ್ಲ. ನಾವು ಉಜ್ಜೀವನಗೊಳ್ಳೋಣ.

46. மடநெஞ்ச மென்றுந் தமதென்றும், ஓர்கருமங்
கருதி
விடநெஞ்சை யுற்றார் விடவோ வமையும்,
அப்பொன்பெயரோன்

தடநெஞ்சங்கீண்ட பிரானார் தமடிக்கீழ் விடப் போய்த்
திடநெஞ்சமாய், எம்மை நீத்து இன்றுதாறும் திரிகின்றதே.

ಮಡನೆಂಜಮೆನ್ಱುಂ ತಮದೆನ್ಱುಂ, ಓರ್ ಕರುಮಂ ಕರುದಿ
ವಿಡನೆಂಜುಟ್ರಾರ್ ವಿಡಪ್ಪೋಲ್ ಅಮೈಯುಂ, ಅಪ್ಪೊನ್ ಪೆಯರೋನ್
ತಡನೆಂಜಂ ಕೀಣ್ಡ ಪಿರಾನಾರ್ ತಮಡಿಕ್ಕೀಳ್ ವಿಡಪ್ಪೋಯ್
ತ್ತಿಡನೆಂಜಮಾಯ್, ಎಮ್ಮೈ ನೀತ್ತಿನ್ಱುದಾಱುಂ ತಿರಿಗಿನ್ಱದೇ

ಮಡಮ್ ನೆಂಜಮ್ மடம் நெஞ்சம் = ವಿಧೇಯವಾದ ಮನಸ್ಸು. ತಮದು தமது = ನಮ್ಮದು, ಎನ್ಱುಮ್ என்றும் = ಎಂದೂ, ಓರ್ ಕರುಮಮ್ ஓர் கருமம் = ಒಂದು ಕೆಲಸವನ್ನು, ಕರುದಿ கருதி = ಉದ್ದೇಶಿಸಿ, ವಿಡ விட = ಬಿಡಲು, ಉಟ್ರಾರ್ உற்றார் = ಉತ್ಸಾಹಗೊಂಡವರು, ವಿಡಪ್ಪೋ விடப்போ = (ಬಿಡುವುದರಿಂದ) (ಬಿಡುಗಡೆಯನ್ನೇ), ಅಮೈಯುಮ್ அமையும் = (ಅದು) ಹೊಂದಿಕೊಳ್ಳುವುದು, ಅಪ್ಪೊನ್ ಪೆಯರೋನ್ அ பொன் பெயரோன் = ಆ ಹಿರಣ್ಯಕಶಿಪುವಿನ, ತಡ தட = ವಿಶಾಲವಾದ, ನೆಂಜಮ್ நெஞ்சம் = ಎದೆಯನ್ನು, ಕೀಣ್ಡ கீண்ட = ಸೀಳಿದ, ಪಿರಾನಾರ್ ತಮದು பிரானார் தமது = ಸ್ವಾಮಿಯ, ಅಡಿಕ್ಕೀಳ್ அடிக்கீழ் = ತಿರುವಡಿಯಲ್ಲಿ, ವಿಡ விட = ಬಿಡಲು, ಪೋಯ್ போய் = (ಅದು) ಹೋಗಿ, ತಿಡಮ್ திடம் = ಸ್ಥಿರವಾದ, ನೆಂಜಮ್ ಆಯ್ நெஞ்சம் ஆய் = ಮನಸ್ಸಾಗಿ, ಎಮ್ಮೈ எம்மை = ನಮ್ಮನ್ನು, ನೀತ್ತು நீத்து = ನೀಗಿ (ಬಿಟ್ಟುಬಿಟ್ಟು), ಇನ್ಱುದಾಱುಮ್ இன்றுதாறும் = ಇಂದಿನವರೆಗೂ, ತಿರಿಗಿನ್ಱದೇ திரிகின்றதே = ತಿರುಗಾಡುತ್ತಿದೆಯಲ್ಲ.

ವಿಧೇಯವಾದ ಮನಸ್ಸು, ನಮ್ಮ ಮನಸ್ಸು ಎಂದು ಒಂದು ಕೆಲಸವನ್ನು ಉದ್ದೇಶಿಸಿ ಬಿಡಲು ಉತ್ಸಾಹಗೊಂಡವರು, (ಅದನ್ನು) ಬಿಡುವುದರಿಂದ ಆ ಬಿಡುಗಡೆಯನ್ನೇ (ಅದು) ಹೊಂದಿಕೊಳ್ಳುವುದು. ಆ ಹಿರಣ್ಯಕಶಿಪುವಿನ ವಿಶಾಲವಾದ ಎದೆಯನ್ನು ಸೀಳಿದ ಸ್ವಾಮಿಯ ತಿರುವಡಿಯಲ್ಲಿ ಬಿಡಲು, ಅದು ಹೋಗಿ ಸ್ಥಿರವಾದ ಮನಸ್ಸಾಗಿ, ನಮ್ಮನ್ನು ನೀಗಿ, ಇಂದಿನವರೆಗೂ (ಅವನ ಜೊತೆ) ತಿರುಗಾಡುತ್ತಿದೆಯಲ್ಲ!

ಸ್ವಾರಸ್ಯಪೂರ್ಣವಾದ ಪಾಶುರ ಇದು.

ಮನಸ್ಸು ಯಾವಾಗಲೂ ಚಂಚಲವಾದದ್ದು. ಒಂದು ಕ್ಷಣಾ ಒಂದೆಡೆ ಅದು ಸ್ಥಿರಗೊಂಡಿರುವುದಿಲ್ಲ. ಇಂಥ ಅಲೆದಾಡುವ ಮನಸ್ಸನ್ನು 'ನಮ್ಮದು, ನಮಗೆ ಅದು ವಿಧೇಯವಾಗಿ ನಡೆದುಕೊಳ್ಳುತ್ತದೆ' ಎಂದು ಭಾವಿಸುವುದು ತಪ್ಪು. ಮನಸ್ಸಿನ ಮೇಲಿನ ನಮ್ಮದು ಎಂಬ ವ್ಯಾಮೋಹದಿಂದ, ಯಾವುದಾದರೊಂದು ಕೆಲಸವನ್ನುದ್ದೇಶಿಸಿ, ಆ 'ನಮ್ಮ' ಮನಸ್ಸನ್ನು ಉತ್ಸಾಹದಿಂದ ಅತ್ತಕಡೆಗೆ ದೂಡಿಯಾಗಿದ್ದರೆ, ಆಗ ತಿಳಿಯುತ್ತದೆ ಅದರ ವಿಧೇಯತೆ. ಆ ಕೆಲಸಕ್ಕೆ ಅದು ಹೊಂದಿಕೊಳ್ಳುವುದೇ ಇಲ್ಲ. ಸಿಕ್ಕ ಸಿಕ್ಕ ಕಡೆಗಳಲ್ಲೆಲ್ಲಾ ಅಲೆದಾಡುವುದೇ ಅದರ ಸ್ವಭಾವ. ಇದು ಸರ್ವಸಾಮಾನ್ಯ. ಮನಸ್ಸಿನ ಈ ಅಲೆದಾಟವನ್ನು ನಿಲ್ಲಿಸುವುದಕ್ಕೆ ಒಂದೇ ಒಂದು ಉಪಾಯ! ಅದನ್ನು ಭಗವಂತನ ತಿರುವಡಿಗಳ ಕಡೆಗೆ ತಿರುಗಿಸಬೇಕು. ಆ ತಿರುವಡಿಗಳ ಆಕರ್ಷಣೆಗೆ ಅದು ಒಳಗಾಯಿತೆಂದರೆ, ಅದು ಅಲ್ಲೇ ಸ್ಥಿರಗೊಳ್ಳುತ್ತದೆ.

ನಾಯಕಿ ಹೇಳುತ್ತಾಳೆ: ಅದು ನನ್ನ ಮನಸ್ಸು, ನಾನು ಹೇಳಿದಂತೆ ನನ್ನ ಕೆಲಸವನ್ನು ನನಗಾಗಿ ಮಾಡುತ್ತದೆ, ಎಂದು ಯೋಚಿಸಿದೆ. ಅದನ್ನು ನನ್ನ ಪ್ರಿಯತಮನ ಬಳಿಗೆ ಉತ್ಸಾಹದಿಂದ ಕಳುಹಿಸಿದೆ. ನನ್ನ ವಿರಹವನ್ನು ಅವನಿಗೆ ತಿಳಿಸಿ, ಅವನಿಂದ ಸಂದೇಶವನ್ನು ತೆಗೆದುಕೊಂಡು ಬಾ ಎಂದು. ಆದರೆ ಅದು ಅಲ್ಲೇ ಸ್ಥಿರವಾಗಿ, ಅವನ ತಿರುವಡಿಗಳನ್ನೇ ಅನುಸರಿಸುತ್ತಿರುವುದಲ್ಲ! ನನ್ನನ್ನು, ನನ್ನ ಕೆಲಸವನ್ನು, ಪೂರ್ಣವಾಗಿ ಅದು ಮರೆತುಬಿಡುವುದೇ? ಹಾಗೆ ಮಾಡುವುದು ಅದಕ್ಕೆ ತರವೇ?

"ಅತ್ತೋನ್ ಪೆಯರೋನ್ ಕದನಂಜುಳ್ಳೇನ್ ಪಿರಾನಾರ್" — ಇದು ಭಗವಂತನ ನರಸಿಂಹಾವತಾರದ ವಿಷಯವನ್ನು ನೆನಪಿಗೆ ತರುವುದು. ಸರ್ವವ್ಯಾಪಿಯಾದ ಭಗವಂತನು, ಸರ್ವಸಮರ್ಥನೂ ಹೌದು. ಹಿರಣ್ಯಕಶಿಪು ತಾನು ಪಡೆದುಕೊಂಡ ವರಗಳಿಂದ ತನಗೆ ಯಾವ ಬಗೆಯಲ್ಲೂ ಮರಣವಾಗದೆಂದು ನಂಬಿ ಮದಮತ್ತನಾಗಿ, ತನ್ನ ಮಗನಾದ ಹರಿಭಕ್ತನಾದ ಪ್ರಹ್ಲಾದನಿಗೇಯೇ ಚಿತ್ರಹಿಂಸೆ ಕೊಟ್ಟನಷ್ಟೆ. ಕಡೆಗೆ, ಅವನ ಅಹಂಕಾರವನ್ನು ಅಡಗಿಸುವುದಕ್ಕಾಗಿ, ಸ್ವಾಮಿಯು ಉಕ್ಕಿನ ಕಂಬದಿಂದಲೇ ಉದ್ಭವಿಸಿ, ನರಹರಿಯಾದನಲ್ಲ. ಅವನ ಎದೆಯನ್ನು ಸೀಳಿ ಹಾಕಿದನು.

ನಾನು, ನನ್ನದು ಎಂದು ಯೋಚಿಸಿ ಕೆಲಸ ಮಾಡುತ್ತಿರುವಷ್ಟು ಕಾಲವೂ, ನಮ್ಮ ಮನಸ್ಸು ನಮ್ಮ ಅಧೀನವಲ್ಲ. ಅದು ಚಂಚಲವಾಗಿಯೇ ಅಲೆದಾಡುತ್ತಿರುತ್ತದೆ. ಅದು ಧೃಢಗೊಂಡಿತೆಂದರೆ, ಆಗ 'ನಾನು, ನನ್ನದು' ಎಂಬುದಕ್ಕೆ ಎಡೆಯಿರುವುದಿಲ್ಲ. ಅವು ನಾಶಗೊಳ್ಳುತ್ತವೆ.

Garani Srinivasan

47. திரிகின்றது வட மாருதம், திங்கள் வெந்தீ முகந்து
சொரிகின்றது அதுவும் அது, கண்ணன் விண்ணூர் தொழவே
சரிகின்றது சங்கம் தண்ணந்துழாய்க்கு வண்ணம் பயலை
விரிகின்றது முழுமெய்யும், என்னாங்கொலென் மெல்லியற்கே.

ತಿರಿಗಿನ್ಱದು ವಡ ಮಾರುದಮ್, ತಿಙ್ಗಳ್ ವೆನ್ದೀ ಮುಗನ್ದು
ಶೊರಿಗಿನ್ಱದು ಅದುವುಮ್ಮದು, ಕಣ್ಣನ್ ವಿಣ್ಣೂರ್ ತೊೞುವೇ
ಶರಿಗಿನ್ಱದು ಶಙ್ಗಮ್ ತಣ್ಣನ್ದುೞಾಯ್ಕ್ಕು ವಣ್ಣಮ್ ಪಯಲೈ
ವಿರಿಗಿನ್ಱದು ಮುೞುಮೆಯ್ಯುಮ್, ಎನ್ನಾಙ್ಗೊಲೆನ್ ಮೆಲ್ಲಿಯಱ್ಕೇ

ತಿರಿಗಿನ್ಱದು திரிகின்றது = ಸುಳಿದಾಡುತ್ತಿದೆ. ವಡ ಮಾರುದಮ್ வட மாருதம் = ಬಡಗಣ ಗಾಳಿಯು (ತಂಗಾಳಿಯು), ತಿಙ್ಗಳ್ திங்கள் = ಚಂದ್ರನು, ವೆನ್ದೀ வெந்தீ = ಕ್ರೂರವಾದ ಶಾಖವನ್ನು, ಮುಗನ್ದು முகந்து = ತುಂಬಿಕೊಂಡು, ಶೊರಿಗಿನ್ಱದು சொரிகின்றது = ಸುರಿಸುತ್ತಿದ್ದಾನೆ, ಅದುವುಮ್ ಅದು அதுவும் அது = ಅವೆರಡೂ ಕೂಡಿಕೊಂಡು (ಸುಡುತ್ತಿವೆ), ಕಣ್ಣನ್ கண்ணன் = ಶ್ರೀಕೃಷ್ಣನ, ವಿಣ್ಣೂರ್ விண்ணூர் = ಪರಮಪದವೆಂಬ ವಾಸಸ್ಥಳದಲ್ಲಿ, ತೊೞುವೇ தொழவே = ಸೇವೆ ಮಾಡಲೆಂದೇ, ಶರಿಗಿನ್ಱದು சரிகின்றது = ಸರಿದು ಬೀಳುತ್ತಿವೆ, ಶಙ್ಗಮ್ சங்கம் = ಕೈಬಳೆಗಳು, (ಶಂಖದ ಬಳೆಗಳು) ತಣ್ தண் = ತಂಪಾದ, ಅಮ್ அம் = ಸುಂದರವಾದ, ತುೞಾಯ್ಕ್ಕು துழாய்க்கு = ತುಳಸಿಗಾಗಿ, ವಣ್ಣಮ್ வண்ணம் = ಬಣ್ಣವು, ಪಯಲೈ பயலை = ಬಿಳಿಚಿಯಾಗಿ, ವಿರಿಗಿನ್ಱದು விரிகின்றது = ಹರಡುತ್ತಿದೆ, ಮುೞು ಮೆಯ್ಯುಮ್ முழுமெய்யும் = ದೇಹವು ಪೂರ್ತಿಯಾಗಿ, ಎನ್ ಆಮ್ ಕೊಲ್ என் ஆம் கொல் = ಏನಾಗುವುದೋ, ಎನ್ என் = ನನ್ನ, ಮೆಲ್ಲಿಯಱ್ಕೇ மெல்லியற்கே = ನನ್ನ ಮೃದು ಸ್ವಭಾವಳಿಗೆ.

ಬಡಗಣ ಗಾಳಿಯು ಸುಳಿದಾಡುತ್ತಿದೆ. ಚಂದ್ರನು ಕ್ರೂರವಾದ ಬಿಸಿಯನ್ನು ತುಂಬಿಕೊಂಡು ಸುರಿಸುತ್ತಿದ್ದಾನೆ. ಅವೆರಡೂ ಕೂಡಿಕೊಂಡು ಸುಡುತ್ತಿವೆ. ಶ್ರೀಕೃಷ್ಣನ ಪರಮಪದವೆಂಬ ಊರಿನಲ್ಲಿ ಸೇವೆ ಮಾಡಲೆಂದೇ ಕೈಬಳೆಗಳು (ಶಂಖದಿಂದ ಮಾಡಿದ ಕೈಬಳೆಗಳು) ಸರಿದು ಬೀಳುತ್ತಿವೆ. ತಂಪಾದ ತುಳಸಿಗಾಗಿ ಪೂರ್ತಿ ದೇಹವೆಲ್ಲ ಬಿಳಿದ ಬಣ್ಣ ಹರಡುತ್ತಿದೆ. ನನ್ನ ಮೃದು ಸ್ವಭಾವಳಿಗೆ ಏನಾಗುವುದೋ? (47)

ತಂಗಾಳಿಯೂ, ಬೆಳದಿಂಗಳೂ ವಿರಹಿಗೆ ಅಹಿತ. ಅವೆರಡೂ ವಿರಹಿಯನ್ನ

ಬಾಧೆ ಪಡಿಸುತ್ತವೆಯಂತೆ. ಆದ್ದರಿಂದಲೇ ತಂಗಾಳಿಯೂ, ಬೆಳದಿಂಗಳೂ - ಎರಡೂ ತಂಪಾಗಿರುವ, ಹಿತವಾಗಿರುವ ವಿಷಯಗಳು ವಿರಹಿಗೆ ಬಿಸಿಯ ಬೇಗೆಯನ್ನುಂಟು ಮಾಡುವುವೆಂದು ವಿವರಿಸಲಾಗುತ್ತದೆ. ಕೊರಗನ್ನು ಹಚ್ಚಿಕೊಂಡಿರುವವರಿಗೆ ಮೈ ಕೃಶವಾಗುವುದೂ, ಹಳದಿ ಮೈ ಆಗುವುದೂ, ಬಳೆಗಳು ಕೈಯಿಂದ ಕಳಚಿ ಬೀಳುವುದೂ ಸಹಜವೇ.

ನಾಯಕಿ ಹೇಳುತ್ತಾಳೆ: ನನ್ನ ಸುತ್ತ ಮುತ್ತ ಸುಳಿದಾಡುವ ತಂಗಾಳಿಯೂ, ನನ್ನ ಮೇಲೆ ಸುರಿಸುತ್ತಿರುವ ಬೆಳದಿಂಗಳೂ, ಎರಡೂ ಕೂಡಿಕೊಂಡು ನನ್ನನ್ನು ಸುಟ್ಟು ಹಾಕುತ್ತಿವೆ. ವಿರಹ ವಿಷದಲ್ಲಿ ನನ್ನ ಪ್ರಿಯತಮನ ಜೊತೆಯಿಲ್ಲದೇ ಕುದಿಗರ ಬೇಗೆಯಿಂದ ಕೊರಗನಿಂದ ನನ್ನ ಮೈ ಬಡವಾಗಿದೆ. ಕೈಯಿಂದ ಬಳೆಗಳು ಜಾರಿ ಬೀಳುತ್ತಿವೆ. ನನ್ನ ಮೈಯೆಲ್ಲಾ ಹಚ್ಚ ಹಳದಿಯಾ ತಿರುಗಿದೆ. ಇನ್ನು ನನ್ನಲ್ಲಿ ಉಳಿದಿರುವ ನನ್ನ ಮೃದು ಸ್ವಭಾವವನ್ನು ಸುಡಲು ಬರುವುದೋ?

ಭಗವಂತನಿಗೆ ಪ್ರಿಯವಾದದ್ದು ಭಕ್ತಿ ಪೂರ್ಣವಾದ ವಿನೀತವಾದ ಮಾಧುರ್ಯ ಮಾತ್ರವೇ. ಅದು ಚೆನ್ನಾಗಿದ್ದರೆ, ಕೆಡದೆ ಇದ್ದರೆ, ನಾಯಕಿಯ ಆಶಯಕ್ಕೆ ಯಾವ ತೊಂದರೆಯೂ ಇರುವುದಿಲ್ಲ. ಅವಳ ದೇಹಕ್ಕೆ ಏನಾದರೇನಂತೆ? ಅದು ಹಾಗೆಯೇ ಕೃಶಿ ಬಿದ್ದು ಹೋಗಲೇ ಬೇಕಲ್ಲವೇ? ಅದೇ ಇಲ್ಲಿಯ ವಿಷಯ.

48. மெல்லிய லாக்கைக் கிருமி, குருவில் மிளிர்ந்த தாங்கே
செல்லிய செல்கைத் துலகையென் காணும், என்னாலுந்
தன்னைச்
சொல்லிய சூழல் திருமா லவன்கவி யாதுகற்றேன்,
பல்லியின் சொல்லுஞ் சொல்லாக் கொள்வதோ வுண்டு
பண்டு பண்டே.

ಮೆಲ್ಲಿಯ ಲಾಕ್ಕೈಕ್ಕಿರುಮಿ, ಕುರುವಿಲ್ ಮಿಳಿರ್ನ್ದ ದಾಙ್ಗೇ
ಶೆಲ್ಲಿಯ ಶೆಲ್ಕೈತ್ತುಲಕೈಯೆನ್ ಕಾಣುಮ್, ಎನ್ನಾಲುನ್ದನ್ನೈ
ಚ್ಚೊಲ್ಲಿಯ ಶೂಳ್ ತಿರುಮಾಲವನ್ ಕವಿಯಾದುಕಟ್ರೇನ್,
ಪಲ್ಲಿಯಿನ್ ಶೊಲ್ಲುಂಜೊಲ್ಲಾಕ್ಕೊಳ್ವದೋವುಣ್ಡು ಪಣ್ಡು ಪಣ್ಡೇ.

ಮೆಲ್ಲಿಯ மெல்லிய = ಸೂಕ್ಷ್ಮವಾದ (ಸಣ್ಣ), ಆಕ್ಕೈ ஆக்கை = ದೇಹದ, ಕಿರುಮಿ கிருமி = ಕ್ರಿಮಿಯು, ಕುರುವಿಲ್ குருவில் = ಕುರುಬಿನಲ್ಲಿ, ಮಿಳಿರ್ನ್ದು மிளிர்ந்து = ಹೊರಳಾಡಿ, ಆಙ್ಗೇ ஆங்கே = ಅಲ್ಲಿಯೇ, ಶೆಲ್ಲಿಯ செல்லிய = ಅಳಿಯುವ, ಶೆಲ್ಕೈತ್ತು செல்கைத்து = ಸ್ವಭಾವವುಳ್ಳದ್ದಾಗಿ, ಉಲಕೈ உலகை = (ವಿಶಾಲವಾದ) ಜಗತ್ತನ್ನು, ಎನ್ ಕಾಣುಮ ஏன் காணும்

Garani Srinivasan

ಏನುಕಾಣಬಲ್ಲದು? ಎನ್ನಾಲುಮ್ நாண்(ணு)ணும் = ನನ್ನಿಂದಲೂ, ತನ್ನೈತ್ತಾಣ್ ಬಿಣಾ = ತನ್ನನ್ನು (ನನ್ನ ಸ್ವಾಮಿಯನ್ನು), ಶೊಲ್ಲಯುಮ್ நினைக்கிலுமு = ಹೊಗಳು ದುವ, ತೊಲೈ (சுழல் = ಬಂಗಾರದ (ತಂತ್ರಿಯದ), ತಿರುಮಾಲವನ್ திருமாலவன் = ಸರ್ವೇಶ್ವರನ, ಕವಿ கவி = ಸ್ತುತಿಯನ್ನು, ಯಾದು யாது = ಯಾವುದನ್ನು (ಏನೇನೆಂದು), ಕಟ್ರೇನ್ கற்றேன் = ಕಲಿತದ್ದೇ ನೆ? ವಲ್ಲಯನ್ பல்லியின் = ಹಲ್ಲಿಯು, ಶೊಲ್ಲುಮ್ சொல்லும் = (ಒಂದು) ವಚನವೆಂದು, ಲೆಂಚಗುಳುವಿಕೆಯನ್ನು, ಶೆಲ್ ಆ சொல் ஆ = (ಒಂದು) ವಚನವೆಂದು, ಲೆಂಚಗುಳುವಿಕೆಯನ್ನು, ಶೆಲ್ ಆ சொல் ஆ கொண்டு = ತಿಳಿದುಕೊಳ್ಳ ಕೊಳ್ಳುವದೊಂದು ಉಣ್ಡು கொள்வதோ உண்டு = ತಿಳಿದುಕೊಳ್ಳ ವುದೂ ಉಂಟು, ಮಣ್ಡು பண்டு = ಹಳೆಯಕಾಲದ್ದು, ಪಣ್ಡೇ பண்டே = ಹಳೆಯದೇ.

ನಣ್ಣ (ದಿಂಪ್ಪವಾದ) ದೇಹವುಳ್ಳ ಪ್ರಾಣಿಯು ಕರುವಿನಲ್ಲಿ ಹೊರಳಾಡುತ್ತಾ ಏನುಕಾಣಬಲ್ಲದು? ಅರಿಯುವ ಸ್ವಭಾವವುಳ್ಳದ್ದಾಗ (ವಿಶಾಲವಾದ) ಜಗತ್ತನ್ನು ನನ್ನಿಂದಲೂ ತನ್ನನ್ನು ಹೊಗಳುವ ತಂತ್ರಿಯಾದ (ಬಂಗಾರಿಯಾದ) ಸರ್ವೇಶ್ವರನ ಸ್ತುತಿಯನ್ನು ಯಾವುದನ್ನು ಕಲಿತದ್ದೇನೆ? ಹಲ್ಲಿಯು ಲೆಂಚಗುಳುವಿಕೆಯನ್ನು (ಒಂದು) ವಚನವೆಂದು ತಿಳಿದುಕೊಳ್ಳುವುದೂ ಉಂಟು. ಹಳೆಯಕಾಲದ್ದು ಹಳೆಯದೇ. (48)

ಎಂಥ ಸುಂದರ ಸಾಂಕ್ಯ ಇದು! ಎಂಥೆಂಥ ಶ್ರೇಷ್ಠವಾದ ಶಾಮ್ಯಗಳನ್ನು ಆಚಿಕೊಳ್ಳಲಾಗದೆ! ಎಷ್ಟು ಆಳವಾಗಿ ಅರಿಯುತ್ತೊಂದರಾ, ಅದರ ಸ್ವಾರಸ್ಯ ತಿಳಿಯುವುದಿಲ್ಲ!

'ವೆಲ್ಲಿಯ ಲಾಕ್ಷ್ಯ ಕರುಮಿ ಕರುವಿಲ್ ಮಿಳ್ಳನ್ನಾಳ್ ಶೆಲ್ಲಯ ಶೆಲ್ದ್ವೃತ್ತು' — ದೇಹಕ್ಕೆ ಯಾತನೆ ಕೊಡುತ್ತಾ, ಪ್ರಾಣಿಯು ಕರುವನ್ನುಂಟು ಮಾಡುತ್ತದೆ. ಅದರಲ್ಲಿನ ಕೀವು ರಕ್ತದಲ್ಲೇ ಹೊರಳಾಡುತ್ತಾ, ಅವುಗಳನ್ನೇ ತಿಂದು ಜೀವಿಸುತ್ತಾ, ಕಡೆಗೆ, ಅದರ ಲ್ಲಿಯೇ ಅಳಿದು ಹೋಗುತ್ತದೆ. ಆ ಕರುವೇ ಕ್ರಿಮಿಗೆ ಜಗತ್ತು. ಅದಕ್ಕಿಂತಲೂ ವಿಶಾಲವಾದ ಅದ್ಭುತವಾದ ಜಗತ್ತು ಬೇರೊಂದಿದೆ ಎಂದಾಗ, ಅದರ ವಿಷಯವೇನಾ ದೂ ಅದಕ್ಕೆ ಹೇಗೆ ತಿಳಿದೀತು? ತನ್ನ ಜಗತ್ತನ್ನೇ ಅರಿಯದ ಕ್ರಿಮಿಗೆ ವಿಶಾಲವಾದ ಜಗತ್ತಿನ ಅರಿವು ಬರುತ್ತದೆಯೇ?

"ಎನ್ನಾಲುಮ್ ತನ್ನೈಚ್ಚೊಲ್ಲಿಯ ತೊಲೈ ತಿರುಮಾಲವನ್ ಕವಿ ಯಾದು ಕಟ್ರೇನ್" — ಭಕ್ತಿ ಸಾಮ್ರಾಜ್ಯದ ಸಂಸಾರವೆಂಬ ಕರುವನ್ನುಂಟು ಮಾಡಿಕೊಂ ಡು, ಅದರಲ್ಲಿ ಬಿದ್ದು ಕೊಳ್ಳುತ್ತಾ, ಅದರಲ್ಲಿಯೇ ಅಳಿಯುವ ಮಾನವನು.

ಊಟ, ನಿದ್ದೆಗಳನ್ನು ತೊರೆದು, ದೇಹವನ್ನು ದಂಡಿಸಿ, ಜ್ಞಾನವನ್ನು ಸಂಪಾದಿಸುವ ಗುರಿಯನ್ನು ಮುಟ್ಟುವುದಕ್ಕಾಗಿ ಶ್ರಮಿಸುವ ಎಷ್ಟೋ ಯೋಗಿಗಳೂ ಸಹ ತಮ್ಮ ಮನಸ್ಸನ್ನು ಚಂಚಲಕ್ಕೆ ಈಡುಮಾಡುವಂಥದ್ದು, ಸ್ತ್ರೀಯ ಕಣ್ಣುಗಳು. ಅವು ಹೊಳೆಯುವ ಕನ್ನೈದಿಲೆಯನ್ನು ಹೋಲುತ್ತವೆ. ಅವು ಪಂಚಭೂತಗಳ ಸ್ವರೂಪಿಯಾಗಿರುವ ಸರ್ವೇಶ್ವರನ ನೆಲೆಯಾದ, ಜಗವನ್ನು ಆನಂದವನ್ನು ನೀಡುವ ಶ್ರೀವೈಕುಂಠದ ಹಾಗೆ ಇರುವ ನಾಯಕಿಯ ಕಣ್ಣುಗಳ ಹಾಗಿವೆ. ನಾಯಕನಾದರೋ ಅವು ತನ್ನ ಪ್ರಾಣಕ್ಕೆ ಸಮನಾಗಿವೆ. ಏಕೆಂದರೆ, ಅವು ತನ್ನ ನಾಯಕನ ನೋಟವನ್ನು ಆಕರ್ಷಣೆಯನ್ನು ಆನಂದವನ್ನು ನೆನಪಿಗೆ ತರುತ್ತವೆ.

ನಾಯಕಿ ಹೇಳುತ್ತಾಳೆ: ಸುಂದರವಾಗಿ ಅರಳಿ ಹೊಳೆಯುವ ಕನ್ನೈದಿಲೆ ಹೂಗಳನ್ನು ಕಂಡ ಕೂಡಲೇ, ಎಂಥ ಯೋಗಿಯಾದರೂ ತನ್ನ ಮನಸ್ಸನ್ನು ಚಂಚಲಗೊಳಿಸಿ

Garani Srinivasan

ಕೋ ಖ್ಯಾತಾನೆ. ಸುಂದರವಾದ ಸ್ತ್ರೀಯು ಕಣ್ಣುಗಳಾದಂತಯೇ. ಕನ್ನೈದಿಲೆಯಾದರೋ, ನವೀಲ್ ಶ್ವರನ ಶ್ರೀವೈಕುಂಠದ ನೇಬಿಸನ್ನು ಆನಂದವನ್ನು ಪ್ರಕಟಗೊಳಿಸುವುದಾದರೆ ಅವು, ಕದುವಾಪಿಯಾದ ನನ್ನ ಪ್ರಾಣಗಳಿಗೆ ಆಗಿ, ನನ್ನ ಪ್ರಿಯಕಮನ ನೆನವನ್ನು ಕೊಡುತ್ತವೆ.

67. காவியும் நீலமும் வேலுங் கயலும் பலபலவென்று,
ஆவியின் தன்மை யளவல்ல பாரிப்பு, அசுரைச்செற்ற
மாவியம் புள்வல்ல மாதவன் கோவிந்தன் வேங்கடஞ்சேர்
தூவியம் பேடையன்னாள், கண்களாய துணைமலரே.

ಕಾವಿಯುಮ್ ನೀಲಮುಮ್ ವೇಲುಙ್ಗಯಲುಮ್ ಪಲಪಲವೆನ್ರು,
ಆವಿಯಿನ್ ತನ್ಮೈ ಯಳವಲ್ಲ ಪಾರಿಪ್ಪು, ಅಶುರೈಚ್ಚೆಟ್ರ
ಮಾವಿಯಮ್ ಪುಳ್ವಲ್ಲ ಮಾತವನ್ ಕೋವಿನ್ದನ್ ವೇಙ್ಗಡಞ್ಜೇರ್
ತೂವಿಯಮ್ ಪೇಡೈಯನ್ನಾಳ್, ಕಣ್ಗಳಾಯ ತುಣೈಮಲರೇ.

ಕಾವಿಯುಮ್ காவியும் = ಕೆಂದಾವರೆಯೂ, ನೀಲಮುಮ್ நீலமும் = ಕನ್ನೈದಿಲೆಯೂ, ವೇಲುಮ್ வேலும் = ವೇಲಾಯುಧವೂ, ಕಯಲುಮ್ கயலும் = ಮೀನೂ, ಪಲ ಪಲ பலபல = ಇನ್ನೂ ಅನೇಕ ವಸ್ತುಗಳೂ, ಇವುಗಳಲ್ಲಿ ಕಯಲ್ ಮೀನುಗಳು, (ಜೀವನದ) ವನ್ನು, ವೆನ್ರು வென்று = ಜಯಿಸಿ, ಆವಿಯಿನ್ ஆவியின் = ಜೀವದ, ತನ್ಮೈ தன்மை = ಸ್ವಭಾವಕ್ಕೆ, ಅಳವು ಅಲ್ಲ அளவு அல்ல = ಸಮನಲ್ಲ, ಪಾರಿಪ್ಪು பாரிப்பு = ~~[illegible]~~ ವಿಸ್ತಾರವುಳ್ಳ, ಅಶುರೈ அசுரை = ಅಸುರರನ್ನು, ಶೆಟ್ರ செற்ற = ಕೊಂದವನೂ, ಮಾ மா = ದೊಡ್ಡ, ವಿಯಮ್ வியம் = ದೇಹದ, ಪುಳ್ ಪುಳ್ = ಪಕ್ಷಿಯನ್ನು, ವಲ್ಲ வல்ல = ಹತ್ತಿಹೋಗುವವನೂ, ಮಾತವನ್ = ಶ್ರೀದೇವಿಯ ಪತಿಯೂ, ಕೋವಿನ್ದನ್ கோவிந்தன் = ಗೋವೃಗಳನ್ನು ರಕ್ಷಿಸುವವನೂ, ವೇಙ್ಗಡಮ್ வெங்கடம் = ತಿರುಮಲೆಯನ್ನು, ಶೇರ್ சேர் = ಸೇರುವವನೂ, ಆದವನ, ತೂವಿ தூவி = (ಅಂದವಾದ) ಪಕ್ಷಗಳುಳ್ಳ, ಅಮ್ அம் = ಸುಂದರವಾದ, ಪೇಡೈ பேடை = ಹೆಣ್ಣು ಹಂಸದಂತೆ, ಅನ್ನಾಳ್ அன்னாள் = ಇರುವವಳ, ~~[illegible]~~ (ನಾಯಕಿಯ), ಕಣ್ಗಳ್ ಆಯ கண்கள் ஆய = ಕಣ್ಣುಗಳಾಗಿರುವ, ತುಣೈಮಲರೇ துணை மலரே = ಜೋಡಿ ಹೂಗಳೇ.

ಅಸುರರನ್ನು ಕೊಂದವನೂ, ದೊಡ್ಡ ದೇಹದ ಪಕ್ಷಿಯನ್ನು ಹತ್ತಿ ಸಂಚರಿಸುವವನೂ ಶ್ರೀಯಃ ಪತಿಯೂ, ಗೋವೃಗಳನ್ನು ರಕ್ಷಿಸುವವನೂ, ತಿರುಮಲೆಯಲ್ಲಿ ನೆಲಸಿರುವವನೂ ಆದವನ, ಸುಂದರವಾದ ಪಕ್ಷಗಳ ಹೆಣ್ಣುಹಂಸದಂತೆ ಇರುವವಳ (ಈ ನಾಯಕಿಯ) ಕಣ್ಣುಗಳಾದ ಜೋಡಿ ಹೂಗಳು ಕೆಂದಾವರೆಗಳು, ಕನ್ನೈದಿಲೆಗಳು, ವೇಲಾಯು

Galari Srinivasan

ದೃಶ್ಯ, ಕಯಲ್ ಮೀನುಗಳನ್ನೂ, ಇನ್ನು ಹಲವಾರು (ಸುಂದರ) ವಸ್ತುಗಳನ್ನೂ,
ಇವುಗಳೆಲ್ಲವನ್ನು ಮೀರಿಸಿ, ಇವುಗಳ ಜೀವನದ (ಬಾಳ್ವೆಯ) ಸ್ವಭಾವಕ್ಕೆ ಆಶಿಸಿ (67)
ನೋಡುವುದಕ್ಕೆ ಸಮನಲ್ಲ.

ಹಿಂದಿನ ಪಾಶುರದಲ್ಲಿ ನಾಯಕನ ಸೊಬಗನ್ನು ಆಕರ್ಷಣೆಯನ್ನು ಕೂಡಿಸಿ ಹೇಳಲಾಯಿತು. ಇದರಲ್ಲಿ ನಾಯಕಿಯ ಸೊಬಗನ್ನು ಆಕರ್ಷಣೆಯನ್ನು ಹೇಳುತ್ತಾ, ಅವನಿಗೆ ಅನುರಾಗಿಗಳಾದವಳು ಇವಳು ಎನ್ನಲಾಗುತ್ತದೆ

ನಾಯಕಿ ಹೇಳುತ್ತಾಳೆ:- ರಾಕ್ಷಸರನ್ನೆಲ್ಲಾ ಸದೆಬಡಿದ ಪರಮ ಸಮರ್ಥನಾದ ಸಕಲೈಶ್ವರ್ಯವನ್ನು ನೀಡುವ ಶ್ರೀದೇವಿಯ ಪತಿಯಾದ, ಗೋವುಗಳನ್ನು ಪ್ರೀತಿಯಿಂದ ಕಾಪಾಡುವವನಾದ, ಗರುಡವಾಹನನಾದ ಸರ್ವೇಶ್ವರನಿಗೆ ಇವಳು ಎಲ್ಲಬಗೆಯಲ್ಲೂ ಹೊಂದಿಕೆಯುಳ್ಳವಳು. ಇವಳ ಕಣ್ಣುಗಳೇನೋ: ವಿಶಾಲವಾಗಿ, ಸುಂದರವಾಗಿ, ಆಕರ್ಷಕವಾಗಿವೆ. ನಾನಾ ಸ್ವಾರಸ್ಯಪೂರ್ಣವಾದ ಕೆಂದಾವರೆಗಳು, ಕನ್ನೈದಿಲೆಗಳು, ವೇಲಾಯುಧಗಳು, ಕಯಲ್ ಮೀನುಗಳು ಇವು ಸಾಟಿಯಲ್ಲ. ಇವಳ ದೃಷ್ಟಿಯಾದ, ಸೊಬಗಿನ ಜೀವನವನ್ನೇ ಇವು ಪ್ರತಿಬಿಂಬಿಸುತ್ತವೆ

68\. மலர்ந்தே யொழிந்தில மாலையும் மாலைப்பொன் வாசிகையும்,
புலந்தோய் தழைப்பந்தர் தண்டுற நாற்றி, பொருகடல் சூழ்
நிலந்தாவியவெம்பெருமான் தனது வைகுந்தமன்னாய்!
கலந்தார் வரவெதிர் கொண்டு, வன் கொன்றைகள் கார்த்தனவே.

ಮಲರ್ನ್ದೇ ಯೊಳಿನ್ದಿಲ ಮಾಲೈಯುಮ್ ಮಾಲೈಪ್ಪೊನ್ ವಾಶಿಗೈಯುಮ್,
ಪುಲನ್ದೋಯ್ ತಳೈಪ್ಪನ್ದರ್ ತಣ್ಡುಱ ನಾಱ್ಱಿ, ಪೊರುಕಡಲ್ ಶೂಳ್
ನಿಲನ್ದಾವಿಯ ಎಮ್ಬೆರುಮಾನ್ ತನದು ವೈಕುನ್ದಮನ್ನಾಯ್!
ಕಲನ್ದಾರ್ ವರವೆದಿರ್ಕೊಣ್ಡು, ವನ್ ಕೊನ್ಱೈಗಳ್ ಕಾರ್ತ್ತನವೇ.

ಮಲರ್ನ್ದೇ மலர்ந்தே = ಚೆನ್ನಾಗಿ (ಅರಳಿಯೇ), ಒಳಿನ್ದಿಲ ஒழிந்தில = ಮುಗಿದಿಲ್ಲ, ಮಾಲೈಯುಮ್ மாலையும் = ಹಾರವನ್ನು, ಮಾಲೈಪ್ಪೊನ್ ವಾಶಿಗೈಯುಮ್ மாலைப் பொன் வாசிகையும் = ಸುಂದರವಾದ ಕುರುಬಿನ ಹಾರವನ್ನೂ, ಪುಲಮ್ புலம் = ಸ್ವಸ್ಥಾನದಲ್ಲಿ, ತೋಯ್ தோய் = ತುಂಬುವ, ತಳೈ தழை = ಎಲೆಗಳ, ಪನ್ದರ್ பந்தர் = ಚಪ್ಪರದಲ್ಲಿ, ತಣ್ಡು தண்டு = ಬಾಳೆಯ ಹೂವಿನ ಎಸಳುಗಳನ್ನು, ಉಱ உற = ಚೆನ್ನಾಗಿ, ನಾಱ್ಱಿ நாற்றி = ನೆಟ್ಟು, ಪೊರುಕಡಲ್ ಶೂಳ್ பொருகடல்சூழ் = ಅಲೆಗಳಿಂದ ತುಂಬಿದ ಕಡಲಿನಿಂದ ಸುತ್ತುವರಿದ, ನಿಲಮ್ நிலம் = ಭೂಮಂಡಲವನ್ನು,

ಕಾವಿಯ ಕ್ಕಾವಿಯ = ಅಳೆದುಕೊಂಡ, ಎಮ್ಬೆರುಮಾನ್ ಕನದು ನಂಬೆರುಮಾನ್
ತನಾತು = ಸರ್ವೇಶ್ವರನ, ವೈಕುಂಠಮ್ ಅನ್ನಾಯ್ ಉಟುರುಕ್ಕುಮ್ ಅನ್ರಾಯ್ =
ವೈಕುಂಠಕ್ಕೆ ನಾಟಿಯಾಗಿರುವವಳೇ (ಕಸ್ತವಳೇ), ಕಲಸ್ದಾರ ಕಲುಂದ್ಕಾರ್ = ಕೂಡಿ
ಕೊಳ್ಳುವವರ (ಬಂದು ಸೇರುವವರ), ವರವು ಬಾರವು = ಬರುವಿಕೆಯನ್ನು, ಎದಿರ್
ಕೊಳ್ಳು ನಕ್ಕೀರ್ ಕೊಂಡು = ಇದಿರುಗೊಂಡು, ವಲ್ ಮರು = ಬಲಿಕ, ಕೊನ್ನ್ಕೈ
ಡಲ್ ಕೊಂಡಾರು ಕಳ್ = ಕಸ್ತೆ ಮರಗಳು, ಕಾರ್ತ್ತನವೇ ಕಾರ್ತ್ತಾನವೇ
= ಜೀಕುಗುತ್ತಿರುತ್ತವೆಯಲ್ಲಾ.

ಅಲೆಗಳಿಂದ ತುಂಬಿದ ಕಡಲಿನಿಂದ ಸುತ್ತುವರಿದ ಭೂಮಂಡಲವನ್ನು ಅಳೆದುಕೊಂ(ಬಲಿಕ) ಡ ಸರ್ವೇಶ್ವರನ ವೈಕುಂಠಕ್ಕೆ ಕಸ್ತವಳೇ, ಬಲವಾದ ಕಸ್ತೆ ಮರಗಳು ಜೀಕುಗುತ್ತಿ ಸುಂದರವಾದ ತುರುಬಿನ ದಾರ (ದಂಡೆ) ವನ್ನು ಮುಗಿಬಲ್ಲ. (ಹೂವಿನ) ದಾರವನ್ನು ಸುಂದರವಾದ ತುರುಬಿನ ದಾರ ಎನ್ನುವಗಳನ್ನು ಸೋಬನು ತುಂಬಿರುವ ಎಲೆಗಳ ಚಪ್ಪರದಲ್ಲಿ ಬರುವಿಕೆಯನ್ನು ಇದಿರುಗೊಂಡು ಕಸ್ತೆ ಮರ ಚನ್ನಾಗಿ ನಾಟಿ, ಬಂದು ಕೂಡುವವರ ಬರುವಿಕೆಯನ್ನು ಇದಿರುಗೊಂಡು ಕಸ್ತೆ ಮರ (68)
ಗಳು ಜೀಕುಗುತ್ತಿವೆಯಲ್ಲ!

ಪರಮ ಸುಂದರಿಯಾದ ನಾಯಕಿಯನ್ನು ಕೂಡಿಕೊಳ್ಳುವುದಕ್ಕಾಗಿ, ಅವಳ ಪ್ರಿಯತಮನಾದ ಸರ್ವೇಶ್ವರನು ಮಳೆಗಾಲದಲ್ಲಿ ಬರುವೆನೆಂದು ಹೇಳಿ ಹೋಗಿದ್ದನಷ್ಟೆ. ಪ್ರಿಯತಮನು ಬರಲಿಲ್ಲ. ನಾಯಕಿಗೆ ಭ್ರಮೆ, "ಅಕಟ! ಮಳೆಗಾಲ ಮುಗಿದೇ ಹೋಯಿತಲ್ಲ! ಪ್ರಿಯತಮನು ಬರಲಿಲ್ಲವಲ್ಲ! ಎಂಬ ಕಳವಳಕ್ಕೆ. ಅವಳ ಗೆಳತಿ ಹೇಳುವ ಸಮಾಧಾನದ ಮಾತು ಇಲ್ಲಿ ಬರುತ್ತದೆ.

ಗೆಳತಿ ಹೇಳುತ್ತಾಳೆ: ಸಖಿ, ನೀನು ಭ್ರಮೆಗೊಂಡ ಪರಮ ಪದಕ್ಕೆ ಯೋಗ್ಯವಾದವಳು. ಇದರಲ್ಲಿ ಯಾವ ಸಂದೇಹವೂ ಇಲ್ಲ. ನಿನ್ನ ಪ್ರಿಯತಮನು ಹೇಳಿದ ಮಳೆಗಾಲ ಇನ್ನೂ ಬಂದಿಲ್ಲವಲ್ಲ! ಅದನ್ನು ಸೂಚಿಸುವ ಕಸ್ತೆ ಮರಗಳು ಹಳದಿ ಹೂವನ್ನು ತುಂಬಿ ಮುಡಿದು ಕಾಣುತ್ತಿಲ್ಲ, ಕಂಡೆಯಾ! ಕೇಳಿಸಿತೇ ಅವು ಜಿಗುರಿವೆ. ಎಲೆಗಳಿಂದ ತುಂಬಿವೆ. ಹೂವುಗಳು ಸೋಬಗಿನಿಂದ ತುಂಬಿ ಮೆರೆಯುತ್ತಿವೆ. ಜಿಗುರಿವೆ. ಎಲೆಗಳಿಂದ ತುಂಬಿವೆ. ಹೂವುಗಳ ಚಪ್ಪರವನ್ನು ನಿನ್ನ ನಲ್ಲನ ಬರವನ್ನು ಅವು ಎದುರು ನೋಡುತ್ತಾ ಹೂವುಗಳ ಚಪ್ಪರವನ್ನು ಸಿಂಗರಿಸಿ ಹರಡಿ ಕಂಗೊಳಿಸುತ್ತಿವೆ, ಕಾಣೆಯಾ? ಕಾಲ ಬರುವುದಕ್ಕೆ ಮುಂಚೆಯೇ ಕಾಲ ಕಳೆದು ಹೋಯಿತು ಎಂಬ ಆತುರವಾದರೂ ಏಕೆ?

69. காரேற்றிருள் செகிலேற்றின் சுடருக்குடைந்து, வெல்வான்
போரேற்றெதிர்ந்தது புன்றலை மாலை, புவனியெல்லாம்
நீரேற்றளந்த நெடியபிரானருளா விடுமே
வாரேற்றிளமுலையாய்!, வருந்தேலுன் வளைத்திறமே.

Galani Srinivasan

ಕಾರೇಟ್ರಿರುಳ್ ಶೆಗಿಲೇಟ್ರಿನ್ ಶುಡರುಕ್ಕುಳೈನ್ದು, ವೆಲ್ ವಾನ್
ಪೋರೇಟ್ರೆದಿರ್ನ್ದದು ಪುನ್‌ತಲೈ ಮಾಲೈ, ಪುವನಿಯೆಲ್ಲಾಮ್
ನೀರೇಟ್ರಳನ್ದ ನೆಡಿಯ ಪಿರಾನರುಳಾ ವಿಡುಮೇ
ವಾರೇಟ್ರಿಳಮುಲೈಯಾಯ್! ವರುನ್ದೇಲುನ್ ವಳೈತ್ತಿಱಮೇ.

ಕಾರ್ ಏಱು கார் ஏறு = ಕರಿಯ ಎತ್ತಾದ, ಇರುಳ್ இருள் = ರಾತ್ರಿಯು (ಕತ್ತಲೆಯು), ಶೆಗಿಲ್ ಏಟ್ರಿನ್ செகில் ஏற்றின் = ಕೆಂಪು ಎತ್ತಿನ, ಶುಡರುಕ್ಕು சுடர்க்கு = ಪ್ರಕಾಶಕ್ಕೆ, ಉಳೈನ್ದು உளைந்து = ನೋಯುತ್ತ (ಮನನೊಂದು), ವೆಲ್ ವಾನ್ வெல்வான் = ಜಯಿಸುವುದಕ್ಕಾಗಿ, ಪೋರ್ ಏಟ್ರು போர் ஏற்று = ಹೋರಾಡಲು ಸಿದ್ಧವಾಗಿ, ಎದಿರ್ನ್ದದು எதிர்ந்தது = ಎದುರಿಸಿತು, ಪುನ್‌ತಲೈ ಮಾಲೈ புன்தலை மாலை = ಅಲ್ಪವಾದ ಸಂಜೆಯನ್ನು, ಪುವನಿ ಎಲ್ಲಾಮ್ புவனி எல்லாம் = ಭೂಮಿಯೆಲ್ಲವನ್ನು, ನೀರ್ ಏಟ್ರು நீர் ஏற்று = ನೀರೆರೆಸಿಕೊಂಡು, ಅಳನ್ದ அளந்த = ಅಳೆದುಕೊಂಡ, ಪಿರಾನ್ பிரான் = ಕೃಪೆಯುಂಟಾದ ಸರ್ವೇಶ್ವರನ, ಅರುಳಾ ವಿಡುಮೇ அருளா விடுமே = ಕೃಪೆಯುಂಟಾಗದಿರುವುದೇ, ವಾರ್ ಏಟ್ರು வார் ஏற்று = ಕುಪ್ಪಸ ಬಿಗಿದಿರುವ, ಇಳಮುಲೈಯಾಯ್ இள முலையாய் = ಎಳೆಯ (ಚಿಕ್ಕವನದ) ಮೊಲೆಯುವಳೇ, ವರುನ್ದೇಲ್ வருந்தேல் = ವ್ಯಥೆಪಡಬೇಡ, ಉನ್ உன் = ನಿನ್ನ, ವಳೈತ್ತಿಱಮೇ வளைத்திறமே = ಬಳೆಯ ರೀತಿಯಲ್ಲಿಯೇ.

ಕರಿಯ ಎತ್ತಾದ ರಾತ್ರಿಯು (ಕತ್ತಲೆಯು) ಕೆಂಪು ಎತ್ತಿನ ಪ್ರಕಾಶಕ್ಕೆ ಸೋತು (ಮನನೊಂದು), (ಅದನ್ನು) ಜಯಿಸುವುದಕ್ಕೆ ಹೋರಾಡಲು ಸಿದ್ಧವಾಗಿ ಅಲ್ಪವಾದ ಸಂಜೆಯನ್ನು ಎದುರಿಸಿತು. ನೀರನ್ನು ಎರೆಸಿಕೊಂಡು ಭೂಮಿಯೆಲ್ಲವನ್ನು ಅಳೆದುಕೊಂಡ ಸರ್ವೇಶ್ವರನ ಕೃಪೆಯುಂಟಾಗದಿರುವುದೇ? ಕುಪ್ಪಸವನ್ನು ಬಿಗಿದಿರುವ ಎಳೆಯ (ಚಿಕ್ಕವನದ) ಮೊಲೆಯುವಳೇ, ನಿನ್ನ ಕೈ ಬಳೆಯ ರೀತಿಯಲ್ಲಿಯೇ, ವ್ಯಥೆಪಡಬೇಡ. (69)

ಮುಂಜಾನೆ ಮುಸ್ಸಂಜೆಗಳಲ್ಲಿ ನಡೆಯುವ ವ್ಯಾಪಾರವನ್ನು ಇಲ್ಲಿ ಸುಂದರವಾಗಿ ರೂಪಕವಾಗಿ ಹೇಳಲಾಗಿದೆ. ಕತ್ತಲೆಗೂ ಬೆಳಕಿಗೂ ಸದಾ ಹೋರಾಟವೇ. ಮುಂಜಾನೆ ಬಂದಾಗ, ಸೂರ್ಯೋದಯವಾದಾಗ, ಕತ್ತಲೆ ಓಡಿಹೋಗಲೇಬೇಕು. ಬೆಳಕಿನಿಂದ ದೂರವಾಗಿ ಅದು ಸೋತುಹೋಗಲೇಬೇಕು. ಸಂಜೆಯವರೆಗೂ ಅದು ಕಾದಿದ್ದು, ಮುಸ್ಸಂಜೆಯಲ್ಲಿ ಅದು ಕನ್ನಕ್ಕೆಯನ್ನು ಮೇಲುಮಾಡಿ, ಬರಬರುತ್ತ ಹಗಲನ್ನು ಓಡಿಸಿ ರಾತ್ರಿಯಾಗುತ್ತದೆ. ಅದರ ಪ್ರಾಬಲ್ಯ ಮತ್ತೆ ಮುಂಜಾನೆಯವರೆಗೆ. ಈ ಅಂಶವನ್ನು ಎರಡು ಎತ್ತುಗಳ

GaraniSrinivasan

ಕೋಲಾಟದ ರೂಪವಾಗಿ ಸೂಚಿಸಲಾಗಿದೆ. ಕತ್ತಲೆಯೇ ಕರಿಯ ಎತ್ತು. ಬೆಳಕೇ ಕೆಂದೆತ್ತು. ಮುಂಜಾನೆಯಲ್ಲಿ ಕೆಂದೆತ್ತಿನ ಪ್ರಭಾವಕ್ಕೆ ಕರಿಯ ಎತ್ತು ಮಣಿಯುವುದು, ಸಮಯಕ್ಕಾಗಿ ಕಾದಿದ್ದು, ಮತ್ತೆ, ಮುಸ್ಸಂಜೆಯಲ್ಲಿ, ಕೋಲಾಟದಲ್ಲಿ ಸಿದ್ಧವಾಗಿ, ಕೆಂದೆತ್ತನ್ನು ತಪ್ಪದೆ ಸೋಲಿಸಿ ಬಿಡುತ್ತದೆ. ಇದು ಸ್ವಭಾವ.

ನೀರೆರೆದು ಕೊಂಡು ಭೂಮಿಯೆಲ್ಲವನ್ನು ಅಳೆದುಕೊಂಡದ್ದು ಸರ್ವೇಶ್ವರನ ವಾಮನ-ತ್ರಿವಿಕ್ರಮ ರೂಪ ವಿಭವ. ವಾಮನನಾಗಿ ಬಂದು, ಬಲಿಚಕ್ರವರ್ತಿಯಿಂದ ಮೂರಡಿ ನೆಲವನ್ನು ದಾನವಾಗಿ ಪಡೆದುಕೊಂಡು, ತ್ರಿವಿಕ್ರಮನಾಗಿ ಬೆಳೆದು ತನ್ನ ಒಂದೇ ಹೆಜ್ಜೆಯಿಂದ ಭೂಮಿಯನ್ನೆಲ್ಲಾ ಆವರಿಸಿ, ಅದನ್ನು ಅಳೆದುಕೊಂಡನು ಎಂಬುದು ಇಲ್ಲಿಯ ಸಂದರ್ಭ.

ಗೆಳತಿ ಹೇಳುತ್ತಾಳೆ: ಕುಪ್ಪದ ಬಾಗಿರುವ ಲತಾವನದ ಮಾಲೆಯವಳೇ, ನಿನ್ನ ದೇಹ ಕೃಶಿಸಿ, ಕೈಬಳೆಗಳು ಕೈಯಿಂದ ಜಾರಿದುವೆಂದು, ಹಾಸಿಗೆಯ ನಿನ್ನ ಲತಾವನವು ನಷ್ಟವಾಗಿ ಕೋಮಲವಾದಂತೆ ಚಿಂತಿಸಿ, ವ್ಯರ್ಥವಿಡಬೇಡ. ಮುಂಜಾನೆಯಾಗುತ್ತಲೇ, ಬೆಳಕನ್ನು ಎದುರಿಸಲಾರದೆ ಕತ್ತಲೆಯು ನೊಂದು, ಅಡಗಿಕೊಂಡು, ಸಂಜೆಯವರೆಗೆ ಕಾದಿದ್ದು, ಮತ್ತೆ ಆನನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳುವುದು ಸಹಜವಷ್ಟೆ. ನಿನಗಾ ಸರ್ವೇಶ್ವರನ ಕೃಪೆಯಿಂದಾಗಿ ವೃದುಮಂದಿರ. ನೀನು ಸಿಡವೆಯಿಂದ ಅದಕ್ಕಾಗಿ ಕಾದಿರು.

70. வளைவாய்த் திருச்சக்கரத்தெங்கள் வானவனார் முடிமேல்,
துளைவாய் நறுங்கண்ணித் தண்ணந்துழாய்க்கு வண்ணம்பயலை,
விளைவான் மிகவந்து நாள்திங்களாண்டூழி நிற்கவெம்மை
உளைவான் புகுந்து, இதுவோர்கங்குலாயிர மூழிகளோ.

ವಳೈವಾಯ್ ತಿರುಚ್ಚಕ್ಕರತ್ತೆಙ್ಗಳ್ ವಾನವನಾರ್ ಮುಡಿಮೇಲ್,
ತುಳೈವಾಯ್ ನಱುಙ್ಗಣ್ಣಿತ್ ತಣ್ಣನ್ದುೞಾಯ್ಕ್ಕು ವಣ್ಣಂ ಪಯಲೈ,
ವಿಳೈವಾನ್ ಮಿಗವನ್ದು ನಾಳ್ ತಿಙ್ಗಳಾಣ್ಡೂೞಿ ನಿಱ್ಕವೆಮ್ಮೈ
ಉಳೈವಾನ್ ಪುಗುನ್ದು, ಇದುವೋರ್ ಕಙ್ಗುಲಾಯಿರ ಮೂೞಿಗಳೇ.

ವಳೈ வளை = ದುಂಡಗೆ, ವಾಯ್ வாய் = (ಹರಿತವಾದ) ಬಾಯಿಯುಳ್ಳ, ತಿರುಚ್ಚಕ್ಕರತ್ತು திருசக்கரத்து = ಪವಿತ್ರವಾದ ಚಕ್ರಾಯುಧದ, ಎಙ್ಗಳ್ எங்கள் = ನಮ್ಮ, ವಾನವನಾರ್ வானவனார் = ಪರಮಪದದಲ್ಲಿರುವವನ (ಸರ್ವೇಶ್ವರನ) ಮುಡಿ ಮೇಲ್ முடிமேல் = ಕಿರೀಟದ ಮೇಲೆ, ತುಳೈವಾಯ್ துளைவாய் =

Garani Srinivasan

ಕಟ್ಟಿ ಸುತ್ತಿರುವ (ಮುಡಿದಿರುವ), நறு நறு = ಪರಿಮಳಭರಿತವಾದ, தண் கண்ணி = ಹಾರವಾದ, தண் குண = ತಂಪಾದ, அமர் அம் = ಸೊಬಗಿನ, துழாய்க்கு = ತುಲಸಿಗಾಗಿ (ಆಶಿಸಿ), மேனி வண்ணம் = ಮೈಬಣ್ಣವು, பசலை பயில = ಹಳದಿಯಾಗಿ, விள்ளத்தான் விடிவான் = ಬೆಳೆಯುವುದಕ್ಕಾಗಿ, மிக வந்து மிக வந்து = ಅನೇಕವಾಗಿ (ಬಹಳವಾಗಿ) ಬಂದು, நாள் நாள்கள் = ದಿನಗಳೂ, திங்கள் திங்கள் = ತಿಂಗಳುಗಳೂ, ஆண்டு ஆண்டு = ವರ್ಷಗಳು (ಕಳೆಯುತ್ತಿರಲು), ஊழி ஊழி = ಯುಗಗಳೂ, நிமிர்க = ಕಳೆದ ಹೋದರೂ, ಎಮ್ಮನ್ನ ನಮ್ಮ ಬಾಧಿಸಲು, நம் பால் = ನಮ್ಮ, உள்ளவாய் உளவாய் = ಕಲೆಯಲ್ಲಿ (ಮನದಲ್ಲಿ), புகுந்து = ಪ್ರವೇಶಿಸಿ (ತುಂಬಿಕೊಂಡು), ಇರುವ, இருள் கங்குல் ஊழி = ಈ ವಿಚಿತ್ರವಾದ (ನಾಟಯಿಲ್ಲದ) ಕತ್ತಲೆಯು, ஆயிரமா ஆயி ஊழி கங்குல் = ಸಾವಿರ, ಊಳಿಗಳೇ ஊழிகளோ = ಯುಗಗಳೇ ಆಗಿದೆ.

ದುಂಡಗೆ ಹರಿತವಾದ ಬಾಯುಳ್ಳ ವಿಚಿತ್ರವಾದ ಚಕ್ರಾಯುಧದ ನಮ್ಮ ಪರಮ ಪದದ ಸರ್ವೇಶ್ವರನ ಕಿರೀಟದ ಮೇಲೆ ಕಟ್ಟಿ ಸುತ್ತಿರುವ ಪರಿಮಳಭರಿತವಾದ ಹಾರವಾದ ತಂಪಾದ ಸೊಬಗಿನ ತುಲಸಿಗಾಗಿ ಆಶಿಸಿ, ಮೈಬಣ್ಣವು ಹಳದಿಯಾಗಿ ಬೆಳೆಯುವುದಕ್ಕಾಗಿ ಬಹಳವಾಗಿ ದಿನಗಳು, ತಿಂಗಳುಗಳು, ವರ್ಷಗಳು, ಯುಗಗಳೂ ಬಂದು ಹೋದ ಹೋದರೂ (ಹೋಗುತ್ತಿರಲು), ಈ ವಿಚಿತ್ರವಾದ ಕತ್ತಲೆಯು ನಮ್ಮ ಕಲೆಯಲ್ಲಿ (ಮನದಲ್ಲಿ) ಪ್ರವೇಶಿಸಿ ನಮ್ಮನ್ನು ಬಾಧಿಸಲು, ಸಾವಿರಯುಗಗಳೇ 76 ಆಗಿವೆ.

ರಾತ್ರಿಗಳು, ಕತ್ತಲೆ – ಇವು ವಿರಹಿಗೆ ತೊಂದರೆ ಕೊಡತಕ್ಕವು. ವಿರಹವೇದನೆಯುಳ್ಳವರಿಗೆ ಅವುಗಳನ್ನು ಕಳೆಯುವುದು ಬಲು ಕಷ್ಟವಾಗುತ್ತದೆ. ಇಲ್ಲಿನ ವಿಷಯ ಅದೇ.

ನಾಯಕಿ ಹೇಳುತ್ತಾಳೆ: ಚಕ್ರಾಯುಧಧಾರಿಯೂ, ಪರಮಪದದ ಒಡೆಯನೂ ಆಗಿರುವ ಸರ್ವೇಶ್ವರನ ಕಿರೀಟಕ್ಕೆ ಕಟ್ಟಿ ಸುತ್ತಿರುವ ಪವಿತ್ರವಾದ, ಪರಿಮಳಪೂರ್ಣವಾದ, ಹಿತಕರವಾದ, ತುಲಸಿಯ ಹಾರಕ್ಕಾಗಿ ನಾನು ಆಶೆಪಟ್ಟದ್ದೇ ಕಾರಣ. ಅದಕ್ಕಾಗಿ ದಿನಗಳು, ತಿಂಗಳುಗಳು, ವರ್ಷಗಳು, ಯುಗಗಳು ಕಳೆದು ಹೋದವು. ನನ್ನ ಮೈಬಣ್ಣ ಹಳದಿಯಾಗಿ ಬೆಳ್ಳಗೆ ಕೊರಗಿತು. ಆದರೆ, ಇಂದಿನ ವಿಚಿತ್ರವಾದ ಕತ್ತಲೆಯಂತೆ ನನ್ನ ಮನಸ್ಸನ್ನು ಹೊಕ್ಕು ನನ್ನನ್ನು ಬಾಧಿಸುತ್ತಿರುವುದು ಬೇರೆಯಾವುದೂ ಇಲ್ಲ. ಇದೊಂದೇ ಒಂದು ಸಾವಿರ ಯುಗದ ಹಾಗೆ ನನಗೆ ತೋರಿ ಬರುತ್ತದೆ. ನನ್ನ ಮನೋವ್ಯಥೆಯನ್ನು ಇಂದು ಕಳೆಯುವುದು ಬಲು ಕಷ್ಟಕರವಾಗಿದೆ.

71. ஊழிகளா யுலகேழுமுண்டா னென்றிலம், பழங்கண்
டாழிகளாம் பழவண்ணமென்றேற்கு, அஃதே கொ
ண்டன்னை
நாழிவளோ வென்னும் ஞாலமுண்டான் வண்ணஞ்
சொல்லிற்றென்னும்
தோழிகளோ! உரையீர், எம்மை யம்மனை சூழ்கி
ன்றவே.

ఊళిగళా యులకేళుముణ్డా నెన్ఱిలమ్, పళఙ్గణ్
డాళి కళామ పళ వణ్ణా మెన్ఱేఱ్కు, అఃదే కొణ్డన్నై
నాళివళో వెన్నుమ్ ఞాలముణ్డాన్ వణ్ణఞ్ సొల్లిఱ్ఱెన్నుమ్
తోళిగళో! ఉరైయీర్, ఎమ్మై యమ్మనై శూళ్గిన్ఱవే.

ఊళిగళ్ ఆయ్ ఊళిగళ్ ఆయ్ = యుగగళ్ళీ ఆగి, (కాలస్వరూ పనాగ), ఉలగు ఏళుమ్ ఉలగు ఏళుమ్ = ఏళు లోకాలన్ను, ఉణ్డాన్ ఉణ్డాన్ = ఉణ్డవను, ఎన్ఱిలమ్ ఎన్ఱిలమ్ = అన్నలిల్ల (అందుకేళలిల్ల), ఆళిగళ్ ఆళిగళ్ పళమ్ కణ్డు = దణ్ణన్ను కండు, కళామ్ పళమ్ వణ్ణామ్ = కడలు, కళామ్ పళమ్ వణ్ణామ్ కళామ్ పళమ్ వణ్ణామ్ = కడలు కవళ్ళీ దణ్ణన బణ్ణ, ఎన్ఱేఱ్కు ఎన్ఱేఱ్కు = అంద ననగే, అదే కొణ్డు అఃదే కొణ్డు = అదన్నే ఎత్తికొండు, అన్నై అన్నై = తాయియు, నాళ్ ఇవళో నాళివళో = స్వతంత్రళ నడె యువవళు ఇవళు, ఎన్నుమ్ ఎన్నుమ్ = ఎన్నుత్తాళే, ఞాలమ్ ఉణ్డాన్ ఞాలమ్ ఉణ్డాన్ = లోకవన్నుండవన, వణ్ణమ్ వణ్ణమ్ = బణ్ణవన్న, సొల్లిఱ్ఱెన్ సొల్లిఱ్ఱెన్ = హేళిబిట్టె, ఎన్నుమ్ ఎన్నుమ్ = ఎన్నుత్తాళే, తోళిగళో తోళిగళో = గెళతియరే, ఉరైయీర్ ఉరైయీర్ = హేళిరి, ఎమ్మై ఎమ్మై = నమ్మన్ను అమ్మనై అమ్మనై = తాయియు, శూళ్గిన్ఱవే శూళ్గిన్ఱవే = బళగు మాతనాడువుదన్న.

'యుగగళ్ళీ ఆగి (కాలస్వరూపనాగి) ఏళు లోకగళన్ను ఉండవను' ఎందు హేళలిల్ల. దణ్ణన్న కండు, 'కడలు కవళ్ళీ దణ్ణన బణ్ణ' ఎందు హేళిద్దక్కే, అదన్నే ఎత్తికొండు, నన్న తాయి 'ఇవళు స్వతంత్రళ నడె యువవళు' ఎన్నుత్తాళే. 'లోకవన్నుండవన బణ్ణవన్న హేళిబిట్టె' ఎన్నుత్తాళే. గెళతియరే, నమ్మన్ను కురితు బళగు మాతనాడువుదన్న నిల్లిసి హేళిరి. (నిల్లిసువంతె హేళిరి).

Garani Srinivasan

ನಾಯಕಿ ತನ್ನ ಪ್ರಿಯತಮನನ್ನು ಮರೆಯುವುದಾದರೂ ಹೇಗೆ? ಅವನ ನೆನಪು ಎಡೆಬಿಡದಂತೆ ಅವಳಿಗೆ ಬರುತ್ತಿರುತ್ತದೆ. ಯಾವುದಾದರೊಂದು ಕಾರಣದಿಂದ ತನ್ನ ಪ್ರಿಯತಮನ ಸ್ವರೂಪವನ್ನೋ, ಸ್ವಭಾವವನ್ನೋ, ಗುಣವನ್ನೋ ಎತ್ತಿ ಆಡುತ್ತಿರುತ್ತಾಳೆ. ಬಳ್ಳದು ಮಾತುಗಳಲ್ಲಿ ಅವುಗಳನ್ನು ಹೇಳುವುದು ಅವಳ ಮನಸ್ಸಿಗೆ ಬಂದು ನೆಮ್ಮದಿ ಇದ್ದಂತೆ. ಆದರೆ, ಅವಳ ತಾಯಿಗೆ ಅದು ಹಿಡಿಸದು. ಅವಳು ತನ್ನ ಬಗ್ಗೆ ನಡೆಯುವವಳಲ್ಲ ಎಂದು ಮುಂತಾಗಿ ತಾಯಿ ಮಾತನಾಡುತ್ತಾಳೆ. ಇದು ನಾಯಕಿಯ ಹೊರನೋಟ. ತನ್ನ ಗೆಳತಿಯರಲ್ಲಿ ಅವಳು ಇದನ್ನು ಹೇಳಿಕೊಳ್ಳುತ್ತಾಳೆ.

ನಾಯಕಿ ಹೇಳುತ್ತಾಳೆ: ಗೆಳತಿಯರೇ, ನಾನು ತವಳಿದ್ದನ್ನು ಕಂಡೆ. ಕೂಡಲೇ ನನಗೆ ಕಡಲನ ನೆನಪು ಬಂತು. ಕಡಲು ತವಳಿದ್ದನ್ನಗ ಬಣ್ಣ ಎಂದೆ. ರಾತ್ರಿ ಬಂದು ಯುಗವೇ ಆಯಿತು ಎಂದೆ. ಇಷ್ಟು ಮಾತ್ರಕ್ಕೇ ನಮ್ಮತಾಯಿ ನನ್ನನ್ನು ಸ್ವೇಚ್ಛಾಚಾರಿ, ತಲೆಹರಟೆ ಎಂದು ಮುಂತಾಗಿ ಬೈದಳು. ನಾನು ನನ್ನ ಪ್ರಿಯತಮ ನನ್ನ ಯುಗಗಳು ಎನ್ನಲಿಲ್ಲ. ಕಾಲಸ್ವಾಮಿ ಎನ್ನಲಿಲ್ಲ. ಲಂಕೆಗಳನ್ನುಂಡವನು ಎನ್ನಲಿಲ್ಲ. ಅವನು ಕಡಲವಣ್ಣನು ಎನ್ನಲಿಲ್ಲ, ಕಂಡಿರಾ. ಗೆಳತಿಯರೇ ನನ್ನನ್ನು ಕುರಿತು ಬಳ್ಳದು ಮಾತುಗಳನ್ನಾಡುವುದನ್ನು ನಿಲ್ಲಿಸಬೇಕೆಂದು ನಮ್ಮತಾಯಿಗೆ ಹೇಳುವಿರಾ?

72. சூழ்கின்ற கங்குற் சுருங்காயிருளின் கருந்திணிம்பை,
போழ்கின்ற திங்களம்பிள்ளையும் போழ்க, துழாய்மலர்க்கே
தாழ்கின்ற நெஞ்சத்தொரு தமியாட்டியேன் மாமைக்கின்று
வாழ்கின்ற வாறிதுவோ?, வந்து தோன்றிற்று வாலியதே.

ಸೂಳ್‌ಗಿನ್ಱ ಕಙ್ಗುಱ್ ಸುರುಙ್ಗಾಯಿರುಳಿನ್ ಕರುನ್ದಿಣಿಮ್ಬೈ,
ಪೋಳ್‌ಗಿನ್ಱ ತಿಙ್ಗಳಮ್ಪಿಳ್ಳೈಯುಮ್ ಪೋಳ್‌ಗ, ತುಳಾಯ್‌ಮಲರ್‌ಕ್ಕೇ,
ತಾಳ್‌ಗಿನ್ಱ ನೆಞ್ಜತ್ತೊರು ತಮಿಯಾಟ್ಟಿಯೇನ್ ಮಾಮೈಕ್ಕಿನ್ಱು
ವಾಳ್‌ಗಿನ್ಱ ವಾಱಿದುವೋ?, ವನ್ದು ತೋನ್ಱಿಱ್ಱು ವಾಲಿಯದೇ.

ಸೂಳ್‌ಗಿನ್ಱ சூழ்கின்ற = ಮುತ್ತಿಕೊಂಡಿರುವ, ಕಙ್ಗುಲ್ கங்குல் = (ಕತ್ತಲು) ರಾತ್ರಿಯ, ಸುರುಙ್ಗಾ ಇರುಳಿನ್ சுருங்கா இருளின் = ಕಡಿಮೆಯಾಗದ (ದಟ್ಟವಾಗಿ ತುಂಬಿರುವ) ಕತ್ತಲನ, ಕರು ತಿಣಿಮ್ಬೈ கருத்திணிம்பை = ದಟ್ಟವಾದ ಕಪ್ಪನ್ನು, ಪೋಳ್‌ಗಿನ್ಱ போழ்கின்ற = ವಿಭಜಿಸುವ (ನಾಶಪಡಿಸುವ), ತಿಙ್ಗಳ್ திங்கள் = ಚಂದ್ರನ, ಅಮ್ அம் = ಸುಂದರವಾದ,

Garani Srinivasan

ಪಿಳ್ಳೈಯುಮಾ பிறையும் = ಮಗುವೂ, (ಬಾಲಚಂದ್ರನೂ), ಪೋಳ್ಗ
போழ்க = ಭಾಗವಾಗಲಿ, ತುಳಾಯ್ ಮಲರ್ಕ್ಕೆ துழாய் மலர்க்கே =
ತುಳಸಿಯ ಹೂಗಳಿಗಾಗಿ, ತಾಳ್ಕಿನ್ಱ தாழ்கின்ற = ಆಶಿಸಿ ಕಾದಿರುವ,
ನೆಂಜತ್ತು நெஞ்சத்து = ಮನಸ್ಸಿನ, ಒರು ತಮಿಯಾಟ್ಟಿಯೇನ್ ஒரு தமி
யாட்டியேன் = (ಯಾರೂ ಜೊತೆಯಿಲ್ಲದ) ಒಂಟಿಗಳಾಗಿದ್ದೇನೆ, ಮಾಮೈಕ್ಕು
மாமைக்கு = ದೇಹಕ್ಕೆ, ಇನ್ಱು இன்று = ಈಗ, ವಾಳ್ಕಿನ್ಱ வாழ்
கின்ற = ಬದುಕುವ, ವಾಳ್ ಇದುವೋ வாழ்இதுவோ = ಬಾಳು
ಇದೇಯೋ?, ವನ್ದು வந்து = ಬಂದು, ತೋನ್ಱಿಱ್ಱು தோன்றிற்
று = ಕಾಣಿಸಿತು, ವಾಲಿಯದೇ வாலியதே = ಎಳೆಯದಾದದ್ದೇ (ಬಾಲಚಂ
ದ್ರನೇ).

ಎಡೆಬಿಡದೆ ಮುಸುರಿಕೊಂಡಿರುವ ಕತ್ತಲರಾತ್ರಿಯು ದಟ್ಟವಾದ ಕತ್ತಲನ್ನು ಛೇದಿಸುವ ಸುಂದರವಾದ ಬಾಲಚಂದ್ರನೂ ನಾಶವಾಗಲಿ. ತುಳಸಿಯ ದಾರಕ್ಕಾಗಿ ಕಾತರಗೊಂಡಿರುವ ಮನಸ್ಸಿನ ಒಂಟಿಗಳಾಗಿದ್ದೇನೆ. ಈಗ ದೇಹಕ್ಕೆ ಬದುಕುವ ಬಾಳು ಇದೇಯೋ? (72)
ಬಂದು ಕಾಣಿಸಿಕೊಂಡಿತು ಬಾಲಚಂದ್ರ!

ಬಾಲಚಂದ್ರನ ಬೆಳಕು ಬಂದು ಬೆಳಕೇ? ಅದು ಕಗ್ಗತ್ತಲೆಯನ್ನು ಓಡಿಸಬಲ್ಲದೇ? ಕಂಡೂ ಕಾಣದಂತಿದ್ದು ಮಾಯವಾಗುವುದೇ ಅದು.

ನಾಯಕಿ ಹೇಳುತ್ತಾಳೆ: ಕಗ್ಗತ್ತಲ ರಾತ್ರಿಯಲ್ಲಿ ಬಾಲಚಂದ್ರನು ಕಾಣಿಸಿಕೊಂಡನು. ಆದರೆ ಫಲವೇನು? ಆ ಕತ್ತಲನ್ನು ಛೇದಿಸಿ ಬೆಳಕನ್ನು ಚೆಲ್ಲುವನು ಎಂದು ಭಾವಿಸಿದರೆ, ಆ ಬಾಲಚಂದ್ರನೇ ಮರೆಯಾಗುವುದೇ?. ನಾನು ತುಳಸಿಯ ದಾರಕ್ಕಾಗಿ ಕಾತರಗೊಂಡ ಮನಸ್ಸುಳ್ಳ ಒಂಟಿಗಳು. ಈಗ ನನ್ನ ಈ ದೇಹ ಬದುಕುವ ಬಾಳಾದರೂ ಇದೇಯೋ?

ತುಳಸಿಯ ದಾರಕ್ಕಾಗಿ ಕಾತರಗೊಂಡ ಮನಸ್ಸು ದೇಹವನ್ನು ಮರೆತು ಒಂಟಿಯಾಗಿ ಹೋಯಿತು. ದೇಹವಾದರೋ ತನ್ನ ಕಾಂತಿ ಬಣ್ಣಗಳನ್ನು ಕಳೆದುಕೊಂಡು ಕೃಶವಾಯಿತು. ಇಂಥದೆಂಥ ಬಾಳು? ವಿರಹಿಯ ಬಾಳು ಇಷ್ಟೇ ಅಲ್ಲವೇ?

73. வால்வெண்ணில வுலகார்ச் சுரக்கும் வெண்திங்களென்றும்,
பால்விண் சுரவி சுரமுதிர் மாலை, பதிரிவட்டம்
போலுஞ் சுடரடலாழிப் பிரான் பொழிலேழளிக்கும்
சால்பின் தகைமை கொலாம்?, தமியாட்டி தளர்ந்ததுவே.

ಪಾಲ್ ವಣ್ಣ ನಿಲವುಲಕಾರ್ ಶುರಕ್ಕುಮ್ ವೆಣ್ ತಿಙ್ಗಳ್ ಪೋಯುಮ್,
ಪಾಲ್ ವಿಣ್ ಶುರವಿ ಶುರ ಮುದಿರ್ ಮಾಲೈ, ಪರಿದಿ ವಟ್ಟಮ್
ಪೋಲುಮ್ ಶುಡರಡಲಾಳಿ ಪಿರಾನ್ ಪೊಳಿಲೇಳ್ ಅಳಿಕ್ಕುಮ್
ಶಾಲ್ ಪಿನ್ ತಕೈಮೈ ಕೇಳಾವಮ್?, ತಮಿಯಾಟ್ಟಿ ತಳರ್ನ್ದದುವೇ.

ಪಾಲ್ பாய = ಹಾಲಿನಂತ, ವೆಳ್ ளையின = ಬಿಳಿಯ, ನಿಲವು நிலவு = ಬೆಳದಿಂಗಳನ್ನು, ಉಲಕು உலகு = ಭೂಲೋಕದ ಮೇಲೆ, ಆರ ஆர = ಸಮೃದ್ಧಿಯಾಗಿ, ಶುರಕ್ಕುಮ್ சுரக்கும் = ಸುರಿಸುವ (ಕರೆಯುವ), ಪಾಲ್ பால் = ~~ಬಿಳಿಯ~~ ಹಾಲನ್ನು, ವಿಣ್ ಶುರವಿ விண் சுரவி = ಕಾಮಧೇನು, ಶುರ சுர = ಕರೆಯಲು, ಮುದಿರ್ (முதிர் = ~~ಬಲಿತ (ಮುಗಿಯುವುದು, ಮುದಿಯಾಗುವುದು~~ ಕೊನೆಗಾಣುವುದು (ಮುದಿಯಾಗುವುದು)), ಮಾಲೈ மாலை = ಸಂಜೆಯು, ಪರಿದಿ ವಟ್ಟಮ್ ಪೋಲುಮ್ பரிதிவட்டம் போலும் = ದುಂಡನೆಯ ಚಕ್ರವನ್ನು ಹೋಲುವ, ಶುಡರ್ சுடர் = ಜ್ಯೋತಿಯು (ನಾರಾಯಣನ), ಅಡಲ್ ಆಳಿ அடல் ஆழி = ಶಕ್ತಿ ಪೂರ್ಣವಾದ ಚಕ್ರಾಯುಧದ, ಪಿರಾನ್ பிரான் = ಸ್ವಾಮಿಯು, ಪೊಳಿಲ್ ಏಳ್ பொழில் ஏழ் = ಏಳು ಲೋಕಗಳನ್ನು, ಅಳಿಕ್ಕುಮ್ அளிக்கும் = ರಕ್ಷಿಸುವ, ಶಾಲ್ ಪಿನ್ சால்பின் = ಹಿರಿಮೆಯ, ತಕೈಮೈ தகைமை = ಗುಣ, ಕೇಳ್ ಆವಮ್ கேளாவம் = ಆಗಬಲ್ಲುದೇ? ತಮಿಯಾಟ್ಟಿ தமியாட்டி = ಒಂಟಿಗಳು, ತಳರ್ನ್ದದುವೇ தளர்ந்ததுவே = ಕೊರಗುವುದೇ.

ಹಾಲಿನಂತ ಬಿಳಿಯ ಬೆಳದಿಂಗಳನ್ನು ಭೂಲೋಕದ ಮೇಲೆ ಸಮೃದ್ಧಿಯಾಗಿ ಸುರಿಸುವ (ಕರೆಯುವ) ಹಾಲನ್ನು ಕಾಮಧೇನು ಕರೆಯಲು, ಸಂಜೆಯು ಕೊನೆಗಾಣುವುದು. ದುಂಡನೆಯ ಚಕ್ರವನ್ನು ಹೋಲುವ ಜ್ಯೋತಿಯು (ನಾರಾಯಣನ) ಶಕ್ತಿ ಪೂರ್ಣವಾದ ಚಕ್ರಾಯುಧದ ಸ್ವಾಮಿಯು ಏಳುಲೋಕಗಳನ್ನು ರಕ್ಷಿಸುವ ಹಿರಿಮೆಯ ಗುಣ ಇದಾಗಬಲ್ಲುದೇ? ಒಂಟಿಗಳು ಕೊರಗುವುದೇ! 73

ಸ್ವರ್ಗಲೋಕಕ್ಕೆ ಆನಂದವನ್ನು ಕರೆವ ಕಾಮಧೇನುವಿನಂತೆ, ಭೂಲೋಕಕ್ಕೆ ಚಂದ್ರ. ತನ್ನ ಅಮೃತ ಕಿರಣಗಳಿಂದ ಭೂಲೋಕವನ್ನೆಲ್ಲಾ ಹರಡಿ, ತುಂಬಿ, ಆನಂದವನ್ನುಂಟು ಮಾಡುವನು. ಚಂದ್ರೋದಯವಾಯಿತೆಂದರೆ ಸಂಜೆಯೂ, ಅದರೊಡನೆ ಕತ್ತಲೆಯೂ ದೂರವಾಗುವುದು. ಹಾಗೆಯೇ ಜ್ಯೋತಿಯ ಚಕ್ರದಂತೆ ಹೊಳೆಯುವ ನಾರಾಯಣನೂ ಕತ್ತಲನ್ನು ದೂರಮಾಡುವನು. ಹಗಲಿನ ನಾರಾಯಣನೂ ರಾತ್ರಿಯ ಚಂದ್ರನೂ ಸಾಕ್ಷಿಯಾಗಿರುವಂತೆ, ಮತ್ತು ಭೂಲೋಕದ ಎಲ್ಲಾ ಪ್ರಾಣಿಗಳನ್ನು ರಕ್ಷಿಸುವುದಕ್ಕಾಗಿ.

ವಿರಹಿಯಾದವನಿಗೆ ಹಗಲು ಹೇಗೋ ಜಾರಿಹೋಗುತ್ತದೆ. ರಾತ್ರಿಗಳನ್ನು ಕಳೆಯುವುದು ಅವನಿಗೆ ಕಷ್ಟ. ಚಂದ್ರನಿರುವ ರಾತ್ರಿಗಳು ಚಳಿಕರವಲ್ಲವೇ? ಹಗಲಿನಂತೆ ಅದನ್ನು ಕಳೆಯಬಹುದಲ್ಲಾ ಎಂದರೆ, ಅವನಿಗೆ ಚಂದ್ರನೂ, ಬೆಳದಿಂಗಳೂ ವಿರಹವನ್ನು ಹೆಚ್ಚಿಸುವುವು.

ನಾಯಕಿ ಹೇಳುತ್ತಾಳೆ: ಕಾಮಧೇನು ಹಾಲನ್ನು ಎಲ್ಲೆಲ್ಲೂ ಚಿಮ್ಮುತ್ತಾ ಸುರಿಸುವಂತೆ, ಚಂದ್ರನು ತನ್ನ ಬಿಳಿಯ ಬೆಳದಿಂಗಳನ್ನು ಸುರಿಸಿ ಭೂಮಿಯ ಮೇಲಿನ ಕತ್ತಲನ್ನು ಓಡಿಸುವನು. ಚಕ್ರಾಯುಧಧಾರಿಯಾದ ಸ್ವಾಮಿಯು ಹಗಲಲ್ಲಿ ಸೂರ್ಯನನ್ನೂ ರಾತ್ರಿಯಲ್ಲಿ ಚಂದ್ರನನ್ನೂ ಬೆಳಗಿಸುವುದು ಅವನು ಮೂಲೋಕಗಳನ್ನು ರಕ್ಷಿಸುವ ಗುಣಾವೇಶದಿಂದಲೇ? ಹಗಲೂ ಇರುಳೂ ಅವನನ್ನೇ ಎಡೆಬಿಡದಂತೆ ಚಿಂತಿಸುತ್ತಾ, ಅವನಿಗಾಗಿ ಕಾತರಿಸುವ ಒಂಟಿಗಳನ್ನು ಒಂಟಿಯಾಗಿಯೇ ಇರಬಿಟ್ಟು ಕಾಡಿಸುವುದೇ ಅಲ್ಲವೇ?

74\. தளர்ந்தும் முறிந்தும் வருதிரைப்பாயல், திருநெடுங்கண்
வளர்ந்து மறிவுற்றும் வையம் விழுங்கியும், மால் வரையைக்
கிளர்ந்து மறிதரக் கீண்டெடுத்தான் முடிசூடு துழாய்
அளைந்துண் சிறு பசுந்தென்றல், அந்தோ! வந்துலாகின்றதே.

ತಳರ್‌ನ್ದುಮ್ ಮುಱಿನ್ದುಮ್ ವರುದಿರೈಪ್ಪಾಯಲ್, ತಿರುನೆಡುಙ್ಗಣ್
ವಳರ್‌ನ್ದು ಮಱಿವುಱ್ಱುಮ್ ವೈಯಮ್ ವಿೞುಙ್ಗಿಯುಮ್, ಮಾಲ್ ವರೈಯೈ
ಕ್ಕಿಳರ್‌ನ್ದು ಮಱಿದರಕ್ಕೀಣ್ಡೆಡುತ್ತಾನ್ ಮುಡಿಶೂಡು ತುೞಾಯ್
ಅಳೈನ್ದುಣ್ ಶಿಱು ಪಶುನ್ದೆನ್ಱಲ್ ಅನ್ದೋ! ವನ್ದುಲಾಗಿನ್ಱದೇ.

ತಳರ್ನ್ದುಮ್ தளர்ந்தும் = ತಗ್ಗಿಯೂ, ಮುಱಿನ್ದುಮ್ முறிந்தும் = ಉಬ್ಬಿಯೂ, ವರುತ್ತಿರೈ வருதிரை = ಬರುವ ಅಲೆಗಳ ಮೇಲೆ, ಪಾಯಲ್ பாயல் = ಹಾಸಿಗೆಯಲ್ಲಿ, ತಿರು ನೆಡುಙ್ಗಣ್ ವಳರ್ನ್ದುಮ್ திருநெடுங்கண் வளர்ந்தும் = ಸುಂದರವಾದ ಮತ್ತು ವಿಶಾಲವಾದ ಕಣ್ಣುಗಳಲ್ಲಿ ನಿದ್ರಿಸುತ್ತಿದ್ದರೂ, ಅಱಿವುಱ್ಱುಮ್ அறிவுற்றும் = (ಆ ನಿದ್ದೆಯಲ್ಲಿಯೂ) ಅಂಯುಕ್ತವನಾದ, ವೈಯಮ್ வையம் = ಲೋಕಗಳನ್ನು, ವಿೞುಙ್ಗಿಯುಮ್ விழுங்கியும் = ನುಂಗಿಯೂ, ಮಾಲ್ ವರೈಯೈ மால் வரையை = ದೊಡ್ಡ ಬೆಟ್ಟವನ್ನು, ಕಿಳರ್ನ್ದು கிளர்ந்து = ಕಿತ್ತು (ಎಬ್ಬಿಸಿ) ಮಱಿದರ மறிதர = (ಮಳೆಯನ್ನು) ತಡೆಯುವುದಕ್ಕಾಗಿ, ಕೀಣ್ಡು ಎಡುತ್ತಾನ್ கீண்டெடுத்தான் = ಕಿತ್ತು ಎತ್ತಿದವನ, ಮುಡಿ ಶೂಡು முடிசூடு = ಕಿರೀಟದಲ್ಲಿ

ಮುಡಿದಿರುವ, ತುಲುಂಬ ತುಳಾಯ್ = ತುಲಸಿಯನ್ನು, ಅಳ್ಳಿನ್ನು ಉಣ್ ಅಗ್ಗಾನ್ದು ಉಣ್ = ಸ್ಪರ್ಶಿಸಿ ಅನುಭವಿಸುವ, ಪಿಶುಬ್ಬ = ಹೋಗದಾದ, ತಯ್ ಶಿಱು = ಒತ್ತೆವಸದಿಂದ ಕೂಡಿದ, ತೆನ್ಱಲ್ ಒಕ್ಕುಂಱುಂ = ತೆಂಗಾಳಿಯು (ತಂಗಾಳಿಯು), ಅನ್ದೋ ಅಱ್ಱೇ = ಅಯ್ಯೋ, ವನ್ದು ಉಱ್ಱು = ಬಂದು, ಉಲಾಂಬನ್ ಆದೇ ಉಲಾಗಿನ್ಱದೇ = (ನನ್ನ ಬಳಿಯಲ್ಲಿ) ಸುಳಿದಾಡುತ್ತಿದೆಯಲ್ಲ!

ತಗ್ಗಿಯೂ ಉಬ್ಬಿಯೂ ಬರುವ ಅಲೆಗಳ ಮೇಲೆ, ಹಾಸಿಗೆಯಲ್ಲಿ, ಸುಂದರವೂ ವಿಶಾಲವೂ ಆದ ಕಣ್ಣುಗಳಲ್ಲಿ ನಿದ್ರಿಸುತ್ತಿದ್ದರೂ (ಆಸಕ್ತಿಯು ಲ್ಲೋ) ಅರಿಯತಕ್ಕವನೂ, ಲೋಕಗಳನ್ನು ನುಂಗಿದವನೂ, ದೊಡ್ಡಬೆಟ್ಟವನ್ನು ಎಬ್ಬಿ (ಮಳೆಯನ್ನು) ತಡೆಯುವುದಕ್ಕಾಗಿ, ಅದನ್ನು ಕವಚ (ಕೊಡೆಯಂತೆ) ಎತ್ತಿಹಿಡಿದವನೂ ಆದವನು ಕಂಠದಲ್ಲಿ ಮುಡಿದಿರುವ ತುಲಸಿಯನ್ನು ಸ್ಪರ್ಶಿಸಿ ಅನುಭವಿಸುವ ಹೋಗದಾದ ಒತ್ತೆವಸದಿಂದ ಕೂಡಿದ ಗಾಳಿಯನ್ನು ತಂಗಾಳಿಯು, ಅಯ್ಯೋ, ಬಂದು (ನನ್ನ ಬಳಿಯಲ್ಲಿ) ಸುಳಿದಾಡುತ್ತಿದೆಯಲ್ಲ! (74)

ಹಿಂದಿನ ಪಾಶುರದಲ್ಲಿ ಭಗವಂತನ ಸರ್ವರಕ್ಷಕತ್ವವನ್ನು ಹೇಳಲಾಯಿತು. ಈಗ ಅದನ್ನೇ ಇನ್ನೆರಡು ನಿದರ್ಶನಗಳಿಂದ ವಿವರಿಸಲಾಗಿದೆ.

'ತಳರನ್ದುಮ್ ಮುಱಿನ್ದುಮ್ ವರುದಿರೈಪ್ಪಾಯಲ್ ತಿರುನೆಡುಙ್ಗಣ್ ವಳರ್ನ್ದ ಮುಱಿವುಱ್ಱುಮ್' — ಭಗವಂತನು ಪಾಲ್ಗಡಲಲ್ಲಿ ಶೇಷಶಯನದಲ್ಲಿ ಪವಡಿಸಿರುತ್ತಾನೆ ಎಂದು ವರ್ಣಿಸುತ್ತಾರೆ. ಅವನು ಯೋಗನಿದ್ದೆಯಲ್ಲಿದ್ದರೂ ಸಹ, ಸರ್ವಜ್ಞನಾ, ಎಲ್ಲವನ್ನೂ ಅರಿಯತಕ್ಕ ಸಾಮರ್ಥ್ಯವುಳ್ಳವನು.

'ವೈಯಮ್ ವಿೞುಙ್ಗಿಯುಮ್' — ಪ್ರಳಯಕಾಲ ಬಂದಾಗ, ಸ್ವಾಮಿಯು ಲೋಕಗಳೆಲ್ಲವನ್ನೂ ಕಬಳಿಸಿ, ತನ್ನ ಹೊಟ್ಟೆಯಲ್ಲಿಟ್ಟುಕೊಂಡು, ಪುನಃಸೃಷ್ಟಿಯ ವರೆಗೂ ಅವುಗಳನ್ನು ರಕ್ಷಿಸುತ್ತಾನೆ.

'ಮಾಲ್ ವರೈಯೆಡುತ್ತು ಆಯರ್ನ್ನು ಮುಱೈ ತರಕ್ಕೋಡೆಡುತ್ತಾನ್' — ಭಗವಂತನು ಶ್ರೀಕೃಷ್ಣನಾಗಿ ಅವತರಿಸಿದಾಗ, ಇಂದ್ರನ ಕಡುಕೋಪದ ಬಿರುಮಳೆಯನ್ನು ತಡೆಯುವುದಕ್ಕಾಗಿ, ಬಾಲಕೃಷ್ಣನು ಗೋವರ್ಧನ ಪರ್ವತವನ್ನು ಬುಡಸಹಿತವಾಗಿ ಎಬ್ಬಿ, ಕೊಡೆಯಂತೆ ಅದನ್ನು ಎತ್ತಿಹಿಡಿದು, ಅದರಡಿಯಲ್ಲಿ, ನಂದಗೋಕುಲದ ಗೋವುಗಳನ್ನೂ ಗೋವಳರನ್ನೂ ರಕ್ಷಿಸಿದನು.

ನಾಯಕಿ ಹೇಳುತ್ತಾಳೆ: ಪಾಲ್ಗಡಲಲ್ಲಿ ಪವಡಿಸಿದ್ದರೂ ಸಹ, ಎಲ್ಲವನ್ನೂ

ಅಂಗಯ ಕಶ್ಯಪನೂ, (ಸರ್ವಜ್ಞನೂ), ಪ್ರಳಯಕಾಲದ ಸರ್ವನಾಶದಿಂದ ಎಲ್ಲಾ ಲೋಕ ಗಳನ್ನೂ ತಾನೇ ನುಂಗಿ, ತನ್ನ ಹೊಟ್ಟೆಯಲ್ಲಿಟ್ಟು ರಕ್ಷಿಸಿದವನೂ, (ಸರ್ವರಕ್ಷಕನೂ), ದೊಡ್ಡ ಬೆಟ್ಟವನ್ನೇ ಎತ್ತಿ ಹಿಡಿದು, ಅದರಡಿಯಲ್ಲಿ ಗೋವೃಂದಗಳನ್ನು ಗೋವಳರನ್ನು ರಕ್ಷಿಸಿದವನೂ, (ಸರ್ವಸಮರ್ಥನೂ), ಆದ ಸ್ವಾಮಿಯು ಮಲಗಿರುವ ತುಲಸಿಯ ಪರಿಮಳವನ್ನು ಹೊತ್ತು, ತಂಗಾಳಿ ನನ್ನ ಬಳಿ ಸುಳಿದಾಡುತ್ತಿದೆಯಲ್ಲಾ!

75. உலாகின்ற கெண்டை யொளியம்பு, எம்மாவியை யூடுருவக்
குலாகின்ற வெஞ்சிலை வாண்முகத்தீர்!, குனிசங்கிடறிப்
புலாகின்ற வேலைப் புணரியம்பள்ளி யம்மான் அடியார்
நிலாகின்ற வைகுந்தமோ? வையமோ? நும்நிலையிடமே.

ಉಲಾಗಿನ್ಱ ಕೆಂಡೈ ಯೊಳಿಯಂಬು, ಎಮ್ಮಾವಿಯೈ ಯೂಡುರುವ
ಕ್ಕುಲಾಗಿನ್ಱ ವೆಂಜಿಲೈ ವಾಳ್ಮುಗತ್ತೀರ್!, ಕುನಿಶಂಗಿಡಱಿ
ಪ್ಪುಲಾಗಿನ್ಱ ವೇಲೈ ಪ್ಪುಣರಿಯಂಬಳ್ಳಿಯಮ್ಮಾನ್ ಅಡಿಯಾರ್
ನಿಲಾಗಿನ್ಱ ವೈಕುಂದ[illegible]ಮೋ? ವೈಯಮೋ? ನುಮ್ಮ ನಿಲೈಯಿಡಮೇ

ಉಲಾಗಿನ್ಱ உலாகின்ற = ಸುಳಿದಾಡುತ್ತಿರುವ, ಕೆಂಡೈ கெண்டை = ಕೆಂಡೆ ಮೀನಿನಂತೆ, ಒಳಿ ಅಮ್ಬು ஒளி அம்பு = ಹೊಳಪಿಂದ ಕೂಡಿದ ಬಾಣ ವನ್ನು, ಎಮ್ ಎம் = ನಮ್ಮ, ಆವಿಯೈ ஆவியை = ಪ್ರಾಣವನ್ನು, ಊಡುರುವ ஊடுருவ = (ನಡುವೆ) ಭೇದಿಸಿಕೊಂಡು, ಕುಲಾಗಿನ್ಱ குலாகின்ற = ಬಗ್ಗಿರುವ, ವೆಮ್ ಶಿಲೈ வெம் சிலை = ಕ್ರೂರವಾದ ಬಿಲ್ಲನ್ನುಳ್ಳ, ವಾಳ್ ಮುಗತ್ತೀರ್ வாண் முகத்தீர் = ಬೆಳಗುವ (ತೇಜಃಪೂರ್ಣವಾದ) ಮುಖವುಳ್ಳವರೇ, ಕುನಿ குனி = ಬಗ್ಗಿದ, ಶಂಗು சங்கு = ಶಂಖಗಳಿಂದ, ಇಡಱಿ இடறி = ಅಡಚಣೆಯುಂಟಾಗಿ, (ತೊಡರಿಕೊಂಡು) ಪುಲಾಗಿನ್ಱ புலாகின்ற = ಕೆಟ್ಟ ವಾಸನೆ (ದುರ್ವಾಸನೆ) ಯುಂಟಾದ (ಹೊಡೆದ), ವೇಲೈ வேலை = ಅಲೆಗಳಿಂದುಳ್ಳ, ಪುಣರಿ புணரி = ಕಡಲನ್ನು, ಅಮ್ ಅம் = ಸುಂದರವಾದ, ಪಳ್ಳಿ பள்ளி = ಶಯನ ಸ್ಥಳವಾಗಿ ಮಾಡಿಕೊಂಡಿರುವ, ಅಮ್ಮಾನ್ அம்மான் = ಸರ್ವೇಶ್ವರನ, ಅಡಿಯಾರ್ அடியார் = ಭಕ್ತರು, ನಿಲಾಗಿನ್ಱ நிலாகின்ற = ಭಜಿಸುತ್ತಿರುವ, (ಬೆಳಗುತ್ತಿರುವ), ವೈಕುಂದಮೋ வைகுந்தமோ = ವೈಕುಂಠವೋ, ವೈಯಮೋ வையமோ = ಭೂಮಿಯೋ, ನುಮ್ ನும் = ನಿಮ್ಮ, ನಿಲೈ நிலை = ನೆಲೆಯಾದ, ಇಡಮೇ இடமே = ಸ್ಥಳವೆಂಬುದು.

Garani Srinivasan

ಸುಳಿದಾಡುತ್ತಿರುವ ಕೆಂಡ್ಯೆ ಮೀನಿನಂತೆ ತೇಜಸ್ಸಿನಿಂದ ಕೂಡಿದ ಬಾಣವನ್ನು, ನಮ್ಮ ಪ್ರಾಣವನ್ನು ಛೇದಿಸಿಕೊಂಡು ಹೋಗುವಂತೆ ಬಗ್ಗಿರುವ ಕ್ರೂರವಾದ ಬಿಲ್ಲನ್ನು ಉಳ್ಳ ತೇಜಃಪೂರ್ಣವಾದ ಮುಖವುಳ್ಳವರೇ ನಿಮ್ಮ ನೆಲೆಯಾದ ಸ್ಥಳವೆಂಬುದು ಯಾವುದು? ಬಗ್ಗಿದ ಶಂಖಗಳಿಂದ ಆಗುವ ಕೆರೆದಡಗಳಿಂದಲೂ, ದುನಾರ್ಗದಿಂದಲೂ, ಅಲೆಗಳಿಂದಲೂ ಕೂಡಿದ ಕಡಲನ್ನು ಪವಡಿಸುವ ಸ್ಥಳವಾಗಿ ಮಾಡಿಕೊಂಡಿರುವ ಸರ್ವೇಶ್ವರನ ಭಕ್ತರು ಭಜಿಸು 75
ತ್ತಿರುವ (ಬೆಳಗುತ್ತಿರುವ) ವೈಕುಂಠವೋ? ಭೂಮಿಯೋ?

ಸುಂದರವಾದ ರೂಪಕಗಳಿಂದ ಕೂಡಿದ ಪಾಶುರ ಇದು. ಕಣ್ಣು, ಕಣ್ಣಾಲಿಗಳು, ಹುಬ್ಬುಗಳು ಇವುಗಳನ್ನು ಬಿಲ್ಲುಬಾಣಗಳಿಗೆ, ಕಣ್ಣಾಲಿಗಳ ಚಪಲತೆಯನ್ನೂ ವಿಶಾಲವಾದ ಕಣ್ಣನ್ನು ಕೆಂಡ್ಯೆ ಮೀನಿಗೆ ಹೋಲಿಸಿ ಹೇಳಲಾಗಿದೆ. ಇವುಗಳಿಂದ ಶೋಭಿಸುವ ಮುಖವನ್ನುಳ್ಳವರು ಸುಂದರಿಯರಾದ ಸ್ತ್ರೀಯರು.

ಚಪಲತೆಯಿಂದ ಕೂಡಿದ ಕಣ್ಣಾಲಿಗಳಿಂದಲೂ, ವಿಶಾಲವಾದ ಹೊಳೆಯುವ ಕಣ್ಣುಗಳಿಂದಲೂ, ಬಿಲ್ಲಿನಂತೆ ಬಗ್ಗಿರುವ ಹುಬ್ಬುಗಳಿಂದಲೂ ಕೂಡಿ ಆಕರ್ಷಕವಾದ ಮುಖವುಳ್ಳವರ ಕೆಲನವಲ್ಲ ಇಂದ್ರಿಯಗಳನ್ನು ಉದ್ರೇಕಿಸುವವರು, ಅವುಗಳಿಗೆ ವಶವಾಗುವವರು, ಸಂಸಾರದ ಕ್ಲೇಶಗಳಲ್ಲಿ ಸಿಕ್ಕಿ ಬೀಳುವವರು ಮತ್ತು ಹುಟ್ಟು-ಸಾವುಗಳ ಸುಳಿಯಲ್ಲಿ ಬಿದ್ದುಕೊಳ್ಳುವವರು. ಇಂಥವರ ನೆಲೆ ಭೂಲೋಕವೇ. ಆದರೆ, ಶಾಶ್ವತಾನಂದವನ್ನು, ಅಮರತ್ವವನ್ನು ನೀಡುವ ಪರಮಪದವೆಂಬ ಭಗವಂತನ ನೆಲೆಯನ್ನು ಪಡೆದುಕೊಳ್ಳುವ ದರ್ಶ್ಯ ಅವರು ಆದರು. ತಮ್ಮ ಪ್ರೇಮವನ್ನು ಭೂಲೋಕವಾಸಿಗಳ ಮೇಲೆ ಇರಿಸುವುದಕ್ಕೆ ಬದಲಾಗಿ, ಅದನ್ನು ಪವಿತ್ರಗೊಳಿಸಿ (ಇಂದ್ರಿಯ ~~ಚಾಪಲ್ಯ~~ ಚಾಪಲ್ಯದಿಂದ ದೂರಗೊಳಿಸಿ) ಪಾಲ್ಗಡಲಲ್ಲಿ ಪವಡಿಸಿರುವ ಸರ್ವೇಶ್ವರನಲ್ಲಿಯೇ, ಅವನನ್ನೇ ಎಡಬಿಡದಂತೆ ಭಜಿಸುವುದೇ ಅದಕ್ಕೆ ಮಾರ್ಗ.

"ಉಲಾಡಿನಾಟ ಕೆಡ್ಡ್ಯ ಯೊಳ್ಳಿಯುಮ್ಬು" — ಕೆಂಡ್ಯೆ ಮೀನಿನಂತೆ ಪಳಪಳ ಹೊಳೆಯುತ್ತಾ, ನಿಂತಲ್ಲಿ ನಿಲ್ಲದಂತೆ ಚಪಲಚಂಚಲತೆಯಿಂದ ಕೂಡಿದ ಅರಳಿದ ಕಣ್ಣಿನ ಕುಡಿನೋಟವೇ ಇಂದ್ರಿಯ ಚಾಪಲ್ಯವನ್ನು ಉದ್ರೇಕಿಸುವ ಬಾಣ.

"ಎಮ್ಮುಯಿರ್ತ್ತ ಯಾಡುರುವ ಕುಲಾವಿನಾಟ ವೆಂಜಿಲೈ" — ಸುಂದರವಾಗಿ ಬಗ್ಗಿರುವ ಹುಬ್ಬುಗಳೆಂಬ ಬಿಲ್ಲಿಗೆ, ಚಂಚಲ ಪ್ರಾಣವಾದ

Garani Srinivasan

ಕಂಡಿನೊಳು ಖವೆಂಬ ಅಂಬನ್ನು ಅದಕ್ಕೆ ಕೊಡಿಸಿ, ಅದನ್ನು ಮನುಷ್ಯನೆಂಬ ಕುಂಠಕ್ಕೆ ಬಿಟ್ಟುಕೊಂಡಲೇ, ಅದು ತಪ್ಪದೆ ಗುರಿಯನ್ನು ತಾಕಿ, ಅದನ್ನು ಇಂದ್ರಿಯ ವಶವನ್ನಾಗಿ ಮಾಡುತ್ತದೆ. ಆದ್ದರಿಂದ ಇದು "ಕಬ್ಬು" ಎನ್ನಲಾಗಿದೆ.

"ಕಣಿ ಕಲ್ಗಂ ಇದಳ್ ಪ್ಪೂಂಬನಾಯ್ ವೇಲ್ ಪ್ಪಾಲೈಯುಮ್ಬಳ್ಳಿಯುಮ್ನಾ"— ಭಗವಂತನ ತಯನಿದುವ ಸ್ಥಳದ ಸುಂದರವಾದ ವರ್ಣನೆ ಇದು: ಬಿಗ್ಗಿರುವ (ಮುಳ್ಳು ಮುಳ್ಳಾಗಿರುವ) ಕಂಬಿಗಳಿಂದ ಕುಟ್ಟಿಕೊಳ್ಳುವಂತಾದ್ದು, ಸತ್ತ ಪ್ರಾಣಿಗಳ ಕೊಳೆತ ವಾಸನೆಯ ದುರ್ನಾತ ಬಂದು ಕೊಂಡಿದ್ದ, ಮಂತು, ನಿರಂತರವಾದ ಮೊಲ್ಲೆಗಳಿಂದ ಕೂಡಿದ ಅಲೆಗಳಿಂದ ಕಂಬಿದ್ದು— ಇಂಥ ಅಸ್ಥಿರವಾದ ಕಡಲು!

ನಾಯಕಿ ಹೇಳುತ್ತಾಳೆ: ಆಕರ್ಷಕವಾದ ಮುಖ, ಕಣ್ಣು (ದೇಹ) ಗಳುಳ್ಳವರೇ, ಹೇಳಿ, ನಿಮಗೆ ಯಾವ ನೆಲೆ ಗುರಿಯಾಗಿದೆ? ಭಗವದ್ಭಕ್ತರು ಕಾತರಪಡುವ ಪರಮಪದವೋ? ಅಥವಾ ಜನನವನ್ನು ರು ಬಯಸುವ ಭೂಲೋಕವೋ?

"ಆಕರ್ಷಕವಾದ ಮುಖ, ಕಣ್ಣು (ದೇಹ) ಗಳನ್ನುಳ್ಳವರೇ" ಎಂಬುದು ಗಂಡಸು, ಹೆಂಗಸು ಎಂಬ ಭೇದವಿಲ್ಲದಂತೆ ಎಲ್ಲರಿಗೂ ಅನ್ವಯಿಸುತ್ತದೆ ಎಂಬುದು ಆಳ್ವಾರರ ಮಾತು. 'ಪರಮಪುರುಷ'ನಾದ ಭಗವಂತನೊಬ್ಬನೇ ಗಂಡಸು. ಮಿಕ್ಕವರೆಲ್ಲರೂ ಅವನನ್ನು ಪ್ರೇಮಿಸುವ ಸ್ತ್ರೀಯರು.

76. இடம்போய் விரிந்திவ் வுலகளந்தான் எழிலார்
தண்டுழாய்,
வடம்போதினையும் மடநெஞ்சமே!, நங்கள் வெள்
வளைக்கே
விடம்போல் விரிதலிது வியப்பே வியந்தாமரையின்
தடம்போதொடுங்க, மெல்லாம்பலலார் விக்கும்
வெண் திங்களே.

ಇಡಮ್ ಪೋಯ್ ವಿರಿನ್ದಿವ್ವುಲಗಳನ್ದಾನ್ ಎಳಿಲಾರ್ ತಣ್ದುಳಾಯ್,
ವಡಮ್ ಪೋದಿನೈಯುಮ್ ಮಡನೆಂಜಮೇ!, ನಙ್ಗಳ್ ವೆಳ್ ವಳೈಕ್ಕೇ
ವಿಡಮ್ ಪೋಲ್ ವಿರಿದಲಿದು ವಿಯಪ್ಪೇ ವಿಯನ್ದಾಮರೈಯಿನ್
ತಡಮ್ ಪೋದೊಡುಙ್ಗ, ಮೆಲ್ಲಾಮ್ಬಲಲಾರ್ ವಿಕ್ಕುಮ್ ವೆಣ್ತಿಙ್ಗಳೇ.

ಇಡಮ್ ಪೋಯ್ இடம் போய் = ಎಲ್ಲಾ ಸ್ಥಳಗಳಲ್ಲಿಯೂ ಹರಡಿ,

ಮಿಂಸ್ದು ವಿರಿಂದ್ತು = ವಿಸ್ತರಿಸಿ, ಇ ಉಲಗು ಅಳನ್ದಾನ್ ತಿರು ಉರುಕ್ಕು ಅಣಾ
ನ್ದಕ್ಕಾಣ್ = ಈ ಲೋಕಗಳನ್ನು ಅಳೆದುಕೊಂಡವನ, ಎಟ್ಟಿಲ್ ಆರ್ ಶಾಖಿ
ಸ್ ಆರ್ = ಹೋಬಳಿಯು ಕುಂಬಿದ, ಕೊಳ್ ಕ್ಕಣ್ = ಕಂಪಾದ (ಉಕ್ಕರವಾದ), ಕುಟ
ಯ ಕ್ಕುಟ್ಟಾಯ್ = ಕಲಶಿಯು, ವಡಮಾ ಉಟಂ = ದುಂಡನೆಯ, ಪೋಲವು
ಪೋತ್ತು = ಮೊಲೆಗಳು, ಇನ್ನೈಯುಮಾ ತಿಣೈಯುಂ = ದುಃಖಿಸುವ, ಮದ
ನೆಂಜಮೇ ಮಡ ನ್ನೆಂಜಮೇ = ಮುಗ್ಧ ಮನಸ್ಸೇ, ನಜ್ಞಳ್ ನ್ನಿಂಗಳ್ = ನಮ್ಮ,
ವೆಳ್ ವಳ್ಳೈಕ್ಕೇ ಉಯಿರ್ ಉಣ್ ಕ್ಕೆ = ಪ್ರಾಣವನ್ನು ಬಳಗಳಿಗೇ,
ವೆಳ್ ವಳೈಕ್ಕೇ ಉಯಿರ್ ಉಣ್ ಕ್ಕೆ = ಪ್ರಾಣಗಳಿಯುವ ಬಳೆಗಳಿಗೇ,
ವಿಡಮಾ ಪೋಲ್ ವಿಟಂ ಪೋಲ = ವಿಷದಂತೆ, ಮಿಂದಲ್ ಇದು ವಿರಿ
ಕ್ಕು ತಿತ್ತು = ಇದು ಹರಡಿಕೊಂಡಿದೆ, ವಿಯಪ್ಪೇ ವಿಯಪ್ಪೇ = ವಿಚಿ
ತ್ರವೇ ಅಲ್ಲವೇ?, ವಿಯಲ್ ವಿಯಸ = ಉತ್ತಮವಾದ, ಶಾಮರೈಯಿನ್ ಕ್ಕಾ
ಮಲಾಯಿನ್ = ತಾವರೆಯು, ಕದ ಕ್ಕುಟ = ವಿಸ್ತಾರವಾದ, ಪೋಲವು
ಪೋತ್ತು = ಕ್ಕೂ ಜಡುಪ್ಪ ಕ್ಕುಡಿಂಗ್ಗ = ಮುದುರಲು (ಅಡಗಲು), ಮೆಲ್
(ಕೋಮಲವಾದ)
ಮೆಲ = ಮೃದುವಾದ, ಆಮ್ಬಲ್ ಆಂಬಲ್ = ನೈದಿಲೆಯನ್ನು, ಅಲರ್ವಿಕ್ಕು
ಅಲರ್ ವಿಕ್ಕುಂ = ಅರಳಿಸುವ, ವೆಳ್ ತಿಜ್ಞಳ್ ಉಯಿರ್ ಕ್ಕಿಂಗಳೋ =
(ಬೆಳ್ಳಿಯಂತೆ) ಬೆಳಗುವ ಚಂದ್ರನೇ.

ಎಲ್ಲಾ ದಿಕ್ಕುಗಳಲ್ಲಿಯೂ ಹೋಗಿ ವಿಸ್ತರಿಸಿ ಈ ಲೋಕ(ಗಳನ್ನು)ವನ್ನು ಅಳೆದುಕೊಂಡವನ ಹೊಂಬಣ್ಣ ಕುಂಬಿದ ಉಕ್ಕರವಾ ಕಲಶಿಯು ದುಂಡ ಮೊಲೆಗಳ ದುಃಖಿಸುವ ಮುಗ್ಧ ಮನಸ್ಸೇ, ನಮ್ಮ ಕೈ ಬಳೆಗಳಿಗೆ ನೆಯ್ದ ಹಾರಕ್ಕಾಗಿ ದುಃಖಿಸುವ ಮುಗ್ಧ ಮನಸ್ಸೇ, ನಮ್ಮ ಕೈ ಬಳೆಗಳಿಗೆ ಇದು ವಿಷದಂತೆ ಹರಡಿಕೊಂಡಿದೆ. ಇದು ವಿಚಿತ್ರವೇ ಅಲ್ಲವೇ? ಉತ್ತಮವಾದ ಕಮಲದ ದೊಡ್ಡ ಕ್ಕೂ ಮುದುರಲು (ಅಡಗಲು ಮೊಗ್ಗಾಗಲು), ಮೃದುವಾದ (ಕೋಮಲವಾದ) ನೈದಿಲೆಯನ್ನು ಅರಳಿಸುವ (ಬೆಳ್ಳಿಯಂತೆ) ಬೆಳಗುವ ಚಂದ್ರನೇ.

76

ಸೂರ್ಯನು ಉದಯಿಸುತ್ತಲೇ ಕಮಲಗಳು ಅರಳುತ್ತವೆ. ಸೂರ್ಯಾಸ್ತವಾದಾಗ ಅವು ಮುದುರಿ ಮೊಗ್ಗಾಗುತ್ತವೆ. ಹಾಗೆಯೇ ಚಂದ್ರನು ಉದಯಿಸಿದರೆ ನೈದಿಲೆಗಳು ಅರಳುತ್ತವೆ. ಅವನು ಮುಳುಗಿದರೆ ಅವೂ ಮುದುರಿ ಮೊಗ್ಗಾಗುತ್ತವೆ. ಇದು ಪ್ರಕೃತಿ ಸಹಜ. ಬೇರೆ ಮಾತುಗಳಲ್ಲಿ ಹೇಳಬೇಕಾದರೆ, ಸೂರ್ಯನು ನೈದಿಲೆಯನ್ನು ಚಂದ್ರನು ಕಮಲವನ್ನು ಕೊರಗುವಂತೆ ಮಾಡುತ್ತಾರೆ. ಹಾಗೆಯೇ ವಿರಹಿಗಳಿಗೆ ಚಂದ್ರೋದಯ. ಬೆಳಗುವ ಚಂದ್ರನು ಜನರಿಗೆ ಆಹ್ಲಾದದಾಯಕವಾದರೆ, ವಿರಹಿಗಳಿಗೆ ಅವನಿಂದ ಕೊರಗು.

ನಾಯಕಿ ಹೇಳುತ್ತಾಳೆ: ಮನಸ್ಸೇ, ~~ನಾನು~~ ತ್ರಿವಿಕ್ರಮನಾಗಿ ಭೂಮಿಯನ್ನೆಲ್ಲಾ

ಕನ್ನ ಬಂದರೆ ಪಾದದಾರ ಅಳಿದುಹೋಂಡ ಅಪ್ಪುಕರಾಳಿಯು ಮುದಿರಕುಲುಪಿಯ ದಾರಿತ್ತಾ
ದುಃಖ ಪಡರೆ, ಈ ಕನ್ನೆ ಕ್ಯಬಳ್ಳಿಳಿಗೆ ಚಳ್ಳರುವ ಚಂದ್ರನು ಬಿಟ್ಟರಂತೆ ಕತ್ತಾರಾ
ದ್ದಾನೆಂದು, ಅವುಕಳ್ಳುಬ ಆಳುವ ಸ್ಥಿತಿಗೆ ಬರುತ್ತದೆಯಲ್ಲಾ ಎಂದು ದುಃಖ.

77. திங்களாம்பிள்ளை புலம்பத்தன் செங்கோலரசுபட்ட,
செங்களம்பற்றிநின் றெள்கு புன்மாலை, தென்பாலிலங்கை
வெங்களஞ்செய்த நம் விண்ணோர் பிரானார் துழாய்துணையா
நங்களை மாமைகொள்வான், வந்து தோன்றி நலிகின்றதே.

ತಿಙ್ಗಳ್ಬಿಳ್ಳೆ ಪುಲಮ್ಬತ್ತನ್ ಶೆಙ್ಗೋಲರಶುಪಟ್ಟ,
ಶೆಙ್ಗಳಮ್ ಪಟ್ರಿ ನಿನ್ರೆಳ್ಗು ಪುನ್ ಮಾಲೈ, ತೆನ್ಪಾಲಿಲಙ್ಗೈ
ವೆಙ್ಗಳಮ್ ಶೆಯ್ದ ನಮ್ ವಿಣ್ಣೋರ್ ಪಿರಾನಾರ್ ತುಳಾಯ್ ತುಣೈಯಾ
ನಙ್ಗಳೈ ಮಾಮೈಕೊಳ್ವಾನ್, ವನ್ದು ತೋನ್ರಿ ನಲಿಗಿನ್ರದೇ.

ತಿಙ್ಗಳ್ ತಿங்கள் = ಚಂದ್ರನೆಂಬ, ಅಮ್ ಆம் = ಸುಂದರವಾದ, ಪಿಳ್ಳೈ
பிள்ளை = ಮಗುವು, ಪುಲಮ್ಬ புலம்ப = ಗೋಳಾಡಲು, ತನ್ ತன் = ತನ್ನ,
ಶೆಙ್ಗೋಲ್ ಅರಶು செங்கோல் அரசு = ಒಳ್ಳೆಯ (ನ್ಯಾಯವಾದ)
ಪಟ್ಟ பட்ட = ಉಂಟುಮಾಡಿದ, ಶೆಮ್ ಕಳಮ್ செங்களம் = ಕೆಂಪಾದ ಯುದ್ಧಭೂಮಿ
ಒಡೆಯುವ / ಪಟ್ರಿ பற்றி = ಸೇರಿ, ನಿನ್ರು நின்று = ನಿಂತು, ಎಳ್ಗು
எள்கு = ದುಃಖಿಸುವ, ಪುನ್ ಮಾಲೈ புன் மாலை = ಅಲ್ಪವಾದ ಸಂಜೆ
ಯು, ತೆನ್ ಪಾಲ್ தென்பால் = ದಕ್ಷಿಣದ, ಇಲಙ್ಗೈ இலங்கை = ಲಂ
ಕೆಯನ್ನು, ವೆಮ್ ಕಳಮ್ ಶೆಯ್ದ வெங்களம் செய்த = ಕ್ರೂರವಾದ
ಯುದ್ಧಭೂಮಿಯನ್ನಾಗಿಸಿದ, ನಮ್ நம் = ನಮ್ಮ, ಮತ್ತು, ವಿಣ್ಣೋರ್
விண்ணோர் = (ನಿತ್ಯಸೂರಿಗಳ) ಪರಮಪದವಾಸಿಗಳ, ಪಿರಾನಾರ್ பிரானார் = ಒಡೆಯನ, ತುಳಾಯ್ துழாய் = ತುಲಸಿಯನ್ನೇ ತುಣೈ
ಆ துணை ஆ = ಜೊತೆಮಾಡಿಕೊಂಡು, ನಙ್ಗಳೈ நங்களை = ನಮ್ಮ,
ಮಾಮೈ ಕೊಳ್ವಾನ್ மாமை கொள்வான் = ದೇಹದ ಬಣ್ಣವನ್ನು
ಪಡೆದುಕೊಳ್ಳುವುದಕ್ಕಾಗಿ, ವನ್ದು வந்து = ಬಂದು, ತೋನ್ರಿ தோன்றி
= ಕಾಣಿಸಿಕೊಂಡು, ನಲಿಗಿನ್ರದೇ நலிகின்றதே = ನರಳಿಸುತ್ತಿದೆ
ಯಲ್ಲ (ಪೀಡಿಸುತ್ತಿದೆಯಲ್ಲಾ).

ಚಂದ್ರನೆಂಬ ಸುಂದರವಾದ ಮಗುವು ಗೋಳಾಡಲು, ಅಲ್ಪವಾದ
ಸಂಜೆಯು ತನ್ನ ಒಳ್ಳೆಯ (ನ್ಯಾಯವಾದ) ಒಡೆಯನು ಉಂಟುಮಾಡಿದ
ಕೆಂಪಾದ ಯುದ್ಧಭೂಮಿಯನ್ನು ಸೇರಿ, ನಿಂತು, ದುಃಖಿಸುತ್ತಾ, ದಕ್ಷಿಣದ

GaraniSrinivasan

ಲಂಕೆಯನ್ನು ರುದ್ರಭೂಮಿಯನ್ನಾಗಿಸಿದ ನಮ್ಮ ಮತ್ತು ವಿರಾಮ ಪದವಾಸಿಗಳ ಒಡೆಯನ ತುಲಸಿಯನ್ನು ಜೊತೆ ಮಾಡಿಕೊಂಡು, ನಮ್ಮ ಮೈಬಣ್ಣವನ್ನು ಕಸಿದುಕೊಳ್ಳುವುದಕ್ಕಾಗಿ, ಬಂದು, ಕಾಣಿಸಿಕೊಂಡು, ನರಳುತ್ತಿದೆಯಲ್ಲಾ!

(77)

ಈ ಪಾಶುರದಲ್ಲಿ ಬಾಲಚಂದ್ರನು ಮಕ್ಕಳಾಟದ ಅಲ್ಪಕಾಲದ ಸಂಜೆಯ ಕಂಪಿಸುವುದನ್ನು ಕಲಿತುಕೊಂಡು, ನಾಯಕಿಗೆ ರಾತ್ರಿಯ ಕತ್ತಲ ಬರವನ್ನು ನೆನಪಿಸಿ ಕೊಂಡು, ಅವಳನ್ನು ಗೋಳಿಡುವಂತೆ ಮಾಡುತ್ತಾನೆ ಎಂಬುದನ್ನು ಸ್ವಾರಸ್ಯಪೂರ್ಣವಾಗಿ ಹೇಳಲಾಗಿದೆ.

ನಾಯಕಿ ಹೇಳುತ್ತಾಳೆ: ಬಳ್ಳಿಯಾ ಜನಕನ ಮಗುವ ನೋಯಿಸನು ವಕ್ಷದಲ್ಲಿ ಕಣ್ಣೀರಿಯಾದನು. ಆ ದಿಕ್ಕೆಲ್ಲವೂ ಕಂಪಿಸಿದರು. ತನ್ನನ್ನಗಲಿ ಹೋದ ಕಣ್ಣನ್ ಜಡೆಯನಿಸಾಗಿ ಅಲ್ಪಕಾಲದ ಸಂಜೆಯೂ, ಬಾಲಚಂದ್ರನೂ ಗೋಳಿಡುತ್ತಾ, ಜನವಂಶದ ಕಾಣಿಯೆಂಬ ತುಲಸಿಯನ್ನು ಪಡೆದುಕೊಂಡು, ಆ ಅಲ್ಪಕಾಲದಲ್ಲಿಯೇ ಬರಬಹುದಾದ ನಮ್ಮ ಮೈಬಣ್ಣವನ್ನು ಕಸಿದುಕೊಳ್ಳುವುದಕ್ಕಾಗಿ, ಹೀಗಾಗಲ ನಮ್ಮ ಮುಂದೆ ಕಾಣಿಸಿಕೊಂಡು ನಮ್ಮನ್ನು ಗೋಳಾಡಿಸುತ್ತಿವೆ. ನಮ್ಮೆಲ್ಲರ ಒಡೆಯನಾದ ಸರ್ವೇಶ್ವರನ ಕಾಣಿ ನಮಗೆ ಹೆಣ್ಣು ಬರಲಿಲ್ಲ! ಮತ್ತೆ ಅದನ್ನು ಕೇಳಿಯೂ ಬೇಕಿಲ್ಲ ಎಂಬ ಸಂಕಟಪಡುವ ರಾತ್ರಿಯಾಗುವುದು. ಮತ್ತೆ ಅದನ್ನು ಕೇಳಿಯೂ ಬೇಕಿಲ್ಲ ಎಂಬ ಸಂಕಟಪಡುವುದು.

78, நலியும் நரகனை வீட்டிற்றும், வாணன் திண்டோள் துணிக்க
வலியும் பெருமையும் யாம் சொல்லும் நீர்த்தல்ல, மை வரைபோற்
பொலியுமுருவிற்பிரானார் புனைபூந்துழாய் மலர்க்கே
மெலியு மட நெஞ்சினார், தந்துபோயின வேதனையே.

ನಲಿಯುಮ್ ನರಗನ್ನೈ ವೀಟ್ಟಿಟ್ರುಮ್, ವಾಣನ್ ತಿಣ್ದೋಳ್ ತುಣಿತ್ತ
ವಲಿಯುಮ್ ಪೆರುಮೈಯುಮ್ ಯಾಮ್ ಶೊಲ್ಲುಮ್ ನೀರ್ಮೈತ್ತಲ್ಲ, ಮೈ ವರೈಪೋಲ್
ಪೊಲಿಯು ಮುರುವಿಲ್ ಪಿರಾನಾರ್ ಪುನೈ ಪೂನ್ದುಳಾಯ್ ಮಲರ್ಕ್ಕೇ
ಮೆಲಿಯು ಮಡ ನೆಂಜಿನಾರ್, ತನ್ದುಪೋಯಿನ ವೇದನೈಯೇ.

ನಲಿಯುಮ್ நலியும் = ಸಂಕಟಪಡಿಸುವ, ನರಗನ್ನೈ நரகனை = ನರಕಾಸುರನನ್ನು, ವೀಟ್ಟಿಟ್ರುಮ್ வீட்டிற்றும் = ಕೊಂದು, ವಾಣನ್ வாணன் = ಬಾಣಾಸುರನ, ತಿಣ್ ತೋಳ್ திண் தோள் = ಬಲಿಷ್ಠ ತೋಳುಗಳನ್ನು, ತುಣಿತ್ತ துணிக்க = ತುಂಡರಿಸಿದ, ವಲಿಯುಮ್ வலியும் = ಸಾಮರ್ಥ್ಯವನ್ನು, ಪೆರುಮೈಯುಮ್ பெருமையும் = ಹಿರಿಮೆಯನ್ನು, ಯಾಮ್ யாம் = ನಾವು,

Garani Srinivasan

ಶೊಲ್ಲುಮಾ ಎளிதும் = ಹೇಳುವುದಕ್ಕೆ, ನೀರಕ್ಕು ಇಲ್ಲ ನೀರ್ಕ್ಕು ಅವರು = ಶಕ್ತಿಯನ್ನು ಪಡೆದಿಲ್ಲ, ಮೈ ವರೈ ಪೋಲ್ மை வரை போல் = ಕಾಡಿಗೆಯ ಬೆಟ್ಟದಂತೆ, ಪೊಲಿಯುಮಾ பொலியும் = ಪ್ರಕಾಶಿಸುವ, ಉರುವಿನ್ உருவி ன = ದೇಹ (ರೂಪ)ವುಳ್ಳ, ಪಿರಾನಾರ್ பிரானார் = ದೇವೇಶ್ವರನು, ಪುನೈ புனை = ಮುಡಿದಿರುವ, ಪೂ பூ = ಸುಂದರವಾದ, ತುಳಾಯ್ துழாய் = ತುಳಸಿಯ, ಮಲರ್ಕ್ಕೇ மலர்க்கே = ಹೂವಿನಾಯಲೇ (ಹಾರಕ್ಕಾಗಿಯೇ), ಮೇಲೆಯುಮಾ ಮಡನೆಂಜನಾರ್ மட நெஞ்சு ಮೈಯಲಿಯುಂ = ಕ್ಷೋಭಗೊಳ್ಳುವ, (ಕಾತರಮುತ್ತಿರುವ), ಮಡನೆಂಜನಾರ್ மட நெஞ்சனார் = ಮುಗ್ಧ ಮನಸ್ಸು, ತನ್ನು ಪೋಲಿಯುನ ತನ್ದು போயின = ಕಾಟ್ಟು ಹೋದ, ವೇದನೈಯಲೇ வேதனையே = ಸಂಕಟವೇ.

ಸಂಕಟಪಡಿಸುವ ನರಕಾಸುರನನ್ನು ಕೊಂದ, ಬಾಣಾಸುರನ ಬಲಿಷ್ಠ ತೋಳುಗಳನ್ನು ತುಂಡರಿಸಿದ ಸಾಮರ್ಥ್ಯವನ್ನು ಹಿರಿಮೆಯನ್ನು ನಾವು ವಿವರಿಸಿ ಹೇಳುವುದಕ್ಕೆ ಶಕ್ತರಲ್ಲ. ಕಾಡಿಗೆಯ ಬೆಟ್ಟದಂತೆ ಹೊಳೆಯುವ ರೂಪವುಳ್ಳ ದೇವೇಶ್ವರನು ಮುಡಿದಿರುವ ಸುಂದರವಾದ ತುಳಸಿಯ ಹಾರಕ್ಕಾಗಿಯೇ ಕಾತರಮುತ್ತ ನನ್ನ ಮುಗ್ಧ ಮನಸ್ಸು ಕಾಟ್ಟು ಹೋದ ಸಂಕಟವೇ (ಇದು). (78)

"ನಲಿಯುಮಾ ನರಕನ್ನೈ ವೀಟ್ಟಿ" — ಮಹಾಪ್ರಚಂಡನಾದ ನರಕಾಸುರನು ಹದಿನಾರು ಸಾವಿರದ ಐದು ನೂರು ಕನ್ಯೆಯರನ್ನು ಬಲಾತ್ಕಾರವಾಗಿ ತಂದು ತನ್ನ ಅರಮನೆಯಲ್ಲಿ ಅವರನ್ನೆಲ್ಲಾ ಸೆರೆಯಲ್ಲಿಟ್ಟಿದ್ದನು. ಇಂದ್ರನ ತಾಯಿಯಾದ ಅದಿತಿಯ ಕಿವಿಯೋಲೆಗಳನ್ನು ಅಪಹರಿಸಿ ತಂದಿದ್ದನು. ಅಲ್ಲದೆ, ಇಂದ್ರನ ಐರಾವತವನ್ನೇ ಕಸಿದು ಕೊಳ್ಳುವುದರಲ್ಲಿದ್ದನು. ಇಂದ್ರಾದಿಗಳ ಮೊರೆಯನ್ನು ಕೇಳಿ, ಕಡು ದುಷ್ಟನಾದ ನರಕನನ್ನು ಶ್ರೀಕೃಷ್ಣನು ಯುದ್ಧದಲ್ಲಿ ಎದುರಿಸಿ, ಕೊಂದು, ಸೆರೆವಾಸವನ್ನನುಭವಿಸು ತ್ತಾ ಸಂಕಟಪಡುತ್ತಿದ್ದ ಹದಿನಾರು ಸಾವಿರದ ಐದು ನೂರು ಕನ್ಯೆಯರನ್ನು ಸೆರೆಯಿಂದ ಬಿಡಿಸಿದನು. ಅದಿತಿಯ ಕಿವಿಯೋಲೆಗಳನ್ನು ಹಿಂತಿರುಗಿಸಿದನು. ಮತ್ತು ಇಂದ್ರನ ಭಯವನ್ನು ನೀಗಿಸಿದನು. ಭಗವಂತನ ದುಷ್ಟನಿಗ್ರಹ, ಶಿಷ್ಟಪಾಲನೆಯ ಸಾಮರ್ಥ್ಯ ಮತ್ತು ಹಿರಿಮೆಯನ್ನು ಹೇಳುವ ನಿದರ್ಶನ ಇದೊಂದು.

"ವಾಣನ್ ತಿಣ್ ತೋಳ್ ತುಣಿತ್ತ" — ಬಾಣಾಸುರನು, ಪರಶಿವನ ಅನುಗ್ರಹವನ್ನು ಪಡೆದು, ಆ ಮೂಲಕ ತನ್ನನ್ನು ಯಾರೂ ಜಯಿಸಲಾರರೆಂದು ಮೆರೆಯುತ್ತಿದ್ದನು. ಸಾಕ್ಷಾತ್ ಶಿವನೇ, ತನ್ನ ಪ್ರಮಥಗಣಗಳೊಡನೆ ಅವನ ಬೆಂಬಲಿಗರಾಗಿ, ಕಾವಲು ಕಾಯುವಂತಾಗಿತ್ತು. ಬಾಣನಿಗೆ ಒಬ್ಬ ಮಗಳು - ಉಷೆ. ಅವಳು ಶ್ರೀಕೃಷ್ಣನ ಮೊಮ್ಮಗನಾದ ಅನಿರುದ್ಧನನ್ನು ಕನಸಿನಲ್ಲಿ

ಅವನನ್ನು ಪ್ರೀತಿಸಿದಳು. ಅವಳ ಪ್ರಿಯ ಸಖಿಯಾದ ಚಿತ್ರಲೇಖೆಯ ಸಹಾಯದಿಂದ, ಅನಿರುದ್ಧನನ್ನು, ತನ್ನ ಅಂತಃಪುರಕ್ಕೆ ಬರಮಾಡಿಕೊಂಡು, ಅವನೊಡನೆ ಆನಂದದಿಂದ ಕಾಲ ಕಳೆಯುತ್ತಿದ್ದಳು. ಅನಿರುದ್ಧನಿರುವ ಸ್ಥಳವನ್ನು ನಾರದ ಮಹರ್ಷಿಗಳಿಂದ ಶ್ರೀಕೃಷ್ಣನು ತಿಳಿದುಕೊಂಡು, ಬಾಣಾಸುರನ ನಗರವನ್ನು ತನ್ನ ಸೈನ್ಯದೊಡನೆ ಮುತ್ತಿಗೆ ಹಾಕಿದನು. ನಗರಕ್ಕೆ ಕಾವಲಾಗಿದ್ದ ಪ್ರಮಥ ಗಣಗಳನ್ನು ಗೆಲ್ಲುತ, ಬಾಣನ ಬಲ ಸಮರ್ಥರಾಗಿಸಿದ ಬೆಂಬಲಿಗರಾದ ಮುರ ಮುಂತಾದವರನ್ನು ಕೊಂದು ಹಾಕಿದನು. ತಡೆದ ಬಾಣನನ್ನೂ ಯುದ್ಧದಲ್ಲಿ ಎದುರಿಸಿ, ಅವನ ಸಾವಿರ ಕೈಗಳನ್ನು ತನ್ನ ಖಡ್ಗದಿಂದಲೇ ತುಂಡರಿಸಲು ಮೊದಲು ಮಾಡಿದನು. ತನ್ನ ಭಕ್ತನನ್ನು ರಕ್ಷಿಸೆಂಬ ಶಿವನ ಪ್ರಾರ್ಥನೆಯ ಮನ್ನಿಸಿ, ಬಾಣನ ಪ್ರಾಣಗಳನ್ನು ಅವನ ನಾಲ್ಕು ತೋಳುಗಳೊಡನೆ ಉಳಿಸಿಕೊಟ್ಟನು. ಬಾಣನು ಆಗ ಸಂತೋಷದಿಂದ ತನ್ನ ಮಗಳಾದ ಉಷೆಯೊಡನೆ ಅನಿರುದ್ಧನ ವಿವಾಹವನ್ನು ನೆರವೇರಿಸಿ, ಅವರೊಡನೆ ದ್ವಾರಕೆಗೆ ಹಿಂತಿರುಗಿದನು. ಭಗವಂತನ ಅಪ್ರತಿಮ ಸಾಮರ್ಥ್ಯವನ್ನು, ಹಿರಿಮೆಯನ್ನು ತಿಳಿಸುವ ನಿದರ್ಶನ ಇನ್ನೊಂದು.

ನಾಯಕಿ ಹೇಳುತ್ತಾಳೆ: ನರಕಾಸುರನನ್ನು ಕೊಂದ, ಮತ್ತು ಬಾಣನ ತೋಳುಗಳನ್ನು ತುಂಡರಿಸಿದ ಸರ್ವೇಶ್ವರನ ಸಾಮರ್ಥ್ಯವನ್ನು, ಆ ಕಾಲದಲ್ಲಿ ಅವನು ತೋರಿಸಿದ ಔದಾರ್ಯವನ್ನು ವಿವರಿಸಿ ಹೇಳಲು ನಮಗೆ ಸಾಧ್ಯವೇ ಇಲ್ಲ. ಅನುಪಮಾಕಾರ ಸೌಂದರ್ಯವುಳ್ಳ ಆ ಸ್ವಾಮಿಯು ಧರಿಸಿರುವ ತುಳಸಿಯ ಹಾರಕ್ಕೆ ಆಶಿಸಿ, ನನ್ನ ಮುಗ್ಧ ಮನಸ್ಸು ನನ್ನನ್ನಗಲಿ ಹೋಗಿ, ನನಗೆ ಕಡು ದುಃಖವನ್ನುಂಟು ಮಾಡಿದೆ.

79. வேதனை வெண்புரிநூலனை, விண்ணோர் பரவநின்ற
நாதனை ஞாலம் விழுங்கு மநாதனை, ஞாலந்தத்தும்
பாதனைப் பாற்கடற் பாம்பணை மேற் பள்ளிகொண்டருளும்
சீதனையே தொழுவார், விண்ணுளாரிலுஞ் சீரியரே.

ವೇದನ್ನೈ ವೆಣ್ಪುರಿನೂಲನ್ನೈ, ವಿಣ್ಣೋರ್ ಪರವನಿನ್ರ
ನಾದನ್ನೈ ಞಾಲಮ್ ವಿೞುಙ್ಗು ಮನಾದನ್ನೈ, ಞಾಲನ್ದತ್ತುಮ್
ಪಾದನ್ನೈ ಪ್ಪಾರ್ಕಡಲ್ ಪಾಮ್ಬಣೈಮೇಲ್ ಪಳ್ಳಿಕೊಣ್ಡರುಳುಮ್
ಶೀದನ್ನೈಯೇ ತೊೞುವಾರ್, ವಿಣ್ಣುಳಾರಿಲುಮ್ ಶೀರಿಯರೇ.

ವೇದನ್ನೈ வேதனை = ವೇದರೂಪಿಯನ್ನು (ವೇದದ ವಸ್ತುವನ್ನು, ಸರ್ವಜ್ಞನನ್ನು)

ವೆಳ್ ಪ್ಪುರಿ ನೂಲನ್ನೆ ಎಯಿಂದ್ ಪುರಿ ನೂಲಿನಾ = ಬಿಳಿಯ ಹುರಿಗೊಂಡಿದ ದಾರವನ್ನು ಧರಿಸಿ
ದವನನ್ನು (ಯಜ್ಞೋಪವೀತಧಾರಿಯನ್ನು), ವಿಣ್ಣೋರ್ ಪರವುಮ್ ತೇವರ್ = ನಿತ್ಯಸೂರಿ
ಗಳು (ದೇವಾದಿದೇವತೆಗಳು), ಪರವ ಪರವು = ಸ್ತುತಿಸಲು, ನಿನ್ರುತಿರಣ್ಣ = ಇರುವ
(ನಿಂತಿರುವ), ನಾದನ್ನೈ ನಾತನಾ = ಸರ್ವೇಶ್ವರನನ್ನು, ಇಲಮುಞಾಲಮ್ =
ಲೋಕಗಳನ್ನು, ವಿಲುಙ್ಗುಮ ವಿಳುಙ್ಗುಮ್ = ನುಂಗುವಂಥ, ಅನಾದನ್ನೈ
ಅನಾತನಾ = ಅನಾದಿಯಾಗಿರುವವನನ್ನು, ಇಲಮುಞಾಲಮ್ = ಲೋಕಗಳ
ನ್ನು, ಶರ್ರುಮ ಅಳನ್ದಮ್ = ಅಳೆದುಕೊಂಡ, ಪಾದನ್ನೈ ಪಾತನಾ = ಪಾದಗಳು
ಳ್ಳುವನನ್ನು, ಪಾಲ್ ಕಡಲ್ ಪಾಲ್ ಕಡಲ್ = ಹಾಲ್ಗಡಲಲ್ಲಿ, ಪಾಮ್ಪು ಅಣೈ ಮೇಲ್
ಪಾಂಪು ಅಣೈ ಮೇಲ್ = ಹಾವಿನ ಹಾಸಿಗೆಯ ಮೇಲೆ, ಪಳ್ಳಿಕೊಣ್ಡ ಪಳ್ಳಿ
ಕೊಣ್ಡ = ಪವಡಿಸಿ, ಅರುಳ್ಳುಮ ಅರುಳುಮ್ = ಕೃಪೆಮಾಡುವ (ಅನು
ಗ್ರಹಿಸುವ), ಶೀದನ್ನೈ ಶೀತನಾ = ಲಕ್ಷ್ಮೀಶರನನ್ನು, ಕೋಲುವಾರ್ ಕೊಳುವಾರ್ =
ಭಜಿಸುವವರು (ಪೂಜಿಸುವವರು), ವಿಣ್ಣೋರ್ ಉಳ್ಳಾರಿಲುಮ್ ವಿಣ್ಣ ಉಳ್ಳಾರಿಲುಮ್ =
ಪರಮಪದವಾಸಿಗಳಿಗಿಂತಲೂ, ಶೀರಿಯಾರ್ ಶೀರಿಯರ್ = ಶ್ರೇಷ್ಠರು.

ವೇದರೂಪಿಯನ್ನು (ವೇದವಸ್ತುವನ್ನು, ಸರ್ವಜ್ಞನನ್ನು), ಯಜ್ಞೋಪವೀತ
ಧಾರಿಯನ್ನು, ದೇವಾದಿದೇವತೆಗಳು ಸ್ತುತಿಸುವಂಥ ಸರ್ವೇಶ್ವರನನ್ನು, ಲೋಕಗಳ
ನ್ನು ನುಂಗುವಂಥ ಅನಾದಿಯಾದವನನ್ನು, ಲೋಕಗಳನ್ನು ಅಳೆದುಕೊಂಡ ಪಾದಗ
ಳುಳ್ಳವನನ್ನು, ಹಾಲ್ಗಡಲಲ್ಲಿ ಹಾವಿನ ಹಾಸಿಗೆಯಲ್ಲಿ ಪವಡಿಸಿ ಅನುಗ್ರಹಿಸುವ
ಲಕ್ಷ್ಮೀಶರನನ್ನು ಭಜಿಸಿ ಪೂಜಿಸುವವರು ಪರಮಪದವಾಸಿಗಳಿಗಿಂತಲೂ ಶ್ರೇಷ್ಠರು (79)

ಭಗವಂತನ ಸಾಟಿಯಿಲ್ಲದ ಸಾಮರ್ಥ್ಯವನ್ನು, ಅನುಪಮ ಸೌಂದರ್ಯವನ್ನು,
ಬಂದಿನ ಪಾಶುರದಲ್ಲಿ, ವಿವರಿಸಿ ~~ಹೇಳಲಾಯಿತು~~ ಹೇಳುವುದು ಸಾಧ್ಯವಿಲ್ಲ ಎನ್ನ
ಲಾಯಿತು. ಇಲ್ಲಿ, ಅವನ ಅದ್ವಿತೀಯವಾದ ಗುಣ ಸ್ವಭಾವಗಳನ್ನು, ಬಂಧಿಸುವ
ಮೇಗಳನ್ನು ಕೆಲವು ಸುಂದರವಾದ ಪದ್ಯ ಮಾತುಗಳಲ್ಲಿ ಹೇಳಲಾಗುತ್ತಿದೆ.

ಶಿಳಿವಳಿಕೆಯುಳ್ಳ ಭಗವಂತ. ವೇದಗಳಲ್ಲಿ ವಿವರಿಸುವ ವಸ್ತು ಅವನು. ಸರ್ವಜ್ಞ.
ಸೃಷ್ಟಿಯ ಎಲ್ಲಾ ಶಕ್ತಿಗಳನ್ನು ಉಳ್ಳವನು (ಸೃಷ್ಟಿಕಾರಣನು). ಸರ್ವೇಶ್ವರ. ದೇವಾದಿ
ದೇವತೆಗಳೂ ಅವನನ್ನು ಸ್ತುತಿಸುವರು. ಹಾಲ್ಗಡಲಲ್ಲಿ ಹಾವಿನ ಹಾಸಿಗೆಯಲ್ಲಿ ನಿತ್ಯ
ನಾಗಿ ಪವಡಿಸಿರುವವನು. ಎಲ್ಲರಲ್ಲೂ ಶ್ರೇಷ್ಠನಾಗಿರುವವನು. ಅನಾದಿ ಪುರುಷನು.
ಲಯಕಾಲದಲ್ಲೂ ತನ್ನ ಸೃಷ್ಟಿಯನ್ನು ಸುಖವಾಗಿ ಸಂರಕ್ಷಿಸುವವನು. ತ್ರಿವಿಕ್ರಮನಾಗಿ,
ಸರ್ವವ್ಯಾಪಿಯಾಗಿ, ಲೋಕಗಳನ್ನು ಎರಡೇ ಹೆಜ್ಜೆಗಳಿಂದ ಅಳೆದುಕೊಂಡವನು.

ನಾಯಕಿ ಹೇಳುತ್ತಾಳೆ: ~~ಈ~~ ಇಂತಹ ಬಂಧಿಸುವ ಗುಣಗಳುಳ್ಳ ಸರ್ವೇಶ್ವ
ರನನ್ನು ಅನನ್ಯವಾಗಿ ಭಜಿಸಿ ಪೂಜಿಸುವವರು ಪರಮಪದವಾಸಿಗಳಿಗಿಂತ ಶ್ರೇಷ್ಠ-

సూంతపుఁగుంతలు శ్రేష్ఠరు. (అందువలన స్వామియు ఎందిగూ అనాదయిదే కృపెదోరువను).

80. சீரரசாண்டு தன் செங்கோல் சிலநாள், செலுத்திக் கழிந்த,
பாரரசொத்து மறைந்தது நாயிறு, பாரளந்த
பேரரசே! எம் விசும்பரசே! எம்மை நீத்து வஞ்சித்
தோரரசே! யருளாய், இருளாய் வந்துறுகின் றதே.

శీరరశాణ్డు తన శెజ్గోల్ శిలనాళ్, శెలుత్తిక్కళిన్ద,
పారరశొత్తు మఱైన్దదు నాయిఱు, పారళన్ద
పేరరశే! ఎమ విశుమ్బరశే! ఎమ్మై నీత్తు వఞ్జి
త్తోరరశే! యరుళాయ్, ఇరుళాయ్ వన్దుఱుగిన్ఱదే.

శీర్ சீர் = ఉత్తమవాద, అరశు அரசு = రాజ్యభారవన్ను, ఆణ్డు ஆண்டு = మాడి, తన్ தன் = తన్న, శెజ్గోల్ செங்கோல் = నీతి నియమగళన్ను, శిలనాళ్ சிலநாள் = కెలకాల, శెలుత్తి செலுத்தி = నడసి, కళిన్ద கழிந்த = బళిక, కాలవాద, పార్ అరశు பார் அரசு = భూమియ మేలె ఒత్తు, మఱైన్దదు மறைந்தது = మరెయాయితు (ముళుగితు), ఒళా రాజరంతె, నాయిఱు நாயிறு = సూర్య, పార్ అళన్ద பார் அளந்த = భూమియన్ను అళెదుకొండ, పేర్ అరశే பேர் அரசே = ప్రసిద్ధనాద ఒడెయనే, విశుమ్బు விசும்பு = పరమపద, అరశే அரசே = ఒడెయనే, ఎమ நாம் = నమ్మ, ఎమ్మై நம்மை = నమ్మన్ను, నీత్తు நீத்து = నీగి (అగలి) = ఒడెయనే, వఞ్జిత్త வஞ்சித்த = వంచిసిద, ఓర్ అరశే ஓர் அரசே = దాటియ, అరుళాయ్ அருளாய் = కృపెదోరు, ఇరుళ్ ఆయ్ = ఇల్లద ఒడెయనే, ఉఱుగిన్ఱదే, இருள் ஆய் = కత్తలెయాగి, వన్దు வந்து = బందు, ఉఱుగిన్ఱదే உறுகின்றதே = (నమ్మన్ను) కరగిసుత్తిదెయల్లా!

ఉత్తమవాద రాజ్యభారమాడి, తమ్మ నీతి నియమగళన్ను కెలకాల నడసిద బళిక కాలవాద భూమియ మేలె ఒళా రాజరంతె, సూర్యను ముళుగిదను. భూమియన్ను అళెదుకొండ సుప్రసిద్ధనాద ఒడెయనే, నమ్మ పరమపద ఒడెయనే, నమ్మన్ను అగలి (నీగి) వంచిసిద అద్వితీయనాద ఒడెయనే కృపెదోరు. కత్తలెయాగి బందు నమ్మన్ను కరగిసుత్తిదెయల్లా! (80)

Garalli Srinivasan

ರಾತ್ರಿಯನ್ನು ಒಂಟಿಯಾಗಿ ಕಳೆಯುವುದು ಕಷ್ಟವೆಂದೂ, ತನ್ನ ಬಳಿಗೆ ಬಂದು ತನ್ನನ್ನು ಕಾಪಾಡಬೇಕೆಂದೂ ನಾಯಕಿ ಈ ಪಾಶುರದಲ್ಲಿ ತನ್ನ ಪ್ರಿಯತಮನಾದ ಭಗವಂತನಲ್ಲಿ ಮೊರೆಯಿಡುತ್ತಾಳೆ.

ನಾಯಕಿ ಹೇಳುತ್ತಾಳೆ: ಭೂಮಿಯ ಮೇಲೆ ಎಷ್ಟೋ ಉತ್ತಮವಾದ, ಧರ್ಮಪೂರ್ಣವಾದ ರಾಜ್ಯಭಾರವನ್ನು ನಡೆಸಿದ ರಾಜರೆಲ್ಲರೂ, ಕೆಲಕಾಲವಿದ್ದು, ಬಳಿಕ ನಶಿಸಿದ ಹಾಗೆಯೇ, ಸೂರ್ಯನೂ ತನ್ನ ದಿವ್ಯವಾದ ಆಡಳಿತವನ್ನು ಬೆಳಗಿನಿಂದ ಸಂಜೆಯವರೆಗೆ ನಡೆಸಿ ಕಣ್ಮರೆಯಾದನು. ಕತ್ತಲು ಆವರಿಸಿಕೊಂಡು ಬಂದು ನಮ್ಮನ್ನು ಕಾಡಿಸುತ್ತಿದೆ. ಸ್ವಾಮೀ, ತ್ರಿವಿಕ್ರಮಾವತಾರಿಯೇ, ಪರಮಪದದ ಒಡೆಯನೇ, ನಮ್ಮನ್ನು ವಂಚಿಸಿ ಅಗಲಿಹೋದವನೇ, ಈಗ ನಮಗೆ ದರ್ಶನ ಕೊಡು.

81. உறுகின்ற கன்மங்கள் மேலன ஓர்ப்பிலராய், இவளைப்
பெறுகின்ற தாயர் மெய்ந்நொந்து பெறார்கொல்?, துழாய்க்குழல்வாய்த்
துறுகின்றிலர் தொல்லை வேங்கடமாட்டவும் சூழ்கின்றிலர்,
இறுகின்றதால் இவளாகம் மெல்லாவி எரிகொள்ளவே.

ಉಱುಗಿನ್ಱ ಕನ್ಮಂಗಳ್ ಮೇಲನ ಓರ್ಪ್ಪಿಲರಾಯ್, ಇವಳೈ
ಪೆಱುಗಿನ್ಱ ತಾಯರ್ ಮೆಯ್ನ್ನೊಂದು ಪೆಱಾರ್ ಕೊಲ್? ತುೞಾಯ್ ಕ್ಕುೞಲ್ವಾಯ್
ತ್ತುಱುಗಿನ್ಱಿಲರ್ ತೊಲ್ಲೈ ವೇಂಗಡ ಮಾಟ್ಟವುಂ ಸೂೞ್ಗಿನ್ಱಿಲರ್,
ಇಱುಗಿನ್ಱದಾ ಅವಳಾಗಮ ಮೆಲ್ಲಾವಿ ಎರಿಕೊಳ್ಳವೇ.

ಉಱುಗಿನ್ಱ உறுகின்ற = ಬಹಳವಾಗಿ ನಡೆಯುತ್ತಿರುವ, ಕನ್ಮಂಗಳ್ கன்மங்கள் = ಕರ್ಮಗಳು, ಮೇಲನ மேலன = ಮೇಲಿಂದ ಮೇಲೆ ಬರುತ್ತವೆ (ಉಂಟಾಗುತ್ತವೆ), ಓರ್ಪ್ಪು ಇಲರ್ ಆಯ್ ஓர்ப்பு இலர் ஆய் = ಯೋಚನೆಯಿಲ್ಲದವರಾಗಿ, ಇವಳೈ இவளை = ಇವಳನ್ನು, ಪೆಱುಗಿನ್ಱ பெறுகின்ற = ಹಡೆದ, ತಾಯರ್ தாயர் = ತಾಯಿಯು, ಮೆಯ್ ನೊಂದು மெய் நொந்து = ಮೈಯನ್ನು ನೋಯಿಸಿ, ಪೆಱಾರ್ ಕೊಲ್ பெறார் கொல் = ಹಡೆದಿಲ್ಲವೆ? ತುೞಾಯ್ துழாய் = ತುಳಸಿಯನ್ನು, ಕುೞಲ್ ವಾಯ್ குழல் வாய் = ತಲೆಗೂದಲಲ್ಲಿ, ತುಱುಗಿನ್ಱಿಲರ್ துறுகின்றிலர் = ಮುಡಿಯುತ್ತಿಲ್ಲ, ತೊಲ್ಲೈ தொல்லை = ಪುರಾತನವಾದ, ವೇಂಗಡಮ್ வேங்கடம் = ತಿರುವೇಂಕಟಗಿರಿಯಲ್ಲಿ,

ಅಟ್ಟವುಮ್ ஆட்டமும் = ಮೆರೆಸಲೂ (ಆಡಿಸಲೂ), ಕೂಟ್ಟುಡನ್ ಪೋಲರ್
(சூழ்கின்றிலர்) = ಆಲೋಚಿಸುವುದಿಲ್ಲ, ಇಯುಡನ್ ಉದು இறுகின்
ಆಲ್ ಆತು = ಅದ್ದರಿಂದ,
றது = ಗಟ್ಟಿಯಾಗುತ್ತಿದೆ (ಮೃದುತ್ವವನ್ನು ಕಳೆದುಕೊಂಡಿದೆ), ಇವಳ್ ಆಡಮ್
திவள் ஆகம் = ಇವಳ ಮೈ, ಮೆಲ್ ಆವಿ ಉಟಲ್ ஆவி = ಮೃದುವಾದ
தொள்ளாவ = ಮೋಡಗೊಳ್ಳುವಂತೆ.
ಉಸಿರು; ಎಂ ಕೊಳ್ಳುವೇ ஏரி

(ಇವಳ ತಾಯಿ) ಬರುತ್ತಾ ನಡೆಸುತ್ತಿರುವ ಕರ್ಮಗಳು ಮೊದಲಂತೆಯೇ ಲೇ ನಡೆಯುತ್ತಲೇ ಇವೆ. ಯೋಚನೆಯಿಲ್ಲದೆ, ಇವಳನ್ನು ಹಡೆದ ತಾಯಿ ಮೈನೋಯಿಸಿಕೊಂಡು ಹಡೆದಿಲ್ಲವೋ? ತಲೆಗೂದಲಿನಲ್ಲಿ ತುಳಸಿಯನ್ನು ಮುಡಿಯುತ್ತಿಲ್ಲ. ಪುರಾತನವಾದ ತಿರುವೆಂಕಟಗಿರಿಯಲ್ಲಿ ಮೆರೆಸಲೂ (ಕುಣಿದಾಡಿಸಲೂ) ಆಲೋಚಿಸುವುದಿಲ್ಲ. ಆದ್ದರಿಂದ, ಇವಳ ಮೈ ತನ್ನ ಮೃದುತ್ವವನ್ನು ಕಳೆದುಕೊಂಡು ಗಟ್ಟಿಯಾಗುತ್ತಿದೆ. ಮೃದುವಾದ ಉಸಿರು ಇವಳನ್ನು (81) ಮೋಡಗೊಳ್ಳುವಂತಿದೆ.

ನಾಯಕಿಯ ವಿರಹ ಇವಳ ತಾಯಿಗೆ ಅರ್ಥವಾಗಲಿಲ್ಲವೇಕೆ? ಕಾರಣವೇನಿರಬಹುದು? – ಎಂಬುದನ್ನು ಸೂಚಿಸುತ್ತದೆ ಈ ಪಾಶುರ.

ನಾಯಕಿ ಹೇಳುತ್ತಾಳೆ:- ಇವಳ ತಾಯಿ ಕರ್ಮಿಷ್ಠಳು. ಬಹಳ ಕಟ್ಟುನಿಟ್ಟಾಗಿ ತನ್ನ ಕರ್ಮಗಳನ್ನು ನಡೆಸುತ್ತಾಳೆ. ಅವಳ ಕಾಲವೆಲ್ಲ ಅದರಲ್ಲೇ ಕಳೆದು ಹೋಗುತ್ತದೆ. ಅವಳಿಗೆ ಇನ್ನು ಮಗಳನ್ನು ಕುರಿತು ಯೋಚಿಸುವುದಕ್ಕೆ ಕಾಲವಾದರೂ ಅವಕಾಶವಾದರೂ ಎಲ್ಲಿ? ತನ್ನ ಮೈಯನ್ನು ನೋಯಿಸಿಕೊಂಡಲ್ಲವೇ ಇವಳ ತಾಯಿ ಇವಳನ್ನು ಹಡೆದದ್ದು! ಆದರೂ ಇವಳ ಇಂದಿನ ಸ್ಥಿತಿಯನ್ನು ನೋಡಿ ಕನಿಕರಗೊಳ್ಳುವುದಿಲ್ಲವಲ್ಲ? ಇವಳು ತನ್ನ ತಲೆಗೂದಲಿನಲ್ಲಿ ತುಳಸಿಯನ್ನು ಮುಡಿಯುವುದಿಲ್ಲ. ಕಾರಣವೇನಿರಬಹುದೆಂದು ಆಲೋಚನೆಯಾದರೂ ಬೇಡವೇ? ಪುರಾತನವಾದ ತಿರುಮಲೆಗೆ ಇವಳನ್ನು ಕರೆದೊಯ್ದು ಅಲ್ಲಿ ಇವಳು ಸಂತೋಷಪಡುವುದನ್ನಾದರೂ ನೋಡಬಾರದೇ? ಯಾವ ರೀತಿಯಲ್ಲೂ ಇವಳನ್ನು ಕುರಿತು ಆಲೋಚಿಸದೆ ಇವಳನ್ನು ನಿರ್ಲಕ್ಷಿಸಬಹುದೇ? ಇವಳ ಮೃದುವಾದ ಯೌವನ ತುಂಬಿದ ಮೈ ತನ್ನ ಮೃದುತ್ವವನ್ನು ಕಳೆದುಕೊಂಡಿದೆ. ಕೃಶವಾಗಿ ಗಟ್ಟಿಯಾಗುತ್ತಿದೆ. ಇವಳ ಉಸಿರೂ ನಿಧಾನವಾಗಿ ಮೃದುವಾಗುತ್ತ ಬರುತ್ತಿದೆ. ಅದು ಇವಳನ್ನು ವಂಚಿಸಿ ಬಿಡುವುದೋ, ನಿಂತೇ ಹೋಗುವುದೋ ಎಂಬಂತಿದೆ.

Garani Srinivasan

82. எரிகொள் செந்நாயிறிரண்டுடனே யுதயம்மலைவாய்,
விரிகின்ற வண்ணத்த வெம்பெருமான் கண்கள், மீண்டவற்றுள்
எரிகொள் செந்தீ வீழ் அசுரரைப்போல வெம்போலியர்க்கும்
விரிவ சொல்லீரிதுவோ?, வையமுற்றும் விளரியதே.

ಎರಿಕೊಳ್ ಶೆನ್ನಾಯಿಱಿರಣ್ಡುಡನೇ ಯುದಯಮ್ಮಲೈವಾಯ್,
ವಿರಿಗಿನ್ಱ ವಣ್ಣತ್ತ ವೆಮ್ಬೆರುಮಾನ್ ಕಣ್ಗಳ್, ಮೀಣ್ಡವಱ್ಱುಳ್
ಎರಿಕೊಳ್ ಶೆನ್ದೀ ವೀೞ್ ಅಶುರರೈಪ್ಪೋಲ ವೆಮ್ಬೋಲಿಯರ್ಕ್ಕುಮ್
ವಿರಿವ ಶೊಲ್ಲೀರಿದುವೋ?, ವೈಯಮುಱ್ಱುಮ್ ವಿಳರಿಯದೇ.

ಎರಿಕೊಳ್ எரிகொள் = ಶಾಖವನ್ನುಳ್ಳ (ಶಪಿಸುವ), ಶೆನ್ನಾಯಿಱು செந்நாயிறு = ಕೆಂಪಾದಂಥ ಸೂರ್ಯರು, ಇರಣ್ಡು இரண்டு = ಎರಡು (ಇಬ್ಬರು), ಉಡನೇ உடனே = ಏಕಕಾಲದಲ್ಲಿ, ಉದಯಮ್ಮಲೈವಾಯ್ உதயம் மலைவாய் = ಉದಯ ಪರ್ವತದಲ್ಲಿ, ವಿರಿಗಿನ್ಱ விரிகின்ற = ಮೂಡಿ ಬೆಳಗುವಂಥ, ವಣ್ಣತ್ತ வண்ணத்த = ಸ್ವಭಾವದ, ಎಮ್ಬೆರುಮಾನ್ ಕಣ್ಗಳ್ எம்பெருமான் கண்கள் = ಸರ್ವೇಶ್ವರನ (ನಮ್ಮ ಸ್ವಾಮಿಯ) ಕಣ್ಣುಗಳು, ಮೀಣ್ಡು மீண்டு = ಮತ್ತೆ, ಅವಱ್ಱುಳ್ அவற்றுள் = ಅವುಗಳಿಂದ, ಎರಿಕೊಳ್ எரிகொள் = ಜ್ವಲಿಸುವ, ಶೆನ್ದೀ செந்தீ = ಕೆಂಪಾದ ಜ್ವಾಲೆಯು, ವೀೞ್ வீழ் = ಮೇಲೆ ಬೀಳುವ, ಅಶುರರೈಪ್ಪೋಲ அசுரரை போல = ಅಸುರರಂತೆ, ಎಮ್ಬೋಲಿಯರ್ಕ್ಕುಮ್ எம்போலியர்க்கும் = ನಮ್ಮಂಥವರಿಗಾ, ವಿರಿವ விரிவ = ಹರಡುವುವು, ಶೊಲ್ಲೀರ್ சொல்லீர் = ಹೇಳಿರಿ, ಇದುವೋ இதுவோ = ಇವೇಯೇ, ವೈಯಮ್ வையம் = ಲೋಕವನ್ನು, ಮುಱ್ಱುಮ್ முற்றும் = ಪೂರ್ತಿಯಾಗಿ, ವಿಳರಿಯದೇ விளரியதே = ಬೆಳಗಿ ಸೋಲುತ್ತಿದೆಯಲ್ಲ (ಸೊರಗಿಸುತ್ತಿದೆಯಲ್ಲ)

ಶಪಿಸುವ ಕೆಂಪಾದಂಥ ಇಬ್ಬರು ಸೂರ್ಯರು ಏಕಕಾಲದಲ್ಲಿ ಉದಯಪರ್ವತದಲ್ಲಿ ಮೂಡಿ ಬೆಳಗುವಂಥ ಸ್ವಭಾವದ ನಮ್ಮ ಸ್ವಾಮಿಯ ಕಣ್ಣುಗಳು ಮತ್ತೆ ಅವುಗಳಿಂದ ಜ್ವಲಿಸುವ ಕೆಂಪಾದ ಜ್ವಾಲೆಯು, ಮೇಲೆ ಬೀಳುವ ಅಸುರರಂತೆ ನಮ್ಮಂಥವರಿಗಾ ಹರಡುವುವು ಇವೇಯೇ, ಹೇಳಿರಿ, ಲೋಕವೆಲ್ಲವನ್ನೂ ಬೆಳಗಿ ಸೊರಗಿಸುತ್ತಿದೆಯಲ್ಲ! (82)

ಭಗವಂತನ ಅಪೂರ್ವ ಸೌಂದರ್ಯ ಪ್ರಕಾಶಗಳಿಂದ ಬೆಳಗುವ ಕಣ್ಣುಗಳ ಆಕರ್ಷಣೆಗೆ ಮಾರುಹೋದುದರ ವಿರಹಾನುಭವ ತಾನು ಹರಿದ ಸೊರಗು

ಸುಮ್ಮದಕ್ಕೆ ಕಾರಣ ಎನ್ನುತ್ತಾಳೆ ನಾಯಕಿ.

ನಾಯಕಿ ಹೇಳುತ್ತಾಳೆ: ಉದಯ ಪರ್ವತದಲ್ಲಿ ಮಕರಾಲದಲ್ಲಿ ಇಬ್ಬರು ಸೂರ್ಯರು ಕೆಂಪಗೆ ಮೂಡಿ ಬರುವಂತೆ ಸುಂದರವಾದ ಆಕರ್ಷಣೀಯಂತ ಕೂಡಿದ ನಮ್ಮ ಸ್ವಾಮಿಯ ಎರಡು ಕಣ್ಣುಗಳು. ಮತ್ತು, ಅವುಗಳಿಂದ ದೂರ ಹೊಮ್ಮುವ ತೇಜಸ್ಸು, ಹಿಂದೆ (ಮಂದೇಹರುಣರೆಂಬ) ರಾಕ್ಷಸರನ್ನು ಕೆಡಿಸಿ, ಅವರನ್ನು ನೋಯಿಸಿ ಬೀಳಿಸಿದ ಹಾಗೆ, ನಮ್ಮಂಥ ಅಬಲೆಯರ ಮೇಲೂ ಬಂದು, ನಮ್ಮನ್ನು ನೋಯಿಸುತ್ತಿದೆಯಲ್ಲ!

ಮಂದೇಹಾರುಣ ಎಂಬುದೊಂದು ದ್ವೀಪ. ಅಲ್ಲಿಯ ರಾಕ್ಷಸರೇ ಮಂದೇಹಾರುಣರು. ಅವರು ತಪಸ್ಸು ಮಾಡಿ ಬ್ರಹ್ಮ~~ನ~~ನಿಂದ ವರವನ್ನು ಪಡೆದು ಕೊಂಡು, ಅದರ ಬಲದಿಂದ ಸೂರ್ಯನನ್ನು ಎದುರಿಸಿ, ಅವನ ಪಥಕ್ಕೆ ಅಡ್ಡಲಾಗಿ ನಿಲ್ಲುತ್ತಿದ್ದರಂತೆ. ಸೂರ್ಯನ ಸಹಜವಾದ ಚಲನೆಗೆ ಇದರಿಂದ ಬಹಳ ಅಡ್ಡಿಯಾಗುತ್ತಿತ್ತಂತೆ. ಸರ್ವೇಶ್ವರನು ಸೂರ್ಯನ ನಡುವಿನಿಂದ ಅತಿ ಪ್ರಖರ ತಾಪ ಜ್ವಾಲೆಯನ್ನು ಪ್ರಸರಿಸಿ, ಆ ಮೂಲಕ, ಆ ರಾಕ್ಷಸರನ್ನು ನೋಯಿಸಿ ಬೀಳಿಸಿದನಂತೆ. ಇದು ವೇದದ ಒಂದು ಕತೆ.

83, விளரிக்குரலன்றில் மென் பெடை மேகின்ற முன்றிற் பெண்ணை,
முளரிக்குரம்பை யிதுவிதுவாக, முகில்வண்ணன் பேர்
கிளரிக்கிளரிப் பிதற்று மெல்லாவியும் நைவுமெல்லாம்
தளரிற்கொலோவறியேன், உய்யலாவதித் தையலுக்கே.

ವಿಳರಿಕ್ಕುರಲನ್ರಿಲ್ ಮೆನ್ ಪೆಡೈ ಮೇಹಿನ್ರ ಮುನ್ರಿರ್ ಪೆಣ್ಣೈ,
ಮುಳರಿಕ್ಕುರಂಬೈ ಯಿದುವಿದುವಾಹ, ಮುಹಿಲ್ ವಣ್ಣನ್ ಪೇರ್
ಕಿಳರಿಕ್ಕಿಳರಿ ಪ್ಪಿದಟ್ರು ಮೆಲ್ಲಾವಿಯುಮ್ ನೈವುಮೆಲ್ಲಾಮ್
ತಳರಿರ್ ಕೊಲೋವರಿಯೇನ್, ಉಯ್ಯಲಾವದಿತ್ತೈಯಲುಕ್ಕೇ.

ವಿಳರಿ விளரி = ಕೋಮಲವಾದ (ಉಚ್ಚಸ್ವರದ), ಕುರಲ್ குரல் = ಧ್ವನಿಯ, ಅನ್ರಿಲ್ அன்றில் = ಕ್ರೌಂಚ ಪಕ್ಷಿಯ, ಮೆಲ್ மெல் = ಕೋಮಲವಾದ, ಪೆಡೈ பெடை = ಹೆಣ್ಣು ಪಕ್ಷಿಯನ್ನು, ಮೇಹಿನ್ರ மேகின்ற = ~~(ಆದರದಿಂದ)~~ (ಆದರದಿಂದ) ಸಮಾಧಾನ ಪಡಿಸಲು, ಮುನ್ರಿಲ್ ಪೆಣ್ಣೈ முன்றில் பெண்ணை = ಮುಂದಿರುವ ತಾಳೆಯ ಮರದ, ಮುಳರಿ முளரி = ಮುಳ್ಳುಭಾಗಗಳನ್ನು, ಕುರುಮ್ಬೈ குரும்பை = ಎಳೆಯ ಕಾಯಿಗಳನ್ನು (ಎಳೆನೀರನ್ನು), ಇದು ಇದು ಆಹ இது இது ஆக = ಇದು ಇದು ಎಂದು ಪರಿಗಣಿಸುವ ಹಾಗೆ,

ಮುಗಿಲ್ ವಣ್ಣನ್ ಪೇರ್ முகில் வண்ணன் பேர் = ಮುಗಿಲು ವರ್ಣನ ದೇವರನ್ನು,
ಕಿಳರಿ ಕಿಳರಿ கிளரி கிளரி = ಮೇಲಿಂದ ಮೇಲೆ, ಪಿದಱ್ಱುಮ್ பிதற்றும்
= (ಉತ್ಸಾಹದಿಂದ) ವಟಗುಟ್ಟುವುದೂ; ಮೆಲ್ ಆವಿಯುಮ್ மெல்லாவியும் =
ಮೆತ್ತನೆಯ ಉಸಿರೂ, ನೈವುಮ್ நைவும் = ಕೃಶವಾಗಿರುವುದೂ, ಎಲ್ಲಾಮ್
எல்லாம் = ಇವೆಲ್ಲವೂ, ತಳರಿನ್ ಕೊಲೋ தளரின் கொலோ = ಬಲ
ಗುಂದಿರುವವಳೇ, ಅರಿಯೇನ್ அறியேன் = ಅರಿಯೆನು, ಉಯ್ಯಲ್ உய
ல் = ಉದ್ಧಾರ, ಆವದು ஆவது = ಯಾವದು, ಇತ್ತೆಯ ಉತ್ತೇ இத்தாயுள்
கடை = ಕಡೆಗೆ.

ಕೋಮಲವಾದ ಉಚ್ಚ ದನಿಯಿಂದ ಕ್ರೌಂಚ ಪಕ್ಷಿಯು ಮೃದುವಾದ (ಕೋಮಲವಾದ) ಹೆಣ್ಣು ಪಕ್ಷಿಯನ್ನು (ಆದರದಿಂದ) ನಿಮೂಢನಾದ ಪಡಿಸಲು ಮುಂದಿನ ತಾಳೆಯ ಮರದ ಮುಳ್ಳುಗಳನ್ನು ಎಳೆಯ ಕಾಯಿಗಳನ್ನು (ಎಳೆಸಲರನ್ನು) ಇದು, ಇದು, ಎಂದು ತೋರಿಸಿ ವಿವರಿಸುವದಾಗ, ಮುಗಿಲು ವರ್ಣನ ದೇವರನ್ನು ಮೇಲಿಂದ ಮೇಲೆ (ಉಬ್ಬಿ ಉಬ್ಬಿ) ವದರುವುದೂ, ಮೆಲ್ಲನೆ ಉಸಿರಾಡುವುದೂ, ಕೃಶವಾಗಿರುವುದೂ, ಎಲ್ಲವೂ ಇವಳ ಬಲವನ್ನು ಕುಂದಿಸಿದೆ? ಕಡೆಗೆ ಉದ್ಧಾರ ಯಾವುದೋ ಅರಿಯೆನಲ್ಲ! (83)

ಕ್ರೌಂಚ ಪಕ್ಷಿಗಳು ಯಾವಾಗಲೂ ಜೊತೆ ಜೊತೆಯಾಗಿಯೇ ಇರುತ್ತವೆ. ಒಂದನ್ನೊಂದು ಕ್ಷಣಕಾಲವೂ ಅಗಲಿರಲಾರವು. ನಾಯಕಿಗೂ ಅದೇ ಆಸೆ. ತನ್ನ ಪ್ರಿಯತಮನಿಂದ ಅಗಲಲೇ ಬಾರದು. ಈ ಆಸೆಗೆ ಭಂಗ ಬಂದಿರುವುದರಿಂದ, ತನ್ನ ~~[illegible]~~ ಪ್ರಿಯನು ತನ್ನನ್ನಗಲಿ ಹೋಗಿರುವುದರಿಂದ, ಅವಳು ತುಂಬ ಘಾಸಿಗೊಂಡಿದ್ದಾಳೆ. ಪ್ರಿಯನನ್ನು ನೆನೆನೆನೆದು, ಅವನ ನಾಮಗಳನ್ನು ಎಡೆಬಿಡದೆ ಹೇಳುತ್ತಿರುತ್ತಾಳೆ. ಇವಳು ವಿರಹದಿಂದ ಬಾಧೆ ಪಡುವುದರಿಂದಲೂ, ಪ್ರಿಯನ ಹೆಸರುಗಳನ್ನು ಹೇಳುತ್ತಲೇ ಇರುವುದರಿಂದಲೂ, ಮೆಲ್ಲನೆ ಉಸಿರಾಡುವುದರಿಂದಲೂ, ಕೃಶವಾಗಿರುವುದರಿಂದಲೂ, ಇವಳನ್ನು ಕಂಡವರಿಗೆ, ಇವಳ ತಾಯಿಗೆ, ತುಂಬ ವ್ಯಸನವುಂಟಾಗಿದೆ. ಹೀಗಿರುವುದರಿಂದ 'ಇವಳು ಉದ್ಧಾರಗೊಳ್ಳುವಳೇ' ಎಂದು ಅವರು ಯೋಚಿಸುತ್ತಾರೆ.

84. தையனல்லார்கள் குழாங்கள் குழிய குழுவினுள்ளும்,
ஐயநல்லார்கள் குழிய விழவினும், அங்கங்கை
ஸலாம்
கையபொன்னாழி வெண் சங்கொடும் காண்பா
னவாவுவன்
மையவண்ணா! மணியே, முத்தமே! யென்றன்
மாணிக்கமே!

ತೈಯಲ್ನಲ್ಲಾರ್ಗಳ್ ಕುಲಾಜ್ಗಳ್ ಕುಲಿಯ ಕುಲುವಿನುಳ್ಳುಮ್,
ಐಯನಲ್ಲಾರ್ಗಳ್ ಕುಲಿಯ ವಿಲವಿನುಮ್, ಅಜ್ಞಜ್ಞನುಮ್
ಕೈಯಪೊನ್ನಾಟಿ ವೆಣ್ ಶಜ್ಞೋಡುಮ್ ಕಾಣ್ಬಾನವಾವುವನಾನ್
ಮೈಯವಣ್ಣಾ! ಮಣಿಯೇ!, ಮುತ್ತಮೇ! ಎನ್ತನ್ ಮಾಣಿಕ್ಕಮೇ!

ತೈಯಲ್ தையல் = ಶೃಂಗಾರಮಾಡಿಕೊಂಡಿರುವ (ಅಲಂಕೃತರಾದ), ನಲ್ಲಾರ್ಗಳ್ நல்லார்கள் = ಸುಂದರಿಯರು, ಕುಲಾಜ್ಗಳ್ குழாங்கள் = ಕೂಟಗಳಲ್ಲಿ, ಕುಲಿಯ குழிய = ಕೆರೆ, ಕೊಳ, ತೋಟ ಮುಂತಾದ ಪ್ರದೇಶಗಳಲ್ಲಿ, ಐಯ ஐய = ಕುಲುವಿನುಳ್ಳುಮ್ குழுவினுள்ளும் = ದಂಡನೆಗಳಲ್ಲೂ, ಕುಲಿಯ குழிய = ಸೊಬಗಿನ, ನಲ್ಲಾರ್ಗಳ್ நல்லார்கள் = ಬಳ್ಳಿಯವರು, ಕುಲಿಯ குழிய = ಸೇರುವ (ಕೂಡುವ), ವಿಲವಿನುಮ್ விழவினும் = ಉತ್ಸವಗಳಲ್ಲೂ, ಅಜ್ಞ ಅಜ್ಞನುಮ್ அங்கு அங்கு எல்லாம் = ಇನ್ನೂ ಅಂಥಂಥ ಕೂಟಗಳೆಲ್ಲಾ, ಕೈಯ கைய = ಕೈಯಲ್ಲಿ ಹಿಡಿದ, ಪೊನ್ ಆಲಿ பொன் ஆழி ಕಳಲ್ಲೆಲ್ಲಾ, ವೆಣ್ ಶಜ್ಞೋಡುಮ್ வெண் சங்கொடும் (ಬಿಳಿಯ) = ಅಪ್ರತಿಮವಾದ ಚಕ್ರಾಯುಧ, ಬಿಳಿಯ ಶಂಖದೊಡನೆಯೂ, ಕಾಣ್ಬಾನ್ காண்பான் = ನೋಡುವುದಕ್ಕೆ, ಅವಾವುವನ್ அவாவுவன் = ಅಪೇಕ್ಷೆಗೊಂಡಿದ್ದೇನೆ, ನಾನ್ நான் = ನಾನು, ಮೈಯವಣ್ಣಾ மையவண்ணா = ಕಾಡಿಗೆಯ ಬಣ್ಣದವನೇ, ಮಣಿಯೇ மணியே = ರತ್ನದಂಥವನೇ, ಮುತ್ತಮೇ முத்தமே = ಆಣಿಮುತ್ತಿನಂಥ ಸುಂದರನೇ, ಎನ್ತನ್ என்தன் = ನನ್ನ, ಮಾಣಿಕ್ಕಮೇ மாணிக்கமே = ಮಾಣಿಕ್ಯವೇ (~~ಅಮೂಲ್ಯ ರತ್ನವೇ~~).

ಕಾಡಿಗೆಯ ಬಣ್ಣದವನೇ, ರತ್ನದಂಥವನೇ, ಆಣಿಮುತ್ತಿನಂಥ ಸುಂದರನೇ (ಅಪೂರ್ವವಸ್ತುವೇ), ನನ್ನ ಮಾಣಿಕ್ಯವೇ, ಅಲಂಕೃತರಾದ ಸುಂದರಿಯರ ಕೆರೆ, ಕೊಳ, ತೋಟ ಮುಂತಾದ ಪ್ರದೇಶಗಳ ದಂಡನೆಗಳ ಕೂಟಗಳಲ್ಲಿ, ಮತ್ತು ಇನ್ನೂ ಬಳ್ಳಿಯ ಚೆಲುವೆಯರು ಕೂಡುವ ಉತ್ಸವಗಳಲ್ಲಿ, ಅಂಥಂಥ ಕೂಟಗಳಲ್ಲೆಲ್ಲಾ ನಿನ್ನನ್ನು ದಿವ್ಯವಾದ ಪ್ರಕಾಶದಿಂದ ಕೂಡಿರುವ ಚಕ್ರಾಯುಧದೊಡನೆಯೂ, ಬಿಳಿಯ ಶಂಖದೊಡನೆಯೂ ನೋಡುವುದಕ್ಕೆ (ನಾನು) ಅಪೇಕ್ಷೆಗೊಂಡಿದ್ದೇನೆ. (84)

ತನ್ನ ಪ್ರಿಯತಮನನ್ನು ಎಷ್ಟೆಷ್ಟು ಬಗೆಯಲ್ಲಿ ವರ್ಣಿಸಿದರೂ ನಾಯಕಿಗೆ ತೃಪ್ತಿಯಿಲ್ಲ ಎಂದು ತೋರುತ್ತದೆ. ಅವನನ್ನು "ಕಾಡಿಗೆಯಂತೆ ಮೈಬಣ್ಣವುಳ್ಳವನು" ಎನ್ನುತ್ತಾಳೆ. ಅಷ್ಟರಷ್ಟು ಒಂದು ಬಗೆಯ ಅಪ್ರತಿಮ ಶೋ

ಶೆಯುಳ್ಳದ್ದು. 'ರತ್ನ' ಎನ್ನುತ್ತಾಳೆ: ಬೆಲೆಯಲ್ಲಿ, ಹೊಳಪಿನಲ್ಲಿ, ನೋಟದಲ್ಲಿ ಅವನು ರತ್ನವೇ ಸರಿ. 'ಮುತ್ತು' ಎನ್ನುತ್ತಾಳೆ: ರತ್ನದ ಹೊಳಪಿಲ್ಲದಿದ್ದರೂ ಮುತ್ತಿನದೇ ಒಂದು ಅಪಾರವಾದ ನೋಟವು. ಅಂಥ ಅಪಾರವಾದ ಸೌಂದರ್ಯದಿಂದ ಮೆರೆಯುವವನು ತನ್ನ ಪ್ರಿಯತಮ ಎಂಬಂತೆ. 'ನನ್ನ ಮಾಣಿಕ್ಯ' ಎನ್ನುತ್ತಾಳೆ: ನವರತ್ನಗಳಲ್ಲಿ ಮಾಣಿಕ್ಯ ಎಲ್ಲವನ್ನೂ ಮೀರಿದ ಹೊಳಪು, ನೋಟವು ಉಳ್ಳದ್ದು.

